ಸಂಪುಟ ೧ ಸಂಚಿಕೆ ೧

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಜುಲೈ, ೧೯೭೪

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯುಗಳಿಗೆ ಸಂಬಂಧಿಸಿದ ಸ್ವತಂತ್ರ, ಹಾಗೂ ಅನುವಾದಿತ ಲೇಖನಗಳನ್ನು 'ಮಾನವಿಕ ಭಾರತಿ'ಯಲ್ಲಿ ಪ್ರಕಟಿಸಲಾಗುವುದು. ಅನುವಾದ ಲೇಖನಗಳಿದ್ದರೆ ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವುದಲ್ಲದೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

೨ ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪ್ ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲಿ, ಅಸಂಪೂರ್ಣವಾಗಿಯಾಗಲಿ ಇರಬಾರದು. ಲೇಖಕರು ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಬೇಕು. ಲೇಖನವನ್ನು ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೩ ಲೇಖನಕ್ಕೆ ಅವಶ್ಯವಾದ ಚಿತ್ರಗಳಿದ್ದರೆ ಅವನ್ನು ಕಲಾಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಯಿಸಿ ಕಳುಹಿಸಬೇಕು.

೪ ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆಚೀಟಿಗಳನ್ನು ಕಳುಹಿಸಬೇಕು.

೫ ಲೇಖಕರಿಗೆ, ಅಚ್ಚಾದ ಅವರ ಲೇಖನದ ೨೫ ಪ್ರತಿಗಳನ್ನು ಒದಗಿಸಲಾಗುವುದು. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುವುದು. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

೬ ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು, 'ಮಾನವಿಕ ಭಾರತಿ', ರಾಜಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸಬಯಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು.

೭ ಮಿಕ್ಕ ವಿವರಗಳಿಗೆ **ನಿರ್ದೇಶಕರು, ಪ್ರಸಾರಾಂಗ ವಿಸ್ತರಣ-ಪ್ರಕಟನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩** ಇವರಿಗೆ ಬರೆಯಬೇಕು.

ಮಾನವಿಕ ಭಾರತಿ

ಷಾಣ್ಮಾಸಿಕ ಪತ್ರಿಕೆ

ಸಂಪುಟ : ೧ ಸಂಚಿಕೆ : ೨

ಪ್ರಧಾನ ಸಂಪಾದಕರು :

ಡಾ. ಎಂ. ಎಂ. ರಾಜಶೇಖರಯ್ಯ

ಸಹಾಯಕ ಸಂಪಾದಕರು :

ಡಾ. ಕೆ. ಜಿ. ಗುರುಮೂರ್ತಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾನವಿಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ಷಾಣ್ಮಾಸಿಕ ಪತ್ರಿಕೆ

ಸಂಪುಟ : ೨ ಸಂಚಿಕೆ : ೩

ಜುಲೈ, ೧೯೭೮

ಪ್ರಕಾಶಕರು :

ಶ್ರೀ ಸಿ. ಎಸ್. ಕಣವಿ
ನಿರ್ದೇಶಕರು, ವ್ಯಾಸಂಗವಿಸ್ತರಣ–ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಶ್ರೀ ಜಿ. ಬಿ. ಮನ್ವಾಚಾರ
ಸಹಾಯಕ ನಿರ್ದೇಶಕರು,
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ,
ಧಾರವಾಡ–೫೮೦೦೦೩

ಪರಿವಿಡಿ

ನೈತಿಕತೆ ಮತ್ತು ಅಸ್ತಿತ್ವವಾದ

● ಮೀರಾ ಚಕ್ರವರ್ತಿ

ಒಬ್ಬ ಮಹಿಳೆ ಮಾತನಾಡುತ್ತ ಕೋಪದ ರಭಸದಲ್ಲಿ ಒಂದು ಅಶ್ಲೀಲ ಶಬ್ದವನ್ನು ಉಪಯೋಗಿಸಿದಾಗ 'ಬಹುಶಃ ನಾನೂ ಅಸ್ತಿತ್ವವಾದಿಯಾಗುತ್ತಿದ್ದೇನೋ ಏನೋ ?' ಎಂದು ಹೇಳಿ ಜಾರಿಕೊಂಡಳೆಂದು ಇತ್ತೀಚೆಗೆ ನನಗಾರೋ ಒಬ್ಬರು ಹೇಳಿದರು" ಎಂದು ಸಾರ್ತ್ರ್ ಪ್ಯಾರಿಸ್ಸಿನಲ್ಲಿ ಒಂದು ಸಲ ತನ್ನ ಭಾಷಣದಲ್ಲಿ ಹೇಳಿ, "ಅಸ್ತಿತ್ವವಾದವನ್ನು ಕುರೂಪವಾದುದೆಂದು ಭಾವಿಸಲಾಗುತ್ತಿದೆ" ಎಂದು ವ್ಯಥೆಪಟ್ಟ. ಒಳ್ಳೆಯದು ಅಥವಾ ಕೆಟ್ಟದ್ದು ಎಂಬ ಮೂಲ್ಯಗಳನ್ನು ನಿರ್ಧರಿಸಲು ದೇವರು ಎನ್ನುವ ಮಾನದಂಡ ಇಲ್ಲದೇ ಹೋದಲ್ಲಿ ನೈತಿಕ ಮೂಲ್ಯಗಳ ಪ್ರಶ್ನೆ ಬಹಳೇ ತೊಡಕಿನದಾಗುತ್ತದೆ. ಆದರೆ ದೇವರಿಲ್ಲ ಎಂಬ ಆಧಾರದ ಮೇಲೆ ಯಶಸ್ವಿಯಾಗಿ ನೈತಿಕ ವ್ಯವಸ್ಥೆಯನ್ನು ಹಲವಾರು ಜನ ರೂಪಿಸಿದ್ದಾರೆ. ಉದಾಹರಣೆಗೆ ಭಾರತದಲ್ಲಿ ಗೌತಮ ಬುದ್ಧ. ಅಸ್ತಿತ್ವವಾದ ನಿರೀಶ್ವರವಾದಿಯಾಗಿರುವುದರ ಜೊತೆಗೆಯೇ ಮೂಲತತ್ವಶಾಸ್ತ್ರದ (ontology) ಮೇಲೆ ಆಧಾರಿತವಾಗಿದೆ. ಹಾಗೂ ಸಾರ್ತ್ರ್ ಮೊದಲು ಅಸ್ತಿತ್ವವಾದಿ ತತ್ವಚಿಂತಕ, ಆದುದರಿಂದ ಅಸ್ತಿತ್ವವಾದಿ ಮೂಲತತ್ವವನ್ನು ಮೊದಲು ನಿರೂಪಿಸುತ್ತಾನೆ. ಆದರೆ "ಮಾನವನ ಸತ್ಯದ ಮೂಲತತ್ವದ ಮೇಲೆ ಆಧಾರಿತ ನಿರೂಪಣೆಯಿಂದ ನೈತಿಕ ನಿರೂಪಣೆಗೆ ವರ್ಗಾವಣೆ ಅಪಾಯಕಾರಿಯಾಗಬಹುದು". ಸಾರ್ತ್ರ್‌ನಿಗೂ ಈ ಪರಿಮಿತಿಯ ಅರಿವು ಉಂಟು. "ಬರಿ ಮೂಲತತ್ವಗಳು ನೈತಿಕ ಮೌಲ್ಯಗಳನ್ನು ರೂಪಿಸಲಾರವು. ಅವು ಮಾತ್ರ "ಏನು ಇದೆ" ಎಂಬುದಕ್ಕೆ ಸಂಬಂಧಪಟ್ಟವುಗಳು, ಹಾಗೂ ಬಹುಶಃ ಮೂಲತತ್ವಗಳ ಸೂಚಕಗಳಿಂದ ನೈತಿಕತೆಯನ್ನು ಪಡೆಯಲಾಗದು" ಎಂದು ಸಾರ್ತ್ರ್ ಒಪ್ಪುತ್ತಾನೆ. ಆದರೆ ದೇವರ ಬಗ್ಗೆ ಉದಾಸೀನನಾಗಿದ್ದಂತೆ ನೈತಿಕತೆಯ ಬಗ್ಗೆಯೂ ಸಾರ್ತ್ರ್ ಉದಾಸೀನನಲ್ಲ. ಮೂಲತತ್ವಶಾಸ್ತ್ರವೂ ನೈತಿಕ ಪರಿಣಾಮಗಳಿಂದ ಹೊರತಲ್ಲ. ಆದುದರಿಂದ ಮೂಲತತ್ವಶಾಸ್ತ್ರ, "ಒಂದು 'ಪರಿಸ್ಥಿತಿಯಲ್ಲಿ' ಮಾನವನ ಸತ್ಯವನ್ನು ಎದುರಿಸಿದಾಗ ಎಂತಹ ನೈತಿಕ ಮೌಲ್ಯಗಳು ಮಹತ್ವ ಪಡೆಯುತ್ತವೆ ಎಂಬುದರ ಕಿಂಡಿನೋಟವನ್ನು ಅದು ಒದಗಿಸುತ್ತದೆ". ಆದರೆ ನೈತಿಕತೆಯ ಪರಿಪೂರ್ಣ ವ್ಯವಸ್ಥೆಯೊಂದನ್ನೇನೂ ಸಾರ್ತ್ರ್ ಕಲ್ಪಿಸುವುದಿಲ್ಲ. ನೈತಿಕತೆಯ ಬಗ್ಗೆ ಅವನಿಗಿರುವ

ವಿಚಾರಗಳನ್ನು ಅವನ ಸಾಹಿತ್ಯಿಕ ಹಾಗೂ ತಾತ್ವಿಕ ಬರವಣಿಗೆಗಳಿಂದ ಹಾಗೂ ಮುಖ್ಯ ವಾಗಿ ಪ್ಯಾರಿಸ್ಸಿನಲ್ಲಿ ಆತ ಮಾಡಿದ ಒಂದು ಭಾಷಣದಿಂದ ಸಂಗ್ರಹಿಸಬಹುದು.

ಆಸ್ತಿಕನಿಗೆ ನೈತಿಕ ಮೌಲ್ಯಗಳ ಅಳತೆಗೋಲು ದೇವರು. ಆದರೆ ಯಾವ 'ದೇವರು' ಎಂಬ ಅಳತೆಗೋಲಿನಿಂದ ಮನುಷ್ಯ ನೈತಿಕ ಹಾಗೂ ಅನೈತಿಕ ಇವುಗಳ ನಡುವೆ ಭೇದ ಕಲ್ಪಿಸಲು ಸಾಧ್ಯವೋ, ಅಂತಹ ದೇವರು ಇಲ್ಲ ಎಂದಾಗ ಆ ರೀತಿ ಭೇದ ಕಲ್ಪಿಸುವುದು ಕಷ್ಟಪ್ರದವಾಗುತ್ತದೆ. ಹಾಗೂ ಅನೈತಿಕ ಕಾರ್ಯ ಮಾಡುವವರನ್ನು ಶಿಕ್ಷಿಸಲು ದೇವರೇ ಇಲ್ಲ ಎನ್ನುವುದಾದಲ್ಲಿ ಮನುಷ್ಯ ನೈತಿಕ ಜೀವಿಯಾದರೂ ಏಕೆ ಆಗಿರ ಬೇಕು ? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ದೇವರು ಇಲ್ಲದ ಜಗತ್ತಿನಲ್ಲಿ ಮನುಷ್ಯ ಹೇಗೆ ನೈತಿಕ ಜೀವಿಯಾಗಿರಬಲ್ಲ ಎನ್ನುವು ದಕ್ಕೆ ಇರುವ ಹಲವಾರು ವಿವರಣೆಗಳಲ್ಲಿ, ಮಾನವ ಸ್ವಾಭಾವಿಕವಾಗಿಯೇ ನೈತಿಕ ಜೀವಿ ಎನ್ನುವುದು ಒಂದು ವಿವರಣೆ. ಅಂದರೆ ನೈತಿಕ ಹಾಗೂ ಅನೈತಿಕಗಳಲ್ಲಿ ಭೇದ ಕಲ್ಪಿ ಸುವ ಶಕ್ತಿ ಅನುಭವಪೂರ್ವದ್ದು (a priori) ಹಾಗೂ ಅದು ಅವನಿಗೆ ನಿಸರ್ಗದತ್ತ ವಾದುದು ಎನ್ನುವುದು. ಆದರೆ ಇದನ್ನು ಒಪ್ಪಿಕೊಳ್ಳುವುದು ಅಸ್ತಿತ್ವವಾದಿ ಮೂಲ ತತ್ವವಾದ 'ಸತ್ವಕ್ಕಿಂತ ಅಸ್ತಿತ್ವ ಮೊದಲು' ಎನ್ನುವ ತತ್ವಕ್ಕೆ ವಿರೋಧಿಯಾಗುತ್ತದೆ. ಏಕೆಂದರೆ ಮಾನವ ಸ್ವಾಭಾವಿಕವಾಗಿಯೇ ನೈತಿಕ ಜೀವಿಯಾಗಿದ್ದು, ನೈತಿಕ ಅನೈತಿಕಗಳ ನಡುವಣ ಭೇದದ ಕಲ್ಪನೆ ಅವನಿಗೆ ನಿಸರ್ಗದತ್ತವಾಗಿದ್ದಲ್ಲಿ, ಅದು ಅವನ ಕೃತಿಗಳನ್ನು ಪೂರ್ವನಿರ್ದಿಷ್ಟಪಡಿಸುತ್ತದೆ. ಹಾಗೂ ಅದರ ಅರ್ಥ ಅವನು ಅಸ್ತಿತ್ವವಾದಿ ಅರ್ಥದಲ್ಲಿ 'ಮುಕ್ತ'ನಲ್ಲ ಎಂದ ಹಾಗಾಗುತ್ತದೆ. ಆದರೆ ಅಸ್ತಿತ್ವವಾದದ ಪ್ರಕಾರ ಸ್ವಾಭಾವಿಕ ನೈತಿ ಕತೆಯೇ ಏಕೆ ಯಾವುದೂ ಅಸ್ತಿತ್ವಕ್ಕಿಂತ ಮೊದಲಲ್ಲ.

ಆದುದರಿಂದ ಸರ್ವಸಾಮಾನ್ಯ (universal) ನೈತಿಕ ಮೌಲ್ಯಗಳಿವೆ ಎನ್ನುವುದು ತಪ್ಪು. ದೇವರು ಅಥವಾ ಸ್ವಾಭಾವಿಕ ನೈತಿಕತೆ ಎನ್ನುವುದು ಮಾನವ ನೈತಿಕ ಜೀವಿ ಯಾಗಿರಲು 'ನೆಪ'ಗಳು ಮಾತ್ರ. "ಆದರೆ ದೇವರು ಇಲ್ಲದಿದ್ದಲ್ಲಿ, ನಮ್ಮ ಕೃತಿಗಳನ್ನು ಸಮರ್ಥಿಸಿಕೊಳ್ಳಲು ಯಾವುದೇ ಮೌಲ್ಯಗಳಾಗಲೀ ಆಜ್ಞೆಗಳಾಗಲೀ ನಮಗೆ ಸಿಕ್ಕುವು ದಿಲ್ಲ. ಮೌಲ್ಯಗಳ ಕಾಂತಿಮಯ ಪ್ರದೇಶದಲ್ಲಿ ನಮ್ಮ ಹಿಂದೆ ಯಾವ ನೆಪಗಳೂ ಇಲ್ಲ. ನಮ್ಮ ಮುಂದೆ ಯಾವ ಸಮರ್ಥನೆಯೂ ಇಲ್ಲ. ನಾವು ನೆಪಗಳಿಲ್ಲದೆ ಏಕಾಕಿಗಳಾಗಿ ದ್ದೇವೆ". ಮಾನವನು ಮುಕ್ತನಾಗಿಯೇ ಇರಬೇಕಾಗಿರುವ ಸ್ಥಿತಿಯಿಂದ ಬರುವ ಈ ಏಕಾಕಿತನವೇ ಮಾನವ ನೈತಿಕ ಆಯ್ಕೆಗಳನ್ನು ಮಾಡಲು ಹಾಗೂ ಆ ಆಯ್ಕೆಗಳ ಹೊಣೆಯನ್ನು ಹೊರಲು ಚೌಕಟ್ಟಾಗುತ್ತದೆ. ಕ್ರಿಶ್ಚಿಯನ್ ನೈತಿಕ ಮೌಲ್ಯವಾದ ಪ್ರೇಮದಂತೆ, ಯಾವುದೂ ತನ್ನಲ್ಲಿ ತಾನೇ ಒಳ್ಳೆಯದು ಅಥವಾ ಕೆಟ್ಟದ್ದು ಆಗಿರುವುದಿಲ್ಲ.

ವಿಷಯಗತವಾಗಿರುವುದೇ ಅಸ್ತಿತ್ವವಾದದ ಮೂಲವಾದುದರಿಂದ, ಅದು ಸರ್ವ ಸಾಮಾನ್ಯ ನೈತಿಕ ಮೌಲ್ಯಗಳಿವೆ ಎನ್ನುವುದನ್ನು ಅಲ್ಲಗಳೆಯುತ್ತದೆ. ಒಂದು ಸಲ ಹೇಗೆ ತನ್ನ ಒಬ್ಬ ವಿದ್ಯಾರ್ಥಿ ತನ್ನ ಸಲಹೆಯನ್ನು ಕೇಳುವುದರ ಮೂಲಕ ಸರ್ವ ಸಾಮಾನ್ಯ ನೈತಿಕ ಮೌಲ್ಯಗಳಿವೆ ಎನ್ನುವುದರ ವ್ಯರ್ಥತೆಯನ್ನು ಸಿದ್ಧಮಾಡಿದ ಎಂಬುದನ್ನು ಸಾರ್ತ್ರ್ ಒಂದೆಡೆ ವಿವರಿಸುತ್ತಾನೆ. ಅವನ ವಿದ್ಯಾರ್ಥಿಯ ಮುಂದೆ ಒಂದು ದ್ವಂದ್ವವಿತ್ತು. ಅವನ ಸಹೋದರ ಯುದ್ಧದಲ್ಲಿ ಸತ್ತುಹೋಗಿದ್ದ. ಆದುದರಿಂದ ಅವನ ಸಾವಿನ ಸೇಡನ್ನು ತೀರಿಸಲು ಈ ವಿದ್ಯಾರ್ಥಿ ಫ್ರಾನ್ಸ ದೇಶದ ಮುಕ್ತಿಸೇನೆಯನ್ನು ಸೇರಬಯಸಿದ್ದ. ಆದರೆ ಪತಿಯಿಂದ ತಿರಸ್ಕೃತಳಾದ ಅವನ ತಾಯಿ ಸಂಪೂರ್ಣ ಅವನನ್ನೇ ನಂಬಿ ಬದುಕಿದ್ದಳು. ಈ ಸಂದರ್ಭದಲ್ಲಿ ಹೇಗೆ ಕ್ರಿಶ್ಚಿಯನ್ ಹಾಗೂ ಕಾಂಟನ ನೈತಿಕತೆ ಆ ವಿದ್ಯಾರ್ಥಿಯ ದ್ವಂದ್ವವನ್ನು ಪರಿಹರಿಸುವಲ್ಲಿ ಸೋಲುತ್ತವೆ ಎನ್ನುವುದನ್ನು ಸಾರ್ತ್ರ್ ತೋರಿಸುತ್ತಾನೆ. "ಕ್ರಿಶ್ಚಿಯನ್ ಸಿದ್ಧಾಂತ, ಕರುಣೆ ತೋರಿಸು. ನಿನ್ನ ನೆರೆಹೊರೆಯವರನ್ನು ಪ್ರೀತಿಸು, ಹೆಚ್ಚು ಕಠಿಣವಾದ ಮಾರ್ಗ ಹಿಡಿ" ಎಂದೆಲ್ಲ ಹೇಳುತ್ತದೆ. ಆದರೆ ಹೆಚ್ಚು ಕಠಿಣ ಮಾರ್ಗವಾದರೂ ಯಾವುದು ? ಯಾರನ್ನು ಆತ ಸಹೋದರನಂತೆ ಪ್ರೀತಿಸಬೇಕು ? ಯುದ್ಧ ಮಾಡುತ್ತಿರುವ ಸೈನಿಕನನ್ನೇ ಅಥವಾ ತಾಯಿಯನ್ನೇ ? . . . . ಅನುಭವಕ್ಕಿಂತ ಮೊದಲು ಯಾರು ಇದನ್ನು ನಿರ್ಧರಿಸ ಬಲ್ಲರು? . . ಕಾಂಟನ ನೈತಿಕತೆಯೂ ಹೇಗೆ ವಿಫಲವಾಗುತ್ತದೆ ಎನ್ನುವುದನ್ನೂ ಸಾರ್ತ್ರ್ ತೋರಿಸುತ್ತಾನೆ. ಕಾಂಟನ ನೈತಿಕತೆ, "ಯಾವ ವ್ಯಕ್ತಿಯನ್ನೂ ಸಾಧನವೆಂದು ಪರಿಗಣಿಸ ಬೇಡ, ಸಾಧ್ಯವೆಂದು ಪರಿಗಣಿಸು" ಎನ್ನುತ್ತದೆ. ಆದರೆ, ನಾನು ನನ್ನ ತಾಯಿಯೊಡನೆ ಇದ್ದರೆ ಅವಳನ್ನು 'ಸಾಧ್ಯ'ವೆಂದು ಪರಿಗಣಿಸಿದ ಹಾಗೇನೋ ಆಗುತ್ತದೆ. ಆದರೆ ಈ ರೀತಿ ಮಾಡುವಾಗಲೇ ನಾನು ಯುದ್ಧ ಮಾಡುತ್ತಿರುವ ಸೈನಿಕರನ್ನು 'ಸಾಧನ'ವೆಂದು ಪರಿಗಣಿಸುವ ಅಪಾಯಕ್ಕೊಳಗಾಗುತ್ತೇನೆ; ಇದೇ ರೀತಿ, ನಾನು ಯುದ್ಧ ಮಾಡು ತ್ತಿರುವ ಸೈನಿಕರನ್ನು ಹೋಗಿ ಸೇರಿದರೆ, ಅವರನ್ನು 'ಸಾಧ್ಯ'ವೆಂದು ಪರಿಗಣಿಸಿದ ಹಾಗಾಗು ತ್ತದಾದರೂ, ನನ್ನ ತಾಯಿಯನ್ನು 'ಸಾಧನ'ವೆಂದು ಪರಿಗಣಿಸಿದ ಹಾಗೆ ಆಗುತ್ತದೆ". ಆ ಯುವ ವಿದ್ಯಾರ್ಥಿ ತನ್ನ ಸಹಜ ಪ್ರವೃತ್ತಿಯನ್ನೇ (instincts) ಆಧರಿಸಿ ಇವೆರಡರಲ್ಲಿ ಆಯ್ಕೆಮಾಡಲು ಪ್ರಯತ್ನಿಸಿದ. ತನ್ನ ಭಾವನೆಗಳು ತಾಯಿಯೊಡನೆ ಇರಲು ಪ್ರೇರೇಪಿಸಿದರೆ ತಾಯಿಯೊಡನೆ ಇರುವೆ, ಸೈನ್ಯ ಸೇರಲು ಪ್ರೇರೇಪಿಸಿದರೆ ಸೈನ್ಯ ಸೇರುವೆ ಎನ್ನುವುದೇ ಅವನ ಸ್ವಂತ ಉತ್ತರವಾಗಿತ್ತು. ಆದರೆ ಅವನ ಭಾವನೆಗಳ ನಿರ್ಧಾರಕ ಯಾವುದು? "ಅವನು ತಾಯಿಯೊಡನೆ ಇರಲು ನಿರ್ಧರಿಸಿದುದೇ ಅವನ ಭಾವನೆಗಳ ನಿರ್ಧಾರಕ" ಎನ್ನುತ್ತಾನೆ ಸಾರ್ತ್ರ್. ನೈತಿಕ ಆಯ್ಕೆ ವೈಯಕ್ತಿಕವಾದುದರಿಂದ ಸಾರ್ತ್ರ್ ಅವನಿಗೆ ಯಾವ ಸಲಹೆಯನ್ನೂ ಕೊಡಲು ನಿರಾಕರಿಸಿದ.

ಈ ರೀತಿ ನೈತಿಕತೆಯ ಆಯ್ಕೆ ಅಪ್ರಮಾಣಿಕವಾಗುತ್ತದೆ (arbitrary), ಆಧಾರ ರಹಿತವಾಗುತ್ತದೆ (criterionless), ಹಾಗೂ ಆ ರೀತಿ ಆಯ್ಕೆ ಮಾಡುವ

'ಸ್ವಾತಂತ್ರ್ಯ'ವೇ ನೈತಿಕತೆಯ ಆಧಾರವಾಗುತ್ತದೆ. 'ಜಗತ್ತಿನಲ್ಲಿ –ಇರುವ– ಮನುಷ್ಯ' (Being-in-the-world) ಈ ಸ್ವಾತಂತ್ರ್ಯವನ್ನರಿತು ಹಾಗೂ ಅದರ ಹೊಣೆಯನ್ನು ಹೊತ್ತು, 'ಪ್ರಾಮಾಣಿಕ' (authentic) ಜೀವನ ನಡೆಸುತ್ತಾನೆ. ಜೀವನದಲ್ಲಿಯ ಈ ಪ್ರಾಮಾಣಿಕತೆಯೇ ಒಂದು ನೈತಿಕ ಮೌಲ್ಯವಾಗುತ್ತದೆ. ಶ್ರೀಮತಿ ಮಾರ್ಗಾರೆಟ್ ಗ್ರೀನ್ ಈ ಪ್ರಾಮಾಣಿಕತೆಯನ್ನು ಅಸ್ತಿತ್ವವಾದಿ ನೈತಿಕ ಮೌಲ್ಯ ಎನ್ನುತ್ತಾರೆ. ಈ ಪ್ರಾಮಾಣಿಕತೆ ಕ್ರಿಶ್ಚಿಯನ್ ಮೂಲ್ಯವಾದ ಪ್ರೇಮದ ಸ್ಥಾನವನ್ನು ಆಕ್ರಮಿಸುತ್ತದೆ. ಹಾಗೂ ನೈತಿಕತೆಯ ಅಸ್ತಿತ್ವವಾದಿ ರೂಪವನ್ನದು ಪ್ರತಿನಿಧಿಸುತ್ತದೆ ಎನ್ನುತ್ತಾರೆ ಶ್ರೀ ನಾರ್ಮನ್ ಗ್ರೀನ್. ಇದಕ್ಕೆ ತದ್ವಿರುದ್ಧವಾಗಿ "ಮಾನವನ ತತ್ವದ (ಅಸ್ತಿತ್ವದ ವಿರೋಧಿ) ಮೇಲೆ ಆಧಾರಿತ ನೈತಿಕತೆ ಸರ್ವ ಸಮ್ಮತವಾಗಿರುವ ಸಾರ ತುಂಬಿದ ಮೌಲ್ಯ ಅಥವಾ ನಡತೆಯ ವಿಶಿಷ್ಟ ನಿಯಮವಾಗುತ್ತದೆ. ಇದನ್ನು ಸಾರ್ತ್ರ್ ಒಪ್ಪಲಾರ, ಒಪ್ಪುವದೂ ಇಲ್ಲ. ಈ ಪ್ರಾಮಾಣಿಕತೆಯ ಮೌಲ್ಯ ಮಾನವನ ಆಯ್ಕೆಯ ಸ್ವಾತಂತ್ರ್ಯದಿಂದ ಲಭಿಸುವುದರಿಂದ 'ಸ್ವಾತಂತ್ರ್ಯ' ಅಥವಾ 'ಮುಕ್ತಿ'. ಇದು ಅಸ್ತಿತ್ವವಾದಿ ತತ್ವಶಾಸ್ತ್ರ ಹಾಗೂ ಅಸ್ತಿತ್ವವಾದಿ ಮನೋವಿಶ್ಲೇಷಣೆಗಳ ಆಧಾರ ತತ್ವವಾಗಿರುವಂತೆಯೇ ಅಸ್ತಿತ್ವವಾದಿ ನೈತಿಕತೆಯ ಆಧಾರವೂ ಆಗುತ್ತದೆ. ನೈತಿಕ ನಡವಳಿಕೆಯ ಯಾವುದೇ 'ಬಾಹ್ಯ ಮಾನದಂಡಗಳಿಗೆ ಕಟ್ಟು ಬಿದ್ದದ್ದೇ ಆದಲ್ಲಿ, ಅದು 'ಸ್ವಾತಂತ್ರ್ಯ'ದಿಂದ ಪಲಾಯನ ಮಾಡಿದ ಹಾಗಾಗುತ್ತದೆ, ಹಾಗೂ ಅವನ ಆಯ್ಕೆ ಪೂರ್ವನಿರ್ಧಾರಿತವಾಗಿ ಅದು ಅಪ್ರಾಮಾಣಿಕ (unauthentic) ಜೀವನದಲ್ಲಿ ಪರಿಣಮಿಸುತ್ತದೆ. ಆಗ ಅದೊಂದು 'ಪಾಪ'ವಾಗುತ್ತದೆ. ಈ ರೀತಿ ಅಸ್ತಿತ್ವವಾದದಲ್ಲಿ ಪಾಪ ಎನ್ನುವಂತಹದೇನೂ ಇಲ್ಲ. ಅದು ಸಾರ್ತ್ರ್ ಹೇಳುವ 'ಕೆಟ್ಟ ನಂಬಿಗೆ' (bad faith) ಮಾತ್ರ. ಈ ವಿಶ್ಲೇಷಣೆಯೇ ಅಸ್ತಿತ್ವವಾದಿ ನೈತಿಕತೆಯಲ್ಲಿ ಒಳ್ಳೆಯದು ಅಥವಾ ಕೆಟ್ಟದ್ದು ಎಂಬ ಭೇದದ ಆಧಾರವಾಗಿದೆ.

ಅಸ್ತಿತ್ವವಾದದಲ್ಲಿ ಮನುಷ್ಯ ಇನ್ನಿತರರನ್ನೂ ಆಯ್ಕೆ ಮಾಡುವುದರಿಂದ ಅವನು ಆ ಇನ್ನಿತರರಿಗೂ ಹೊಣೆಗಾರ. ಅವನು ಆ ಇನ್ನಿತರರ ಕಣ್ಣುಗಳ ಮುಂದೆಯೇ ತನ್ನನ್ನು ಸೃಷ್ಟಿಸಿಕೊಳ್ಳುತ್ತಾನೆ. ಬೇರೊಬ್ಬ ಹೇಗೆ ನನಗೆ 'ತನ್ನಲ್ಲಿ–ತಾನಿರುವ–ವಸ್ತುವೋ' ಅದೇ ರೀತಿ ನಾನು ಬೇರೆಯವರಿಗೆ 'ತನ್ನಲ್ಲಿ–ತಾನಿರುವ–ವಸ್ತು'. ಸಾರ್ತ್ರ್‌ನ ಈ ಇನ್ನಿತರ ಹೊಣೆಗಾರಿಕೆಯ ತತ್ವದಲ್ಲಿಯೇ, ಅಥವ ಸಾರ್ತ್ರ್‌ನ ಶಬ್ದಗಳಲ್ಲಿಯೇ ಹೇಳುವುದಾದರೆ 'ಪರಸ್ಪರ–ವಿಷಯಗತ'ತೆ (inter–subjectivity) ಯಲ್ಲಿಯೇ ಸಾರ್ತ್ರ್‌ನ ಸಾಮಾಜಿಕ ನೈತಿಕತೆಯನ್ನು ಕಾಣಬಹುದು. "ಬೇರೆಯವರು ನಮಗೆ ಏನು ಮಾಡಬೇಕೆಂದು ನಾವು ಇಚ್ಛಿಸುತ್ತೇವೆಯೋ, ಅದೇ ರೀತಿ ನಾವು ಇನ್ನಿತರರಿಗೆ ಮಾಡ ಬೇಕು ಎಂದು ಪ್ರಾಮಾಣಿಕ ಜೀವನ ಕೇಳುತ್ತದೆ ಎಂದು ಸಾರ್ತ್ರ್ ವಾದಿಸುತ್ತಾನೆ." ಆದುದರಿಂದ ನನಗೆ ಬೇರೆಯವರು ಹಿಂಸಿಸಬಾರದು ಎಂದು ನಾನು ಬಯಸಿದರೆ, ನಾನು

ಇನ್ನಿತರರಿಗೆ ಹಿಂಸಿಸಬಾರದು. ಏಕೆಂದರೆ ಇನ್ನಿತರರಿಗೆ ಹಿಂಸೆ ಕೊಡುವುದರ ಮೂಲಕ ನಾನು ಹಿಂಸಾಮಯ ಜಗತ್ತನ್ನು ಆಯ್ಕೆಮಾಡಿದ ಹಾಗಾಗುತ್ತದೆ. ಆದುದರಿಂದ ಬೇರೆಯವರು ಹಿಂಸ್ರರಾಗ ಕೂಡದು ಎಂದು ನಾನು ಬಯಸಲಾಗದು.

ಈ ವೈಯುಕ್ತಿಕ ಹಾಗೂ ಸಾಮಾಜಿಕ ನೈತಿಕತೆಯ ಆಧಾರವಾದ 'ಸ್ವಾತಂತ್ರ್ಯ' ಅಸ್ತಿತ್ವವಾದಿ ಮನೋವಿಶ್ಲೇಷಣೆಯಲ್ಲಿ 'ಆತ್ಮ-ಪ್ರಜ್ಞೆ'ವಾಗುತ್ತದೆ. 'ತನಗಾಗಿ-ತಾನಿರುವುದರ' ಹಲವಾರು ಕಾರ್ಯಗಳು, ಪ್ರಜ್ಞೆ ಹಾಗೂ ಅಸ್ತಿತ್ವಗಳ ನಡುವೆ ಕಳೆದು ಹೋಗಿರುವ ಸಂಪರ್ಕವನ್ನು ಮೌಲ್ಯಗಳ ರೂಪದಲ್ಲಿ ಸೃಷ್ಟಿಸುವುದನ್ನು ಗುರಿಯಾಗಿಟ್ಟುಕೊಂಡಿರುತ್ತವೆ' ಹಾಗೂ ಈ ಕಾರ್ಯಗಳನ್ನು ಅಸ್ತಿತ್ವವಾದಿ ಮನೋವಿಶ್ಲೇಷಣೆಯು ವಸ್ತುಗಳನ್ನಾಗಿ ಮಾಡಬಹುದು. ಈ ರೀತಿ "ಅಸ್ತಿತ್ವವಾದಿ ಮನೋವಿಶ್ಲೇಷಣೆಯೊಂದು **'ನೈತಿಕ ವಿವರಣೆ'** (ಸಾತ್ರ್‌ನದು) ಯಾಗುತ್ತದೆ. ಏಕೆಂದರೆ ಅದು ಮಾನವನ ವಿವಿಧ ಯೋಜನೆಗಳ ನೈತಿಕ ಅರ್ಥವನ್ನು ನಮಗೆ ವಿವರಿಸುತ್ತದೆ. ಅಸ್ತಿತ್ವವಾದಿ ಮನೋವಿಶ್ಲೇಷಣೆ ಹಾಗೂ ಮೂಲತತ್ವಶಾಸ್ತ್ರಗಳು ನೈತಿಕ ವ್ಯಕ್ತಿಗೆ **ಅವನಿಂದಲೇ ಮೌಲ್ಯಗಳು ಅಸ್ತಿತ್ವ ಪಡೆಯುತ್ತವೆ** (ಒತ್ತು ಸಾತ್ರ್‌ನದು) ಎಂದು ತಿಳಿಸುತ್ತವೆ. "ಆಗ ಅವನ ಮುಕ್ತ ಆತ್ಮ-ಪ್ರಜ್ಞೆವಾಗುತ್ತದೆ. ಹಾಗೂ ಸಂಕಟದ ನಡುವೆ ಮೌಲ್ಯದ ಅತಿ ವಿಶಿಷ್ಟ ಮೂಲವೆಂದು ಕಾಣಿಸಿಕೊಳ್ಳುತ್ತದೆ."

ಈ ಅಸ್ತಿತ್ವವಾದದ ಕೇಂದ್ರಬಿಂದುವಾದ 'ಮುಕ್ತಿ'ಯ ಬಗೆಗಿನ ಹಲವಾರು ಪ್ರಶ್ನೆಗಳನ್ನು ನೈತಿಕ ಪಾತಳಿಯ ಮೇಲೆಯೇ ಬಗೆಹರಿಸಲು ಸಾಧ್ಯ ಎನ್ನುವ ಮೂಲಕ ಹಾಗೂ ತನ್ನ **'ಅಸ್ತಿತ್ವ ಹಾಗೂ ಶೂನ್ಯತೆ'** ಎಂಬ ಗ್ರಂಥದ ಕೊನೆಯಲ್ಲಿ ಅಂತಹ ಪ್ರಶ್ನೆಗಳ ಸಮಾಧಾನಕ್ಕಾಗಿ ತಾನು ಮುಂದೆ ಒಂದು ಕೃತಿಯನ್ನು ರಚಿಸುವ ಭರವಸೆಯನ್ನು ನೀಡುವುದರ ಮೂಲಕ ಸಾತ್ರ್ ನೈತಿಕತೆಗಿರುವ ಮಹತ್ವವನ್ನು ಒಪ್ಪಿಕೊಳ್ಳುತ್ತಾನೆ. ನೈತಿಕತೆಯ ಒಂದು ವ್ಯವಸ್ಥೆಯನ್ನೇ ಸಾತ್ರ್ ಕಲ್ಪಿಸದೇ ಹೋದರೂ. ಆತ ತನ್ನ ಅಸ್ತಿತ್ವವಾದವನ್ನು 'ಕೃತಿಯ ನೈತಿಕ ಸಿದ್ಧಾಂತ' (ethics of action) ಎಂದು ಕರೆಯುತ್ತಾನೆ.

ಪ್ರೌಢಶಾಲಾ ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಉದ್ಯೋಗಾಭಿರುಚಿಗಳು

● ಎ. ಎಸ್. ಧರಣೇಂದ್ರಯ್ಯ ಮತ್ತು ಆರ್. ಶ್ಯಾಮಲಾ

ಪೀಠಿಕೆ :

ಯಾವುದೇ ಸಮಾಜದಲ್ಲಿಯಾಗಲಿ ಸೃಜನಶೀಲರೆನಿಸಿಕೊಳ್ಳುವವರು ಕೇವಲ ಕೆಲವರು ಮಾತ್ರ. ಆದರೂ ಅಂತಹ ವ್ಯಕ್ತಿಗಳು ಆಯಾಯ ಸಮಾಜದ, ಅಷ್ಟೇಕೆ ಇಡೀ ಮಾನವ ಸಮುದಾಯದ ಅಮೂಲ್ಯ ಸಂಪನ್ಮೂಲವೆನಿಸುತ್ತಾರೆ. ಹೀಗಿರುವಲ್ಲಿ ಸೃಜನಶೀಲ ಕಾರ್ಯದ ಅಂತರ್ಗತ ಅಗತ್ಯಗಳ ಅರಿವು ಮತ್ತು ಅವುಗಳ ಪೂರೈಕೆಗಾಗಿ ಒದಗಿಸಬೇಕಾದ ಅನುಕೂಲತೆಗಳ ಬಗ್ಗೆ ಆದ್ಯ ಗಮನ ಕೊಡುವುದು ಯಾವುದೇ ರಾಷ್ಟ್ರದ ಹಿತಚಿಂತನೆಯ ದೃಷ್ಟಿಯಿಂದ ಅತ್ಯವಶ್ಯಕ. ಅದರಲ್ಲಿಯೂ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಂತೂ ಅಂತಹ ಅವಶ್ಯಕತೆ ಹೆಚ್ಚು. ಸೃಜನಶೀಲ ಶಕ್ತಿ ಮತ್ತು ಅದಕ್ಕೆ ಸಂಬಂಧಿಸಿದ ಇತರ ಅಂಶಗಳ ಬಗ್ಗೆ ಹೆಚ್ಚು ವ್ಯಾಪಕವೂ, ನಿಖರವೂ ಆದ ಅಧ್ಯಯನಗಳು ನಡೆಯಬೇಕಾಗಿದೆ. ಹೊರದೇಶಗಳಲ್ಲಿ ಈ ಬಗ್ಗೆ ಹಲವಾರು ಅಧ್ಯಯನಗಳು ಈಗಾಗಲೇ ನಡೆದು, ಅವುಗಳ ಪ್ರಯೋಜನವನ್ನು ಅವರು ತಮ್ಮ ನಿತ್ಯ ಜೀವನದಲ್ಲಿ, ಹೆಚ್ಚಾಗಿ ಶಿಕ್ಷಣದಲ್ಲಿ, ಪಡೆದುಕೊಳ್ಳಲು ಸಾಧ್ಯವಾಗಿದೆ.

ಸೃಜನಶೀಲತೆಗೆ ಸಂಬಂಧಿಸಿದಂತಹ ಬುದ್ಧಿಶಕ್ತಿ, ಅಭಿಕ್ಷಮತೆ, ಕಲ್ಪನೆ ಮುಂತಾದಂಶಗಳ ಬಗ್ಗೆ ಹಲವು ಅಧ್ಯಯನಗಳು ನಡೆದಿವೆ. ಅದರಂತೆಯೇ ಸೃಜನಶೀಲತೆ ಮತ್ತು ಅಭಿರುಚಿಗಳಿಗೆ ಸಂಬಂಧಿಸಿದಂತೆಯೂ ಕೆಲವು ಅಧ್ಯಯನಗಳು ನಡೆದಿರುವುದು ಕಂಡುಬರುತ್ತದೆ. ಅವುಗಳಲ್ಲಿ ಬಹು ಮುಖ್ಯವಾಗಿ ಗೆಟ್ಸೆಲ್ ಮತ್ತು ಜಾಕ್‌ಸನ್ (೧೯೬೮), ವಿಕ್ಟರ್. ಜಿ. ಸಿಸಿರೆಲ್ಲಿ (೧೯೬೬), ಮಾಕ್ಕಿನಾನ್ (೧೯೬೨) ಮುಂತಾದವರ ಸಂಶೋಧನೆಗಳು ಸೃಜನಶೀಲತೆ ಮತ್ತು ಅಭಿರುಚಿಗಳ ಸಂಬಂಧದ ಬಗ್ಗೆ ಸ್ವಲ್ಪಮಟ್ಟಿಗೆ ಬೆಳಕು ಚೆಲ್ಲಿವೆ. ಈ ಅಧ್ಯಯನಗಳಿಂದ ಹೊರಬಿದ್ದಿರುವ ಅಂಶಗಳಲ್ಲಿ ಪ್ರಮುಖವಾದುದೆಂದರೆ, ಮೇಲ್ತರದ ಸೃಜನಶೀಲತೆಯುಳ್ಳ ವ್ಯಕ್ತಿಗಳು, ಅಸಾಂಪ್ರದಾಯಿಕ ಉದ್ಯೋಗಗಳಲ್ಲಿ, ಇತರರಿಗಿಂತ ಹೆಚ್ಚು ಅಭಿರುಚಿಯುಳ್ಳವರಾಗಿರುತ್ತಾರೆ ಎಂಬುದು. ಈ ಅಂಶ ಹೆಚ್ಚು ಕುತೂಹಲಕಾರಿಯಾಗಿದ್ದು, ಹೆಚ್ಚು ವಿವರವೂ, ವ್ಯಾಪಕವೂ ಆದ ಅಧ್ಯಯನಗಳಿಗೆ ಕರೆಕೊಡುವಂತಿದೆ.

ಪ್ರಸಕ್ತ ಅಧ್ಯಯನ :

ಸೃಜನಶೀಲತೆಯ ಮಟ್ಟಕ್ಕನುಗುಣವಾಗಿ ವಿವಿಧ ಸಾಂಪ್ರದಾಯಿಕ ಉದ್ಯೋಗಾಭಿರುಚಿಗಳಲ್ಲಿಯೇ ಗಣನೀಯ ಭೇದವಿದೆಯೇ ಎಂಬುದನ್ನು ತಿಳಿಯುವುದೇ ಈ ಅಧ್ಯಯನದ ಪ್ರಮುಖ ಉದ್ದೇಶ. ಪ್ರಾಸಂಗಿಕವಾಗಿ ಆರ್ಥಿಕ-ಸಾಮಾಜಿಕ ಅಂತಸ್ತು ಮತ್ತು ಸೃಜನಶೀಲತೆಗಳ ನಡುವಣ ಸಂಬಂಧವನ್ನೂ ಪರಿಶೀಲಿಸುವುದು ಹೆಚ್ಚಿನ ಉದ್ದೇಶ.

ಪ್ರಾಕ್ಕಲ್ಪನೆಗಳು :

೧. ಈ ಅಧ್ಯಯನಕ್ಕಾಗಿ ರೂಪಿಸಲಾದ ಪ್ರಮುಖ ಪ್ರಾಕ್ಕಲ್ಪನೆ ಹೀಗಿದೆ :
"ಹೆಚ್ಚು ಕಡಿಮೆ ಸೃಜನಶೀಲತೆಯುಳ್ಳ ಪ್ರೌಢಶಾಲಾ ವಿದ್ಯಾರ್ಥಿಗಳ ಉದ್ಯೋಗಾಭಿರುಚಿ ವಿನ್ಯಾಸಗಳಲ್ಲಿ ಗಣನೀಯ ಭೇದವಿದೆ."

೨. ಪ್ರಾಸಂಗಿಕವಾಗಿ ರೂಪಿಸಿದ ಮತ್ತೊಂದು ಪ್ರಾಕ್ಕಲ್ಪನೆ ಹೀಗಿದೆ :
"ವಿವಿಧ ಸಾಮಾಜಿಕ-ಆರ್ಥಿಕ ಅಂತಸ್ತುಗಳ ಹಿನ್ನೆಲೆ ಪಡೆದಿರುವ ವಿದ್ಯಾರ್ಥಿಗಳ ಸೃಜನಶೀಲತೆಯಲ್ಲಿ ಗಣನೀಯ ವ್ಯತ್ಯಾಸವಿದೆ."

ಅಧ್ಯಯನ ವಿಧಾನ :

ಮೇಲ್ಕಂಡ ಪ್ರಾಕ್ಕಲ್ಪನೆಗಳ ಪರಿಶೀಲನೆಗಾಗಿ ಹತ್ತನೇ ವರ್ಗದ ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಉದ್ಯೋಗಾಭಿರುಚಿಗಳನ್ನು ಕಂಡುಹಿಡಿಯಲು ಪ್ರಮಾಣಿತ ಪರೀಕ್ಷೆ ಮತ್ತು ಅಂಶಮಾಲಾ ತಂತ್ರಗಳನ್ನು ಬಳಸಲಾಯಿತು. ಸೃಜನಶೀಲತೆಯನ್ನು ಕಂಡುಹಿಡಿಯಲು ಕುಪ್ಪುಸ್ವಾಮಿ ರೂಪಿಸಿದ 'ಪರಿಣಾಮಗಳು' (Consequences) ಮತ್ತು 'ಪರ್ಯಾಯ ಉಪಯೋಗಗಳು' (Alternate uses) ಈ ಪರೀಕ್ಷೆಗಳನ್ನು ಬಳಸಲಾಯಿತು. ಈ ಪರೀಕ್ಷೆಗಳಲ್ಲಿ ಒಂದೊಂದೂ ಸೃಜನಶೀಲತೆಯ ನಾಲ್ಕು ಅಂಶಗಳನ್ನು ಅಂದರೆ. 'ನಿರರ್ಗಳತೆ' (Fluency). 'ನಮ್ಯತೆ' (Flexibility). 'ಸ್ವಂತತೆ' (Originality) ಮತ್ತು 'ದೂರದ ಸಂಬಂಧತೆ' (Remoteness) ಇವುಗಳನ್ನು ಅಳೆಯಬಲ್ಲವು.

ಉದ್ಯೋಗಾಭಿರುಚಿಗಳನ್ನು ಅಳೆಯಲು ಎನ್. ಸಿ. ಇ. ಆರ್. ಟಿ. ಅಭಿರುಚಿ ಅಂಶಮಾಲೆಯ 'A' ಬಂಧವನ್ನು ಬಳಸಲಾಗಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗಾಗಿ ರೂಪಿಸಲಾಗಿರುವ ಈ ಬಂಧದಲ್ಲಿ ಒಟ್ಟು ೧೮೦ ಪರೀಕ್ಷಾಂಶಗಳು ನಾಲ್ಕು ವಿಭಾಗಗಳಲ್ಲಿ ವರ್ಗೀಕೃತವಾಗಿದೆ. ಒಟ್ಟು ಅಂಶಮಾಲೆಗೆ ಸಾಮಾನ್ಯ ಸೂಚನೆಗಳಿರುವುದರ ಜೊತೆಗೆ. ಪ್ರತಿಯೊಂದು ವಿಭಾಗದಲ್ಲಿಯೂ ವಿಶೇಷ ಸೂಚನೆಗಳಿವೆ.

ಪ್ರಸಕ್ತ ಅಧ್ಯಯನದಲ್ಲಿ, ಸೃಜನಶೀಲತೆ ಪರೀಕ್ಷೆಗಳು ಮತ್ತು ಅಭಿರುಚಿ ಅಂಶಮಾಲೆಗಳ ಕನ್ನಡ ರೂಪಗಳನ್ನು ಬಳಸಲಾಯಿತು.

ಪರೀಕ್ಷಾರ್ಥಿಗಳು ಮತ್ತು ಪರೀಕ್ಷೆ :

ಮೇಲ್ಕಂಡ ಪರೀಕ್ಷೆಗಳು ಮತ್ತು ಅಂಶಮಾಲೆಗಳನ್ನು ಧಾರವಾಡದ ಏಳು ಪ್ರಮುಖ ಪ್ರೌಢಶಾಲೆಗಳ ಹತ್ತನೇವರ್ಗದಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳ ಒಂದು

'ಪ್ರತಿಚಯನ' (sample) ಕ್ಕೆ ಕೊಡಲಾಯಿತು. ಅದು ಒಂದು ಸರಳ ಯಾದೃಚ್ಛಿಕ ಪ್ರತಿಚಯನ (Simple Random Sample). ಈ ಪ್ರತಿಚಯನದಲ್ಲಿ ಸೇರಿದ ವಿದ್ಯಾರ್ಥಿಗಳ ವಯಸ್ಸಿನ ಅಂತರ ೧೪ ರಿಂದ ೧೯ ವರ್ಷಗಳು (ಸರಾಸರಿ ೧೬ ವರ್ಷಗಳು). ೩೦ ರಿಂದ ೪೦ ವಿದ್ಯಾರ್ಥಿಗಳಿದ್ದ ಸಮೂಹಗಳಿಗೆ ಒಂದೊಂದಕ್ಕೂ ಪ್ರತ್ಯೇಕವಾಗಿ ಪರೀಕ್ಷೆ ಕೊಡಲಾಯಿತು. ಇದಕ್ಕಾಗಿ ಎರಡು ಅಧಿವೇಶನಗಳನ್ನು ನಡೆಸಲಾಯಿತು. ಮೊದಲನೆಯ ಅಧಿವೇಶನದಲ್ಲಿ ಸೃಜನಶೀಲತೆ ಪರೀಕ್ಷೆಗಳನ್ನು ಮತ್ತು ಎರಡನೆಯ ಅಧಿವೇಶನದಲ್ಲಿ ಅಭಿರುಚಿ ಅಂಶಮಾಲೆಯನ್ನು ಕೊಡಲಾಯಿತು.

ಪ್ರಾಪ್ತಾಂಕ ವಿಶ್ಲೇಷಣೆ :

ದೊರೆತ ಉತ್ತರಗಳ ಮೌಲ್ಯಮಾಪನವು ಪೂರ್ವನಿಯೋಜಿತ ಕ್ರಮಾನುಸಾರ ನಡೆಯಿತು. ಸೃಜನಶೀಲತೆ ಪರೀಕ್ಷೆಗಳಿಗೆ ದೊರೆತ ಉತ್ತರಗಳನ್ನು ಮೂವರು ಪರಿಣತ ನಿರ್ಣಾಯಕರು ಪರಿಶೀಲಿಸಿ ಮೌಲ್ಯಗಳನ್ನು ನಿರ್ಧರಿಸಿದರು. ಪ್ರಮಾಣಿತ ಅಂಕನ ಕುಂಜಿ (standard scoring key)ಯನ್ನು ಬಳಸಿ, ಅಭಿರುಚಿ ಅಂಶಮಾಲೆಗೆ ದೊರೆತ ಉತ್ತರಗಳ ಮೌಲ್ಯಮಾಪನ ಮಾಡಲಾಯಿತು. ಇದಕ್ಕಾಗಿ ಬಳಸಿದ ಅಂಕನ ಕುಂಜಿಗಳ ಹೆಸರುಗಳು ಮತ್ತು ಸಂಕೇತಗಳು ಹೀಗಿವೆ :

ಉದ್ಯೋಗಾಭಿರುಚಿ ಕ್ಷೇತ್ರ	ಸಂಕೇತಾಂಕ
ಆರ್ಥಿಕ	೦೧
ನ್ಯಾಯ – ಆಡಳಿತ	೦೩
ತಾಂತ್ರಿಕ	೦೪
ವೈಜ್ಞಾನಿಕ	೦೬
ವೈದ್ಯಕೀಯ	೧೦ ಮತ್ತು
ಶಿಕ್ಷಣ	೧೧


ಈ ರೀತಿಯ ಮೌಲ್ಯಮಾಪನ ವಿಧಿಯಿಂದ ಪಡೆದ ಪ್ರಾಪ್ತಾಂಕಗಳನ್ನು ಅಂಕಿಅಂಶ ವಿಶ್ಲೇಷಣೆಗೆ ಒಳಪಡಿಸಲಾಯಿತು. ಮೊದಲು ಪ್ರತಿಯೊಂದು ಅಭಿರುಚಿ ಕ್ಷೇತ್ರಕ್ಕೂ ಸೇರಿದಂತಹ ಪ್ರಾಪ್ತಾಂಕಗಳ ಆವರ್ತ ವಿತರಣೆಗಳನ್ನು ಮೇಲು ಮತ್ತು ಕೆಳಗಿನ ಸೃಜನಶೀಲ ಸಮೂಹಗಳಿಗೆ ಪ್ರತ್ಯೇಕವಾಗಿ ಎಳೆಯಲಾಯಿತು. ಅನಂತರ, ಅವಶ್ಯಕವಾದ ಸರಾಸರಿ (mean), ಪ್ರಮಾಣಕ ಚ್ಯುತಿ (Standard deviation), ವಿಮರ್ಶಾತ್ಮಕ ಅನುಪಾತ (critical ratio) ಮತ್ತು ಬಿಂದು ದ್ವಿಪಂಕ್ತಿಕ ಸಹಸಂಬಂಧ (point biserial correlation) ಗಳನ್ನು ಕಂಡು ಹಿಡಿದು, ಸೃಜನಶೀಲತೆ ಮತ್ತು ಉದ್ಯೋಗಾಭಿರುಚಿಗಳ ನಡುವಣ ಸಂಬಂಧವನ್ನು ಪರಿಶೀಲಿಸಲಾಯಿತು. ಈ ಕಾರ್ಯವನ್ನು ಹೆಚ್ಚು ಸುಗಮಗೊಳಿಸಲು, ಶತಾಂಕಸ್ತರ (percentile) ಗಳನ್ನು ಕಂಡುಹಿಡಿದು ಅಭಿರುಚಿ ಪಾರ್ಶ್ವರೇಖೆಗಳನ್ನು ರೂಪಿಸಲಾಯಿತು. ದೊರೆತ ಅಂಕಿ ಅಂಶಗಳ ಕೆಲವು ವಿವರಗಳನ್ನು ೧ ಮತ್ತು ೨ ನೆಯ ಕೋಷ್ಟಕಗಳಲ್ಲಿಯೂ, ಪಾರ್ಶ್ವರೇಖೆ ಚಿತ್ರದಲ್ಲಿಯೂ ಕಾಣಬಹುದು.

ಕೋಷ್ಟಕ : ೧

ಮೇಲು ಮತ್ತು ಕೆಳ ಮಟ್ಟದ ಸೃಜನ ಶೀಲತೆಯುಳ್ಳ ಪ್ರೌಢಶಾಲಾ ವಿದ್ಯಾರ್ಥಿಗಳು ಪಡೆದ ಉದ್ಯೋಗಾಭಿರುಚಿ ಅಂಕಿ ಅಂಶಗಳು.

ಅಭಿರುಚಿ ಕ್ಷೇತ್ರ		ಸರಾಸರಿ (Mean)	ಪ್ರಮಾಣಕ ಚ್ಯುತಿ (S.D)	ವಿಮರ್ಶಾತ್ಮಕ ಅನುಪಾತ (CR)	ಭೇದದ ಮಟ್ಟ (level of significance)	ಶತಾಂಶ ಸ್ತರಗಳು (Percntiles)
ಸೃಜನ ಶೀಲತೆಯಲ್ಲಿ:						
೧೧	ಮೇಲ್ಗುಂಪು	— ೧೮.೨೫	೧೮.೭೧	೦.೭೨	Not Significant	೫೧.೨೦
	ಕೆಳಗುಂಪು	— ೨೧.೦೦	೧೫.೩೦			೫೧.೦೦
೧೩	ಮೇಲ್ಗುಂಪು	— ೨೧.೫೦	೧೬.೦೯	೦.೪೧	N.S	೫೦.೦೦
	ಕೆಳಗುಂಪು	— ೨೦.೦೦	೧೭.೦೨			೪೯.೭೦
[illegible]	ಮೇಲ್ಗುಂಪು	೩೬.೫೦	೨೮.೮೫	೦.೮೩	N.S	೫೭.೫೦
	ಕೆಳಗುಂಪು	೩೧.೨೫	೩೦.೫೩			೫೭.೦೦
೧೬	ಮೇಲ್ಗುಂಪು	೩.೭೫	೩೨.೯೦	೧.೪೧	N.S	೪೯.೧೦
	ಕೆಳಗುಂಪು	—೬.೨೫	೩೦.೬೧			೪೯.೪೦
೧೦	ಮೇಲ್ಗುಂಪು	೮.೨೫	೧೬.೫೪	೦.೯೧	N.S	೪೯.೨೦
	ಕೆಳಗುಂಪು	೧೧.೫೦	೧೫.೫೦			೪೯.೫೦
೧೧	ಮೇಲ್ಗುಂಪು	೯.೭೫	೧೭.೩೨	೦.೨೦	N.S	೫೧.೦೦
	ಕೆಳಗುಂಪು	೯.೦೦	೧೬.೮೯			೫೦.೬೦

ಸೃಜನಶೀಲತೆ-ಉದ್ಯೋಗಾಭಿರುಚಿ ಪಾರ್ಶ್ವರೇಖೆಗಳು



ಅರ್ಥವಿವರಣೆ :

ಮೇಲ್ಕಂಡ ಕೋಷ್ಟಕ ಮತ್ತು ೧೦ ನೇ ಪುಟದಲ್ಲಿರುವ ಪಾರ್ಶ್ವರೇಖೆಗಳು ಉದ್ಯೋಗಾಭಿರುಚಿಗಳಲ್ಲಿ ಮೇಲು ಮತ್ತು ಕೆಳಗಿನ ಸೃಜನಶೀಲ ಸಮೂಹಗಳಲ್ಲಿ ಗಣ-ನೀಯ ಭೇದವಿಲ್ಲವೆಂಬುದನ್ನು ಮೇಲ್ನೋಟಕ್ಕೇ ಸೂಚಿಸುತ್ತವೆ. ಕೋಷ್ಟಕದಲ್ಲಿ ಕೊಡಲಾಗಿರುವ ಅಂಕಿ ಅಂಶಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ವಿವಿಧ ಉದ್ಯೋಗಾಭಿರುಚಿಗಳಿಗೆ ಸಂಬಂಧಿಸಿದಂತೆ ಮೇಲು ಮತ್ತು ಕೆಳಗಿನ ಸೃಜನಶೀಲತೆ ಸಮೂಹಗಳ ಸರಾಸರಿಗಳಲ್ಲಿ ಗಣನೀಯ ವ್ಯತ್ಯಾಸವಿಲ್ಲ. ಈ ಅಂಶವು ವಿಮರ್ಶಾತ್ಮಕ ಅನುಪಾತಗಳಿಂದ ಹೆಚ್ಚು ಸ್ಪಷ್ಟವಾಗುತ್ತದೆ. ದೊರೆತ ಯಾವುದೇ ವಿಮರ್ಶಾತ್ಮಕ ಅನುಪಾತವು ಮಹತ್ವಪೂರ್ಣವಾದುದಲ್ಲ. ಆದ್ದರಿಂದ ಪರಿಗಣನೆಯಲ್ಲಿರುವ ಎರಡು ಗುಂಪುಗಳ ನಡುವಣ ವ್ಯತ್ಯಾಸವು ಗಮನಾರ್ಹವಲ್ಲವೆಂಬುದು ಸುಸ್ಪಷ್ಟ. ಎರಡು ಗುಂಪುಗಳ ಉದ್ಯೋಗಾಭಿರುಚಿಗಳನ್ನು ಪಾರ್ಶ್ವರೇಖಗಳಿಂದ ಮೊದಲ ನೋಟಕ್ಕೇ ಗುರುತಿಸಲು ಸಾಧ್ಯ (ನೋಡಿ : ಚಿತ್ರ ಪು.೧೦) ಈ ವಿನ್ಯಾಸಗಳಲ್ಲಿ ಅಷ್ಟಾಗಿ ವ್ಯತ್ಯಾಸ ಕಂಡುಬರದಿರುವುದು ಕುತೂಹಲಕರ ಸಂಗತಿಯಾದು. ಗೆಟ್ಜೆಲ್ ಮತ್ತು ಜಾಕ್ಸನ್ ಮುಂತಾದವರ ಸಂಶೋಧನೆಗಳ ಪ್ರಕಾರ, ಮೇಲ್ಮಟ್ಟದ ಸೃಜನಶೀಲತೆಯುಳ್ಳವರು ಅ-ಸಾಂಪ್ರದಾಯಿಕ ಉದ್ಯೋಗಗಳಲ್ಲಿ ಹೆಚ್ಚು ಅಭಿರುಚಿಯುಳ್ಳವರಾಗಿರುತ್ತಾರೆ ಎಂಬ ಅಂಶವನ್ನು ಗಮನಿಸಿದಾಗ, ಪ್ರಸಕ್ತ ಪ್ರಾಪ್ತಾಂಕಗಳಿಗೆ ಸ್ವಲ್ಪ ಅರ್ಥ ಮೂಡುತ್ತದೆ. ಮೇಲ್ಮಟ್ಟದ ಸೃಜನಶೀಲತೆಯುಳ್ಳವರು ಸಾಂಪ್ರದಾಯಿಕ ಉದ್ಯೋಗಗಳಲ್ಲಿ ಇತರರು ತೋರಿಸುವಷ್ಟೇ ಅಭಿರುಚಿ ತೋರಿಸುತ್ತಾರೆ ಎಂಬ ಅಂಶ ಪರಿಗಣನೀಯ. ಈ ಪರಿಸ್ಥಿತಿಗೆ ಬಹುಶಃ ಸಂಪ್ರದಾಯಶೀಲತೆಯಲ್ಲಿ ಅಂತರ್ಗತವಾಗಿರುವ ಸಾಪೇಕ್ಷ ನಿರಾಸಕ್ತಿಯೇ ಪ್ರಬಲ ಕಾರಣವಿರಬಹುದು. ಸಾಂಪ್ರದಾಯಿಕ ಉದ್ಯೋಗಗಳು ಮೇಲ್ತರದ ಸೃಜನಶೀಲತೆಯುಳ್ಳವರನ್ನು ಚಿಕ್ಕಂದಿನಿಂದಲೂ ಅಷ್ಟಾಗಿ ಪ್ರೇರೇಪಿಸದಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ,

ಈ ಎರಡು ಸಮೂಹಗಳ ನಡುವೆ ನಾವು ಪರಿಗಣಿಸುತ್ತಿರುವ ಸಾಂಪ್ರದಾಯಿಕ ಉದ್ಯೋಗಾಭಿರುಚಿಗಳಲ್ಲಿ ಅಷ್ಟಾಗಿ ಭೇದವಿಲ್ಲವೆಂದರೂ, ದೊರೆತ ಅಂಕ ಅಂಶಗಳ ಹೆಚ್ಚು ಸೂಕ್ಷ್ಮ ಪರಿಶೀಲನೆಯಿಂದ ಕೆಲವು ಭೇದಗಳು ಕಂಡುಬರುತ್ತವೆ. ಈ ಭೇದಗಳು ಒಂದು ರೀತಿಯಲ್ಲಿ ಅಭಿರುಚಿ ದಿಸೆಯನ್ನು ಸೂಚಿಸುತ್ತವೆ. ಮೇಲ್ಮಟ್ಟದ ಸೃಜನಶೀಲತೆಯುಳ್ಳವರು ಕೆಳಮಟ್ಟದವರಿಗಿಂತ ಕಡಿಮೆ ವೈಜ್ಞಾನಿಕ ಮತ್ತು ವೈದ್ಯಕೀಯ ಅಭಿರುಚಿಗಳನ್ನು ಹೊಂದಿರುವುದು ಪಾರ್ಶ್ವರೇಖೆಗಳ ಪರಿಶೀಲನೆಯಿಂದ ವ್ಯಕ್ತವಾಗುತ್ತದೆ. ಇದು ಮೇಲ್ನೋಟಕ್ಕೆ ವಿಚಿತ್ರವೆನಿಸಿದರೂ, ಹೆಚ್ಚು ಪರಿಶೀಲಿಸಿದಾಗ ಸುಸಂಬದ್ಧ ಸಂಗತಿ ಎನಿಸದಿರದು. ಈ ಸಂಗತಿಗೆ ಹಿನ್ನೆಲೆಯಲ್ಲಿರುವ ಕಾರಣಗಳಲ್ಲಿ, ಈ ಎರಡು ಉದ್ಯೋಗ ಕ್ಷೇತ್ರಗಳತ್ತ ಇರುವ ಸಾಮಾಜಿಕ ಒಲವು ಸ್ಥೂಲದೃಷ್ಟಿಗೆ ಸಮಂಜಸವೆನಿಸುತ್ತದೆ. ಆದರೆ ಇಂತಹ ಪರಿಸ್ಥಿತಿ ತಾಂತ್ರಿಕ ಅಭಿರುಚಿಗಳಿಗೂ ಇರಬೇಕಾಗಿತ್ತಲ್ಲ ಎಂಬ ಶಂಕೆ,

ತಕ್ಷಣ, ಉದ್ಭವಿಸದಿರದು. ಅಂತಹ ಶಂಕೆಯ ಪರಿಹಾರಕ್ಕೆ ಹೆಚ್ಚು ಸೂಕ್ಷ್ಮ ಪರಿಶೀಲನೆ ಮಾಡಿದಾಗ ನಮಗೆ ಮತ್ತೊಂದು ಪ್ರಬಲ ಕಾರಣ ಗೋಚರಿಸುತ್ತದೆ. ಅದೇನೆಂದರೆ ನಮ್ಮಲ್ಲಿ ಇಂದು ಪ್ರಚಲಿತವಿರುವ ವಿಜ್ಞಾನ ಮತ್ತು ವೈದ್ಯ ಶಿಕ್ಷಣಗಳ ಸಾಂಪ್ರದಾಯಿಕ ಮತ್ತು ಸ್ಥಗಿತ ಕಾರ್ಯಕ್ರಮಗಳು. ಇಂತಹ ಕಾರ್ಯಕ್ರಮಗಳ ಮುನ್ನರಿವು ಬಹುಶಃ ಹೆಚ್ಚು ಸೃಜನಶೀಲತೆಯುಳ್ಳವರ ಮನೋಭಾವಕ್ಕೆ ಕಾರಣವಾಗಿರಬಹುದು. ಉಳಿದ ಆರ್ಥಿಕ, ನ್ಯಾಯ ಮತ್ತು ಆಡಳಿತ, ತಾಂತ್ರಿಕ ಮತ್ತು ಶಿಕ್ಷಣಕ್ಷೇತ್ರಗಳತ್ತ ಕಂಡುಬರುವ ಸಾಪೇಕ್ಷವಾಗಿ ಹೆಚ್ಚಿನ ಒಲವಿಗೆ, ಆ ಕ್ಷೇತ್ರಗಳಲ್ಲಿ ಸಾಧ್ಯವಿರುವ ಹೆಚ್ಚಿನ ಗತಿಶೀಲತೆಯೇ ಕಾರಣವಿರಬಹುದು. ಅಂದರೆ, ನಿರರ್ಗಳತೆ, ನಮ್ಯತೆ, ಸ್ವಂತತೆ ಮತ್ತು ದೂರದ ಸಂಬಂಧತೆಗಳ ಅಭಿವ್ಯಕ್ತತೆಗೆ ಈ ಕ್ಷೇತ್ರಗಳಲ್ಲಿರುವ ಸಾಪೇಕ್ಷ ಅವಕಾಶವೇ ಈ ಪರಿಸ್ಥಿತಿಗೆ ಕಾರಣವಾಗಿರುವ ಸಾಧ್ಯತೆ ಇದೆ. ಅಂದರೆ ಬರಡು ಸಂಪ್ರದಾಯಬದ್ಧತೆಯ ಹಾವಳಿ ಕಡಿಮೆಯಾಗದೆ ನಮ್ಮ ಶಿಕ್ಷಣ ಪದ್ಧತಿಯು ಹೆಚ್ಚು ಸೃಜನಶೀಲವಾಗಲಾರದು ಎಂದು ಕಾಣುತ್ತದೆ.

ವ್ಯಕ್ತಿ ವ್ಯತ್ಯಾಸಗಳು :

೧ನೆಯ ಕೋಷ್ಟಕದಲ್ಲಿ ಕೊಟ್ಟಿರುವ ಪ್ರಮಾಣಿಕ ಚ್ಯುತಿಗಳನ್ನು ನೋಡಿದರೆ, ಯಾವ ಸಮೂಹದಲ್ಲೂ ಅಷ್ಟಾಗಿ ವ್ಯಕ್ತಿ ವ್ಯತ್ಯಾಸಗಳಿರುವುದು ಕಂಡುಬರುವುದಿಲ್ಲ. ಇಲ್ಲಿ ಪರಿಗಣಿಸಲಾಗಿರುವ ಪ್ರತಿಯೊಂದು ಉದ್ಯೋಗ ಕ್ಷೇತ್ರದಲ್ಲಿಯೂ. ಎರಡು ಸಮೂಹಗಳ ನಡುವೆ ಭಿನ್ನತೆ ಇಲ್ಲದಿರುವಂತೆಯೇ ಅವುಗಳ ಒಳಗೂ, ವ್ಯಕ್ತಿಗಳ ನಡುವೆ ಪರಸ್ಪರ ಭಿನ್ನತೆ ಇಲ್ಲದಿರುವುದು ಗಮನಾರ್ಹ ಸಂಗತಿ. ಇಲ್ಲಿಯೂ ನಮ್ಮ ಕುತೂಹಲ ಕೆರಳದಿರದು. ಇಂದಿನ ನಮ್ಮ ಶಿಕ್ಷಣ ಪದ್ಧತಿಯು ವ್ಯಕ್ತಿ ವ್ಯತ್ಯಾಸಗಳನ್ನು ಪ್ರಕಟ ಪಡಿಸುವಲ್ಲಿ ವಿಫಲಗೊಂಡಿದೆಯೇ ಎಂಬ ಶಂಕೆ ಯಾರಿಗಾದರೂ ಮೂಡುವ ಸಾಧ್ಯತೆ ಇಲ್ಲದಿಲ್ಲ.

ಸಾಮಾಜಿಕ ಆರ್ಥಿಕ ಅಂತಸ್ತು ಮತ್ತು ಸೃಜನಶೀಲತೆ :

ಕೋಷ್ಟಕ : ೨. ಸಾಮಾಜಿಕ–ಆರ್ಥಿಕ ಅಂತಸ್ತು ಮತ್ತು ಸೃಜನಶೀಲತೆಗಳ ನಡುವಣ ಸಂಬಂಧವನ್ನು ಸೂಚಿಸುವ ಅಂಕಿ ಅಂಶಗಳು.

ಅಂಕಿ ಅಂಶಗಳು (ಸೃಜನಾತ್ಮಕತೆ ಅಂಕಗಳು)	ವರ್ಗ ಮೇಲ್ವರ್ಗ	ಮಧ್ಯಮ ವರ್ಗ	ಕೆಳವರ್ಗ
ಸರಾಸರಿ	೨೨.೧೬	೧೩.೪೫	೮.೧೫
ಪ್ರಮಾಣಿಕ ಚ್ಯುತಿ	೪.೨೦	೧.೫೨	೧.೬೬

	ಮೇಲ್ವರ್ಗ-ಮಧ್ಯಮವರ್ಗ	ಮಧ್ಯಮವರ್ಗ-ಕೆಳವರ್ಗ	ಕೆಳವರ್ಗ-ಮೇಲ್ವರ್ಗ
ವಿಮರ್ಶಾತ್ಮಕ ಅನುಪಾತ (C·R)	೯.೭೫	೫.೪೩	೧೦.೦೯

ಎಲ್ಲಾ ಅನುಪಾತಗಳೂ ೦.೦೧ ಮಟ್ಟದಲ್ಲಿ ಮಹತ್ವಪೂರ್ಣವಾಗಿವೆ.

ಮೇಲಿನ ಕೊಷ್ಟಕದತ್ತ ನೋಟ ಹಾಯಿಸಿದಾಗ ವಿವಿಧ ಸಾಮಾಜಿಕ, ಆರ್ಥಿಕ ವರ್ಗಗಳ ನಡುವೆ ಸೃಜನಶೀಲತೆಯಲ್ಲಿ ಗಣನೀಯ ವ್ಯತ್ಯಾಸವಿರುವುದು ಕಂಡುಬರುತ್ತದೆ. ಸೃಜನಶೀಲತೆ ಪ್ರಾಪ್ತಾಂಕಗಳ ಸರಾಸರಿಯಲ್ಲಿ ಮೇಲು, ಮಧ್ಯಮ ಮತ್ತು ಕೆಳವರ್ಗಗಳ ನಡುವೆ ಗಣನೀಯ ವ್ಯತ್ಯಾಸಗಳಿರುವುದನ್ನು ಕಾಣಬಹುದು. ದೊರೆತ ವಿಮರ್ಶಾತ್ಮಕ ಅನುಪಾತಗಳು ಇವನ್ನು ಸ್ಪಷ್ಟಪಡಿಸುತ್ತವೆ. ಅಲ್ಲದೆ, ಮೇಲ್ವರ್ಗದ ವಿದ್ಯಾರ್ಥಿಗಳು ಉಳಿದ ಎರಡು ವರ್ಗಗಳವರಿಗಿಂತ ಹೆಚ್ಚು ಸೃಜನಶೀಲತೆ ತೋರಿರುವುದು ಮತ್ತು ಅವರಲ್ಲಿನ ಆಂತರಿಕ ಭೇದವು ಉಳಿದ ಎರಡು ವರ್ಗಗಳಲ್ಲಿರುವುದಕ್ಕಿಂತ ಗಣನೀಯವಾಗಿ ಹೆಚ್ಚಿರುವುದೂ ಮಹತ್ವಪೂರ್ಣ ಅಂಶಗಳು. ಶಿಕ್ಷಣ ಬೀರಲಾರದ ಪ್ರಭಾವವನ್ನು ವರ್ಗಗಳು ಬೀರುವುದು ಕಂಡುಬರುತ್ತದೆ. ನಮ್ಮ ದೇಶದಲ್ಲಿ ಸೃಜನಶೀಲತೆಯಂತಹ ಶಕ್ತಿಸಾಮರ್ಥ್ಯಗಳನ್ನು ಬೆಳೆಸುವುದರಲ್ಲಿ ಹಾಗೂ, ವ್ಯಾಪಕ ವ್ಯಕ್ತಿ ವ್ಯತ್ಯಾಸಗಳನ್ನು ಪ್ರೇರೇಪಿಸುವಲ್ಲಿ, ಸಾಮಾಜಿಕ, ಆರ್ಥಿಕ ಅಂತಸ್ತು ಮಹತ್ವಪೂರ್ಣ ಪ್ರಭಾವ ಬೀರುವುದು ಇದರಿಂದ ಸ್ಪಷ್ಟವಾದಂತಾಗುತ್ತದೆ. ಶಿಕ್ಷಣಜ್ಞರೂ, ರಾಜನೀತಿಜ್ಞರೂ, ರಾಷ್ಟ್ರ ಧುರೀಣರೂ ಈ ಅಂಶಕ್ಕೆ ಆದ್ಯ ಗಮನ ಕೊಟ್ಟು ವರ್ಗಪ್ರಭಾವವನ್ನು ಮೀರಿಸುವಂತಹ ಶಿಕ್ಷಣ ಪದ್ಧತಿಯನ್ನು ರೂಪಿಸುವಲ್ಲಿ ಶ್ರಮಿಸಬೇಕಾದೀತು.

ಸಾರಾಂಶ :

ಪ್ರೌಢಶಾಲಾ ಹತ್ತನೇ ತರಗತಿಯ ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ಉದ್ಯೋಗಾಭಿರುಚಿಗಳ ನಡುವಣ ಸಂಬಂಧವನ್ನು ತಿಳಿಯಲು ನಡೆಸಿದ ಈ ಅಧ್ಯಯನ ದಿಂದ ಹೊರಬಿದ್ದ ಪ್ರಮುಖ ಅಂಶಗಳೆಂದರೆ : ಸಾಂಪ್ರದಾಯಿಕ ಉದ್ಯೋಗಾಭಿರುಚಿ ಗಳಲ್ಲಿ, ಮೇಲ್ಮಟ್ಟದ ಮತ್ತು ಕೆಳಮಟ್ಟದ ಸೃಜನಶೀಲತೆಯುಳ್ಳವರಲ್ಲಿ ಪರಸ್ಪರ ಭೇದ ವಿಲ್ಲ, ಒಳಭೇದಗಳೂ ಅಷ್ಟಾಗಿಲ್ಲ ಮತ್ತು ಸೃಜನಶೀಲತೆಗೂ ಸಾಮಾಜಿಕ ಮತ್ತು ಆರ್ಥಿಕ ಅಂತಸ್ತುಗಳಿಗೂ ಮಹತ್ವಪೂರ್ಣವಾದ ಸಂಬಂಧವಿದೆ ಎಂಬುವು. ಈ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನಗಳ ಅಗತ್ಯವಿದೆ.

ಆಕರ ಗ್ರಂಥಗಳು ಮತ್ತು ಲೇಖನಗಳು

Cicirelli, V. "Vocational Aspirations and Creativity" Journal of Educational Research; 1966, Vol. 60. pp 68–70.

Getzels & Jackson "Creativity & Intelligence : Exploration with 5ifted Students, New York 19S6.

Mackinnon, D. W. The Nature and Nurture of Creative Talent" American Psychologist; 1962, Vol. 17.

Shyamala R. A study of Relationship Between Creativity & Vocational Interests, M. A. Dissertation, K. U. D. 1975.

ಸಾರ್ವಜನಿಕ ಆಡಳಿತದ ಕೆಲ ಸಮಸ್ಯೆಗಳು

● ವಸಂತ ಪಾಟೀಲ

ಸಾರ್ವಜನಿಕ ಆಡಳಿತದ ಗುರಿ ದೇಶದ ಜನತೆಯ ಸರ್ವತೋಮುಖ ಅಭಿವೃದ್ಧಿ ಹಾಗೂ ಕಲ್ಯಾಣವೇ ಆಗಿದೆ. ಒಂದು ದೇಶದ ಪ್ರಗತಿ, ಅಭಿವೃದ್ಧಿ, ಶಾಂತತೆ ಹಾಗೂ ಸಮೃದ್ಧಿಗಳು ಸಾಮಾನ್ಯವಾಗಿ ಅದರ ಸಾರ್ವಜನಿಕ ಆಡಳಿತದ ನೈಪುಣ್ಯತೆಯ ಮೇಲೆ ಅವಲಂಬಿಸಿವೆ. ಸಾರ್ವಜನಿಕ ಆಡಳಿತವು ದೇಶದ ಏಳ್ಗೆಯತ್ತ ಅಡಿಪಾಯವಿದ್ದಂತೆ. ಇಲ್ಲಿ ಕೆಟ್ಟರೆ ಎಲ್ಲವೂ ಕೆಟ್ಟಂತೆಯೇ; ಇಲ್ಲಿ ಸುಧಾರಿಸಿದರೆ ಎಲ್ಲೆಡೆಯೂ ಸುಧಾರಿಸಿದಂತೆಯೇ. ಆ ಕಾರಣ ಜಗದ ಎಲ್ಲ ದೇಶಗಳು, ಮುಖಂಡರು ಹಾಗೂ ಜನತೆ ತಮ್ಮ ಸಾರ್ವಜನಿಕ ಆಡಳಿತದ ಸುಧಾರಣೆ, ನೈಪುಣ್ಯತೆಯತ್ತ ಸದಾ ಚಿಂತಿಸುತ್ತಿರುವರು.

ಸಾರ್ವಜನಿಕ ಆಡಳಿತದ ನೈಪುಣ್ಯತೆಯ ಅಡಿಪಾಯದ ಮೇಲೆಯೇ ಈ ಹಿಂದೆ ಬ್ರಿಟಿಶ್ ಸಾಮ್ರಾಜ್ಯವು ಇಡೀ ಜಗವನ್ನು ಸುತ್ತುವರಿದಿತ್ತು. ಅಗ್ಗ, ಅಲ್ಲಿ ಸೂರ್ಯ ಮುಳುಗುವ ಪ್ರಸಂಗವೇ ಬಂದಿರಲಿಲ್ಲ. ಅದೇ ರೀತಿ, ಸ್ವಿಟ್ಝರ್‌ಲ್ಯಾಂಡಿನ ಸೇವಾ ವರ್ಗದ ನೈಪುಣ್ಯತೆಯು ಸಹ ಜಗದ ಜಿಜ್ಞಾಸೆಯನ್ನು ಕೆರಳಿಸಿದೆ. ಅಮೇರಿಕೆಯು ಸಹ ತನ್ನದೇ ಆದ "Spoils" ಅರ್ಥಾತ್ ಆಗಾಗ್ಗೆ ಬದಲಾಗುವ ಆಡಳಿತ ವಿಧಾನದಿಂದ ಬ್ರಿಟಿಶ್ ಮಾದರಿಯ ಸೇವಾ ವರ್ಗಕ್ಕೆ ಪರಿವರ್ತನೆಯಾಗುತ್ತಿರುವುದನ್ನು ನೋಡಿದಾಗ ಬ್ರಿಟಿಶ್ ಸೇವಾ ವರ್ಗ ಪದ್ಧತಿಯ ಮೇಲ್ಮೆ ಕಂಡುಬರುವದು. ಹಲವಾರು ಜಾಗತಿಕ ರಾಜಕೀಯ ಕೊಡುಗೆಗಳಲ್ಲಿ ಈ ಸೇವಾವರ್ಗಪದ್ಧತಿಯು ಒಂದು ಶ್ರೇಷ್ಠ ಬ್ರಿಟಿಶ್ ಕೊಡುಗೆ. ಒಂದು ದೃಷ್ಟಿಯಲ್ಲಿ "ಸಿವಿಲ್ ಸರ್ವಿಸ್" ಪದ್ಧತಿಯು ಭಾರತದ ಕೊಡುಗೆಯೆಂದು ಪ್ರತಿಪಾದಿಸಬಹುದು. ಭಾರತದಲ್ಲಿಯ ಕಂಪನಿ ಸರಕಾರದ ಆಡಳಿತದ ವ್ಯವಸ್ಥೆಯ ದೃಷ್ಟಿಯಿಂದ, ಬ್ರಿಟಿಶರು ಸಾರ್ವಜನಿಕ ಆಡಳಿತದಲ್ಲಿ ಹೊಸ ಹೊಸ ವಿಧಾನಗಳನ್ನು ಕಂಡು ಹಿಡಿಯುತೊಡಗಿದರು. ಈಗಿನ "Civil Service" ಮತ್ತು 'Civil Servant' ಶಬ್ದಗಳು ಪ್ರಥಮವಾಗಿ ಬ್ರಿಟಿಶರಾದ ಟ್ರಾವೆಲಿನ್ ಮತ್ತು ನಾರ್ಥಕೋಟ್ ತಮ್ಮ ಬ್ರಿಟಿಶ್ ಆಡಳಿತ ಸುಧಾರಣೆ ವರದಿಯಲ್ಲಿ (1854): ಹಾಗೂ ಲಾ. ಮೆಕಾಲೆಯವರು ಭಾರತೀಯ ಸೇವಾವರ್ಗ (The Indian Civil Service) ಸುಧಾರಣೆಯ ತಮ್ಮ ವರದಿಯಲ್ಲಿ (1854) ಈ ಶಬ್ದಗಳನ್ನು ಬಳಸಿರುವರು.

ಒಂದು ದೃಷ್ಟಿಯಲ್ಲಿ ಬ್ರಿಟಿಶ್ ಸೇವಾವರ್ಗವು (The British Civil Service) ಭಾರತೀಯ ಸೇವಾವರ್ಗದ (The Indian Civil Service) ತಳಹದಿಯ ಮೇಲೆ ನಿರ್ಮಾಣಗೊಂಡಿದೆ. ಇದರರ್ಥ ಭಾರತೀಯ ಸೇವಾವರ್ಗ ನಿರ್ಮಾಣವಾಗದಿದ್ದರೆ ಬ್ರಿಟಿಶ್ ಸೇವಾವರ್ಗದ ಬಗೆಗೆ ವಿಚಾರ ಬರುತ್ತಿರಲಿಲ್ಲವೆಂದಂತಾಯಿತು.

ಅದೇ ರೀತಿ ಭಾರತೀಯ ಸೇವಾವರ್ಗಕ್ಕೆ (I.C.S.) ಆಯ್ಕೆ ಮಾಡಲು ಪ್ರಥಮವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆದವು (1855). ತದನಂತರ ಅದೇ ಮಾದರಿಯಲ್ಲಿ ಬ್ರಿಟಿಶ್ ಸೇವಾವರ್ಗಕ್ಕೆ ಸ್ಪರ್ಧಾತ್ಮಕ ಪರೀಕ್ಷೆ ನಡೆದವು. ಭಾರತೀಯ ಅತ್ಯುಚ್ಚ ಸೇವಾವರ್ಗಕ್ಕೆ ಪ್ರಥಮವಾಗಿ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆದರೆ, ಬ್ರಿಟನ್‌ದಲ್ಲಿ ಪ್ರಥಮವಾಗಿ ಕಾರಕೂನ ಜಾಗೆಗೆ ನಡೆದವು. ಅದೂ ಸೇವಾವರ್ಗ ಆಯೋಗ (Civil Service Commission)ದ ಆಫೀಸಿನಲ್ಲಿಯ ಒಂದು ಕಾರಕೂನ ಜಾಗೆಗೆ.

ಬಿಟ್ಟಿನಲ್ಲಿ ಟ್ರಾವೆಲ್ಯನ್, ನಾರ್ಥ್‌ಕೋಟ್ ಮತ್ತು ಡಾ. ಮೆಕಾಲೆಯವರು ಸೇವಾವರ್ಗ ಪದ್ಧತಿಯ ಜನಕರೆನ್ನಲಡ್ಡಿಯಿಲ್ಲ. ಇವರು ಬ್ರಿಟಿಶರು. ಆ ಕಾರಣ ಈ ಪದ್ಧತಿ ಬ್ರಿಟಿಶ್ ಕೊಡುಗೆ. ಆದರೆ ಭಾರತದಲ್ಲಿಯ ಕಂಪನಿ ಸರಕಾರ ಆಡಳಿತದ ಸುವ್ಯವಸ್ಥೆ ಇವರ ಗುರಿಯಾಗಿತ್ತು. ಆ ಕಾರಣ ಪ್ರಾಯೋಗಿಕ ದೃಷ್ಟಿಯಿಂದ ಈ ಸೇವಾವರ್ಗ ಪದ್ಧತಿಯು ಭಾರತದ ಕೊಡುಗೆಯೆನ್ನಲು ಅಡ್ಡಿಯಿಲ್ಲ.

ಸಾರ್ವಜನಿಕ ಆಡಳಿತದ ನೈಪುಣ್ಯತೆಯು ಸೇವಾವರ್ಗದ ನೈಪುಣ್ಯತೆಯನ್ನು ಹೆಚ್ಚಾಗಿ ಅವಲಂಬಿಸಿದೆ. ಸಾರ್ವಜನಿಕ ಆಡಳಿತವು ಬಿಟ್ಟಿನಲ್ಲಿ ಮೂರು ವಿಷಯಗಳ ಮೇಲೆ ಅವಲಂಬಿಸಿದೆ— ೧) ಜನರು ೨) ಸಾಮಗ್ರಿಗಳು ಮತ್ತು ೩) ವಿಧಿವಿಧಾನಗಳು. ಮೊದಲನೆಯದರಲ್ಲಿ ಮುಖ್ಯವಾಗಿ ಸೇವಾವರ್ಗ ಅಥವಾ ಸರಕಾರಿ ನೌಕರ ವರ್ಗ ಬರುವದು. ಈ ವರ್ಗಕ್ಕೆ ಮಾರ್ಗದರ್ಶನವಿತ್ತು ಆಡಳಿತಕ್ಕೆ ಚಾಲನೆ ನೀಡುವ ರಾಜಕೀಯ ಮುಖಂಡರು **ಈ** ಮೊದಲನೆಯ ವಿಷಯದಲ್ಲಿ ಬರುವರು. ಇವರಲ್ಲದೆ ದೇಶದ ಜನತೆಯನ್ನೂ ಈ ಭಾಗದಲ್ಲಿ ಸೇರಿಸಬಹುದು. ಸಾರ್ವಜನಿಕ ಆಡಳಿತದ ಸುಗಮತೆಗೆ, ನೈಪುಣ್ಯತೆಗೆ ಹಾಗೂ ಅದರ ಸಾಫಲ್ಯತೆಗೆ ಈ ಎಲ್ಲರ ಸಹಕಾರ ಹಾಗೂ ಕಾರ್ಯ ಅತ್ಯವಶ್ಯ.

ಆಡಳಿತೆಯ ನೈಪುಣ್ಯತೆಯ ದೃಷ್ಟಿಯಿಂದ ಸೇವಾವರ್ಗದಲ್ಲಿ ಅದರಲ್ಲಿಯೂ ಮುಖ್ಯವಾಗಿ ಆಡಳಿತ ವರ್ಗದಲ್ಲಿ ವಿಶಿಷ್ಟ ಗುಣಗಳಿರುವದು ಅತ್ಯವಶ್ಯ. ಅವುಗಳನ್ನು ಬೌದ್ಧಿಕ. ನೈತಿಕ. ಸಾಮಾಜಿಕ ಮತ್ತು ದೈಹಿಕ ಎಂದು ವಿಂಗಡಿಸಬಹುದು. ಬೌದ್ಧಿಕ ದೃಷ್ಟಿಯಿಂದ, ಮೊದಲನೆಯದಾಗಿ, ಇವರಲ್ಲಿ ಜ್ಞಾನದ ಕಡೆಗೆ ಹೆಚ್ಚು ಆಸಕ್ತಿ ಇರಬೇಕು. ಕೇವಲ ಪುಸ್ತಕೀಯ ಜ್ಞಾನ ಸಾಕಾಗುವುದಿಲ್ಲ. ಅದರ ಜೊತೆಗೆ ಅದಕ್ಕಿಂತಲೂ ಹೆಚ್ಚಾಗಿ.

ವ್ಯಾವಹಾರಿಕ ಜ್ಞಾನ ಅವಶ್ಯ. ಜನತೆಯೊಡನೆ ಯಾವ ರೀತಿ ವ್ಯವಹರಿಸ ಬೇಕು ಎನ್ನುವ ಜ್ಞಾನ ಹೆಚ್ಚು ಉಪಯುಕ್ತ. ಎರಡನೆಯದಾಗಿ, ವಿವರಣಾತ್ಮಕ (details)ಜ್ಞಾನದ ಕಡೆಗೆ ಒಲವಿರಬೇಕು. ಹದಿನಾಲ್ಕನೆಯ ಲೂಯಿ ಮತ್ತು ನೆಪೋಲಿ-ಯನ್ ಬೋನಾಪಾರ್ಟರು ವಿವರಣೆಯ ಗುರುಗಳೆನಿಸಿದ್ದರು. ಹೆಚ್ಚೆಚ್ಚು ತಿಳಿದು ಕೊಳ್ಳುವ ಹಂಬಲ ಮತ್ತು ಕಠಿಣ ಶ್ರಮಕ್ಕೆ ಅಣಿಯಾಗುವ ಗುಣಗಳಿರಬೇಕು. ಮೂರನೆಯದಾಗಿ, ಮಾಡುವ ಕಾರ್ಯದಲ್ಲಿ ನಿಷ್ಠೆ, ನೈಪುಣ್ಯ, ತನ್ಮಯತೆಗಳಿರಬೇಕು. ನಾಲ್ಕನೆಯದಾಗಿ, ಕಾರ್ಯವು ವಿವೇಚನಾತ್ಮಕವಾಗಿರಬೇಕಲ್ಲದೆ ನಿರ್ದಿಷ್ಟ ಗುರಿಯತ್ತ ಪ್ರಮಿಸುವಂತಿರಬೇಕು. ಭಾವನಾಪರವಶತೆ ಇಲ್ಲಿ ಅಪಾಯಕಾರಿ. ಅಂಥವರು ಮನದ ಸ್ಥಿಮಿತವನ್ನು ಕಳೆದುಕೊಳ್ಳಬಹುದು. ಅದಕ್ಕೆಂತಲೇ ಫ್ರಾನ್ಸದ ಇತಿಹಾಸಕಾರ ರಿಚೆಲ್ಯೂ ಹೆಣ್ಣುಮಕ್ಕಳು ಸೇವಾವರ್ಗಕ್ಕೆ ಸೇರುವದಕ್ಕೆ ವಿರೋಧಿಯಾಗಿದ್ದನು ಏಕೆಂದರೆ ಹೆಣ್ಣು ಮಕ್ಕಳು ವಿವೇಚನಾಪರರಾಗಿರದೇ ಭಾವನಾಪರರಾಗಿರುವರು ಎಂಬುದು ಆತನ ವಾದ. ಶ್ರೀ ಸಿಡ್ಜವಿಕನು ಸಹ ಹೆಣ್ಣುಮಕ್ಕಳ ರಾಜಕೀಯ ಮತ್ತು ಸೇವಾವರ್ಗದ ಸೇವೆಗೆ ವಿರೋಧಿಯಾಗಿದ್ದಾನೆ. ಆತನ ಪ್ರಕಾರ ಹೆಣ್ಣುಮಕ್ಕಳು ತಮ್ಮ ಕುಟುಂಬಗಳಿಗೆ ಧಕ್ಕೆ ತರುವರಲ್ಲದೆ, ಸಾರ್ವಜನಿಕ ರಂಗದಲ್ಲಿಯೂ ನೈತಿಕವಾಗಿ ಧಕ್ಕೆ ತರುವರು. ಆದರೆ ಇತ್ತೀಚೆಗೆ ಎಲ್ಲ ದೇಶಗಳಲ್ಲಿಯೂ ಸಾಮಾನ್ಯವಾಗಿ ಪುರುಷ ಸಮಾನವಾಗಿ ಸ್ತ್ರೀಯರು ರಾಜಕೀಯ ಹಾಗೂ ಸೇವಾವರ್ಗದಲ್ಲಿ ಸೇರುತ್ತಿರುವರು. ಭಾರತದಲ್ಲಿಯೂ ಉಚ್ಚ ಅಖಿಲ ಭಾರತ ಸೇವೆಗಳಾದ (ಆಯ. ಎ. ಎಸ್.. ಮತ್ತು ಆಯ. ಪಿ. ಎಸ್.)ಭಾರತೀಯ ಆಡಳಿತ ಸೇವೆ ಮತ್ತು ಭಾರತೀಯ ಪೊಲೀಸ ಸೇವೆಯಲ್ಲಿ ಸಹ ಸ್ತ್ರೀಯರು ಸೇರುತ್ತಿರು ವರು. ಸ್ತ್ರೀಯರು ಅವಿವಾಹಿತರಿರಬೇಕು, ಸೇವೆಯನ್ನು ಸೇರಿದ ನಂತರ ವಿವಾಹವಾದರೆ ತಮ್ಮ ಸ್ಥಾನವನ್ನು ಬಿಟ್ಟುಕೊಡಬೇಕು ಎಂಬ ನಿಯಮಗಳಿವೆ. ಈಗ ಈ ನಿಯಮ ವನ್ನು ಸಡಿಲಗೊಳಿಸಲಾಗಿದೆ.

ಒಟ್ಟಿನಲ್ಲಿ, ಸ್ತ್ರೀಯರ ಸೇವೆಯ ಸಂಬಂಧ ಭಾರತದಲ್ಲಿ ಇನ್ನೂ ಇಬ್ಬಗೆಯ ವಿಚಾರಗಳಿದ್ದಂತಿವೆ. ಒಂದೆ ಉತ್ತರ ಪ್ರದೇಶದ ಮುಖ್ಯಮಂತ್ರಿಯೊಬ್ಬರು ತಮ್ಮ ರಾಜ್ಯಕ್ಕೆ ಸ್ತ್ರೀ ಆಡಳಿತಗಾರರನ್ನು ಕಳಿಸಿಕೊಡಬಾರದೆಂದು ಕೇಂದ್ರಕ್ಕೆ ವಿನಂತಿಸಿಕೊಂಡಿ ದ್ದರು.

ಆದರೆ ಇತ್ತೀಚೆಗೆ ರೇಲ್ವೆ ಮಂತ್ರಿಯವರು ರಿಜರ್ವೇಶನ್ ಮುಂತಾದ ವಿಭಾಗಗಳಿಗೆ ಸ್ತ್ರೀಯರನ್ನೇ ನಿಯಮಿಸುವ ಇಚ್ಛೆ ವ್ಯಕ್ತಪಡಿಸಿರುವರು. ಕಾರಣವೆಂದರೆ ಅವರ ಪ್ರಕಾರ ಸ್ತ್ರೀಯರು ಲಂಚ ರುಷುವತ್ತುಗಳಿಗೆ ಬಲಿಯಾಗಲಾರರು ಎಂಬುದು. ದೇಶದ ಸಂಪ್ರದಾಯ ಹಾಗೂ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ಹೇಳಬೇಕಾದರೆ ಸ್ತ್ರೀಯರಿ ಗಿಂತ ಪುರುಷನಿಗೆ ನೌಕರಿಯ ವಿಷಯದಲ್ಲಿ ಪ್ರಾಧಾನ್ಯತೆ ಕೊಡುವದು ಶ್ರೇಷ್ಠ. ಒಬ್ಬ ಪುರುಷನಿಗೆ ನೌಕರಿ ಇತ್ತರೆ ಒಂದು ಇಡೀ ಕುಟುಂಬಕ್ಕೆ ಆಸರೆಯಾಗುವದು. ಆದರೆ ಈ ಮಾತನ್ನು ಸ್ತ್ರೀಯರ ಬಗೆಗೆ ಹೇಳಲಿಕ್ಕಾಗುವದಿಲ್ಲ. ಇದಲ್ಲದೆ ಪುರುಷರಿಗೆ ನೌಕರಿ

ಇತ್ತರೆ ನಿರುದ್ಯೋಗ ಸಮಸ್ಯೆ ಬಗೆಹರಿಯಲು ಅನುಕೂಲವಾಗುವುದಲ್ಲದೆ. ಕನ್ಯೆಗಳಿಗೆ ನೌಕರರಾದ ವರಗಳು ಸಿಗಲೂ ಅನುಕೂಲವಾಗುವದು. ಒಂದೇ ಏಟಿಗೆ ಎರಡು ಫಲಗಳನ್ನು ಉದುರಿಸುವಂತೆ ನಿರುದ್ಯೋಗ ಸಮಸ್ಯೆ ಹಾಗೂ ವಿವಾಹ ಸಮಸ್ಯೆಗಳನ್ನು ಬಿಡಿಸಲು ಅನುಕೂಲವಾಗುವದು. ಅಂಗವಿಕಲ ಮತ್ತು ಅನಾಥ ಬಡ ವಿಧವೆಯರಿಗೆ ನೌಕರಿಯಿತ್ತರೆ ಯಾರ ಅಭ್ಯಂತರವೂ ಇಲ್ಲ. ಒಂದು ಕುಟುಂಬವಲ್ಲಿ ಒಬ್ಬರಿಗೇ ನೌಕರಿ ಎಂಬ ವಿಚಾರಗಳು ಹಲವರ ಮನದಲ್ಲಿ ಈಗಾಗಲೇ ಹಾಯ್ದು ಹೋಗಿವೆ.

ಐದನೇದಾಗಿ ಸೇವಾವರ್ಗಕ್ಕೆ ಕಾರ್ಯ ನಿರ್ವಹಿಸುವ ಕಠಿಣ ಪ್ರಸಂಗಗಳನ್ನು ಎದುರಿಸುವ ಸಾಮರ್ಥ್ಯವಿರಬೇಕು. ಮತ್ತು ಕೊನೆಯದಾಗಿ ಅವರಿಗೆ ಮಾತುಗಾರಿಕೆ. ಬರಹಗಳ ಕಲೆಗಳು ಕರತಲಾಮಲಕವಾಗಿರಬೇಕು. ಒಂದಕ್ಕಿಂತ ಹೆಚ್ಚು ಭಾಷಾಜ್ಞಾನವಿದ್ದರೆ ಒಳಿತು.

ಇನ್ನು ನೈತಿಕವಾಗಿಯೂ ಹಲವಾರು ಗುಣಗಳ ಅವಶ್ಯಕತೆಯಿದೆ. "ಯುದ್ಧದಲ್ಲಿ. ಎಲ್ಲಕ್ಕಿಂತ ಆಡಳಿತದಲ್ಲಿ ಚಾರಿತ್ರ್ಯದ ಅವಶ್ಯಕತೆ ಹೆಚ್ಚಿರುವುದೆಂಬುದು" ನೆಪೋಲಿಯನ್ನನ ವಿಚಾರ. ಮೊದಲನೆಯದಾಗಿ, ಪ್ರಾಮಾಣಿಕತೆ ಅತ್ಯವಶ್ಯ. ಮಾತಿನಲ್ಲಿ. ಬರಹದಲ್ಲಿ ಅರ್ಥಾತ್ ವಿಷಯದಲ್ಲಿ ಪ್ರಾಮಾಣಿಕತೆ ಇರಬೇಕು. ಒಟ್ಟಿನಲ್ಲಿ ನೌಕರರು ಮಾನವರಾಗಿರಬೇಕು. ಸರ್ವವಿಧದಲ್ಲಿ. ದಾನವರಾಗಿರಬಾರದು. ರಿಚೆಲ್ಯೂರ ಪ್ರಕಾರ ಅವರು ದೇವರಿಗೆ, ದೇಶಕ್ಕೆ, ಜನತೆಗೆ ಅಷ್ಟೇ ಏಕೆ ತಮ್ಮ ತಮ್ಮ ಆತ್ಮಕ್ಕೆ ನಿಷ್ಠೆಯುಳ್ಳವರಾಗಿರಬೇಕು. ಎಲ್ಲ ನೌಕರವರ್ಗ ಹೀಗಿದ್ದರೆ ಸುವರ್ಣಮಯ ಆಡಳಿತ ತಂತ್ರಾನೆಯೇ ಕಂಗೊಳಿಸುವದು. ಎರಡನೆಯದಾಗಿ, ಆತ್ಮನಿಯಂತ್ರಣವಿರಬೇಕು. ಮೂರನೆಯದಾಗಿ, ಕಾಯಾ, ವಾಚಾ ಮನಸಾ ಕಾಯಕದಲ್ಲಿ ನಿಷ್ಠೆಯಿರಬೇಕು. ನಾಲ್ಕನೆಯದಾಗಿ, ಶೀಘ್ರ ನಿರ್ಣಯ ಹಾಗೂ ಕಾರ್ಯ ಚಟುವಟಿಕೆಗಳು ಅವಶ್ಯ.

ಈ ಸಂಬಂಧ ಅಲೆಕ್ಝಾಂಡರ. ಜ್ಯೂಲಿಯಸ ಸೀಜರ. ಫ್ರೆಡೆರಿಕ್ ಮತ್ತು ನೆಪೋಲಿಯನ್ನರ ಆಡಳಿತಗಳು ಐತಿಹಾಸಿಕವಾಗಿವೆ. ಆದರೆ ತದ್ವಿರುದ್ಧವಾಗಿ ಪೋಲ್ಯಾಂಡದ ಸಿಮಂಡ್ ಅಗಸ್ಟಸ್‌ನು ನಾಳೆಯ ರಾಜನಾಗಿದ್ದನು. ಏಕೆಂದರೆ ಆತನು ಯಾವಾಗಲೂ ನಿರ್ಣಯಗಳನ್ನು ಮುಂದೂಡುತ್ತಿದ್ದನು. "ಧೈರ್ಯಂ ಸರ್ವತ್ರ ಸಾಧನಂ"—ಎಂಬ ಉಕ್ತಿಯಂತೆ ಆಡಳಿತಗಾರರಿಗೆ ಧೈರ್ಯವೇ ಜೀವಾಳ.

ಆರನೆಯದಾಗಿ, ಮಿತಭಾಷಿಯಾಗಿ ಹಿತವಚನ ಕೇಳುವಂಥವರಿರಬೇಕು. ವಿವೇಕಯುತವಾದ ಒಳ್ಳೆಯ ನಡತೆ ಅತ್ಯವಶ್ಯ. ಏಳನೆಯದಾಗಿ, ಸಮಚಿತ್ತಭಾವನೆಯುಳ್ಳವರಿರಬೇಕು. ಎಂಟನೆಯದಾಗಿ, ಸರಿಯಾದ ನಿರ್ಣಯ ಕೈಕೊಳ್ಳುವ ಸಾಮರ್ಥ್ಯವಿರಬೇಕು. ನಿರ್ಣಯಗಳು ಸಾರ್ವಜನಿಕ-ತತ್ವಗಳು ಮತ್ತು ರಾಷ್ಟ್ರೀಯ ತಳಹದಿಯ ಮೇಲಿರಬೇಕಲ್ಲದೆ, ವೈಯಕ್ತಿಕ ಇಚ್ಛೆ, ಪಕ್ಷಪಾತ, ಷಡ್ಯಂತ್ರ ಅಥವಾ ಅನೀತಿಗಳ ಮೇಲೆ

ಅವಲಂಬಿಸಿರಬಾರದು" ಎಂದು ಬರ್ಕ ಹೇಳುವನು. ಒಂಬತ್ತನೆಯದಾಗಿ, ಪರಿಸರಕ್ಕೆ ಹೊಂದಿಕೊಂಡು ಹೋಗುವ ಸ್ಥಿತಿಸ್ಥಾಪಕಗುಣವುಳ್ಳವರಿರಬೇಕು. ಗುರಿಗಿಂತ ಸಾಧನೆಗೆ ಹೆಚ್ಚು ಮಹತ್ವಕೊಡಬೇಕು. ಕೊನೆಯದಾಗಿ, ಕಲ್ಪನಾಶಕ್ತಿ ಮತ್ತು ದೂರದರ್ಶಿತ್ವ ಗುಣಗಳಿರಬೇಕು. ಲಾರ್ಡ ಬೀವರಿಜ್ ಮತ್ತು ಲಾರ್ಡ ಸ್ಟ್ಯಾಂಪ್‌ರ ಪ್ರಕಾರ ವ್ಯಾಪಕವಾದ, ರಚನಾತ್ಮಕವಾದ ಮತ್ತು ಹೊಂದಾಣಿಕೆಯ ವಿಚಾರವಾದಿಗಳಾಗಿರಬೇಕು.

ಇನ್ನು ಸಾಮಾಜಿಕವಾಗಿಯೂ ಹಲವಾರು ಗುಣಗಳ ಅವಶ್ಯಕತೆಯಿದೆ. ಮೊದಲನೆಯದಾಗಿ, ಸಮಾಜಕ್ಕೆ ಹೊಂದಿಕೊಂಡು ಹೋಗುವ ಗುಣ. ಚಾರ್ಲ್ಸಮೇನ್ ಮತ್ತು ಮೊಘಲ ಸಾಮ್ರಾಟ ಅಕಬರನು ಅಶಿಕ್ಷಿತರಿದ್ದರೂ—ಈ ಸಾಮಾಜಿಕ ಗುಣದ ಬಲದಿಂದ ಅವರ ಆಡಳಿತ ಒಳ್ಳೆಯದೆನಿಸಿತ್ತು. ಝೆಕೋಸ್ಲೊವೇಕಿಯದ ಕರ್ತೃ ಮಸಾರಿಕ್‌ರ ಪ್ರಕಾರ "ಆಡಳಿತೆಯಲ್ಲಿ ಜನರನ್ನು ಅರಿತುಕೊಳ್ಳುವದು, ಅವರನ್ನು ಆರಿಸಿಕೊಳ್ಳುವದು ಮತ್ತು ಅವರಿಗೆ ಯೋಗ್ಯ ಕಾರ್ಯಗಳನ್ನು ನಿರ್ವಹಿಸುವದು ಮುಖ್ಯ. ಎರಡನೆಯದಾಗಿ, ಮತ್ತೊಬ್ಬರ ವಿಚಾರಗಳಿಗೆ ಮನ್ನಣೆ ನೀಡುವ ಗುಣವಿರಬೇಕು. ಮೂರನೆಯದಾಗಿ, ಎಲ್ಲರಲ್ಲಿಯೂ ಸಹಾನುಭೂತಿ ಮತ್ತು ಸರ್ವರಲ್ಲಿ ಕನಿಕರ ತೋರಿಸಬೇಕು. ಕನಿಕರ ತೋರಿಸುವುದೇ ರಾಜ್ಯಕಾರ್ಯಕಪ್ರವೀಣನ ಉತ್ತಮ ಗುಣವೆಂಬುದು ಲಾರ್ಡ ಮೋರ್ಲೆಯವರ ಅಭಿಪ್ರಾಯ. ಕೊನೆಯದಾಗಿ, ದೈಹಿಕವಾಗಿ ಆರೋಗ್ಯವಂತರಿರಬೇಕು. ದೇಹದ ಆರೋಗ್ಯವೇ ಮನಸ್ಸಿನ ಆರೋಗ್ಯವೂ ಕೂಡ. ಆರ್ಥಿಕ ಸಂಪತ್ತಿಗಿಂತ ದೈಹಿಕ ಸಂಪತ್ತು ಮೇಲೆಂಬುದು ಸರ್ವವಿದಿತ. ಸೇವಾ ವರ್ಗದಲ್ಲಿ ಯುವಕರಿಗೆ ಪ್ರಾಶಸ್ತ್ಯ ಕೊಡುವುದರಲ್ಲಿ ಈ ದೈಹಿಕ ಗುಣವು ಅಡಕವಾಗಿದೆ.

ಒಟ್ಟಿನಲ್ಲಿ, ಗುಣಾರ್ಹತೆಗಳ ಪಟ್ಟಿಗೆ ಕೊನೆಮೊದಲಿಲ್ಲ. ಮಾನವನಿಗೆ ಇರಬೇಕಾದ ಸರ್ವಗುಣಗಳು ಸೇವಾವರ್ಗಕ್ಕಿರಬೇಕು. ಲಂಚರುಷುವತ್ತುಗಳಿಗೆ ತನ್ನ ಮಾನ ಮಾರಿಕೊಳ್ಳದೇ, ಕುರುಡುತನ, ಲಂಪಟತನಗಳ ಅನೀತಿಗಳಿಗೆ ಇಳಿಯದೇ ಸದಾ ದೇಶದ, ಜನತೆಯ ಹಿತಚಿಂತಕನಾಗಿ ಕಾಯಕನಿರತನಾದರೆ ಆದರ್ಶ ಆಡಳಿತವಾಗುವದಲ್ಲದೆ ಇಚ್ಛಿತ ಗುರಿಗಳು ಸುಲಭವಾಗಿ ಸಾಧಿಸುವವು. ಸೇವಾವರ್ಗಕ್ಕೆ ಮುಖ್ಯವಾಗಿ ತಾವು ದೇಶದ ಸೇವಕರು ಎಂಬ ಭಾವನೆಯಿರಬೇಕು. ಸೇವಾ ವರ್ಗಕ್ಕೆ ಅಭ್ಯರ್ಥಿಗಳನ್ನು ಆಯ್ಕೆಮಾಡುವಾಗ್ಗ, ಆಯ್ಕೆಗಾರರಿಗೆ ನೂರಾರು ಕಣ್ಣುಗಳು, ನೂರಾರು ಕಿವಿಗಳಿರಬೇಕಲ್ಲದೆ ವಿಶಿಷ್ಟ ವಿವೇಚನಾ ಬುದ್ಧಿಯಿರಬೇಕು. ಪ್ರಾಮಾಣಿಕರನ್ನು ಮಾತ್ರ ಆಯ್ಕೆ ಮಾಡಿ ಅಪ್ರಾಮಾಣಿಕರಾದ ತಕ್ಕರನ್ನು ಹೊರಗೆ ಹಾಕಬೇಕು. ಕಾರ್ಯನಿರ್ವಹಣೆಯ ಜೀವನದಲ್ಲಿ ಒಳ್ಳೆಯ ಜನರನ್ನು ಆಯ್ಕೆಮಾಡುವದು ಮುಖ್ಯ ಎಂದು ಬೇಕನ್‌ರು ಹೇಳುವರು. "ಯೋಗ್ಯ ಜನರನ್ನು ಯೋಗ್ಯ ಸ್ಥಾನದಲ್ಲಿಡುವದು ಸರಕಾರದ ವಿಜ್ಞಾನದಲ್ಲಿ ಪ್ರಾಮುಖ್ಯವಾಗಿದೆ" ಎಂದು ಟಾಲಿರ್ಯಾಂಡ್‌ರು ಹೇಳುವರು. ಆದರೆ ಯೋಗ್ಯ

ರಾದವರನ್ನು ಯೋಗ್ಯ ಸ್ಥಾನಕ್ಕೆ ಆಯ್ಕೆಮಾಡುವದು ಅಷ್ಟೇ ಕಠಿಣತಮ ಕಾರ್ಯವಾಗಿದೆಯೆಂದು ಅವರು ಒಪ್ಪಿಕೊಳ್ಳುತ್ತಾರೆ.

ಸೇವಾವರ್ಗಕ್ಕೆ ಇರುವ ಎಲ್ಲ ಗುಣಗಳು ರಾಜಕೀಯ ಮುಖಂಡರುಗಳಿಗೂ ಇರಬೇಕಲ್ಲದೆ ಸರಕಾರಿ ನೌಕೆಯನ್ನು ಆತ್ಮಸಂಯಮದ ಚುಕ್ಕಾಣಿಯ ಬಲದಿಂದ ಕಲ್ಯಾಣ ರಾಜ್ಯದತ್ತ ಕೊಂಡೊಯ್ಯುವ ಸಾಮರ್ಥ್ಯವುಳ್ಳವರಿರಬೇಕು. ಸರಕಾರವೆಂಬುದು ಫ್ರೆಂಚ್ ಭಾಷೆಯಲ್ಲಿ "ನೌಕೆಯನ್ನು ನಡೆಸು" (Steer) ಎಂದೇ ಅರ್ಥಕೊಡುತ್ತದೆ.

ಅದೇ ರೀತಿ ಸಾರ್ವಜನಿಕರು ಸಹ ಪ್ರಜ್ಞಾವಂತರಾಗಿ, ಸಾರ್ವಜನಿಕ ಆಡಳಿತಕ್ಕೆ ಆತಂಕರಾಗದೆ ಸಹಕಾರ ನೀಡಿ. ದೇಶದ ಸಮಸ್ಯೆಗಳನ್ನು ನಿವಾರಿಸುತ್ತ ಸರ್ವರಿಗೂ ಸ್ವಾತಂತ್ರ್ಯ. ಸಮಾನತೆ. ನ್ಯಾಯ, ಆರ್ಥಿಕ ನೆರವು, ನೆಮ್ಮದಿ ಸಿಗುವೋಪಾದಿಯಲ್ಲಿ ತಮ್ಮ ನಡವಳಿಕೆಯನ್ನು ರೂಪಿಸಬೇಕು.

ಮಾನವಿಕ ಸಿದ್ಧಾಂತ :

ಈ ರೀತಿ ಸಾರ್ವಜನಿಕ ಆಡಳಿತದಲ್ಲಿ "ಜನರು" ಮುಖ್ಯ ಪಾತ್ರವಹಿಸುವರು. ಈ ಜನರೆಲ್ಲರೂ ಮಾನವೀಯತೆಯ ತಳಹದಿಯ ಮೇಲೆ ನಡೆದರೆ ಸರ್ವರಿಗೂ ಸುಖವಿದೆ. ಇದೇ ಸಾರ್ವಜನಿಕ ಆಡಳಿತದ ಇತ್ತೀಚಿನ ನವಸಿದ್ಧಾಂತ, ಮಾನವತಾವಾದಿ ಸಿದ್ಧಾಂತ (Humanistic Theory). ಇಲ್ಲಿ ವಿಧಿ. ವಿಧಾನ, ಕಾಯ್ದೆಗಳಿಗೆ ಪ್ರಾಮುಖ್ಯತೆ ಇರದೆ ಮಾನವೀಯ ಗುಣಗಳಿಗೆ ಪ್ರಾಮುಖ್ಯತೆಯಿದೆ. ಅದಕ್ಕೆಂತಲೇ ಇದಕ್ಕೆ ಅಸಾಂಪ್ರದಾಯಿಕ ಸಿದ್ಧಾಂತ (non–traditional theory) ಅನ್ನುವರು.

ಇದಕ್ಕೆ ಸಾಮಾಜಿಕ ಆರ್ಥಿಕ ಸಿದ್ಧಾಂತ (the Socio Economic Theory) ಎಂತಲೂ ಅನ್ನುವರು. ಇಲ್ಲಿ ಸಾಮಾಜಿಕ, ಆರ್ಥಿಕ, ಮಾನಸಿಕ. ಧಾರ್ಮಿಕ ಮುಂತಾದ ಜೀವನದ ವಿವಿಧ ಅಂಗಗಳ, ಒತ್ತಡಗಳ ಸಮ್ಮಿಳಿತವನ್ನು ಕಾಣಬಹುದು.

ಈ ಸಿದ್ಧಾಂತವನ್ನು ಹರ್ಬರ್ಟ್ ಸಾಯ್ಮನ್, ಎಲ್ಟನ್ ಮೇಯೋ, ಚೆಸ್ಟರ ಬರ್ನಾರ್ಡ್ ಮುಂತಾದವರು ಪುರಸ್ಕರಿಸಿದರು. ಇದು ಹಳೆಯ, ಸಾಂಪ್ರದಾಯಿಕ. ಯಾಂತ್ರಿಕ ಮತ್ತು ವಿಧಿವಿಧಾನಗಳ ಸಿದ್ಧಾಂತದ ವಿರುದ್ಧ ಬಂಡೆದ್ದಿತು.

ಎರಡನೆಯದಾಗಿ, ಸಾರ್ವಜನಿಕ ಆಡಳಿತವು ಸಾಮಗ್ರಿ ಸಲಕರಣೆಗಳನ್ನು (material) ಸಹ ಅವಲಂಬಿಸಿದೆ. ಇವಿಲ್ಲದ ಸೇವಾವರ್ಗ ಯುದ್ಧ ಸಾಮಗ್ರಿಯಿಲ್ಲದ ಸೇನೆಯಂತಾಗುವದು. ಕಾಗದ ಪೆನ್ನುಗಳಿಂದ ಹಿಡಿದು ಟೆಲಿಫೋನ್, ಕಂಪ್ಯೂಟರದವರೆಗೆ ಎಲ್ಲ ಆಧುನಿಕ ವೈಜ್ಞಾನಿಕ ಸಾಮಗ್ರಿ ಸಲಕರಣೆಗಳ ನೆರವು ಸೇವಾವರ್ಗಕ್ಕೆ ಅವಶ್ಯ.

ಇನ್ನು ಕೊನೆಯದಾಗಿ ಸುಗಮವಾಡಳಿತಕ್ಕೆ, ಸುವ್ಯವಸ್ಥೆಗೆ, ಹಾಗೂ ಆಡಳಿತ ನೈಪುಣ್ಯತೆಗೆ ವಿಧಿ ವಿಧಾನಗಳೂ (methdos) ಸಹ ಅಷ್ಟೇ ಅವಶ್ಯ. ಇಲ್ಲಿಯವರೆಗೆ ಸಾರ್ವಜನಿಕ ಆಡಳಿತವು ಈ ವಿಧಿ, ವಿಧಾನಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟಿತ್ತು. ಅರ್ಥಾತ್ ಅದು ಯಾಂತ್ರಿಕವಾಗಿದ್ದಿತು. ಕಟ್ಟಡ ಸದೃಶವಾದ, ಒಂದರ ಮೇಲೊಂದು ತರಗತಿಗಳನ್ನು ನಿರ್ಮಿಸಿದ, ಸೈನಿಕ ಶಿಸ್ತಿನ ಸಾರ್ವಜನಿಕ ಆಡಳಿತವು ಸಾಂಪ್ರದಾಯಿಕವಾಗಿ ಇಪ್ಪತ್ತನೆಯ ಶತಮಾನದ ಆದಿಯವರೆಗೆ ಏಕಮೇವಾದ್ವಿತೀಯ ಯಾಂತ್ರಿಕ ಸಿದ್ಧಾಂತವನ್ನವಲಂಬಿಸಿತ್ತು (the Mechanistic Theory). ಅಮೇರಿಕೆಯಲ್ಲಂತೂ ಈ ಪದ್ಧತಿಯು ಒಂದು ವಿಶಿಷ್ಟ ವಿಧಾನದ ವ್ಯವಹಾರವಾಗಿ ಪರಿಣಮಿಸಿತ್ತು. ಈ ಸಿದ್ಧಾಂತದ ಮೂಲ ತತ್ವಗಳೆಂದರೆ ಮೊದಲನೆಯದಾಗಿ ವಿಧಿ, ವಿಧಾನಗಳು ಯಾಂತ್ರಿಕವಾಗಿದ್ದು ಅವನ್ನು ಬದಲಿಸಲು ಬರುವಂತಿಲ್ಲ. ಎರಡನೆಯದಾಗಿ, ಸಿಬ್ಬಂದಿಗಿಂತಲೂ ವ್ಯವಸ್ಥಿತ ಪದ್ಧತಿಯು, ಪ್ರಾಮುಖ್ಯ ಹಾಗೂ ಪ್ರಥಮವಾಗಿ ಬಂದುದಾಗಿದೆ. ಅರ್ಥಾತ್ ವ್ಯವಸ್ಥಿತ ಪದ್ಧತಿಗನುಸಾರವಾಗಿ ಸಿಬ್ಬಂದಿಯು ಆಯ್ಕೆಯಾಗಬೇಕು ಹಾಗೂ ಆ ಸಿಬ್ಬಂದಿಯು ಅದಕ್ಕೆ ಹೊಂದಿಕೊಂಡು ಹೋಗಬೇಕೇ ವಿನಹ ವಿಧಿ, ವಿಧಾನಗಳು ವಿಚಲಿತವಾಗುವಂತಿಲ್ಲ. ಈ ಸಿದ್ಧಾಂತವು ಕೊನೆಯಲ್ಲಿ ಅಧಿಕಾರಿ ಪ್ರಭುತ್ವ ಅಥವಾ ನೌಕರಶಾಹಿ (Bureaucracy)ಗೆ ಎಡೆಮಾಡಿಕೊಡುವದು.

"ಬ್ಯೂರಾಕ್ರಸಿ" ಶಬ್ದವು ಫ್ರೆಂಚ್ ಭಾಷೆಯ "ಬ್ಯೂರೋ (Bureau) ಎಂಬ ಧಾತುವಿನಿಂದ ಬಂದಿದೆ. "ಬ್ಯೂರೋ" ಎಂದರೆ ಬರೆಯಲು ಉಪಯೋಗಿಸುವ ಮೇಜು. "ಕ್ರಸಿ" (cracy) ಶಬ್ದ, ಗ್ರೀಕ ಭಾಷೆಯ "ಕ್ರಾಟೋಸ್" (Kratos)ದಿಂದ ಬಂದಿದೆ. "Kratos" ಅಂದರೆ ಅಧಿಕಾರ. ಒಟ್ಟಿನಲ್ಲಿ, ಶಾಬ್ದಿಕವಾಗಿ ಹೇಳಬೇಕಾದರೆ "ಬ್ಯೂರೋಕ್ರಸಿ" ಎಂದರೆ ಮೇಜುಗಳ ಅಧಿಕಾರ ಅರ್ಥಾತ್ ನೌಕರರ ಪ್ರಭುತ್ವ. ಅಬ್ರಹಾಂ ಲಿಂಕನ್‌ರು ಪ್ರಜಾಪ್ರಭುತ್ವವನ್ನು ವ್ಯಾಖ್ಯಾಯಿಸಿದಂತೆ ನೌಕರಶಾಹಿಯನ್ನು ನೌಕರರ, ನೌಕರರಿಂದ, ನೌಕರರಿಗಾಗಿ ಪ್ರಭುತ್ವ ಎಂದು ಮಾಡಬಹುದು. ಇಲ್ಲಿ ಜನತೆಯ ಹಿತ ಗೌಣವಾಗುವದರಿಂದ ನೌಕರಶಾಹಿ ಸಾಮಾನ್ಯವಾಗಿ ಅನಿಷ್ಟ ಪದ್ಧತಿ ಎನ್ನಿಸಿದೆ.

ಇನ್ನು ಬ್ರಿಟಾನಿಕಾದ ವಿಶ್ವಕೋಶದ ಪ್ರಕಾರ–"ಇಲ್ಲಿ ಬ್ಯೂರೊ"–ಎಂದರೆ ಆಡಳಿತದ ಒಂದು ಅಂಗ, ವಿಭಾಗ. ಉದಾ : ಬ್ಯೂರೊ, ಬ್ರ್ಯಾಂಚ್, ವಿಂಗ್, ಸೆಕ್ಷನ್ ಎಂದು ಮುಂತಾಗಿ. ಇಲ್ಲಿ ಬ್ಯೂರೋಕ್ರಸಿಯು ಈ ಆಡಳಿತ ವಿಭಾಗಗಳಲ್ಲಿ ಸರಕಾರಿ ಅಧಿಕಾರ ಕೇಂದ್ರೀಕೃತವಾದುದನ್ನು ಸೂಚಿಸುವದು.

ಈ ನೌಕರಶಾಹಿಯು ಹಲವಾರು ಅನಿಷ್ಟತೆಗಳಿಗೆ ಎಡೆಮಾಡಿಕೊಡುವದು. ಅವುಗಳಲ್ಲಿ, ಮೊದಲನೆಯದಾಗಿ, ಕೆಂಪು ಪಟ್ಟಿ (Red Tape) ಅರ್ಥಾತ್ ವಿಧಿ, ವಿಧಾನ

ಗಳನ್ನು ಅತಿಯಾಗಿ ಅವಲಂಬಿಸುವವು. ಸರಕಾರಿ ಕಾಗದ ಪತ್ರಗಳನ್ನು ಫಾಯ್ಲಿನಲ್ಲಿ ಹಾಕಿ, ಕೆಂಪು ಪಟ್ಟಿ ಕಟ್ಟುತ್ತಿದ್ದ–ವಿಧಾನವೇ ಕೆಂಪು ಪಟ್ಟಿಯಾಗಿ ಪ್ರಚಲಿತದಲ್ಲಿ ಬಂದಿದೆ. ಕೆಂಪು ಬಣ್ಣ ಅನಿಷ್ಟತೆ ತೋರಿಸುವುದೆಂದು ಕೇರಳ ಸರಕಾರ ಹಸಿರು ಪಟ್ಟಿ ಉಪಯೋಗಿಸುವದು. ಬಣ್ಣ ಯಾವುದೇ ಆದರೂ ಪಟ್ಟಿಯು ಪಟ್ಟಿಯೇ! ನೌಕರಶಾಹಿ ಮತ್ತು ಕೆಂಪು ಪಟ್ಟಿಗಳು ಏಕಸಾಮ್ಯ ಶಬ್ದಗಳಾಗಿ (identicl terms) ಪರಿಣಮಿಸಿವೆ. ಕೆಂಪು ಪಟ್ಟಿಯು ಹಿಂದಿನ ದಾಖಲೆಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡುವದು. ಅದರ ದೃಷ್ಟಿಯಲ್ಲಿ ಅವು ವೇದವಾಕ್ಯಗಳು. ಆ ಕಾರಣ ಇದು ಸಂಪ್ರದಾಯಶರಣವಾಗಿದೆ. ಬದಲಾವಣೆಗೆ, ಆಧುನಿಕತೆಗೆ, ಹೊಂದಾಣಿಕೆಗೆ. ಜನತೆಗೆ ಇದು ಮನ್ನಣೆ ನೀಡುವುದಿಲ್ಲ. ತನ್ನ ಹಳೆಯ ದಾಖಲೆಗಳೇ ಎಲ್ಲ ಪರಿಸರಕ್ಕೂ ಎಲ್ಲ ಕಾಲಕ್ಕೂ, ಎಲ್ಲ ವರ್ಗಕ್ಕೂ ಸರ್ವಸ್ವವಾಗಿವೆ. ಹಳೆಯ ದಾಖಲೆಗಳ ಸಂಕೋಲೆಯಿಂದ ಈ ಕೆಂಪು ಪಟ್ಟಿ ಬಿಗಿಯಲ್ಪಟ್ಟಿರುತ್ತದೆ. ಆ ಸಂಕೋಲೆಯ ಚಿನ್ಹೆಯೇ ಕೆಂಪು ಪಟ್ಟಿ. ಕಾರ್ಲೈಯ್ಲನು ತನ್ನ ಪ್ರಬಂಧದಲ್ಲಿ ಹಾಗೂ ಬಾಲ್ಜಾಕನು ತನ್ನ ಕಾದಂಬರಿಯಲ್ಲಿ ಇದನ್ನು ಉಲ್ಲೇಖಿಸಿರುವರು.

ಕೆಂಪು ಪಟ್ಟಿ ಅಥವಾ ಹಳೆಯ ದಾಖಲೆಗಳ ಮೇಲೆ ಅವಲಂಬಿಸುವ ವಿಧಾನವು ಬಹುಶಃ ಕಾಯ್ದೆಯಾಡಳಿತ (the Rule of Law) ಪದ್ಧತಿಯ ಮೂಲದಿಂದ ಬಂದಿರಬಹುದು. ಕಾಯ್ದೆಯಾಡಳಿತೆಯಲ್ಲಿ ಪ್ರೊ. ಎ. ವಿ. ಡಾಯಸಿಯವರ ಪ್ರಕಾರ. ಮೊದಲನೆಯದಾಗಿ. ಕಾಯ್ದೆಯು ಪರಮಾಧಿಕಾರ ಹೊಂದಿದೆ. ಎಲ್ಲರೂ ಕಾಯ್ದೆಗಳಿಗೆ ತಲೆಬಾಗಲೇಬೇಕು. ಎರಡನೆಯದಾಗಿ ಕಾಯ್ದೆಯ ಮುಂದೆ ಎಲ್ಲರೂ ಸರಿಸಮಾನರು ಮತ್ತು ಕೊನೆಯದಾಗಿ ಹಕ್ಕುಗಳು ನ್ಯಾಯಿಕ-ನಿರ್ಣಯಗಳನ್ನು ಅವಲಂಬಿಸಿರುತ್ತವೆ. ಇವೇ ತತ್ವಗಳು ಕೆಂಪು ಪಟ್ಟಿಯಲ್ಲಿಯೂ ಅಡಕವಾಗಿವೆ. ಆ ಕಾರಣ ಕೆಂಪು ಪಟ್ಟಿಗೆ ಕಾಯ್ದೆಯಾಡಳಿತವೇ ಮೂಲಾಧಾರವಾಗಿರಬೇಕು. ಆದರೆ ವೈಚಿತ್ರ್ಯವೆಂದರೆ ಕಾಯ್ದೆಯಾಡಳಿತವು ಸಾರ್ವತ್ರಿಕವಾಗಿ ಶ್ರೇಷ್ಠವೆಂದು ಪರಿಗಣಿಸಲ್ಪಟ್ಟಿದೆ. ಆದರೆ ಕೆಂಪು ಪಟ್ಟಿ ಎಂದಾಕ್ಷಣ ಭಯಾನಕದ ಚಿಹ್ನೆ ಎಲ್ಲರ ಮುಖದ ಮೇಲೆಯೂ ಮೂಡುವದು.

ಗುಣಾವಗುಣಗಳು :

ಕೆಂಪು ಪಟ್ಟಿಯ ಗುಣಾವಗುಣಗಳು ಬೇಕಯಂತೆ ಉಪಯೋಗಿಸುವ ವಿಧಾನದ ಮೇಲೆ ಅವಲಂಬಿಸಿವೆ. ಅದನ್ನು ಸರಿಯಾದ, ಉಪಯುಕ್ತವಾದ ಮಾರ್ಗದಲ್ಲಿ ಉಪಯೋಗಿಸಿದರೆ ಹಲವಾರು ಉತ್ತಮ ಗುಣಗಳು ಕಂಡು ಬರುವವು. ಮೊದಲನೆಯದಾಗಿ, ಸರಕಾರಿ ನೀತಿಗೆ ಓತಪ್ರೋತ, ಸ್ಥಿಮಿತತೆ, ಸ್ಥಿರತೆಗಳು ಬರುವವು. ಎರಡನೆಯದಾಗಿ, ಜನತೆಗೆ ನಿರ್ದಿಷ್ಟವಾದ, ನ್ಯಾಯವಾದ, ಸರಿಸಮಾನವಾದ, ಪಕ್ಷಾತೀತ

ಹಾಗೂ ಜಾತ್ಯಾತೀತ ಆಡಳಿತ ಲಭಿಸುವದು. ಮೂರನೆಯದಾಗಿ–ಆಡಳಿತೆಯಲ್ಲಿ ನೈಪುಣ್ಯತೆ, ಒಗ್ಗಟ್ಟು, ವಿಧೇಯತೆ. ಮತ್ತು ಮಿತವ್ಯಯಗಳು ಕಂಡುಬರುವವು. ಹರ್ಬರ್ಟ ಮಾರಿಸನ್ (Herbert Morrison) ರ ದೃಷ್ಟಿಯಲ್ಲಿ ನೌಕರಶಾಹಿಯು ಸಂಸದೀಯ ಸರಕಾರ ಪದ್ಧತಿಯ ಮೌಲ್ಯವಾಗಿದೆ. ಕೆ. ಬಿ. ಸ್ಮೈಲೀಯವರ ಪ್ರಕಾರ "ಕೆಂಪು ಪಟ್ಟಿಯು, ಸರಿಯಾದ ಅರ್ಥದಲ್ಲಿ ಉಪಯೋಗಿಸಿದರೆ. ಕಾಯ್ದೆಯ ಮುಂದೆ ನಾಗರಿಕರ ಸರಿಸಮಾನತೆಯ ಚಿಹ್ನೆಯಾಗಿದೆ."

ಉಪಯುಕ್ತತೆಗಿಂತ ಕೆಂಪು ಪಟ್ಟಿಯ ಅನಿಷ್ಟತೆಯ ಪಟ್ಟಿಯು ಉದ್ದವಾಗಿದೆ. ಮೊದಲನೆಯದಾಗಿ–ಸುತ್ತೋಲೆ, ಟೀಕೆ ಟಿಪ್ಪಣಿ ಮುಂತಾದ ಹಲವಾರು ಅನಾವಶ್ಯಕ ಬರವಣಿಗೆಗೆ ಈ ಕೆಂಪು ಪಟ್ಟಿಯು ಎಡೆಮಾಡಿಕೊಡುವದು. ಎರಡನೆಯದಾಗಿ. ಏಕ ಪ್ರಕಾರವಾದ ಯಾಂತ್ರಿಕತೆಯ ಪರಿಪಾಠ (routine) ವನ್ನು ಇಲ್ಲಿ ಕಾಣಬಹುದು. ಸೇಂಟ ಸಾಯ್ಮನನು ಹದಿನಾಲ್ಕನೆಯ ಲೂಯಿಯ ಗಡಿಯಾರ ಸದೃಶ ಬಿಗಿಯಾದ ವೇಳಾಪತ್ರಿಕೆ ಬಗೆಗೆ ಹೇಳಿದಂತಿದೆ–ಈ ಕೆಂಪು ಪಟ್ಟಿ. ಪರಿಣಾಮಕ್ಕಿಂತ ಪರಿಪಾಠಕ್ಕೆ ಇಲ್ಲಿ ಮಹತ್ವವಿದೆ ಎಂದು ಬೇಗ್‌ಹಾಟ್ ಹೇಳುತ್ತಾನೆ. ಮೂರನೆಯದಾಗಿ. ಈ ಪದ್ಧತಿಯು ಅನಿಷ್ಟವಾದ ವಿಳಂಬಕ್ಕೆ ಎಡೆಮಾಡಿಕೊಡುವದು. ವಿಳಂಬವು ಜೀವನ ಮರಣ ಪ್ರಶ್ನೆಯಾಗಿದೆಯಲ್ಲದೆ, ಲಂಚ ರುಷುವತ್ತು ಮುಂತಾದ ಹಲವಾರು ಅನಿಷ್ಟತೆಗಳಿಗೆ ಎಡೆಮಾಡುವದು. ವಿಳಂಬಕ್ಕೆ ನೌಕರರು ಕಾರಣರಾಗಿರದೆ ಕೆಂಪು ಪಟ್ಟಿ ವಿಧಿ ವಿಧಾನವು ಕಾರಣವಾಗಿದೆಯೆಂದು ಬ್ರಿಟಿಶ್ ಆಡಳಿತಗಾರ ಲಾರ್ಡ ಚಾನ್ಸೆಲರ ಸ್ಯಾಂಕೀಯವರ ಅಭಿಪ್ರಾಯವಾಗಿದೆ. ವಿಳಂಬವು ರಶಿಯಾದಲ್ಲಿ ಸಹ ಇದೆಯೆಂದರೆ ಈ ಕೆಂಪು ಪಟ್ಟಿಯ ಅನಿಷ್ಟತೆಯ ಅರಿವಾಗುವದು. ನಾಲ್ಕನೆಯದಾಗಿ. ಕೆಂಪು ಪಟ್ಟಿಯು ಕೊನೆಯಿಲ್ಲದ ವಿವರಗಳಿಗಾಗಿ (details) ತಡಕಾಡುವದು. ಐದನೆಯದಾಗಿ. ಇದರಲ್ಲಿ ಔಪಚಾರಿಕತೆಯು (formality) ಹೆಚ್ಚಾಗಿದೆ. ಒಬ್ಬ ಯುವಕ ಸರಕಾರಿ ಸೇವೆಗೆ ಸೇರಿದರೆ ಸುಮಾರು ೫ ವರ್ಷ ಕಾಗದಪತ್ರಗಳ ನಕಲು ಮಾಡುವನು: ೯ ತಿಂಗಳು ಹೊಂದಿಸಿ ಇಡುವನು. ೫ ವರ್ಷ ದಾಖಲೆಗಳ ವಿಂಗಡಣೆ ಮಾಡುವನು. ಆತನ ಸುಮಾರು ೨೦ ವರ್ಷಗಳ ಕಾರ್ಯವೆಲ್ಲ ಔಪಚಾರಿಕವಾದದ್ದು. ಆತನು ತಾನಾಗಿಯೇ ಎಂದೂ ನಿರ್ಣಯ ತೆಗೆದುಕೊಳ್ಳುವುದಿಲ್ಲ ಎಂದು ಬೇಗ್‌ಹಾಟ್‌ನು ವಿವರಿಸುವನು. ಅಮೇರಿಕೆಯ ಕಾದಂಬರಿಕಾರ ಸ್ಟೀನ್‌ಬೆಕ್‌ನು ಒಂದು ಪ್ಲೇಟ ಊಟ ಪಡೆಯಬೇಕಾದರೆ ರಶಿಯಾದಲ್ಲಿ ಎಷ್ಟು ಔಪಚಾರಿಕವಾದ ವಿಧಾನಗಳನ್ನು ದಾಟ ಬೇಕಾಗುವುದೆಂಬುದನ್ನು ವಿವರಿಸಿರುವನು. ಆರನೆಯದಾಗಿ. ಸರಕಾರಿ–ಭಾಷೆಯ ಬರವಣಿಗೆಯ ವಿಧಾನವು ಸಹ ಯಾಂತ್ರಿಕವೂ, ನಿಗೂಢವೂ ಆಗಿರುವದು. ಏಳನೆಯ ದಾಗಿ. ಮಿತವ್ಯಯದ ಬದಲು ಆರ್ಥಿಕ ಹಾನಿಯಾಗುವ ಸಂದರ್ಭಗಳೇ ಇಲ್ಲಿ ಹೆಚ್ಚು. ಜಾಗತಿಕ ಪ್ರಮುಖ ವಿಷಯಗಳಾದ ವೇಳೆ ಮತ್ತು ಹಣಗಳ ದುರುಪಯೋಗ ಈ

ಕೆಂಪು ಪಟ್ಟಿಯಲ್ಲಿ ಸಾಕಷ್ಟಾಗುವುದೆಂದು ಡಿಮೋಸ್ಟರ್ ಹೇಳುತ್ತಾನೆ. ಎಂಟನೇಯದಾಗಿ ಈ ವಿಧಾನವು ಕೊನೆಯರಿಯದ ಖಾತೆಗಳ (Departments) ಸರಮಾಲಿಕೆಯನ್ನು ನಿರ್ಮಿಸುವದು. ಅವುಗಳಲ್ಲಿ ಮತ್ತೆ ಹಲವಾರು ವಿಭಾಗ. ಉಪವಿಭಾಗ. ಉಪ-ಉಪ ವಿಭಾಗ ಎಂದು ಮುಂತಾಗಿ ಆಡಳಿತದ ಜಾಲವೇ ನಿರ್ಮಾಣವಾಗುವದು. ಮುಂದೆ ಅವುಗಳಲ್ಲಿ – ಸಹಕಾರ. ತಾಳ್ಮೆ ತರುವುದೇ ಒಂದು ಬೃಹದಾಕಾರದ ಸಮಸ್ಯೆಯಾಗುವದು. ಫ್ರಾನ್ಸದಲ್ಲಿ ಎರಡು ಜಾಗತಿಕ ಯುದ್ಧಗಳು ವಿಫಲವಾದುದಕ್ಕೆ ಖಾತೆಗಳ ಮಧ್ಯದಲ್ಲಿಯ ಹೊಡೆದಾಟಗಳೇ ಕಾರಣವೆಂದು ವೈಕಾಂಟ್ ಮಿಲ್ನರ ಅಭಿಪ್ರಾಯ ಪಡುವನು. ಒಂಭತ್ತನೆಯದಾಗಿ ಈ ವಿಧಾನವು ಹೊಣೆಗಾರಿಕೆಯನ್ನು ದೂರೀಕರಿಸುವದು. ಹತ್ತನೆಯದಾಗಿ, ಇದು ಸ್ವಯಂಪರಿಪೂರ್ಣವಾದಂತೆ ವರ್ತಿಸುವದು, ಹಾಗೂ ಅತಿ-ಮಹಾತ್ವಾಕಾಂಕ್ಷಿಯಾಗಿರುವುದು. ಕೊನೆಯದಾಗಿ ಸಂಪ್ರದಾಯಶರಣವಾದ ಈ ಪದ್ಧತಿಯು ಆಧುನಿಕತೆಯ. ವೈಜ್ಞಾನಿಕ ಬದಲಾವಣೆಯ ಪ್ರಗತಿಯತ್ತ ಮುನ್ನಡೆಯದೆ ಹಿಂದೆ ಬೀಳುವದು.

ಲಾರ್ಡ ಹೇವಾರ್ಟರ್ ಪ್ರಕಾರ ಇದೊಂದು ಹೊಸ ನಿರಂಕುಶತೆ- (new despotism). ರ್‍ಯಾಮಸೆ ಮೂರರ ದೃಷ್ಟಿಯಲ್ಲಿಇದು ಪ್ರಜಾಪ್ರಭುತ್ವದ ಮರೆಯಲ್ಲಿ ಹೆಚ್ಚು ಶಕ್ತಿಶಾಲಿಯಾಗತೊಡಗಿದೆ.

ಸಲಹೆಗಳು :

ಈ ಅನಿಷ್ಟಗಳ ನಿವಾರಣೆಗೆ ಹಲವಾರು ಸೂಚನೆಗಳನ್ನು ಮಾಡಬಹುದು. ಮೊದಲನೆಯದಾಗಿ. ಧೋರಣೆಯ ನಿರ್ಣಯಗಳನ್ನು ವಿಭಾಗದ ಮುಖ್ಯಸ್ಥರಲ್ಲಿ ಕಾಯ್ದಿರಿಸಿ, ಅವುಗಳ ವಿವರಗಳನ್ನು ಕೆಳಗಿನ ನೌಕರಶಾಹಿಗೆ ಬಿಟ್ಟುಕೊಡಬೇಕು. ಬರವಣಿಗೆ. ಟೀಕೆ. ಟಿಪ್ಪಣಿಗಳು, ಸ್ಪಷ್ಟವಾಗಿಯೂ. ಸಂಕ್ಷಿಪ್ತವಾಗಿಯೂ ಇರಬೇಕಲ್ಲದೆ ಸರಿಯಾದ ಭಾಷೆಯ ಬಳಕೆಯನ್ನು ಮಾಡಬೇಕು. ಎರಡನೆಯದಾಗಿ. ವಿಧಿ, ವಿಧಾನಗಳ ಜೊತೆಗೆ ವ್ಯಕ್ತಿಗತ ಸ್ವಾತಂತ್ರ್ಯಕ್ಕೂ ಮಹತ್ವಕೊಡಬೇಕು. ಮೂರನೆಯದಾಗಿ. ವಿಳಂಬವನ್ನು ಹೋಗಲಾಡಿಸಲು ಪ್ರತಿಯೊಂದು ವಿಭಾಗ, ಶಾಖೆ, ಉಪಶಾಖೆಗಳಿಗೆ ಹೊಣೆಗಾರಿಕೆಯನ್ನು ವಹಿಸಿಕೊಡಬೇಕು. ಎಲ್ಲವನ್ನೂ ತಾನೇ ಮಾಡದೆ. ಎಲ್ಲರ ಕಡೆಯಿಂದ ಕೆಲಸಮಾಡಿಸಬೇಕು ಎಂದು ಇಜಿಪ್ತದ ಆಡಳಿತಗಾರ ಲಾರ್ಡ ಕ್ರೋಮರ ಹೇಳುತ್ತಾನೆ. ಫಾಯ್ಲುಗಳ ಕೆಳಗಡೆ, ಮೇಲ್ಗಡೆ. ಕೊನೆಯಿಲ್ಲದೆ ಸುತ್ತಾಡುವದನ್ನು ನಿಲ್ಲಿಸಿ ಆಯಾ ಟೇಬಲ್ಲುಗಳಿಗೆ ನಿರ್ಣಯಿಸುವ ಅಧಿಕಾರ ನೀಡಬೇಕು. ಅವಶ್ಯಕ ಅತ್ಯವಸರದ ಕಾಗದಗಳನ್ನು ಮೊದಲು ವಿಲೇವಾರಿಮಾಡಿ ಅನಾವಶ್ಯಕಗಳನ್ನು ಕಡೆಗಾಣಿಸಬೇಕು. ನಾಲ್ಕನೆಯದಾಗಿ. ಸುತ್ತುವರಿದ ವಿಧಿ. ವಿಧಾನಗಳನ್ನು ಕಡಿಮೆಗೊಳಿಸಿದರೆ ಆರ್ಥಿಕವಾಗಿಯೂ ಮಿತವ್ಯಯವಾಗುವದು.

ಪ್ರೊ. ಇ. ಎಸ್. ಗ್ಲಾಡನ್‌ರು ಹಲವು ಸೂಚನೆಗಳನ್ನಿತ್ತಿರುವರು: ೧) ಪರಿಣಾಮಕಾರಿಯಾಗುವ ರಾಜಕೀಯ ನಿಯಂತ್ರಣ. ೨) ಒಳ್ಳೆಯ ಮುಖಂಡತ್ವ. ೩) ಅಧಿಕಾರ ಮತ್ತು ಹೊಣೆಗಾರಿಕೆಯ ಅತಿ ಹೆಚ್ಚಿನ ವಿಕೇಂದ್ರೀಕರಣ. ೪) ನಮ್ಯ (flexible) ಸಂಘಟನೆ ೫) ನ್ಯಾಯಯುತವಾದ ಮತ್ತು ನೈಪುಣ್ಯದ ಸೇವಾವರ್ಗದ ವ್ಯವಸ್ಥೆ. ೬) ಒಳ-ಹೊರಗಿನಿಂದ ಶಕ್ಯವಾದಷ್ಟು ಸಹಕಾರ. ೭) ಆಡಳಿತ ವಿಧಾನದಲ್ಲಿ ವಿಶೇಷ ಸಂಶೋಧನೆ. ೮) ಅವ್ಯಾಹತವಾದ ಆಂತರಿಕ ಸಾಧನ. ಸಾಧ್ಯಗಳ ಪರಾಮರ್ಶೆ. ೯) ಪರಿಣಾಮಕಾರಿಯಾದ ಬಾಹ್ಯ ಅಂಕಿತ. ಒಲವು. ಟೀಕೆಗಳು ಮತ್ತು ೧೦) ವ್ಯಾವಹಾರಿಕ ನೀತಿಗಳು ಕೆಂಪು ಪಟ್ಟಿಯ ಅನಿಷ್ಟತೆಗಳನ್ನು ನಿಗ್ರಹಿಸಬಲ್ಲವು.

"ಸ್ವಲ್ಪ ಮಟ್ಟಿಗೆ, ಸೇವಾವರ್ಗ, ನಿಷ್ಣಾತದಲ್ಲಿ ಕಡಿಮೆಯಿದ್ದರೂ ಚಿಂತೆಯಿಲ್ಲ. ಪರಿಸರಕ್ಕೆ ಹೊಂದಿಕೊಂಡು ಹೋಗುವಂಥದಿರಬೇಕು. ಅವರು ಜೀವಹೀನ. ಆತ್ಮಹೀನ ಯಂತ್ರಗಳಾಗಬಾರದು" ಎಂದು ಲಾರ್ಡ್ ಮೋರ್ಲೆಯವರು ಒಳ್ಳೆಯ ಅಭಿಪ್ರಾಯ ನೀಡಿರುವರು. ಸರಕಾರಿ ನೌಕರರು ಪ್ರಥಮವಾಗಿ ತಾವು ಮಾನವರು. ಅನಂತರ ನಾಗರಿಕರು ಹಾಗೂ ಕೊನೆಯಲ್ಲಿ ಮಾತ್ರ ಅಧಿಕಾರಿಗಳು ಎಂಬ ನಿಜತತ್ತ್ವವನ್ನು ತಿಳಿದು ನಡೆದರೆ ಸರ್ವರಿಗೂ ಸುಖವಿದೆ. ಆಡಳಿತದಲ್ಲಿ ನೈಪುಣ್ಯತೆ ಬರುವುದಲ್ಲದೆ ದೇಶದ, ಜನತೆಯ ಪ್ರಗತಿಯನ್ನು ಸಹ ಸಾಧಿಸಬಹುದು.

ಭಾರತೀಯ ಅರಣ್ಯ ಸಂಪನ್ಮೂಲಗಳು ಹಾಗೂ ಆರ್ಥಿಕಾಭಿವೃದ್ಧಿ

● ಎನ್. ರಾಜಗೋಪಾಲರಾವ್

"ಕೃಷಿಗಾಗಿ ನಮ್ಮ ದೇಶದಲ್ಲಿ ಕಾಡನ್ನು ನಾಶಪಡಿಸುವಂತೆ ಜಗತ್ತಿನಲ್ಲಿ ಎಲ್ಲೂ ಮಾಡುವುದಿಲ್ಲ."

–ಡಾ. ಕಾರಂತ

ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ಮತ್ತು ಅದರ ಸಂಯೋಜಿತ ಬೆಳವಣಿಗೆಯಲ್ಲಿ ಅರಣ್ಯಗಳ ಪಾತ್ರವು ಗಣ್ಯವಿದ್ದು ಅದರ ಬಗ್ಗೆ ಈವರೆಗಿನ ಅಲಕ್ಷ್ಯ ವಿವಿಧ ಆರ್ಥಿಕ ಮತ್ತು ಪ್ರಾಕೃತಿಕ ವಿಕೃತಿವಿಕೋಪಗಳಿಗೆ ಅವಕಾಶ ಮಾಡಿದೆಯೆಂಬುದರ ಅರಿವು ಇತ್ತೀಚಿನದು. ಆದರೂ ಈ ನೈಸರ್ಗಿಕ ಸಂಪನ್ಮೂಲಗಳ ಬಗ್ಗೆ ನಾವು ತಳೆದಿರುವ ಧೋರಣೆಯಾಗಲಿ. ಜಾಗ್ರುತಿಯಾಗಲಿ ಹಿಂದಿನ ಜಾಡಿನಿಂದ ಅಷ್ಟಾಗಿ ಸಂದಿಲ್ಲ. ಪುನರ್ವಿಮರ್ಶಿತ ದೃಷ್ಟಿಯ ಸ್ವರೂಪವನ್ನು ರಚಿಸಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

ನಮಗೆ ಲಭ್ಯವಿರುವ ಭೂವಿಸ್ತಾರದ ವಿನಿಯೋಗದಲ್ಲಿ ಅರಣ್ಯಗಳಿಗೆಂದು ಗೊತ್ತುಪಡಿಸಬಹುದಾದ ಭೂಭಾಗ ಮಹತ್ವದ್ದು. ದೇಶದ ಅರಣ್ಯಗಳು ಅನೇಕ ರೀತಿಯ ಉಪಯುಕ್ತ ಕಾರ್ಯಗಳನ್ನು ವಹಿಸುತ್ತವೆ. ಆವರಣಿಕ, ಆರ್ಥಿಕ, ಜೈವಿಕ ಇತ್ಯಾದಿ. ಯೋಜನಾಬದ್ಧ ಬೆಳವಣಿಗೆಯಲ್ಲಿ ಅರಣ್ಯಗಳ ನೆರವು ವಿವಿಧ ರೀತಿಯಲ್ಲಿ ಅಗತ್ಯವೆನಿಸುವುದು. ಕೆಲವೊಂದು ಪ್ರದೇಶದಲ್ಲಿ ಅರಣ್ಯಗಳು ಭೂಸವಕಲವನ್ನು ತಡೆಗಟ್ಟುವ ಸಲುವಾಗಿ ಅವಶ್ಯವೆನಿಸಿದರೆ, ಇನ್ನು ಕೆಲವು ಭಾಗಗಳಲ್ಲಿ ವಾತಾವರಣದ ರಕ್ಷಣೆಗೆ. ಮತ್ತೆ ಕೆಲವುಗಳಲ್ಲಿ ಸ್ಥಳೀಯ ವೃಕ್ಷಜಾತಿಗಳನ್ನು ಕಾಪಾಡಲು ಇಲ್ಲವೆ ಮರಮುಟ್ಟುಗಳ ಸ್ಥಾನಿಕ ಬೇಡಿಕೆಯನ್ನು ಪೂರೈಸಲು ಅವಶ್ಯಕವೆನಿಸುವುವು. ರಾಷ್ಟ್ರೀಯ ಯೋಜನೆಯನ್ನು ತಯಾರಿಸುವಲ್ಲಿ ಪ್ರಾದೇಶಿಕ ಬೇಡಿಕೆಗಳನ್ನು ಗಮನಿಸುವುದು ಪ್ರಥಮಾವಶ್ಯಕತೆ. ಆಡಳಿತಾತ್ಮಕವಾಗಿ ನಮ್ಮ ಅರಣ್ಯಗಳನ್ನು ಸೂಕ್ತ ವಿಭಾಗ, ಉಪವಿಭಾಗಗಳಾಗಿ ವಿಂಗಡಿಸಿರುವುದಾದರೂ ಆರ್ಥಿಕ ಬೇಡಿಕೆಗಳನ್ನು ಅನುಸರಿಸಿ ಬೆಳವಣಿಗೆಗೆ ಪೋಷಕವೆಂಬಂತೆ ಅವುಗಳ ನಿರ್ವಹಣೆ ಸಾಗುತ್ತಿಲ್ಲ.

ಅರಣ್ಯಗಳ ಪ್ರಯೋಜನವನ್ನು ಅನೇಕ ಬಗೆಯಿಂದ ವಿಂಗಡಿಸಬಹುದು. ಭೂ ರಕ್ಷಣೆ : ಎತ್ತರ ತಗ್ಗುಗಳಿರುವ ಪ್ರದೇಶಗಳಲ್ಲಿ ಮಳೆಯಿಂದ ಸಂಭವಿಸಬಹುದಾದ ಭೂಕುಸಿತ, ಭೂಸವುಕಳಿ, ಮೇಲ್ಮಣ್ಣಿನ ಕೊಚ್ಚುಗಳನ್ನು ತಡೆಗಟ್ಟುತ್ತದೆ. ತಗ್ಗಿನ ಪ್ರದೇಶಗಳಿಗೆ ಮೇಲಿನಿಂದ ಬರುವ ನೀರಿನ ರಭಸವನ್ನು ತಡೆಯುವುದಲ್ಲದೆ ನೀರಿನ ಶೇಖರಣೆಯನ್ನು ನಿಯಂತ್ರಿಸುತ್ತದೆ. ಹವಾಮಾನದ ಮೇಲಿನ ಪರಿಣಾಮವಂತೂ ಸುವಿದಿತ. ಹವಾಮಾನ ವೈಪರೀತ್ಯಗಳಿಂದ ಸುತ್ತಮುತ್ತಲಿನ ಪ್ರದೇಶಗಳನ್ನು ಸಮಧಾತುವಾಗಿಡುವುದು. ಮರಳು ಕಾಡಿನ ವಿಸ್ತರಣೆಯನ್ನು ಮತ್ತು ಗಾಳಿಯ ಹೊಡೆತವನ್ನು ಎದುರಿಸುವುದಕ್ಕೆ ಅರಣ್ಯಗಳನ್ನು ನಿರ್ಮಿಸುವುದೊಂದೇ ಮಾರ್ಗ. ಇಂದಿನ ರಾಜಾಸ್ಥಾನದ ಬಹುಭಾಗದ ಹಸಿರು ಈ ನಿಮಿತ್ತದಿಂದ ಸಾಧಿಸಲ್ಪಟ್ಟಿದ್ದು ಎಂಬುದು ಅನೇಕರಿಗೆ ತಿಳಿದಿಲಾರದು. ಅರಣ್ಯವು ಭೂಸಾರವನ್ನು ವೃದ್ಧಿಮಾಡುತ್ತದೆ ಮತ್ತು ನೆರೆಹೊರೆಯ ಸ್ಥಾನಿಕ ಪ್ರದೇಶಗಳ ಫಲವತ್ತತೆಯನ್ನು ಹೆಚ್ಚಿಸಲು ನೆರವು ನೀಡುತ್ತದೆ. ಇಷ್ಟಲ್ಲದೆ ಅರಣ್ಯಗಳಲ್ಲಿ ಮಾತ್ರ ಜೀವಿಸಬಲ್ಲ ಪ್ರಾಣಿಪಕ್ಷಿ ಸಂಕುಲಕ್ಕೆ ಅಭಯ ದೊರಕುತ್ತದೆ. ವನಪ್ರದೇಶಗಳು ಕದಡಿದ ಮನಸ್ಸಿಗೆ ಪ್ರಶಾಂತಿಯನ್ನು ತಂದುಕೊಡುವ ವಿಶ್ರಾಮಧಾಮಗಳೆಂಬುದಂತು ಸುವಿದಿತ. ಅರಣ್ಯಗಳ ಆರ್ಥಿಕ ಪ್ರಯೋಜನೆಗಳ ಬಗ್ಗೆ ಸ್ಥೂಲವಾದ ಕಲ್ಪನೆ ಇರುವುದಾದರೂ ಸೂಕ್ಷ್ಮ ತಿಳಿವಳಿಕೆ ಮೂಡಿಲ್ಲ. ರಾಷ್ಟ್ರೀಯ ಆರ್ಥಿಕ ವ್ಯವಸ್ಥೆಯಲ್ಲಿ ಒಕ್ಕಲುತನ ಇಲ್ಲವೆ ಕೈಗಾರಿಕೆಗೆ ಇರುವ ಸ್ಥಾನಕ್ಕೆ ಕಡಿಮೆಯದೇನೂ ಅಲ್ಲ ಅರಣ್ಯಗಳದ್ದು. ಆದರೂ ರಾಷ್ಟ್ರೀಯ ವರಮಾನದಲ್ಲಿ ಅರಣ್ಯಾದಾಯದ ಪಾಲಿಗೆಯು ಕೇವಲ ಶೇಕಡ ೧.೫ ಕ್ಕೂ ಕೊಂಚ ಕಮ್ಮಿ ಇರುವುದು. ಇದರಿಂದ ನಮ್ಮ ದೇಶದಲ್ಲಿ ಅರಣ್ಯಗಳ ಆರ್ಥಿಕ ವಿನಿಯೋಗ ಅವ್ಯವಸ್ಥಿತ ರೀತಿಯಲ್ಲಿ ನಡೆಯುತ್ತಿದೆಯೆಂಬುದು ಸ್ಪಷ್ಟ. ಉದ್ಯೋಗಗಳಿಗೆ ಅವಶ್ಯಕವೆನಿಸಿದ ಅನೇಕ ಕಚ್ಚಾ ವಸ್ತುಗಳು ಅರಣ್ಯಗಳಿಂದ ಬರುವವು. ಕೆಲವೊಂದು ಉದ್ದಿಮೆಗಳಿಗೆ ಅರಣ್ಯ ಉತ್ಪಾದಿತ ವಸ್ತುಗಳೇ ಆಧಾರ. ನಿರುದ್ಯೋಗ ನಿವಾರಣೆಗೆ ಅರಣ್ಯವು ಹೊಸದೊಂದು ರಂಗವನ್ನೇ ತೆರೆಯುತ್ತದೆ. ಕೃಷಿ ತೋಟಗಾರಿಕೆಯಲ್ಲಿ ಅರಣ್ಯದ ನೆರವು ಅನೇಕ ರೀತಿಯಲ್ಲಿ ಅಗತ್ಯವೆನಿಸುತ್ತದೆ. ಇಷ್ಟಾಗಿಯೂ ಅರಣ್ಯಧೋರಣೆ ಅವುಗಳ ಆರ್ಥಿಕ ಹಾಗೂ ಇನ್ನಿತರ ಮಹತ್ವಕ್ಕೆ ಅನುಗುಣವಾಗಿಲ್ಲವೆಂಬುದು ಸೋಜಿಗವೆನಿಸುತ್ತದೆ.

ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಅರಣ್ಯ ಧೋರಣೆಯ ಪುನರ್ ವಿಮರ್ಶೆ ಮಾಡೋಣ.

ದೇಶದ ಅರಣ್ಯ ಸಂಪತ್ತು: ನಮ್ಮ ರಾಷ್ಟ್ರದ ಒಟ್ಟು ಭೂವಿಸ್ತೀರ್ಣ ೩, ೨೮,೦೦೦ ಸಾವಿರ ಹೆಕ್ಟರುಗಳೆಂದು ಹೇಳಲಾಗಿದೆ. ಇದರಲ್ಲಿ ಅಜಮಾಸು ಶೇಕಡಾ ೨೦ರಷ್ಟನ್ನು ಅಂದರೆ ೬೬,೦೦೦ ಸಾವಿರ ಹೆಕ್ಟರುಗಳನ್ನು ಅರಣ್ಯಗಳು ಆಕ್ರಮಿಸಿವೆ. ಈ ಮೊತ್ತವು

ಪ್ರಾದೇಶಿಕ ಹರಹಿನಲ್ಲಿ ಕಂಡು ಬರಲಾರದು. ಆಯಾ ಪ್ರಾದೇಶಿಕ ಪ್ರಾಕೃತಿಕ ಲಕ್ಷಣ ಗಳಿಗನುಗುಣವಾಗಿ ಕೆಲವು ರಾಜ್ಯಗಳಲ್ಲಿ ಕಡಿಮೆ ಶೇಕಡದಲ್ಲಿ, ಇನ್ನು ಕೆಲವೆಡೆ ಅಧಿಕ ಶೇಕಡದಲ್ಲಿ ಅರಣ್ಯಗಳು ಆಕ್ರಮಿಸಿವೆ. ಇದು ಅಲ್ಲಿನ ಅವಶ್ಯಕತೆಯನ್ನು ಅನುಸರಿಸಿದೆ ಯೆಂದು ತಿಳಿಯಲಾರದು. ೧೯೫೧ರ ರಾಷ್ಟ್ರೀಯ ವಿಪಿನ ಧೋರಣೆಯ ಗೊತ್ತುವಳಿಯು ಈ ವಿಷಯದಲ್ಲಿ ನಿರ್ದಿಷ್ಟ ರಾಷ್ಟ್ರೀಯ ಗುರಿಗಳನ್ನು ನಿಷ್ಕರ್ಷಿಸಿ ಇಡೀ ದೇಶದ ಅರಣ್ಯ ಸರಾಸರಿಯು ೩೩% ಇರಬೇಕೆಂದೂ, ಪರ್ವತ ಭಾಗದಲ್ಲಿ ೬೦% ರಷ್ಟು ಹಾಗೂ ಮೈದಾನ ಭಾಗಗಳಲ್ಲಿ ೨೦% ರಷ್ಟು ಇರತಕ್ಕದ್ದೆಂದು ಹೇಳಿತು. ಆದರೆ ಇಪ್ಪತ್ತೈದು ವರುಷಗಳ ನಂತರವೂ ಈ ಕನಿಷ್ಟ ಗುರಿಯಿಂದ ನಮ್ಮ ಸಾಧನೆ ಹಿಂದೆಬಿದ್ದಿದೆ. ರಾಜ್ಯವಾರು ಅರಣ್ಯ ವಿಸ್ತೀರ್ಣವನ್ನು ಕೆಳಗಿನ ಪಟ್ಟಿಯಲ್ಲಿ ತೋರಿಸಿದೆ :

ಪಟ್ಟಿ ೧

ರಾಜ್ಯವಾರು ಭೌಗೋಲಿಕ ವಿಸ್ತೀರ್ಣ ಹಾಗೂ ಅರಣ್ಯ ವಿಸ್ತೀರ್ಣ.
(ಸಾವಿರ ಹೆಕ್ಟರುಗಳ ಗಣನೆಯಲ್ಲಿ)

ರಾಜ್ಯಗಳು ೧	ಭೌಗೋಲಿಕ ವಿಸ್ತೀರ್ಣ ೨	ಅರಣ್ಯ ವಿಸ್ತಾರ ೩	೨ರಲ್ಲಿ ೩ರ ಶೇಕಡ ೪	ದೇಶದ ಅರಣ್ಯದಲ್ಲಿ ರಾಜ್ಯ ಅರಣ್ಯದ ಶೇಕಡ ೫
ಆಂಧ್ರ ಪ್ರದೇಶ	೨೭೬೭೬	೬೫೧೨	೨೩.೫೩	೮.೬೮
ಅಸ್ಸಾಂ	೧೨೨೧೦	೪೪೪೨	೩೬.೩೮	೫.೯೨
ಬಿಹಾರ	೧೭೩೮೩	೩೦೫೯	೧೭.೬೦	೪.೦೮
ಗುಜರಾತ	೧೯೫೯೮	೧೮೦೦	೯.೧೮	೨.೪೦
ಹರಯಾಣ	೪೪೨೨	೧೪೨	೩.೨೦	೦.೧೯
ಹಿಮಾಚಲಪ್ರದೇಶ	೫೫೬೭	೨೧೫೯	೩೮.೭೮	೨.೮೮
ಜಮ್ಮು ಮತ್ತು ಕಾಶ್ಮೀರ	೨೨,೨೨೪	೨೧೦೪	೯.೪೭	೨.೮೦
ಕೇರಳ	೩೮೮೬	೧೨೬೯	೩೨.೬೬	೧.೬೯
ಮಧ್ಯಪ್ರದೇಶ	೪೪೨೮೪	೧೬೮೧೩	೩೭.೯೭	೨೨.೪೧
ಮಹಾರಾಷ್ಟ್ರ	೩೦೭೭೬	೬೬೯೬	೨೧.೭೬	೮.೯೨
ಕರ್ನಾಟಕ	೧೯೧೧೭	೩೫೧೦	೧೮.೩೦	೪.೬೮
ನಾಗಾಲ್ಯಾಂಡ್	೧೬೫೩	೨೯೦	೧೭.೫೪	೦.೩೯
ಒರಿಸ್ಸ	೧೫೫೩೪	೬೭೪೬	೪೩.೪೩	೮.೯೯
ಪಂಜಾಬ	೫೦೩೬	೨೦೨	೪.೦೧	೦.೨೭

೧	೨	೩	೪	೫
ರಾಜಸ್ಥಾನ	೩೪೨೨೧	೩೭೬೦	೧೦.೯೯	೫.೦೧
ತಮಿಳುನಾಡು	೧೩೦೦೭	೨೨೧೦	೧೬.೯೯	೨.೯೪
ಉತ್ತರಪ್ರದೇಶ	೨೯೪೪೧	೪೮೭೨	೧೬.೫೫	೬.೪೯
ಪ. ಬಂಗಾಳ	೮೭೮೫	೧೧೮೩	೧೩.೪೭	೧.೫೮
ಮಣಿಪುರ	೨೨೩೬	೬೦೨	೨೬.೯೨	೦.೮೦
ತ್ರಿಪುರ	೧೦೪೮	೬೩೦	೬೦.೧೧	೦.೮೪
ಕೇಂದ್ರಾಡಳಿತ ಪ್ರದೇಶಗಳು				
ಅಂಡಮಾನ ನಿಕೋಬಾರ್	೮೨೯	೭೪೭	೯೦.೧೧	೧.೦೦
ಗೋವ	೩೮೧	೧೦೫	೨೭.೫೬	೦.೧೪
ಅರುಣಾಚಲಪ್ರದೇಶ	೮೩೫೮	೫೧೫೪	೬೧.೬೭	೬.೮೭
ಇತರೆ	೨೬೧	೨೬	೯.೯೬	೦.೦೩
ಒಟ್ಟು	೩೧೯೯೯೩	೭೫೧೦೩	೨೩.೪೫	೧೦೦.೦೦

ಇದರಿಂದ ಗಮನಕ್ಕೆ ಬರುವ ಸಂಗತಿಯೆಂದರೆ ದೇಶದ ಅರಣ್ಯಸಂಪತ್ತಿಯ ಬಹು ಭಾಗ ಮಧ್ಯಪ್ರದೇಶ, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದಲ್ಲಿ ಸೇರ್ಪಡೆಯಾಗಿವೆ. ಮಧ್ಯಪ್ರದೇಶದಲ್ಲಿ ದೇಶದ ಕಾಲುಭಾಗದಷ್ಟು ಅರಣ್ಯ ಪಸರಿಸಿದೆ. ಮಹಾರಾಷ್ಟ್ರದಲ್ಲಿ ಶೇಕಡಾ ೧೦ ಭಾಗ, ಆಂಧ್ರ ಪ್ರದೇಶದಲ್ಲಿ ಶೇಕಡಾ ೯ ಭಾಗ ಇರುತ್ತದೆ. ಅತ್ಯಂತ ದೊಡ್ಡ ರಾಜ್ಯವಾದ ಉತ್ತರ ಪ್ರದೇಶದಲ್ಲಿ ಅರಣ್ಯ ವಿಸ್ತಾರ ದೇಶದ ೬%. ಪಂಜಾಬು, ಹರಿಯಾಣಾ ಹಾಗೂ ರಾಜಸ್ಥಾನಗಳಲ್ಲಿ ಅರಣ್ಯಗಳು ಇನ್ನೂ ಕಡಿಮೆ ಪ್ರಮಾಣದಲ್ಲಿರುವವು. ಅರಣ್ಯಗಳ ಆರ್ಥಿಕ ಉಪಯುಕ್ತತೆಯು ವಾಯುಗುಣ ಮತ್ತು ಮಳೆಯನ್ನು ಅನುಸರಿಸುತ್ತದೆ. ಕೆಲವು ಭಾಗಗಳಲ್ಲಿ ಉತ್ತಮ ದರ್ಜೆಯ ಮರಗಳು ಲಭ್ಯ. ಮತ್ತೆ ಕೆಲವು ಭಾಗಗಳಲ್ಲಿ ಅರಣ್ಯಗಳ ಪ್ರದೇಶ ದುಸ್ತರ. ಭಾರತದ ಕಾಡುಗಳಲ್ಲಿ ಕಂಡುಬರುವಷ್ಟು ವೈವಿಧ್ಯ ಮತ್ತಾವ ದೇಶದಲ್ಲಿ ಕಂಡುಬರದು. ಇದಕ್ಕೆ ಮುಖ್ಯ ಕಾರಣವೆಂದರೆ ಭೌಗೋಲಿಕ ಹರಹು. ಕೋನಿಫರಸ್ ಕಾಡುಗಳು ಪರ್ವತ ಪ್ರದೇಶಗಳಲ್ಲಿ ಕಂಡುಬಂದರೆ, ಸಾಗುವಾನಿ ಮತ್ತು ಇನ್ನಿತರ ಶ್ರೇಷ್ಠ ಜಾತಿಯ ಮರಗಳು ಮೈದಾನ ಪ್ರದೇಶಗಳಲ್ಲಿ ವಿಪುಲವಾಗಿ ಬೆಳೆಯುವವು. ಮಳೆ ಕಡಿಮೆ ಇರುವ ಭಾಗಗಳಲ್ಲಿ ಕೀಳುದರ್ಜೆಯ ಮರಗಳೂ, ಕುರುಚಲು ಗಿಡಗಳೂ ಕಂಡುಬರುವುವು. ಶೀತ

ಪ್ರದೇಶದ ಕೊನಿಫೆರಸ್ ಅರಣ್ಯಗಳು ಅಧಿಕವಾಗಿ ಹಿಮಾಲಯ ಪರ್ವತ ಭಾಗಗಳಲ್ಲೂ, ಅಗಲವಾದ ಎಲೆ ಜಾತಿಯ ವೃಕ್ಷಗಳು ಮಿಕ್ಕ ಭಾಗಗಳಲ್ಲೂ ಬೆಳೆದಿವೆ. ಆರ್ಥಿಕ ಉಪಯುಕ್ತತೆಯ ದೃಷ್ಟಿಯಿಂದ ಶೇಕಡಾ ೬೫ ರಷ್ಟು ಭಾಗ ಮಾತ್ರ ಸದ್ಯಕ್ಕೆ ಲಭ್ಯವಿರುತ್ತದೆ. ಶೇಕಡಾ ೩೦ ರಷ್ಟು ಅರಣ್ಯಗಳು ದಟ್ಟವಾಗಿದ್ದು ರಕ್ಷಿತಭಾಗಗಳೆಂದು ಪರಿಗಣಿಸಲ್ಪಟ್ಟಿವೆ. ಗಟ್ಟಿಮರಗಳೆನಿಸಿದ ಬೀಟೆ, ಹಲಸು, ಭರಣಿ ಇತ್ಯಾದಿಗಳು ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್ ಹಾಗೂ ಕರ್ನಾಟಕ ರಾಜ್ಯಗಳಲ್ಲಿ ಸಂಚಯವಾಗಿವೆ. ಈ ರಾಜ್ಯಗಳಲ್ಲಿ ಅನುಕ್ರಮವಾಗಿ ೩.೨೦ ಲಕ್ಷ, ೧೫೦ ಲಕ್ಷ, ೧.೨೦ ಲಕ್ಷ ಮತ್ತು ೧೦೦ ಲಕ್ಷ ಹೆಕ್ಟರುಗಳಲ್ಲಿ ಸಾಗುವಾನಿಯಂತಹ ಉತ್ಕೃಷ್ಟಜಾತಿಯ ಮರ ಬೆಳೆದು ನಿಂತಿರುತ್ತದೆ. ಹೆಚ್ಚಿನ ಬೇಡಿಕೆಯಲ್ಲಿರುವ ಬಿದಿರು ಮೆಳೆ ಸಾಂದ್ರವಾಗಿ ಕಂಡುಬರುವ ಭಾಗಗಳೆಂದರೆ ಅಸ್ಸಾಂ, ತ್ರಿಪುರ, ಮಹಾರಾಷ್ಟ್ರ, ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಮತ್ತು ಕರ್ನಾಟಕ.

ಪಟ್ಟಿ ೨

ಸಾವಿರ ಹೆಕ್ಟರುಗಳಲ್ಲಿ

ರಾಜ್ಯ	ತೇಗ	ಸಾಲ	ಕೊನಿಫೆರಸ್ಸ್	ಬೊಂಬು
ಆಂಧ್ರ	೨೫	—	—	೧೯೭೯
ಆಸಾಂ	೬	೧೩೪	—	೧೦೯೯
ಬಿಹಾರ	—	೨೧೪೧	—	೫೨೯
ಗುಜರಾತ್	೧೧೭೬	—	—	೧೯೪
ಹರಿಯಾನ	—	—	—	—
ಹಿಮಾಚಲ ಪ್ರದೇಶ	—	೫೪	೪೧೯	೧೦
ಕಾಶ್ಮೀರ	—	—	೭೪೭	—
ಕೇರಳ	೧೦೦	—	—	೬೩
ಮಧ್ಯ ಪ್ರದೇಶ	೩೧೧೯	೩೭೯೦	—	೧೪೮೫
ಮಹಾರಾಷ್ಟ್ರ	೧೪೦೪	—	—	೮೫೦
ಮಣಿಪುರ	—	—	—	೨೫೦
ಕರ್ನಾಟಕ	೧೦೦೦	—	—	೬೦೦
ನಾಗಾಲ್ಯಾಂಡ್	—	—	—	—
ಒರಿಸ್ಸ	೫೭	—	—	೧೦೫೦
ಪಂಜಾಬು	—	—	—	—
ರಾಜಸ್ಥಾನ	೩.೨೮	—	—	—

೧	೨	೩	೪	೫
ತ್ರಿಪುರ	—	—	—	—
ತಮಿಳುನಾಡು	೪೬	—	—	೫೩೯
ಉತ್ತರ ಪ್ರದೇಶ	೧೩	೬೮೫	೫೨೪	೪೦೦
ಪ. ಬಂಗಾಳ	೨	೪೬೮	—	೧೬
ಇತರ	—	—	—	೭೭೭
ಒಟ್ಟು	೭,೨೭೬	೭೨೭೨	೧೬೯೦	೧೦೧೨೬

ವಿಸ್ತರಣ ಮತ್ತು ವೃಕ್ಷ ಸಂಕುಲದ ದೃಷ್ಟಿಯಿಂದ ಭಾರತದ ಅರಣ್ಯಗಳು ಅಗಾಧವಲ್ಲದಿದ್ದರೂ, ಅವುಗಳ ವರಮಾನವನ್ನು ಪರಿಗಣಿಸಿದರೆ ಯಾವುದೇ ದೇಶಕ್ಕಿಂತ ಕಡಿಮೆ ಇರುತ್ತದೆ. ರಾಷ್ಟ್ರೀಯ ವರಮಾನಕ್ಕೆ ಅರಣ್ಯಗಳ ಸಂದಾಯವು ಕ್ಷುಲ್ಲಕವೆನಿಸುವಷ್ಟು ಅಲ್ಪ ಪ್ರಮಾಣದ್ದು. ಈ ಹಿಂದೆ ಕಾಣಿಸಿರುವಂತೆ ಅರಣ್ಯದ ವಂತಿಗೆ ಶೇಕಡ ೧.೦೬.

ಈ ವಿಷಯದಲ್ಲಿ ಅಂತರ್‌ರಾಜ್ಯ ವೈಷಮ್ಯ ಮತ್ತೂ ಗಮನಾರ್ಹ. ರಾಜ್ಯಗಳ ವರಮಾನದಲ್ಲಿ ಅರಣ್ಯಗಳ ಪ್ರಾಪ್ತಿಯನ್ನು ಗಮನಿಸಿದರೆ ೧೯೭೦-೭೧ರ ಸಾಲಿಗೆ ಸೇರಿದಂತೆ ಮಧ್ಯ ಪ್ರದೇಶ ರಾಜ್ಯದಲ್ಲಿ ಶೇ. ೧೪.೭. ಆಂಧ್ರ ಪ್ರದೇಶದಲ್ಲಿ ಶೇ. ೧೩.೦, ಕಾಶ್ಮೀರ ಮತ್ತು ಜಮ್ಮುವಿನಲ್ಲಿ ಶೇ. ೧೨.೫ ಇದ್ದಿತು. ಈ ಐದಾರು ರಾಜ್ಯಗಳ ಒಟ್ಟಿನ ಮೊತ್ತ ರಾಷ್ಟ್ರೀಯ ಭಾಗದ ೮೦ ರಷ್ಟು ಇರುವುದು. ರಾಜ್ಯಗಳ ಅರಣ್ಯ ಅಸಮತೋಲನೆಯನ್ನು ಈ ಮೇಲಿನ ಪಟ್ಟಿ ಸ್ಪಷ್ಟಪಡಿಸುತ್ತದೆ. ಅರಣ್ಯಗಳಲ್ಲಿನ ಮರ ಮುಟ್ಟುಗಳಲ್ಲಿ ೬೦ ಭಾಗ ಕಟ್ಟಿಗೆ ಇಲ್ಲವೆ ಇದ್ದಲಿಗಾಗಿ ಉಪಯೋಗವಾಗುತ್ತಿದೆ. ಅಂತರರಾಷ್ಟ್ರೀಯ ಮಾನದಿಂದ ನಮ್ಮ ಅರಣ್ಯಗಳ ಔದ್ಯೋಗಿಕ ಉಪಯುಕ್ತತೆ ಕನಿಷ್ಟವೆಂದು ಹೇಳಬೇಕು. ಔದ್ಯೋಗಿಕ ಪ್ರಾಮುಖ್ಯತೆಯನ್ನು ಗಳಿಸಿರುವ ಮರಗಳೆಂದರೆ ತೇಗ, ಬೀಟೆ, ಜಂಗ್ಲಿ, ಗಂಧ, ಸಾಲ, ನೀಲಗಿರಿ, ಬೊಂಬು ಇತ್ಯಾದಿ. ನಮ್ಮ ದೇಶದ ಅರಣ್ಯಗಳ ಬಹುಭಾಗ ನೈಸರ್ಗಿಕವಾಗಿ ಬೆಳೆದು ನಿಂತಿರುವವು. ಇತ್ತೀಚೆಗೆ ಅಲ್ಪವಾಗಿ ಮಾನವ ನಿರ್ಮಿತ ಕಾಡುಗಳು ಅಲ್ಲಲ್ಲಿ ಕಂಡುಬರುತ್ತಿವೆ. ನೈಸರ್ಗಿಕ ಕಾಡುಗಳ ಆರ್ಥಿಕ ಆಡಳಿತೆಯೂ ಸಮರ್ಥವಾಗಿ ನೆರವೇರಲಾರದು. ಅರಣ್ಯಗಳ ಪ್ರವೇಶವು ಕಷ್ಟವೆನಿಸಿ ಕ್ರಿಯೆಗಳು ತಡೆಹಿಡಿಯಲ್ಪಡುವವು. ಆದರೆ ನಿರ್ಮಿತ ತೋಪುಗಳ ಬೆಳೆಗೆ ಅನೇಕ ಹೇರಳ ಬಂಡವಾಳದ ಹೂಡುವಿಕೆ ಮತ್ತು ೨೦–೨೫ವರುಷಗಳ ನಿರೀಕ್ಷಾ ಕಾಲ ಅಗತ್ಯವೆನಿಸುತ್ತದೆ. ಎರಡೂ ರೀತಿಯ ಅರಣ್ಯ ಮ್ಯಾನೇಜ್ ಮೆಂಟಿನ ವಿಧಾನಗಳನ್ನು ಅಳವಡಿಸಿಕೊಂಡು ನೈಸರ್ಗಿಕ ಅರಣ್ಯಗಳನ್ನು ಕಾಪಾಡಿಕೊಳ್ಳುವುದು ಎಲ್ಲ ದೃಷ್ಟಿಯಿಂದಲೂ ಉತ್ತಮವೆನಿಸುತ್ತದೆ.

ಸರಕಾರದ ಒಡೆತನಕ್ಕೆ ಸೇರಿರುವ ಅರಣ್ಯಗಳೆ ನಮ್ಮಲ್ಲಿ ಸಾಮಾನ್ಯ. ಶೇಕಡ ೨.೩ರಷ್ಟು ಖಾಸಗೀ ಒಡೆತನಕ್ಕೆ ಸೇರಿರುವುದೂ ಕೂಡ ಇತ್ತೀಚಿನ ಘಟನೆ. ಇದರಿಂದ ಅರಣ್ಯವು ಸಾರ್ವಜನಿಕ ರಂಗಕ್ಕೆ ಸೇರಿದಂತೆ ಪ್ರಾರಂಭದಿಂದಲೂ ನಿರ್ವಹಿಸಲ್ಪಡುತ್ತಿದೆ. ಅಲ್ಲದೆ ಒಂದೇ ರೀತಿಯ ಅರಣ್ಯಧೋರಣೆ ಮತ್ತು ಆಡಳಿತೆ ಸಾಧ್ಯವೆನಿಸಿದೆ. ಸ್ಥಾನಿಕ ಘಟಕಗಳು ಮತ್ತು ಕೆಲವೊಂದು ಸಂಸ್ಥೆಗಳು ಅರಣ್ಯಗಳ ಬೆಳಸಿನಲ್ಲಿ ಭಾಗಿಯಾಗುವಂತೆ ಉತ್ತೇಜಿಸಬಹುದಾದರೂ ಖಾಸಗಿ ವ್ಯಕ್ತಿಗಳ ಒಡೆತನ ಅಷ್ಟು ಅಪೇಕ್ಷಣೀಯವಲ್ಲವೆಂದು ಹೇಳಬಹುದು. ಸಾರ್ವಜನಿಕ ರಂಗದ ಇಲ್ಲವೆ ಇಲಾಖಾ ಅರಣ್ಯಾಡಳಿತೆಯಲ್ಲಿ ಕಂಡು ಬರಬಹುದಾದ ಕೊರತೆಯೆಂದರೆ ಅರಣ್ಯ ಘಟಕಗಳ ಕಾರ್ಯಾಚರಣೆಯ ಯೋಜನೆ. ಇವುಗಳನ್ನು ಅತ್ಯಂತ ವಿವರವಾಗಿ ರೂಪಿಸಿ ಕಾರ್ಯಾಚರಣೆಗೆ ತರಬೇಕಾಗುವುದು. ಇದಕ್ಕೆ ತಾಂತ್ರಿಕ ನೆರವು ಹಾಗೂ ಹಣಕಾಸಿನ ವೆಚ್ಚ ಅಧಿಕ ಪ್ರಮಾಣದಲ್ಲಿ ಪೂರೈಸಬೇಕಾಗುವುದು. ಇತ್ತೀಚಿನ ವರುಷಗಳಲ್ಲಿ ಘಟಕಕಾರ್ಯನಕ್ಷೆ ನಿರ್ಲಕ್ಷಿಸಲ್ಪಟ್ಟಿದೆಯೆಂದು ಹೇಳಲಾಗುತ್ತಿದೆ. ದಟ್ಟ ಅರಣ್ಯಗಳಿರುವ ರಾಜ್ಯಗಳಲ್ಲಿಯೆ ಘಟಕಕಾರ್ಯನಕ್ಷೆಯು ಅಲಕ್ಷಿಸಲ್ಪಟ್ಟಿರುವುದು. ಘಟಕನಕ್ಷೆಯ ಪೂರ್ವ ತಯಾರಿಕೆಯು ಯಾವುದೆ ಅರಣ್ಯ ಸಂಸ್ಕರಣ ಕಾರ್ಯದಲ್ಲಿ ಅತಿಮಹತ್ವದ್ದು. ಘಟಕ ಯೋಜನೆಯು ಊರ್ಜಿತದಲ್ಲಿರುವ ರಾಜ್ಯಗಳಲ್ಲಾದರೂ ಕೂಡ ಅದು ೪೦–೫೦ ವರುಷಗಳ ಕೆಳಗೆ ರೂಪಿಸಲ್ಪಟ್ಟಿದ್ದು. ಆಧುನಿಕ ಅವಶ್ಯಕತೆಗಳಿಗನುಗುಣವಾಗಿ ಮಾರ್ಪಾಡು ಹೊಂದಿಲ್ಲದಿರುವುದು ಅರಣ್ಯಾಡಳಿತೆಯಲ್ಲಿನ ದುರ್ಬಲತೆಯನ್ನು ಎತ್ತಿತೋರಿಸುತ್ತದೆ.

ಸಾರ್ವಜನಿಕ ತೆರವು ಹಕ್ಕಿನ ದೃಷ್ಟಿಯಿಂದ ಭಾರತದ ಅರಣ್ಯಗಳನ್ನು ಮೂರು ರೀತಿಯವಾಗಿ ವಿಭಾಗಿಸಬಹುದು: ೧) ಕಾಯ್ದಿಟ್ಟ ಕಾಡುಗಳು– ಇವುಗಳು ಸಂಪೂರ್ಣ ಸರಕಾರಿ ನಿಯಂತ್ರಣದಲ್ಲಿರುವವು. ಅರಣ್ಯ ಇಲಾಖೆಯು ಇವರ ಮೇಲ್ವಿಚಾರಣೆಯನ್ನು ನಡೆಸುವುದು.

೨) ರಕ್ಷಿತ ಕಾಡುಗಳು– ಸರಕಾರ ನಿಯಂತ್ರಣಕ್ಕೊಳಪಟ್ಟಿರುವುದಾದರೂ. ಇಲಾಖೆಯು ಪ್ರಾದೇಶಿಕ ಜನಕ್ಕೆ ಕೆಲವು ನಿರ್ಬಂಧಿತ ಹಕ್ಕುಗಳನ್ನು ನೀಡಿರುತ್ತದೆ.

೩) ಮೈನರ್ ಕಾಡುಗಳು— ಇವುಗಳು ಹೆಚ್ಚಾಗಿ ರೆವಿನ್ಯೂ ಇಲಾಖೆಗೆ ಸೇರಿದ್ದು. ಕುರುಚಲು ಗಿಡಗಳು, ಹುಲ್ಲು ಬೆಳೆದಿರುತ್ತದೆ. ಸಾರ್ವಜನಿಕ ಉಪಯೋಗಕ್ಕೆ ಈ ಕಾಡುಗಳು ಮುಕ್ತವಿರುವವು. ದೇಶದ ಒಟ್ಟು ಅರಣ್ಯದಲ್ಲಿ ೨೦ ಭಾಗ ಮೈನರ್ ಕಾಡುಗಳೆಂದು ಹೇಳಲಾಗಿದೆ. ಇವುಗಳ ಉಪಯುಕ್ತತೆಯನ್ನು ಹೆಚ್ಚಿಸಲು ಅವಕಾಶವಿರುವುದಾದರೂ ಸಾರ್ವಜನಿಕ ಉಪಯೋಗದ ಹಕ್ಕು ಇದಕ್ಕೆ ಅಡ್ಡಿಪಡಿಸುತ್ತದೆ. ಸಾರ್ವಜನಿಕರಿಗೆ ಸರಿಯಾದ ಮಾಹಿತಿಯನ್ನು ಸ್ಥಾನಿಕ ಧುರೀಣರ ಮೂಲಕ ಒದಗಿಸುವುದರಿಂದ ಅವರ ಹಟವನ್ನು ಸ್ವಲ್ಪವಾದರೂ ಕಳೆಯಬಹುದು.

ಸಾಮಾನ್ಯವಾಗಿ ಅರಣ್ಯಸಂಪತ್ತಿಯ ಮೌಲ್ಯಮಾಪನವನ್ನು ಮೂರು ಹಂತಗಳಲ್ಲಿ ಕೈಗೊಳ್ಳಲಾಗುತ್ತದೆ: ೧) ಅರಣ್ಯ ವೃದ್ಧಿಯ ಮೊತ್ತ: ಒಟ್ಟು ಹಾಗೂ ನಿವ್ವಳ ಮೊತ್ತ. ೨) ವರ್ತಮಾನ ವೃದ್ಧಿಯ ಪ್ರಮಾಣ. ೩) ಭವಿಷದ್ ವೃದ್ಧಿಯ ಪ್ರಮಾಣ. ಇವುಗಳೊಂದಿಗೆ ವಿಪಿನಸಂಪತ್ತಿಯ ರಾಷ್ಟ್ರೀಯ ಅನುಭೋಗದ ಪ್ರಮಾಣವನ್ನು ತುಲನೆಮಾಡತಕ್ಕದ್ದು. ಅರಣ್ಯಗಳ ಕಟಾವನ್ನು ಲಕ್ಷ್ಯದಲ್ಲಿಟ್ಟುಕೊಳ್ಳದಿದ್ದರೆ ನಿವ್ವಳ ವೃದ್ಧಿಯನ್ನು ಗುರುತಿಸಲಾಗುವುದಿಲ್ಲ. ಈ ದಿಶೆಯಲ್ಲಿ ನಮ್ಮ ಅಂಕಿ ಸಂಖ್ಯೆಗಳ ಒಕ್ಕಣೆಯಲ್ಲಿ ಕೆಲವೊಂದು ಮಾರ್ಪಾಟು ಅಗತ್ಯವೆನಿಸಿದೆ. ಹೇಗಾದರೂ ಅರಣ್ಯಗಳಲ್ಲಿ ವೃಕ್ಷವೃದ್ಧಿ ಮತ್ತು ಕಟಾವು ಪ್ರಮಾಣವನ್ನು ತುಲನೆಮಾಡಿದರೆ. ಕಟಾವು ಕಮ್ಮಿಯೆಂದು ಕಾಣಿಸುತ್ತದೆ. ವಾರ್ಷಿಕವೃಕ್ಷವೃದ್ಧಿ ಪ್ರಮಾಣ ೬೦ ಲಕ್ಷ ಕ್ಯೂಬಿಕ್ ಮೀಟರುಗಳೆಂದೂ ವಾರ್ಷಿಕ ಕಟಾವು ೪೦ ಮೀಟರುಗಳೆಂದೂ ಅಂದಾಜಿಸಲಾಗಿದೆ. ಇದರ ನಿಖರತೆಯನ್ನು ಪ್ರಶ್ನಿಸಬಹುದಾದರೂ ಒಂದು ಅಂಶ ಸ್ಪಷ್ಟವಿದೆ. ಅರಣ್ಯ ಸಂಪತ್ತಿಯಲ್ಲಿ ಕೆಲವು ಭಾಗ ಕೊಯ್ಲಾಗದೆ ಉಳಿದು ಅಲ್ಲಿಯೇ ಜೀರ್ಣವಾಗುತ್ತಿವೆ ಮತ್ತು ಮರಮುಟ್ಟುಗಳನ್ನು ಸಕಾಲದಲ್ಲಿ ಅರಣ್ಯದಿಂದ ಹೊರತೆಗೆಯದಿದ್ದರೆ ಆರ್ಥಿಕ ನಷ್ಟವಾಗುತ್ತದೆ.

ಔದ್ಯಮಿಕ ಮರಮುಟ್ಟುಗಳ ಪೂರೈಕೆಯನ್ನು (ಕೊಯ್ಲನ್ನು) ಎರಡನೆಯ ಪಟ್ಟಿಯಲ್ಲಿ ರಾಜ್ಯವಾರು ಸಾದರಪಡಿಸಿದೆ. (ಪಟ್ಟಿಸಂಖ್ಯೆ ೨.) ಹೆಚ್ಚಿನ ವಿವರಗಳು ಇದರಲ್ಲಿ ಕಾಣದಾದರೂ ಪ್ರಮುಖ ಜಾತಿಗಳೆನಿಸಿದ ತೇಗ ಮತ್ತು ಬೊಂಬಿನ ಬಗ್ಗೆ ಅಂಕಿಗಳು ಶೇಖರಣೆಯಾಗಿರುವುದು ಸಮಾಧಾನದ ವಿಷಯ. ಮಹಾರಾಷ್ಟ್ರ. ಒರಿಸ್ಸ, ಹಿಮಾಚಲ ಪ್ರದೇಶ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳು ಔದ್ಯಮಿಕ ಮರಗಳ ಮುಖ್ಯ ಉತ್ಪಾದಕರು, ಹಿರಿಯ ಔದ್ಯಮಿಕ ರಾಜ್ಯಗಳೆನಿಸಿದ ತಮಿಳು ನಾಡು. ಕರ್ನಾಟಕ. ಪಂಜಾಬುಗಳಲ್ಲಿ ಗಟ್ಟಿಮರದ ಕೊರತೆ ಗಂಭೀರವಾಗುತ್ತಿದೆ. ಅರಣ್ಯ ವಿಸ್ತೀರಣ ಯೋಜನೆಯೊಂದಿಗೆ ಮರವಾರು ಅವಶ್ಯಕತೆಯನ್ನೂ ಲೆಕ್ಕಿಸಿ ಘಟಕಯೋಜನೆಯನ್ನು ಶೀಘ್ರದಲ್ಲಿ ಜಾರಿಗೆ ತಂದರೆ ಮಾತ್ರ ಈ ಶತಮಾನದ ಅಂತ್ಯದಲ್ಲಿಯಾದರೂ ದೇಶದ ಔದ್ಯಮಿಕ, ಉರುವಲು ಇತ್ಯಾದಿಗಳ ಬೇಡಿಕೆಯನ್ನು ಪೂರೈಸುವುದು ಸಾಧ್ಯವೆನಿಸೀತು. ಮರಗಳ ಕಟಾವಿನಲ್ಲಿ ಅರ್ಧಕ್ಕೂ ಮಿಕ್ಕು ಉರುವಲು. ಕೇವಲ ೩೫% ಮಾತ್ರ ಇನ್ನಿತರ ಉಪಯೋಗಗಳಿಗೆ ಬಿಡುಗಡೆಯಾಗುತ್ತಿರುವುದು ಅಷ್ಟೇನು ಸಂತೃಪ್ತ ವಿಷಯವಲ್ಲ. ಉರುವಲು ಕಟ್ಟಿಗೆಯ ಮೇಲಿನ ಅವಲಂಬನವನ್ನು ಕಡಿಮೆಗೊಳಿಸಬೇಕೆಂದರೆ ಅಗ್ಗದ ದರದಲ್ಲಿ ಇನ್ನಿತರ ಇಂಧನ ಸಾಮಗ್ರಿಯನ್ನು ಪೂರೈಸುವ ಬದಲಿ ವ್ಯವಸ್ಥೆಯನ್ನು ರೂಪಿಸುವುದು ಜರೂರಾಗಿ ನಡೆಯಬೇಕು. ಆದರೆ ಸಧ್ಯದ ಪರಿಸ್ಥಿತಿಯಲ್ಲಿ ಇಂತಹ ಬದಲಿ ವ್ಯವಸ್ಥೆ ವ್ಯಾಪಕವಾಗಿ ಆಗಲಾರದೆಂದೆನಿಸುತ್ತದೆ. ದೇಶದ ಜನಸಂಖ್ಯೆ ಬೆಳೆದಂತೆ ಉರುವಲಿನ ಬೇಡಿಕೆಯೂ ಬೆಳೆಯುತ್ತದೆ. ಇದರಿಂದ ಕಾಯ್ದಿಟ್ಟ ಮತ್ತು

ರಕ್ಷಿತ ಅರಣ್ಯಗಳ ಮೇಲಿನ ಒತ್ತಡ ಸಾರ್ವಜನಿಕರಿಂದ ಅಧಿಕವಾಗುತ್ತಿದೆ. ಆದ್ದರಿಂದ ಅರಣ್ಯ ಧೋರಣೆಯೊಡನೆ ಗೃಹ ಇಂಧನ ಪೂರೈಕೆಯ ರೀತಿನೀತಿಗಳನ್ನೂ ಹೊಂದಿಸಿ ಕೊಳ್ಳದಿದ್ದರೆ ಉರುವಲು ದಾಹದಿಂದ ಅರಣ್ಯಕ್ಷಯವಾಗುವುದು ದೂರವಿಲ್ಲ. ಔದ್ಯಮಿಕ ಕಟ್ಟಿಗೆಯಾದರೂ ಜೋಪಾನವಾಗಿ ಉಪಯೋಗವಾಗುತ್ತದೆಯೆಂದಲ್ಲ. ಇದರಲ್ಲಿಯೂ ಕೆಲವು ಭಾಗವನ್ನು ಮನೆಮುಟ್ಟುಗಳಿಗೆಂದು ನಿಯಮಿತ ಪ್ರಮಾಣಕ್ಕೂ ಮೀರಿ ಬಳಸಲಾಗುತ್ತಿದೆ. ಗ್ರಾಮೀಣ ಭಾಗಗಳಲ್ಲಿ ಇದು ಸಾಮಾನ್ಯ. ನಮ್ಮ ದೈನಂದಿನ ಉಪಯೋಗ ಕ್ರಮದಲ್ಲಿ ಮರಗಳ ಪೋಲನ್ನು ತಡೆಗಟ್ಟಲು ಸಾಮೂಹಿಕ ಸಂಪರ್ಕ ಮಾಧ್ಯಮಗಳನ್ನು ಬಳಸುವುದು ಅಗತ್ಯ. ಅರಣ್ಯಾಧಾರಿತ ಉದ್ದಿಮೆಗಳಿಂದ ಇತ್ತೀಚೆಗೆ ಮರ ಮತ್ತು ಪಲ್ಪುಗಳ ಬೇಡಿಕೆ ಏರುತ್ತಲಿದೆ. ಪೀಠೋಪಕರಣಗಳ ತಯಾರಕರು, ಬೆಂಕಿಕಡ್ಡಿ, ಕಾಗದ, ನ್ಯೂಸ್‌ಪ್ರಿಂಟ್, ಪೇಪರ್, ರೆಯಾನ ಮುಂತಾದ ಉದ್ದಿಮೆಗಳು ರಭಸದಿಂದ ಬೆಳೆಯುತ್ತಲಿದ್ದು ಅವುಗಳಿಗೆ ಮರಗಳ ಪೂರೈಕೆ ಈಗಾಗಲೇ ಹಿಂದೆಬಿದ್ದಿದೆ. ಕಾಗದ ಉದ್ದಿಮೆಯು ಪೂರ್ಣವಾಗಿ ಬೊಂಬನ್ನು ಅವಲಂಬಿಸಿದೆ. ಈ ಮೂಲ ವಸ್ತುವಿನ ಅಭಾವವು ಕಾಗದ ಉದ್ದಿಮೆಯು ಇನ್ನಿತರ ಪರ್ಯಾಯ ವಸ್ತುಗಳನ್ನು ಬಳಸಿ ಕೊಳ್ಳಲು ಪ್ರೇರೇಪಿಸುತ್ತಿದೆ. ಅತಿ ತೆಳುವಾದ ಮರದ ಹಲಗೆಗಳು (ಪ್ಲೈಯವುಡ್) ಇತ್ತೀಚೆಗೆ ತುಂಬ ಜನಪ್ರಿಯವಾಗುತ್ತಿವೆ. ಪ್ಲೈಮರದ ಉತ್ಪಾದನೆಯು ೫೦೦ ಲಕ್ಷ ಘನಮೀಟರುಗಳನ್ನು ಮುಟ್ಟಿರುವುದೆಂದು ಅಂದಾಜಿಸಲ್ಪಟ್ಟಿದೆ. ಇಷ್ಟು ಪ್ರಮಾಣವನ್ನು ಉತ್ಪಾದನೆಗೆ ३ ಲಕ್ಷ ಟನ್ ತೇಗದ ಮರವು ಕೊರೆಯುವುದಕ್ಕಾಗಿ ಅವಶ್ಯಕವೆನಿಸುತ್ತದೆ. ಬೆಂಕಿಪೆಟ್ಟಿಗೆ ತಯಾರಿಕೆಯ ಟಿಂಬರ್ ಬೇಡಿಕೆಯು ವರ್ಷಪ್ರತಿ ೨.೬೦ ಲಕ್ಷ ಟನ್ ಇರುವುದು. ಈ ಉದ್ದಿಮೆಯ ಅರ್ಧಭಾಗ ಕಿರಿ ಉದ್ದಿಮೆ ರಂಗದಲ್ಲಿ ಸ್ಥಾಪಿತವಾಗಿರು ವುದು ಮರದ ವಿಕೇಂದ್ರಿಕೃತ ಪೂರೈಕೆಯಲ್ಲಿಯ ಅನೇಕ ಸಮಸ್ಯೆಗಳಿಗೆ ಕಾರಣವೆನಿಸಿದೆ. ಈ ಉದ್ದಿಮೆಯಲ್ಲಿ ಕೂಡ ಗಟ್ಟಿಕಟ್ಟಿಗೆ ಪರ್ಯಾಯವಾಗಿ ಇನ್ನಿತರ ರೀತಿಯ ಜಂಗ್ಲಿ ಮರವನ್ನು ಉಪಯೋಗಿಸುವುದಕ್ಕೆ ಉತ್ತೇಜಿಸುವುದು ಅವಶ್ಯಕ. ಕಳೆದ ಎರಡು ದಶಕದಲ್ಲಿ ರೆಯಾನ್ ಕೈಗಾರಿಕೆಯು ರಭಸದ ಬೆಳವಣಿಗೆಯ ಮುನ್ಸೂಚನೆಗಳನ್ನು ತೋರಿಸಿತಾದರೂ ಅನಂತರ ಇನ್ನಿತರ ಫೈಬರ್‌ಗಳ ಬಳಕೆಯಿಂದಾಗಿ ಸ್ಥಗಿತಗೊಂಡಿದೆ ಹಾಗಿಲ್ಲದಿದ್ದರೆ ಪಲ್ಪಿನ ಬೇಡಿಕೆ ಅತ್ಯಧಿಕವಾಗಿ ಬೆಳೆಯುತ್ತಿತ್ತು. ಒಟ್ಟಿನಲ್ಲಿ ನಮ್ಮ ಗೃಹ ನಿರ್ಮಾಣ ಮತ್ತು ಕೈಗಾರಿಕೆಗಳು ಭಾರಿ ಪ್ರಮಾಣದ ಮರಮುಟ್ಟುಗಳಿಗೆ ಬೇಡಿಕೆ ಯನ್ನು ಮುಂದಿಡುತ್ತಿವೆ. ಆದ್ದರಿಂದ ಯಾವುದೆ ಕೊರತೆ ವಸ್ತುವಿನ ವಿಷಯದಲ್ಲಿ ಅನುಸರಿಸಲ್ಪಡುವ ನಿಯಂತ್ರಿತ ಬಳಕೆ ಮತ್ತು ಪೂರೈಕೆಯನ್ನು ಅರಣ್ಯ ಸಂಪತ್ತಿಯಲ್ಲೂ ಒಂದೆರಡು ದಶಕಗಳವರಿಗಾದರೂ ಅನುಸರಿಸುವುದು ಅನಿವಾರ್ಯ. ಇದರೊಟ್ಟಿಗೆ ಸುಧಾರಿತ ಅರಣ್ಯ ನೀತಿಯನ್ನೂ ವಿವರವಾಗಿ ಕಾರ್ಯಾಚರಣೆಯಲ್ಲಿ ಜಾರಿಗೊಳಿಸಬೇಕು.

ಭಾರತದ ಅರಣ್ಯ ಗೊತ್ತುವಳಿಯ ಘೋಷಣೆಯಂದಿನಿಂದ (೧೯೫೨) ಇದು ವರೆಗಿನ ಯೋಜನೆಗಳಲ್ಲಿ ಸಾಧಿಸಿದ ಬೆಳವಣಿಗೆಯನ್ನು ಸ್ಥೂಲ ವಿಮರ್ಶೆಗೆ ಒಳಪಡಿಸ ಬಹುದು. ಮೊದಲ ಯೋಜನೆ : ಪ್ರಥಮ ಯೋಜನಾವಧಿಯಲ್ಲಿಯೇ ರಾಷ್ಟ್ರೀಯ ಅರಣ್ಯ ಧೋರಣೆಯ ಗೊತ್ತುವಳಿಯು ಸ್ವೀಕರಿಸಲ್ಪಟ್ಟಿತಾದರೂ ಅರಣ್ಯಗಳ ಬಗ್ಗೆ ಯೋಜನಾ ವರದಿಯು ಒಂದು ಪರಿಮಿತ ದೃಷ್ಟಿಯನ್ನೇ ತಾಳಿತು. ೧೯೪೦–೫೦ ರಲ್ಲಿ ಯುದ್ಧ ಕಾರಣಕ್ಕಾಗಿ ಕಾಡುಗಳನ್ನು ಅತಿಯಾಗಿ ಶೋಷಿಸಿದ್ದರಿಂದ ಅವುಗಳನ್ನು ಪುನಶ್ಚೇತನಗೊಳಿಸುವ ಮತ್ತು ಉಳಿದುದನ್ನು ರಕ್ಷಿಸಿಕೊಳ್ಳುವ ಕಾರ್ಯಕ್ಕೆ ಮಹತ್ವವನ್ನು ಸಹಜವಾಗಿಯೆ ನೀಡಲಾಯಿತು. ಪ್ರವಾಹ ನಿಯಂತ್ರಣದಲ್ಲಿ ಮತ್ತು ಭೂಸವಕಳಿಯ ನಿಯಂತ್ರಣದಲ್ಲಿ ಅರಣ್ಯಗಳ ವಿಶೇಷ ಪಾತ್ರವನ್ನು ಅಲಕ್ಷಿಸಲಾಯಿತು. ಈ ಅವಧಿಯ ವಿಶೇಷ ಆಕರ್ಷಣೆಯೆಂದರೆ ಮುನ್ಷಿಯವರ ವನಮಹೋತ್ಸವದ ಉದ್ಘಾಟನೆ. ಅಂದಿನಿಂದ ಇದು ರಾಷ್ಟ್ರೀಯ ಚಟುವಟಿಕೆಯೆನಿಸಿದೆ. ಸಾರ್ವಜನಿಕರ ಮನಸ್ಸಿನಲ್ಲಿ ಕಾಡುಗಳ ಬಗ್ಗೆ ಜಾಗೃತಿ ಮತ್ತು ಆಸಕ್ತಿಯನ್ನು ಹುಟ್ಟಿಸುವುದೆ ಇದರ ಆಚರಣೆಯ ಉದ್ದೇಶ. ಕೇಂದ್ರೀಯ ಅರಣ್ಯ ಮಂಡಳಿಯನ್ನು ಪುನರ್‌ಘಟಿಸಲಾಯಿತು. ವಿಪಿನಾಭಿವೃದ್ಧಿಗಾಗಿ ಯೋಜನೆಯಲ್ಲಿ ರೂ. ೯೭ ಕೋಟಿಯನ್ನು ಕಾದಿರಿಸಲಾಯಿತು. ಹೊಸ ಕಾಡುಗಳನ್ನು ೫೦,೦೦೦ ಹೆಕ್ಟೇರುಗಳಲ್ಲಿ ಬೆಳೆಸುವುದೆಂದು ಗೊತ್ತುಪಡಿಸಲಾಯಿತು. ಆದರೆ ನಿಶ್ಚಿತವಲ್ಲಿ ವಿಪಿನ ವಿಸ್ತರಣವು ಹಿಂದೆ ಬಿದ್ದಿತು.

ಎರಡನೆ ಯೋಜನೆಯಲ್ಲಿ ೨೦ ಕೋಟಿ ರೂಪಾಯಿಯ ವೆಚ್ಚವನ್ನು ಕಾಡುಗಳಿಗಾಗಿ ಕಾದಿರಿಸಲಾಯಿತು. ಔದ್ಯಮಿಕ ವೃಕ್ಷ ಜಾತಿಗಳ ನೆಟ್ಟಿಗೆಗೆ ಪ್ರೋತ್ಸಾಹ ಕೊಡಲಾಯಿತು. ೧೬೪,೦೦೦ ಹೆಕ್ಟರುಗಳಲ್ಲಿ ಹೊಸತಾಗಿ ಔದ್ಯಮಿಕ ತೋಪುಗಳ ನಿರ್ಮಾಣ ಒಂದು ದೊಡ್ಡ ಹೆಜ್ಜೆ. ಮೂರನೆ ಯೋಜನೆಯಲ್ಲಿ ಹೊಸ ಕಾಡುಗಳ ಬೆಳೆಯನ್ನು ೨೮೦.೦೦೦ ಹೆಕ್ಟರುಗಳಿಗೆ ವಿಸ್ತರಿಸಲಾಯಿತು. ಮರಗಳ ಚಿಕಿತ್ಸೆಗೆ ಮತ್ತು ಅವುಗಳ ಗುಣಧರ್ಮದ ರಕ್ಷಣೆಗೆ ಹೆಚ್ಚಿನ ಮುತುವರ್ಜಿಯನ್ನು ವಹಿಸುವ ಕಾರ್ಯಕ್ರಮಗಳನ್ನು ನಿರ್ದೇಶಿಸ ಲಾಯಿತು. ಶೀಘ್ರ ಔದ್ಯಮಿಕ ಜಾತಿಗಳ ಬೆಳೆಯನ್ನು ಕೈಕೊಂಡಲ್ಲಿ ಕೇಂದ್ರ ಸರಕಾರವು ಶೇಕಡ ೧೦೦ ರಷ್ಟು ಅನುದಾನವನ್ನು ನೀಡಲು ಮುಂದಾಯಿತು. ಕಾಗದ ಉದ್ದಿಮೆಯ ಅವಶ್ಯಕತೆಯನ್ನು ಪೂರೈಸುವ ಸಲುವಾಗಿ ಈ ಉತ್ತೇಜನೆಯನ್ನು ಮುಂದೆ ಮಾಡಲಾಯಿತಾದರೂ. ಸಂಬಂಧಿಸಿದ ಯಾರೂ ಈ ಯೋಜನೆಯ ವಿಶೇಷ ಪ್ರಯೋಜನವನ್ನು ಪಡೆಯಲಿಲ್ಲ. ಕಾಗದ ಉದ್ದಿಮೆಗಳೂ ಈ ದಿಶೆಯಲ್ಲಿ ಹೆಚ್ಚಿನ ಶ್ರಮವಹಿಸ ಲಿಲ್ಲ. ಯೋಜನೆಯಲ್ಲಿ ಅರಣ್ಯಬಾಬ್ತಿಗೆಂದು ರೂ. ೫೨ ಕೋಟಿಯನ್ನು ನಿಗದಿಪಡಿ ಸಿದ್ದರೂ ಕೂಡ ೧೯೬೫ ರ ವೇಳೆಗೆ ಕೇವಲ ರೂ. ೩೮ ಕೋಟಿಯನ್ನು ವೆಚ್ಚಮಾಡಲು ಸಾಧ್ಯವೆನಿಸಿತು. ಅರಣ್ಯಗಳ ವಿಸ್ತರಣೆಯು ಎಲ್ಲ ಭಾಗಗಳಲ್ಲೂ ಪ್ಲಾಂಟೇಷನ್ ಹೂಡು. ಕಾಡು ವಿಸ್ತರಣೆ. ಅರಣ್ಯಗಳಲ್ಲಿ ಕಾಲುದಾರಿಯನ್ನು ನಿರ್ಮಿಸುವುದು ಇತ್ಯಾದಿ ಕಾರ್ಯವು ಗುರಿಯಿಂದ ಬಹು ಹಿಂದೆ ಬಿದ್ದಿತು. ನಾಲ್ಕನೆ ಯೋಜನೆಯಲ್ಲಿ

ಅರಣ್ಯ ಸುಧಾರಣೆಗೆ ಗೊತ್ತುಪಡಿಸಿದ ಗುರಿಗಳೆಂದರೆ (i) ಶೀಘ್ರ ಬೆಳೆಯುವ ವೃಕ್ಷ ಜಾತಿಗಳನ್ನು ೩ ಲಕ್ಷ ಹೆಕ್ಟೇರುಗಳಿಗೆ ವಿಸ್ತರಿಸುವುದು: (ii) ೩,೫೦೦ ಹೆಕ್ಟೇರುಗಳಲ್ಲಿ ಉತ್ತಮ ದರ್ಜೆಯ ಮರಗಳೆನಿಸಿದ ತೇಗು ಮತ್ತು ಬೀಟೆಗಳ ನೆಟ್ಟಿ: (iii) ೨ ಲಕ್ಷ ಹೆಕ್ಟೇರುಗಳಲ್ಲಿ ತೋಪುಗಳನ್ನು ಬೆಳೆಸುವ ಕಾರ್ಯಕ್ರಮ: (iv) ಉರುವಲು ಕಟ್ಟಿಗೆ ಜಾತಿಯ ಬೆಳೆಯನ್ನು ದ್ವೈಸರ್ ಅರಣ್ಯಗಳಲ್ಲಿ ಉತ್ತೇಜಿಸುವುದು. ಈ ಎಲ್ಲ ಕಾರ್ಯ ಕ್ರಮಗಳಿಗೆಂದು ೧೨೨ ಕೋಟಿ ರೂ. ಗಳನ್ನು ಯೋಜನೆಯಲ್ಲಿ ನಿಗದಿಪಡಿಸಿತು. ಯೋಜನಾಂತ್ಯದಲ್ಲಿ ಕೆಲವು ವಿಭಾಗಗಳಲ್ಲಿ ನಿರ್ದಿಷ್ಟಪಡಿಸಿದ ಗುರಿಗಿಂತ ಬಹು ಕಡಿಮೆ ಸಾಧನೆಯಾದರೂ ಪ್ರಮಾಣಬದ್ಧವಾದ ಹರಿವಿನ ದೃಷ್ಟಿಯಿಂದ ಅರಣ್ಯದ ವಿವಿಧ ಉಪಕಾರ್ಯ ಯೋಜನೆಗಳಲ್ಲಿ ಸಾಮರಸ್ಯ ಏರ್ಪಡಲಿಲ್ಲ, ಬೆಳೆಸಿದ ಹೊಸ ಕಾಡುಗಳ (ಪ್ಲಾಂಟೇಶನ್ ಅಥವಾ ತೋಪುಗಳು) ವಿಸ್ತರಣೆಯಲ್ಲಿ ಯಾವ ಪ್ರಗತಿಯನ್ನೂ ಇನ್ನೂ ಸಾಧಿಸಿಲ್ಲವೆಂದೇ ಹೇಳಬೇಕು. ಕೆಲವು ದೇಶಗಳಲ್ಲಿ ಪ್ಲಾಂಟೇಶನ್ ಅರಣ್ಯಗಳು ಶೇಕಡ ೧೦೦ ಇದ್ದರೆ ಭಾರತದಲ್ಲಿ ಅರಣ್ಯದ ಶೇಕಡ ೩ರಷ್ಟು ಇರುವುದು. ಸ್ವಾಭಾವಿಕ ಕಾಡುಗಳನ್ನು ಮಾನವ ನಿರ್ಮಿತ ಕಾಡುಗಳಿಗೆ ಮಾರ್ಪಡಿಸುವುದು ಉದ್ದೇಶವಾಗಿರದೆ ಅವುಗಳ ಜೊತೆಗೆ ಹೊಸಕಾಡುಗಳನ್ನು ಔದ್ಯಮಿಕ ವೃಕ್ಷ ಜಾತಿಗಳ ನೆಟ್ಟಿನಿಂದ ವಿಸ್ತರಿಸುವುದೆ ನಮ್ಮ ಗುರಿಯಾಗಬೇಕು.

೫ನೆ ಯೋಜನೆಯಲ್ಲಿ ಹಿಂದಿನ ಕಾರ್ಯಕ್ರಮಗಳನ್ನು ಮುಂದುವರಿಸಲಾಯಿತಾದರೂ ಔದ್ಯಮಿಕ ಮರಮುಟ್ಟುಗಳಿಗೆ ಮತ್ತು ಆಧುನಿಕ ಚಿಕಿತ್ಸಾ ವಿಧಾನಗಳಿಗೆ ವಿಶೇಷ ಗಮನವನ್ನು ಕೊಟ್ಟಿತು. ಪ್ರಾಯೋಗಿಕವಾಗಿ ಕೆಲವು ಪ್ರಾದೇಶಿಕ ಅರಣ್ಯಗಳಲ್ಲಿ ಸಾಂದ್ರ ಘಟಕ ಯೋಜನೆಯನ್ನು ಅಂತಾರಾಷ್ಟ್ರೀಯ ಬ್ಯಾಂಕಿನ ನೆರವಿನಿಂದ ಸಂಯೋಜಿಸಲಾಯಿತು. ಇತ್ತೀಚೆಗೆ ಈ ಪ್ಲಾಂಟೇಷನ್ ಪ್ರಾಜೆಕ್ಟುಗಳನ್ನು ಅನೇಕ ರಾಜ್ಯಗಳಿಗೆ ವಿಸ್ತರಿಸಲಾಗಿದೆ. ಪ್ರಸಕ್ತ ಯೋಜನೆಯಲ್ಲಿ ಅರಣ್ಯಾಭಿವೃದ್ಧಿಗೆಂದು ರೂ ೨೦೦ ಕೋಟಿಯನ್ನು ಕಾದಿರಿಸಿದ್ದಿದೆ. ಅರಣ್ಯ ವಿಭಾಗದಲ್ಲಿ ಉದ್ಯೋಗಾವಕಾಶಗಳನ್ನು ಕಲ್ಪಿಸುವುದಕ್ಕಾಗಿ ಇನ್ನೂ ಹೆಚ್ಚಿನ ಹಣವನ್ನು ಹೂಡುವ ಸಾಧ್ಯತೆ ಇರುತ್ತದೆ.

ನಮ್ಮ ಮುಂದಿನ ದಶಕದ ಔದ್ಯೋಗಿಕ ಮರದ ಬೇಡಿಕೆಯನ್ನು ಅಂದಾಜಿಸುವುದಾದರೆ. ಕಾಗದ ಮತ್ತು ನ್ಯೂಸ್‌ಪ್ರಿಂಟ್‌ಗಳ ಉದ್ದಿಮೆಯೊಂದರಿಂದಲೆ ಮೃದು ಹಾಗೂ ಮಧ್ಯಮ ತರಗತಿಯ ಮರಗಳ ಮೇಲಿನ ಒತ್ತಡವು ಕಾದಿದ್ದಿದೆ. ಕಾಗದ ಕೈಗಾರಿಕೆಯ ಮರದ ಬೇಡಿಕೆಯು ಕನಿಷ್ಟ ೧೫೦ ಲಕ್ಷ ಕ್ಯೂಬಿಕ್ ಮೀಟರುಗಳಿಗೇರುವುದು. ಈ ವರೆಗೆ ಈ ಉದ್ದಿಮೆಯು ಬೊಂಬಿನ ಪೂರೈಕೆಯನ್ನು ಅವಲಂಬಿಸಿದೆ. ಆದರೆ ಬೊಂಬು, ಬೇಡಿಕೆಯ ಪ್ರಮಾಣದಲ್ಲಿ, ವೃದ್ಧಿಯಾಗುತ್ತಿಲ್ಲ. ಕೆಲವು ಪ್ರದೇಶಗಳಲ್ಲಿ ಸ್ವಾಭಾವಿಕ ಕಾರಣಗಳಿಗಾಗಿ ಬೊಂಬಿನ ಮೆಳೆ ನಾಶವಾಗುತ್ತದೆ. ಆದ್ದರಿಂದ ಬೊಂಬಿಗೆ

ಬದಲಾಗಿ ಇತರೆ ಮೃದು ಮರಗಳ ಹಾಗೂ ನಾರು ಸಿಪ್ಪೆಗಳ ಬಳಕೆಯನ್ನು ರೂಢಿಸುವುದರಿಂದ ಮಾತ್ರ ಅಧಿಕ ಬೇಡಿಕೆಯನ್ನು ಈಡೇರಿಸುವುದು ಸಾಧ್ಯ. ಇದಕ್ಕಂದೇ ಶೀಘ್ರ ಜಾತಿಯ ವೃಕ್ಷಗಳನ್ನು ಬೆಳೆಯಲು ಉಪಕ್ರಮಿಸಬೇಕು. ನ್ಯೂಸ್ ಪ್ರಿಂಟಿನ ಕ್ಷಾಮ ವಂತೂ ನಮ್ಮಲ್ಲಿ ನಿರಂತರವಾಗಿಯೇ ಉಳಿದಿದೆ. ಹಾಲಿ ಉತ್ಪಾದನೆಯು ೪೫ ಸಾವಿರ ಟನ್ ಎಂದು ಹೇಳಲಾಗುತ್ತಿದೆ. ಇದು ನಮ್ಮ ವಾರ್ಷಿಕ ಬೇಡಿಕೆಗೆ ಎಷ್ಟೋ ಪಟ್ಟು ಹಿಂದುಳಿದಿದೆ. ಬಹುಶಃ ದೇಶದ ಪ್ರಸಕ್ತ ಅವಶ್ಯಕತೆ ೬ ಲಕ್ಷ ಟನ್ ಇರುತ್ತದೆಂದು ಹೇಳಲಾಗಿದೆ. ಸದ್ಯದಲ್ಲಿ ನ್ಯೂಸ್ ಪ್ರಿಂಟನ್ನು ಕೆನಡಾ ಹಾಗೂ ರಷ್ಯ ದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ನ್ಯೂಸ್ ಪ್ರಿಂಟಿನ ಉತ್ಪಾದನೆಯ ಹೆಚ್ಚಳಕ್ಕೆ ಬೇಕಾದ ಕಚ್ಚಾ ವಸ್ತುವಿನ ಪೂರೈಕೆಯನ್ನು ನೀಲಗಿರಿ ಮರದ ಬಳಕೆಯೊಂದರಿಂದ ಮಾತ್ರ ಒದಗಿಸಬಹುದು. ಸಾಂಪ್ರದಾಯಿಕ ಮೂಲಗಳು ಇನ್ನು ವೃದ್ಧಿಯಾಗಲಾರವು. ಆದ್ದರಿಂದ ಈ ಮರದ ತೋಟಗಾರಿಕೆಯನ್ನು ನ್ಯೂಸ್ ಪ್ರಿಂಟ್ ಮಿಲ್‌ಗಳಿಗೆ ಹೊಂದಿಕೊಂಡಂತೆ ಯೋಜಿಸುವುದು ವಿಹಿತ ಕ್ರಮ.

ಇದಲ್ಲದೆ ನಮ್ಮ ಅನೇಕ ಉದ್ದಿಮೆಗಳಿಗೆ ಮಚ್ಚೆ, ದೋಣಿ, ಹಡಗು ನಿರ್ಮಾಣ ಇತ್ಯಾದಿಗಳಿಗೆ ಗಟ್ಟಿ ಮರದ ಬೇಡಿಕೆಯು ಇಂದಿನ ೧೬ ಲಕ್ಷ ಕ್ಯೂಬಿಕ್ ಮೀಟರುಗಳಿಂದ ೫೦ ಲಕ್ಷ ಕ್ಯೂಬಿಕ್ ಮೀಟರುಗಳಿಗೆ ಏರುವುದೆಂದು ಅಂದಾಜಿಸಲಾಗಿದೆ. ಇಂದಿನ ಅರಣ್ಯ ಧೋರಣೆಯಲ್ಲಿಯ ಪ್ರಗತಿಯನ್ನು ಗಮನಿಸಿದರೆ ಬಹುಶಃ ಇದು ಎಟುಕದ ಗುರಿಯೆಂದೇ ಹೇಳಬೇಕು. ಸದ್ಯದಲ್ಲಿ ಭಾರತದ ತಲಾ ಉಪಭೋಗ ೦.೨೨ ಕ್ಯೂಬಿಕ್ ಮೀಟರು, ಅಮೆರಿಕೆಯಲ್ಲಿ ೧.೮ ಕ್ಯೂಬಿಕ್ ಮೀಟರು, ಯುರೋಪಿನಲ್ಲಿ .೭೪ ಕ್ಯೂಬಿಕ್ ಮೀಟರು ಮತ್ತು ಆಫ್ರಿಕೆಯಲ್ಲಿ. ೫೪ ಎಂದು ರಾಷ್ಟ್ರೀಯ ಒಕ್ಕಲುತನ ಆಯೋಗವು ಕೆಲವು ವರುಷಗಳ ಹಿಂದೆ ಹೇಳಿರುವುದನ್ನು ಲಕ್ಷಿಸಿದರೆ ನಮ್ಮ ಅರಣ್ಯಧೋರಣೆಯಲ್ಲಿ ಮೂಲಭೂತ ಬದಲಾವಣೆ ಎಷ್ಟು ಅವಶ್ಯಕವೆಂಬುದನ್ನು ಸೂಚಿಸುತ್ತದೆ. ಸದ್ಯದ ಅರಣ್ಯಗಳಲ್ಲಿ ಸಾಂದ್ರತೆಯನ್ನು ಹೆಚ್ಚಿಸುವುದಲ್ಲದೆ ೫ ಲಕ್ಷ ಹೆಕ್ಟೇರುಗಳ ವಿಸ್ತಾರದಲ್ಲಿ ಹೊಸ ಅರಣ್ಯಗಳನ್ನು ನಿರ್ಮಿಸುವುದು ಬರುವ ಹತ್ತು ವರ್ಷಗಳಲ್ಲಿ ನಮ್ಮ ಕನಿಷ್ಠ ಕಾರ್ಯಕ್ರಮವಾಗಬೇಕು. ಈ ಕಾರ್ಯಕ್ರಮಗಳಿಗೆ ಹೂಡುಮೊತ್ತ ಹತ್ತುವರುಷಗಳಲ್ಲಿ ೧೨೦೦ ಕೋಟಿಗಳಾಗಬಹುದು. ಈ ಹೂಡಿನಿಂದ ತಕ್ಷಣದಲ್ಲಿ ಒದಗಿಬರುವ ಪ್ರಯೋಜನವೆಂದರೆ ಭಾರೀ ಪ್ರಮಾಣದಲ್ಲಿ ಉದ್ಯೋಗ ನಿರ್ಮಾಣ.

ಅರಣ್ಯ ಸಂಪತ್ತಿಯನ್ನು ವೃದ್ಧಿಮಾಡುವ ಕಾರ್ಯಕ್ರಮದಿಂದ ಒದಗಿಬರುವ ಉದ್ಯೋಗಾವಕಾಶ ಬಹುಶಃ ಒಕ್ಕಲುತನ ಉದ್ದಿಮೆ ರಂಗಗಳಿಗಿಂತಲೂ ಮಿಗಿಲೆಂಬುದು ಅನೇಕರಿಗೆ ತಿಳಿದಿರದು. ಅರಣ್ಯ ವ್ಯವಸಾಯದಲ್ಲಿ ಎಲ್ಲ ಹಂತಗಳಲ್ಲಿ ಮಶಿನರಿಗಿಂತ ಶ್ರಮಿಕರ ಅವಶ್ಯಕತೆ ಉದ್ಭವಿಸುತ್ತದೆ. ಗಿಡಗಳನ್ನು ನೆಡುವುದು, ಕಾಲುವಾರಿ ಮಾಡು

ವುದು, ಫಾರಗಳನ್ನು ಕಡಿಯುವುದು ಸಾಗಿಸುವುದು, ಇತ್ಯಾದಿ ಹಲವಾರು ಭಾಗಗಳಲ್ಲಿ ಕುಶಲ ಮತ್ತು ಅರೆಕುಶಲ ಕರ್ಮಚಾರಿಗಳ ಅವಶ್ಯಕತೆ ಇರುತ್ತದೆ. ಆದ್ದರಿಂದ ಕಾಡು ಗಳಲ್ಲಿ ಉದ್ಯೋಗ ಸಾಧ್ಯತೆ ಯಾವತ್ತೂ ಅಧಿಕ. ಕ್ಷಿಪ್ರದಲ್ಲಿ ಅರಣ್ಯಗಳು ೫ ಲಕ್ಷ ಉದ್ಯೋಗಗಳನ್ನು ಒದಗಿಸಬಲ್ಲುವೆಂದು ತಜ್ಞರ ಮತ.

ಸಲಹೆ ಸೂಚನೆಗಳು : ೧೯೫೨ರ ಅರಣ್ಯ ಧೋರಣೆಯು ಗೊತ್ತುವಳಿಯು ಗ್ರಾಹ್ಯವೆನಿಸಬಹುದಾದ ಮುಂಧೋರಣೆಯನ್ನು ರೂಪಿಸಿತಾದರೂ, ಯೋಜನೆಗಳಲ್ಲಿ ಅದಕ್ಕೆ ತಕ್ಕುದಾದ ಅನ್ವಯಿತ ಕಾರ್ಯಕ್ರಮಗಳನ್ನು ರೂಪಿಸುವುದರಲ್ಲಿ ಅಷ್ಟೇ ಮುಂಜಾಗ್ರತೆಯನ್ನು ವಹಿಸಲಿಲ್ಲ. ಅಲ್ಲದೆ ಒಕ್ಕಲುತನ ಧೋರಣೆಯು ಅರಣ್ಯಕ್ಕೆ ಪೂರಕ ವೆಂಬಂತೆ ತಿಳಿಯಲ್ಪಡದೆ, ಅಧಿಕ ಭೂಮಿಯ ಬಿಡುಗಡೆಯ ನೆಪದಲ್ಲಿ ಅರಣ್ಯ ಧೋರ ಣೆಗೆ ಘಾತವನ್ನೇ ಎಸಗಿತು. ಅದೃಷ್ಟವಶಾತ್ ಭಾರತದ ಅರಣ್ಯಾಡಳಿತವು ಮಿಷ್ಯ ದಲ್ಲೇ ದಕ್ಷವಾದ ಬುನಾದಿಯ ಮೇಲೆ ರಚಿತವಾಗಿದೆ. ಆದರೂ ಅನೇಕ ಒತ್ತಡಗಳ ಕಾರಣದಿಂದ ಅರಣ್ಯರಕ್ಷಣೆ ಹಾಗೂ ಉತ್ಪಾದನೆ ಹಿಂದೆಬೀಳುತ್ತಲಿದೆ. ಕೇಂದ್ರ ಹಾಗೂ ರಾಜ್ಯಗಳಲ್ಲಿ ಅರಣ್ಯಗಳ ಮಂತ್ರಿಶಾಖೆಯನ್ನು ಪುನಾರಚಿಸುವುದು ಈ ಒತ್ತಡಗಳನ್ನು ತಡೆಯಬಹುದು. ಹೆಕ್ಟರುವಾರು ಅರಣ್ಯ ಹೂಡು ಈಗಿನವರೆಗೆ ಇಂತಿರುವುದು ಮೊದಲ ಯೋಜನೆಯಲ್ಲಿ ರೂ. ೨೮೦ ಲಕ್ಷ, ಎರಡನೆಯದರಲ್ಲಿ ರೂ, ೯೧೫ ಲಕ್ಷ, ಮೂರನೆಯದರಲ್ಲಿ ರೂ.೪೬೨ ಲಕ್ಷ, ನಾಲ್ಕನೆಯವರಲ್ಲಿ ರೂ.೬೨೪ ಲಕ್ಷ, ಐದನೆಯದರಲ್ಲಿ ರೂ. ೭೫೦ ಲಕ್ಷ. ಅಂತರರಾಷ್ಟ್ರೀಯ ತುಲನೆಯಿಂದ ಇದು ಬಹು ಕಡಿಮೆ. ಸ್ವಾಭಾವಿಕ ಅರಣ್ಯಗಳನ್ನು ರಕ್ಷಿಸಿ ಅರಣ್ಯಗಳನ್ನು ಕೇವಲ ಆರ್ಥಿಕ ಪ್ರಯೋಜನಕ್ಕೆಂದೆ ಬಳಸು ವುದು ಪ್ರಧಾನ ಉದ್ದೇಶವಾಗಬೇಕು. ಪ್ರತಿ ಜಿಲ್ಲೆಗೂ ಒಂದು ಆದರ್ಶ ಅರಣ್ಯ ಪ್ರದೇಶ ಯೋಜನೆಯನ್ನು ಗುರುತಿಸಿ ಅದರ ಕಾರ್ಯವನ್ನು ಎರಡು ಮೂರು ವರ್ಷಗಳಲ್ಲಿ ಪೂರ್ಣಗೊಳಿಸುವುದು ಉಚಿತವೆನಿಸುತ್ತದೆ. ಮೈನರ್ ಕಾಡುಗಳಲ್ಲಿ ಬೆಳೆಯುವ ಮೇವನ್ನು ಕ್ರಮವಾಗಿ ಸಂಗ್ರಹಿಸುವುದನ್ನು ಪೂರ್ಣ ನಿರ್ಲಕ್ಷಿಸಲಾಗಿದೆ. ಅರಣ್ಯ ಪ್ರದೇಶ ಗಳಲ್ಲೆ ಸ್ಥಾನಿಕವಾಗಿ ಅರಣ್ಯಾಧಾರಿತ ಉದ್ದಿಮೆಗಳ ಸಂಕೀರ್ಣ ಘಟಕಗಳನ್ನು ನಿರ್ಮಿಸು ವುದು ಈಗಿನ ಪೋಲನ್ನು ನಿವಾರಿಸುವುದಲ್ಲದೆ ಆರ್ಥಿಕ ವೆಚ್ಚವನ್ನೂ ತಗ್ಗಿಸುವುದು. ಕಾಡನ್ನು ಕಡಿದಂತೆ ಅದೇ ಸ್ಥಳದಲ್ಲಿ ಗಿಡ–ಗಂಟೆಗಳನ್ನು ನೆಡುವುದು ಒಂದೇ ಕಾರ್ಯದ ಎರಡು ಹಂತಗಳೆಂದು ಪರಿಗಣಿಸಲ್ಪಡಬೇಕು. ಖಾಸಗಿ ಕಂಟ್ರಾಕ್ಟರುಗಳಿಗೆ ಅರಣ್ಯದ ಭಾಗವನ್ನು ಕುಯ್ಲಿಗೆ ವಹಿಸಿಕೊಟ್ಟಾಗಲೂ ವೃಕ್ಷಾರೋಪಣ ಅವರ ಕಾರ್ಯವೆಂದೇ ತಿಳಿಯತಕ್ಕದ್ದು. ಖಾಸಗಿ ಅರಣ್ಯಗಳನ್ನು ಪ್ರೋತ್ಸಾಹಿಸಬೇಕು. ಕೆಲವು ವಿಶಿಷ್ಟ ಮತ್ತು ನಮೂದಿತ ವೃಕ್ಷಗಳನ್ನು ಬೆಳೆಸುವುದೂ ಒಂದು ಕಿರಿ ಉದ್ದಿಮೆಯೆಂದು ತಿಳಿದು ಒಕ್ಕಲುತನಕ್ಕೆ ನೀಡುವ ಎಲ್ಲ ರಿಯಾಯಿತಿಗಳನ್ನೂ ಕೊಡುವಂತಾಗಬೇಕು.

ಪಟ್ಟಿ ೩

ರಾಜ್ಯವಾರು ವಾರ್ಷಿಕ ಮರ ಉತ್ಪಾದನೆ (೧೯೭೦–೭೧)

(೦೦೦ ಕ್ಯೂಬಿಕ್ ಮೀಟರ)

ರಾಜ್ಯ.	ಔದ್ಯಮಿಕ ಮರ.	ಕಟ್ಟಿಗೆ, ಇಜ್ಜಲು.	ಮೊತ್ತ.
ಆಂಧ್ರ ಪ್ರದೇಶ	೩೧೪	೭೩೫	೧೦೪೯
ಆಸ್ಸಾಂ	೩೭೯	೩೭೮	೭೫೭
ಬಿಹಾರ	೩೬೭	೩೦೦	೬೬೭
ಗುಜರಾತ	೧೯೬	೨೪೫	೪೪೧
ಹರಿಯಾಣ	೧೮	೨೦	೩೮
ಹಿಮಾಚಲ ಪ್ರದೇಶ	೫೩೪	೧೨೮	೬೬೨
ಜಮ್ಮೂ ಕಾಶ್ಮೀರ	೩೭೧	೯೦	೪೬೧
ಕೇರಳ	೫೯೦	೪೬೮	೧೦೫೮
ಮಧ್ಯಪ್ರದೇಶ	೨೬೯೦	೨೨೮೫	೪೯೭೫
ಮಹಾರಾಷ್ಟ್ರ	೪೦೭	೧೯೭೧	೨೩೭೮
ಕರ್ನಾಟಕ	೪೬೬	೧೧೭೮	೧೬೬೪
ನಾಗಾಲ್ಯಾಂಡ್	೧೧	೬	೧೭
ಓರಿಸ್ಸ	೭೧೧	೭೩೯	೧೪೫೦
ರಾಜಸ್ಥಾನ	೬೫	೯೫	೧೬೦
ತಮಿಳನಾಡು	೨೨೯	೩೫೩	೫೮೨
ಉತ್ತರ ಪ್ರದೇಶ	೧೨೭೨	೨೪೪೫	೩೭೧೭
ಬಂಗಾಲ	೨೩೬	೬೭೦	೯೦೬
ಕೇಂದ್ರಾಡಳಿತ ಪ್ರದೇಶಗಳು.	೩೬೨	೨೩೪	೪೯೬
ಒಟ್ಟು	**೯,೧೫೭**	**೧೨,೩೮೬**	**೨೧,೫೪೩**

ಮೂಲ : Central Forestry Commission Bulletin No. 13. 1972.

ಪಟ್ಟಿ ೪

ರಾಜ್ಯವಾರು ಅರಣ್ಯೋತ್ಪಾದನೆಯ ಮೌಲ್ಯ (೧೯೬೪-೬೫ ರಲ್ಲಿ)

ರಾಜ್ಯ	ಅರಣ್ಯಗಳ ಪ್ರಧಾನ ಉತ್ಪಾದನಾ (ಮೌಲ್ಯ ೦೦೦ ರೂ.ನಲ್ಲಿ)	ಆ. ಮೈನರ್ ಉತ್ಪಾದನಾ ಮೌಲ್ಯ (೦೦೦ ರೂ.ನಲ್ಲಿ)	ಒಟ್ಟು	ತಲಾ ಮೂಲ
ಆಂಧ್ರಪ್ರದೇಶ	೨೯,೧೩೧	೧೫,೫೪೯	೪೪೬೮೦	೧.೧೪
ಅಸ್ಸಾಂ	೧೧೪	೫,೮೧೪	೬೦೨೮	೦.೪೫
ಬಿಹಾರ	೧೯೧೪೨	೮೫೩೨	೨೭೬೭೪	೦.೫೪
ಗುಜರಾತ	೧೮೧೨೫	೩೭೦೮	೨೧೮೩೩	೦.೯೪
ಜಮ್ಮುಕಾಶ್ಮೀರ	೯೩.೩೪೦	೨೩೪೫	೯೫೬೮೫	೨೫.೩೧
ಕೇರಳ	೪೫.೬೮೮	೧೦೬೭	೪೬೭೫೫	೨.೪೮
ಮಧ್ಯಪ್ರದೇಶ	೧೧೦.೧೭೮	೨೩,೮೮೬	೧೩೪.೦೬೪	೩.೭೨
ಮಹಾರಾಷ್ಟ್ರ	೬೪೩.೨೩	೧೦೨೭೧	೭೪೫೯೪	೧.೬೯
ಕರ್ನಾಟಕ	—	೧೩,೨೬೩	—	—
ನಾಗಾಲ್ಯಾಂಡ್	—	—	—	—
ಒರಿಸ್ಸ	೧೬೪೨೯	೧೧೮೪೭	೨೮೨೭೬	೧.೪೬
ಪಂಜಾಬ್	೧೮೬೭೮	೯೭೦೦	೨೮೩೭೮	೧.೩೩
ರಾಜಸ್ಥಾನ್	೨೮೬೫೦	೫೦೦೦	೩೩೬೫೦	೧.೪೮
ತಮಿಳುನಾಡು	೮೯೫೮	೩,೨೦೦	೧೨೧೬೮	೦.೩೪
ಉತ್ತರ ಪ್ರದೇಶ	೨೧೩೪೮	೧೩೩೭	೨೨೬೮೫	೦.೨೮
ಕೇಂದ್ರಾಡಳಿತ ಪ್ರದೇಶಗಳು	೪೮೭೫೪	೧೧೦೫೫	೫೯೮೦೯	೫.೭೫
ಒಟ್ಟು	೫೮೫೬೩೦	೧೫೮೬೦೩	೭೪೪೨೩೩	೧.೫೩

ಮೂಲ : Indian Agriculture in Brief. 1970,

ಪಟ್ಟಿ ೫

ಅರಣ್ಯಗಳ ಮೇಲಿನ ವೆಚ್ಚ ಮತ್ತು ವರಮಾನ (೧೯೬೯-೭೦)

ಲಕ್ಷ ರೂ.ಗಳಲ್ಲಿ

ರಾಜ್ಯ	ಒಟ್ಟು ವೆಚ್ಚ	ವರಮಾನ
ಆ. ಪ್ರ	೩೧೦·೪೬	೬೦೧·೧೬
ಅಸ್ಸಾಂ	೧೯೩·೬೯	೩೭೬·೮೭
ಬಿಹಾರ	೨೫೩·೦೪	೪೦೧·೫೧
ಗುಜರಾತ	೨೧೬·೮೬	೪೪೨·೩೦
ಹರಯಾಣ	೭೯·೭೬	೩೪·೪೪
ಹಿ. ಪ್ರ	೫೫೯·೬೬	೬೫೨·೩೫
ಜಮ್ಮು ಕಾಶ್ಮೀರ	೨೧೯·೬೧	೪೯೦·೦೦
ಕೇರಳ	೩೧೩·೦೬	೮೨೨·೮೯
ಮ. ಪ್ರ	೭೬೫·೫೫	೨೫೮೬·೧೩
ಮಹಾರಾಷ್ಟ್ರ	೮೯೧·೩೪	೮೫೯·೭೯
ಕರ್ನಾಟಕ	೭೧೦·೮೪	೧೪೦೧·೫೬
ನಾಗಾಲ್ಯಾಂಡ್	೩೨·೬೬	೧೫·೧೮
ಓರಿಸ್ಸಾ	೩೯೧·೩೨	೬೫೮·೨೯
ಪಂಜಾಬ	೧೨೪·೭೦	೬೪·೩೩
ರಾಜಸ್ಥಾನ	೧೫೫·೭೫	೧೦೦·೧೮
ತಮಿಳನಾಡು	೨೭೦.೯೧	೩೩೫·೧೬
ಉ. ಪ್ರದೇಶ	೭೩೫·೮೭	೨೦೨·೧೪
ಪ. ಬಂಗಾಲ	೨೨೭·೩೫	೨೪೪·೪೦
ಮಣಿಪುರ	೭·೭೦	೫·೩೪
ತ್ರಿಪುರ	೪೯·೯೯	೧೯·೩೭

ಮೂಲ : Forest Statistics Bulletin No. 12

ಪಟ್ಟಿ ೬

ಅರಣ್ಯದಲ್ಲಿ ಮತ್ತು ಅರಣ್ಯಾಧಾರಿತ ಉದ್ದಿಮೆಯಲ್ಲಿ ದೈನಂದಿನ ಉದ್ಯೋಗ ಪ್ರಮಾಣ

ವರ್ಷ	ಅರಣ್ಯದಲ್ಲಿ	ಉದ್ದಿಮೆಯಲ್ಲಿ	ಒಟ್ಟು
೧೯೪೯.೫೦	೪೫೮೦೩೯	೧೧೨೦೬೪	೫೭೦೧೦೩
೧೯೫೧.೫೨	೩೭೩೩೩೪	೫೩೧೦೫	೪೨೬೪೩೯
೧೯೫೫.೫೬	೩೩೦೯೧೧	೫೩೭೬೬	೩೮೪೬೭೭
೧೯೬೦.೬೧	೪೯೬೮೫೦೬	೨೦೧೭	೪೯,೭೦,೫೨೩
೧೯೬೪.೬೫	೮೮೮೧೨೧೫	೧೧೬೭೫	೮೮೯೨೮೯೦

ಮೂಲ : C. S. O.

ಅನುಬಂಧ

ಆರನೆ ಯೋಜನೆಯಲ್ಲಿ ಅರಣ್ಯ ಧೋರಣೆ :

ಈ ಲೇಖನವು ಪೂರ್ಣಗೊಳ್ಳುತ್ತಿರುವಂತೆ ೧೯೭೮–೮೩ ರ ಕರಡು ಯೋಜನೆಯು ಪ್ರಕಟವಾಗಿದೆ. ಈ ಬೃಹದ್ಯೋಜನೆಯಲ್ಲಿ ಅರಣ್ಯಗಳಿಗೆ ಗೊತ್ತುಪಡಿಸಿರುವ ಗುರಿ ಗಮನಗಳನ್ನು ಈ ಅನುಬಂಧದಲ್ಲಿ ಲಕ್ಷಿಸಲಾಗಿದೆ.

ಅರಣ್ಯಜನ್ಯ ವಸ್ತುಗಳ ಬೇಡಿಕೆಯನ್ನು ಪೂರೈಸುವದು: ಅರಣ್ಯದ ಪರಿಶುದ್ಧತೆಯನ್ನು ರಕ್ಷಿಸುವುದು: ಮತ್ತು ದುರ್ಬಲ ವರ್ಗದ ಜನಕ್ಕೆ ಉದ್ಯೋಗಾವಕಾಶವನ್ನು ವಿಸ್ತರಿಸುವುದು ಇವುಗಳು ಅರಣ್ಯಾಭಿವೃದ್ಧಿಯ ಲಕ್ಷ್ಯವೆಂದು ಗೊತ್ತುಪಡಿಸಲಾಗಿದೆ. ಆದ್ದರಿಂದ ಅಭಿವೃದ್ಧಿಯ ಮುಖ್ಯ ಮುಖಗಳೆಂದರೆ—

i) ಉತ್ಪಾದನೋದ್ದೇಶಿತ ವಿಪಿನಾಡಳಿತವನ್ನು ಚುರುಕುಗೊಳಿಸುವುದು.

ii) ಒಕ್ಕಲುತನವನ್ನು ಒಳಗೊಂಡಂತೆ ಸಾಮಾಜಿಕ ವಿಪಿನತೆಯನ್ನು ವಿಸ್ತರಿಸುವುದು: ಮತ್ತು

iii) ಕಾಡುಗಳಲ್ಲಿ ಹಾಗು ಅದರ ಸುತ್ತುಮುತ್ತ ವಾಸಿಸುವ ಜನರ ಆರ್ಥಿಕಕ್ಕೆ ಹೊಂದಿಸುವ ಪರಿಯಲ್ಲಿ ವಿಪಿನಾಭಿವೃದ್ಧಿಯನ್ನು ಕೈಗೊಳ್ಳುವುದು.

ಅರಣ್ಯದ ಅಧೀನದಲ್ಲಿ ಅನೇಕ ಸಂಘಟನಾ ವ್ಯವಹಾರಗಳನ್ನು ರಾಜ್ಯ ಸರಕಾರಗಳು ಇತ್ತೀಚೆಗೆ ಕೈಕೊಂಡಿವೆ. ಅನೇಕ ರಾಜ್ಯಗಳಲ್ಲಿ ಅರಣ್ಯ ನಿಗಮಗಳನ್ನು ರಚಿಸಲಾಗಿದೆ. ಬರುವ ವರ್ಷಗಳಲ್ಲಿ ಈ ವ್ಯವಹಾರಗಳನ್ನು ಬಲಗೊಳಿಸುವುದಲ್ಲದೆ ಏರುತ್ತಿರುವ ಬೇಡಿಕೆಯನ್ನು ಸಂಧಿಸುವಂತೆ ಶೀಘ್ರ ಬೆಳೆಯುವ ವೃಕ್ಷಜಾತಿಗಳ ತೋಟವನ್ನು ವಿಸ್ತರಿಸಲಾಗುವುದು. ಮುಂದಿನ ಐದು ವರ್ಷಗಳ ಅವಧಿಯಲ್ಲಿ ಉತ್ಪಾದನೋದ್ದೇಶಿತ ವಿಪಿನತೆಯು ವರ್ಷ ಪ್ರತಿ ೨.೭೫.೦೦೦ ಹೆಕ್ಟೇರುಗಳನ್ನು ಒಳಗೊಳ್ಳುವುದೆಂದು ಅಂದಾಜಿಸಲಾಗಿದೆ. ಈ ಉತ್ಪಾದನಾ ಕಾರ್ಯಕ್ರಮದ ಮುಖ್ಯ ವಸ್ತುಗಳೆಂದರೆ ಶೀಘ್ರ ಬೆಳೆಯುವ ಗಟ್ಟಿಮರಗಳನ್ನು ನೆಡುವುದು. ಇದಕ್ಕಾಗಿ ರಾಜ್ಯಸರಕಾರಗಳೊಡನೆ ಕೇಂದ್ರವೂ ಸಹಕರಿಸುವುದು. ಭಾರತೀಯ ಅರಣ್ಯಗಳ ಸರ್ವೆಯೊಂದನ್ನು ಸಂಘಟಿಸುವ ಮೂಲಕ ಅರಣ್ಯಾಭಿವೃದ್ಧಿಯ ಮೂಲ ಅವಶ್ಯಕತೆಯೊಂದನ್ನು ಪೂರ್ಣಗೊಳಿಸಿದಂತಾಗುವುದು. ಅಲ್ಲದೆ ಕೇಂದ್ರೀಯ ಅರಣ್ಯ ಸರ್ವಿಸನ್ನು ಇಡಿಯಾಗಿ ನವೀಕರಿಸುವುದೂ ಒಕ್ಕೂಟದ ಜವಾಬ್ದಾರಿ.

ii) ಪಾಳು ಬಿದ್ದಿರುವ ಭೂಮಿಯಲ್ಲಿ. ಪಂಚಾಯತಿ ಭೂಮಿಯಲ್ಲಿ. ನಾಲಾ ಮತ್ತು ರೇಲ್ವೆ ಹಳಿಗಳ ಇಕ್ಕೆಲಗಳಲ್ಲಿ ಉಪಯುಕ್ತ ಗಿಡಗಳನ್ನು ಬೆಳೆಸುವುದರ ಮೂಲಕ ಸಾಮಾಜಿಕ ವಿಪಿನತೆಯನ್ನು ಸಾಧಿಸಿದಂತಾಗುವುದು. ಈ ರೀತಿಯಿಂದ ಮಾತ್ರ ಗ್ರಾಮೀಣ ಉರುವಲು ಹಾಗೂ ಮನೆಮುಟ್ಟುಗಳ ಬೇಡಿಕೆಯನ್ನು ಪೂರೈಸುವುದು ಸಾಧ್ಯವೆನಿಸೀತು. ಇದರಲ್ಲಿ ಶೀಘ್ರ ಬೆಳೆಯುವ ಮತ್ತು ಕೀಳುವರ್ಜೆಯ ಮರಗಳನ್ನು ಬೆಳೆಸಲಾಗುವುದು. ಈ ಕಾರ್ಯಕ್ರಮದಲ್ಲಿ 'ಕಬಾಬುಲ್' ಜಾತಿಯ ವೃಕ್ಷವು ಹೆಚ್ಚು ಸಮರ್ಪಕವೆಂದು ಕಂಡುಬಂದಿದೆ. ಕೆಲವು ಅರಣ್ಯಾಧಾರಿತ ಕಸುಬುಗಳಿಗೆ ಅನುಕೂಲವಾಗುವಂತೆ ಬಿದಿರೂ ಪ್ರಧಾನವಾಗಿರುವ ಗಿಡಗಳನ್ನು ಉತ್ತೇಜಿಸಲಾಗುವುದು.

iii) ಕೃಷಿ ವಿಪಿನತೆಯನ್ನು ಇನ್ನು ಮುಂದೆ ವಿಶಿಷ್ಟ ರೀತಿಯ ಕಾರ್ಯಕ್ರಮವೆಂದು ಪರಿಗಣಿಸಲಾಗುವುದು. ಅರಣ್ಯ ಇಲಾಖೆಯು ಸಸಿಗಳನ್ನು ವ್ಯಕ್ತಿಗಳಿಗೆ ಹಾಗೂ ಸಂಘ–ಸಂಸ್ಥೆಗಳಿಗೆ ಅವರ ಕಟ್ಟಡಗಳ ಆವರಣದಲ್ಲಿ ಹೊಲದಲ್ಲಿ ಬೆಳೆಸಲು ಮುಫತ್ತಾಗಿ ಪೂರೈಸುವುದು. ಈ ಕಾರ್ಯದಲ್ಲಿ ವಿದ್ಯಾರ್ಥಿಗಳ ಹಾಗೂ ಸೇವಾ ಸಂಸ್ಥೆಗಳ ನೆರವನ್ನು ಪಡೆಯಲಾಗುವುದು.

ಅರಣ್ಯ ವಿಸ್ತರಣ ಕಾರ್ಯಕ್ರಮಗಳೆಲ್ಲವೂ ಶ್ರಮಾಧಿಕ್ಯದಿಂದ ಕೂಡಿದವುಗಳು. ಆದ್ದರಿಂದ ಸ್ಥಾನಿಕ ಶ್ರಮಿಕ ವರ್ಗಕ್ಕೆ ಈ ಹೊಸ ಉದ್ಯೋಗಗಳನ್ನು ನೀಡುವುದು ಎಲ್ಲ ಕಾರಣಗಳಿಂದಲೂ ಉತ್ತಮ. ಸ್ಥಾನಿಕರ ಸಹಕಾರವನ್ನು ಎಲ್ಲ ಹಂತಗಳಲ್ಲಿಯೂ ಗಳಿಸಿದಂತಾಗುವುದು.

ಈವರೆಗಿನ ಅನುಭವದಲ್ಲಿ ಕಾಗದ, ಪಲ್ಪ್, ಫ್ಲೈವುಡ್ ಮುಂತಾದ ಉದ್ದಿಮೆಗಳು ಅರಣ್ಯ ಸಂಪತ್ತನ್ನು ಅತಿಯಾಗಿ ಶೋಷಿಸುತ್ತಿರುವುದರಿಂದ ಕೆಲವು ದೀರ್ಘಾವಧಿಯ ಮತ್ತು ಅನೇಕ ಸಮಸ್ಯೆಗಳು ಉಗ್ರವಾಗುತ್ತಲಿವೆ. ಆದ್ದರಿಂದ ಇವುಗಳ ನಿವಾರಣೆಗೆ ರಕ್ಷಣೋಪಾಯಗಳನ್ನು ಕೈಗೊಂಡು ಅರಣ್ಯ ವೃಕ್ಷಗಳ ಬೆಳೆಸಿಗೆ ಆದ್ಯಗಮನವನ್ನು ಕೊಡಲಾಗುವುದು.

ಕೆಲವು ಅರಣ್ಯ ಪ್ರದೇಶಗಳನ್ನು ರಕ್ಷಿತ ಪ್ರದೇಶವೆಂದು ಸಾರಿ ಅವುಗಳ ಸ್ವರೂಪವನ್ನು ಉಳಿಸಿಕೊಳ್ಳುವ ಧೋರಣೆಯನ್ನು ಬಲಪಡಿಸಲಾಗುವುದು. ಕರಾವಳಿಯ ಉದ್ದಕ್ಕೂ ಸಾಗರ ಮತ್ತು ಚಂಡಮಾರುತಗಳ ಕೊರತವನ್ನು ತಡೆಯಲು ಕೆಸೋರಿನ ವೃಕ್ಷಗಳ ತೋಪನ್ನು ನಿರ್ಮಿಸುವುದು ಅತಿಮುಖ್ಯ ಕಾರ್ಯಕ್ರಮ.

ಅರಣ್ಯ ರಕ್ಷಣೆ, ವಿಸ್ತರಣೆ, ಪುನರ್‌ವಿನ್ಯಾಸ, ಕೃಷಿ–ಕೈಗಾರಿಕೆಗಳೊಡನೆ ಸಂಬಂಧ ಸ್ಥಾಪನೆ–ಇವುಗಳಿಗೆ ಶಿಕ್ಷಿತ ಹಾಗೂ ತಾಂತ್ರಿಕ ಅರಣ್ಯಕಾರರ ಪಡೆಯೊಂದು ಅವಶ್ಯಕ. ಆದ್ದರಿಂದ ಅರಣ್ಯಕಾರರ ತರಬೇತಿಗೆಂದು ಭಾರತೀಯ ಅರಣ್ಯ ವ್ಯವಸ್ಥಾಪನಾ ಸಂಸ್ಥೆಯೊಂದನ್ನು ಸಂಘಟಿಸಲಾಗುವುದೆಂಬುದು ಯೋಜಕರ ನಿರ್ಧಾರ.

ಹಾಲಿ ಯೋಜನೆಯಲ್ಲಿ ಅರಣ್ಯ ಧೋರಣೆಯ ಮುಖ್ಯಾಂಶಗಳನ್ನು ಮೇಲಿನ ವಾಕ್ಯಗಳಲ್ಲಿ ಸಂಗ್ರಹಿಸಲಾಗಿದೆ. ಹಿಂದಿನ ಯೋಜನೆಗಳೊಡನೆ ತುಲನೆ ಮಾಡಿದರೆ ಆರನೆ ಯೋಜನೆಯಲ್ಲಿ ಯೋಜಕರ ಅರಣ್ಯ ಕಾಳಜಿ ವ್ಯಕ್ತವಾಗುತ್ತದೆ. ವಿಸ್ತರಣ ಹಾಗೂ ರಕ್ಷಣಾ ಕಾರ್ಯಕ್ರಮಗಳಲ್ಲಿ ಆಧುನಿಕ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಲಾಗಿದೆ. ಒಕ್ಕಲುತನ–ಉದ್ದಿಮೆ ಉದ್ಯೋಗಾವಕಾಶಗಳಿಗೆ ಪೋಷಕವಾಗುವಂತೆ ಅರಣ್ಯಾಭಿವೃದ್ಧಿಯ ಧೋರಣೆಯನ್ನು ರೂಪಿಸಲಾಗಿದೆ. ಅರಣ್ಯದ ಬಾಬ್ತಿಗೆಂದು ಒಟ್ಟು ೪೫೦ ಕೋಟಿ ರೂಪಾಯಿಗಳನ್ನು ಕಾಣಿಸಿದೆ. ಈ ಮೊತ್ತವು ಐದನೆ ಯೋಜನೆಗಿಂತ ೨೫೦ ಕೋಟಿ ರೂಪಾಯಿ ಅಧಿಕವಿರುತ್ತದೆ. ವಿಪಿನಪ್ರಜ್ಞೆ ಜನನಿಯಂತ್ರಣ ಪ್ರಜ್ಞೆಯಂತೆ ಸಾರ್ವಜನಿಕರ ಮನದಲ್ಲಿ ಪ್ರತಿಷ್ಠಿತವಾಗಬೇಕಾದುದು ಅರಣ್ಯದ ಧೋರಣೆಯ ಯಶಸ್ಸಿಗೆ ಅತ್ಯಗತ್ಯವೆಂಬುದನ್ನು ಸಮಾಜ ಕಾರ್ಯಕರ್ತರೂ ಮತ್ತು ಆಡಳಿತಗಾರರೂ ಮನಗಂಡು ಪ್ರಚಾರ ಮಾಧ್ಯಮವನ್ನು ಇದಕ್ಕಾಗಿ ಬಳಸಬೇಕು.

ಕೈಗಾರಿಕಾ ಲೈಸೆನ್ಸಿಂಗ್ ನೀತಿ ಮತ್ತು ಭಾರತದ ಆರ್ಥಿಕತೆ

● ಡಿ. ಕೆ. ಪೊದುವಾಳ್

ಕೆಲವು ಸಡಲಿಕೆ ಕ್ರಮಗಳನ್ನು ಕೈಗೊಂಡುದರಿಂದ ಆದ್ಯಗಮನ ಹರಿಸಬೇಕಾದಂತಹ ಕೈಗಾರಿಕೆಗಳ ಪಟ್ಟಿಯು ವಿಸ್ತೃತಗೊಳ್ಳಲಿವೆ. ಅನೇಕ ಘಟಕಗಳು ಸಡಿಲಾದ ಲೈಸೆನ್ಸಿಂಗ್ ನೀತಿಯ ಪ್ರಯೋಜನ ಪಡೆದುಕೊಂಡು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ದ್ವಿಗುಣಗೊಳಿಸಬಹುದಾಗಿದೆ. ಕೇಂದ್ರ ಇದಕ್ಕೆ ತನ್ನ ಅಂಗೀಕಾರ ಸೂಚಿಸಿದೆ. ೫೪ ಕೈಗಾರಿಕೆಗಳಿದ್ದ ಪ್ರಸ್ತುತ ಪಟ್ಟಿಯಲ್ಲಿ ಈಗ ೭೫ ಕೈಗಾರಿಕೆಗಳಿವೆ ಸಡಲಿಕೆ ಜೊತೆಗೆ ಉದ್ಯಮಿಗಳಲ್ಲಿ ವಿಸ್ತನ್ನು ತರುವಂತೆ ಲೈಸೆನ್ಸಿಂಗ್ ವಿಧಾನಗಳನ್ನು. ಬದಲಾವಣೆಗೆ ಒಳಪಡಿಸಿದ್ದಾರೆ.

ಮಂಜೂರು ಮಾಡಿರುವ ಉತ್ಪಾದನಾ ಸಾಮರ್ಥ್ಯವನ್ನು ಡಿಸೆಂಬರ ೩೧ರೊಳಗೆ ಬಳಸಿಕೊಳ್ಳಬೇಕಾಗಿರುವ ಗಡುವನ್ನು ಮತ್ತೆ ಹೆಚ್ಚಿಸುವ ಉದ್ದೇಶ ಸರಕಾರಕ್ಕಿಲ್ಲವೆಂದು ತೋರಿಬರುತ್ತದೆ. ಅನುಮತಿ ನಮೂದಿಸಿರುವ ಕಾಲಾವಧಿಯನ್ನು ಕ್ರಮಬದ್ಧವಾಗಿ ಜಾರಿಗೆ ತರಲು ತಮ್ಮ ಖಾತೆ ಉದ್ದೇಶಿಸಿದೆಯೆಂದು ಕೇಂದ್ರ ಕೈಗಾರಿಕಾಭಿವೃದ್ಧಿ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯಂ ಆಗ ನುಡಿದಿದ್ದರು.

ಪ್ರಸಕ್ತ ವಿಷಯದ ನಿರ್ದಿಷ್ಟ ಅಧ್ಯಯನಕ್ಕೆ ಇದುವರೆಗೂ ಈ ನೀತಿಯು ನಡೆದು ಬಂದ ದಾರಿಯ ಸೂಕ್ಷ್ಮ ಪರಿಚಯ ಅತ್ಯಗತ್ಯ. ಭಾರತದಲ್ಲಿ ಲೈಸೆನ್ಸಿಂಗ್ ನೀಡಿಕಾ ನೀತಿಯು ಕೈಗಾರಿಕಾ (ಅಭಿವೃದ್ಧಿ ಹಾಗೂ ಶಾಸನ) ೧೯೫೧ರ ನೀತಿಗೆ ಒಳಪಟ್ಟಿದೆ. ಪ್ರತಿಯೊಂದು ದೇಶದ ಆರ್ಥಿಕ ಜವಾಬ್ದಾರಿಗಳಲ್ಲೊಂದಾದ ಲೈಸೆನ್ಸಿನ ನೀಡಿಕೆಯನ್ನು ಕ್ರಮಬದ್ಧವಾಗಿ ನಿರ್ವಹಿಸಿಕೊಂಡು ಹೋಗಬೇಕಾದುದು ಆ ದೇಶದ ಆದ್ಯ ಕರ್ತವ್ಯವಾಗಿದೆ.

ಲೈಸೆನ್ಸಿಂಗ್ ಕಾರ್ಯದ ಪ್ರಮುಖ ಉದ್ದೇಶಗಳು ಈ ಕೆಳಕಂಡಂತಿವೆ :

೧. ಕ್ರಮ ಬದ್ಧವಾದ ಕೈಗಾರಿಕಾ ಬೆಳವಣಿಗೆ ಸಾಧಿಸಲು ಆದ್ಯಗಮನ ಹರಿಸಬೇಕಾದ ಕೈಗಾರಿಕೆಗಳ ಸ್ಥಾಪನೆಗೆ ಉತ್ತೇಜನ ನೀಡುವುದು ಮತ್ತು ಈ ದಿಶೆಯಲ್ಲಿ ಔಚಿತ್ಯ ಪೂರ್ಣ ರೂಪರೇಷೆಗಳನ್ನು ಯೋಜಿಸುವುದು.

೨. ಕೈಗಾರಿಕೆಗಳ ಅಸ್ತವ್ಯಸ್ತ ಬೆಳವಣಿಗೆಯು ಆಗದಿರುವಂತೆ ನೋಡಿಕೊಳ್ಳುವುದು.

೩. ಉದ್ದೇಶಿತ ಮಾರ್ಗಗಳಲ್ಲಿ ಬಂಡವಾಳ ಹರಿಯುವಂತೆ ಗಮನಿಸುವುದು ಮತ್ತು ಬಂಡವಾಳ ಹೇಗೆ ಮತ್ತು ಎತ್ತ ಹೂಡಲ್ಪಡಬೇಕೆಂಬುದರ ಬಗ್ಗೆ ಪೂರ್ವಯೋಜಿತ ಶಾಸನ ರಚಿಸುವುದು.

೪. ವಿಶೇಷ ಗಮನವು ಸಣ್ಣ ಪ್ರಮಾಣದ ಕೈಗಾರಿಕೆಗಳತ್ತ ಹರಿಯುವಂತೆ ನೋಡಿಕೊಳ್ಳುವುದು.

೫. ಲೈಸೆನ್ಸ್ ಪಡೆದ ಪ್ರತಿಯೊಂದು ಕೈಗಾರಿಕಾ ಘಟಕದ ಉತ್ಪಾದನೆ ಗರಿಷ್ಠ ಪ್ರಮಾಣದಲ್ಲಿರುವಂತೆ ನೋಡಿಕೊಳ್ಳುವುದು.

೬. ಪ್ರತಿಯೊಂದು ಕೈಗಾರಿಕಾ ಘಟಕದಲ್ಲಿ ಕ್ರಯ ಇಳಿತದ ಹೆಚ್ಚಿನ ಉತ್ಪಾದನೆಯಿರುವಂತೆ ಭೂಮಿಕೆ ಸಿದ್ಧಪಡಿಸುವುದು. ರೂಪಾಯಿಯ ವೆಚ್ಚ ಕನಿಷ್ಠವಾಗಿರುವಂತೆ ನೋಡಿಕೊಳ್ಳುವುದು.

೭. ವಿದೇಶಿ ವಿನಿಮಯ ಹೆಚ್ಚಾಗಲು ರಫ್ತನ್ನು ಅಧಿಕಗೊಳಿಸುವುದು.

೮. ಪ್ರಾದೇಶಿಕ ಸಮತೋಲನ ಬೆಳವಣಿಗೆಯ ಗುರಿಯನ್ನು ಸಾಧಿಸುವುದು.

೯. ಜನಸಾಮಾನ್ಯ ಹಿತಸಾಧನೆಯ ಗುರಿಗಳತ್ತ ದಿಟ್ಟಿ ಹೆಜ್ಜೆ ಹಾಕುವುದು.

೧೯೫೮–೫೯ರಲ್ಲಿ ಸಮೀಕ್ಷೆ ನಡೆಸಿದಾಗ ಮೇಲ್ಕಂಡ ಉದ್ದೇಶಗಳಾವುವೂ ಈಡೇರಿದಂತೆ ಕಂಡುಬರಲಿಲ್ಲ. ಕೇಂದ್ರ ಸರಕಾರದವರು ಲೈಸೆನ್ಸಿಂಗ್ ಕ್ರಮದ ಬಗ್ಗೆ ವಿಚಾರಿಸಲು ಒಂದು ಸಮಿತಿಯನ್ನು ನೇಮಿಸಿದರು. 'ಸ್ವಾಮಿನಾಥನ್ ಸಮಿತಿ' ಎಂಬುದಾಗಿ ಅಭಿದಾನಗೊಂಡ ಈ ಸಮಿತಿಯು ೧೯೬೪ರಲ್ಲಿ ತನ್ನ ವರದಿಯನ್ನೊಪ್ಪಿಸಿತು. ಕೆಳಗಿನ ವಾಕ್ಯವೊಂದರಲ್ಲಿ ವರದಿಯ ಮುಖ್ಯ ವಿಚಾರಗಳ ಹಾಗೂ ಶಿಫಾರಸುಗಳ ಸಾರಾಂಶವನ್ನು ಸಂಗ್ರಹಿಸಲಾಗಿದೆ.

ಒಂದು ನಿರ್ದಿಷ್ಟ ಕಾಲದಲ್ಲಿ ವಿದೇಶಿಸಾಲ ಹಾಗೂ ಗಳಿಕೆಯನ್ನು ನಿರೀಕ್ಷೆ ಮಾಡಲಾಗದ ಕಾರಣದಿಂದ ವರ್ಷಕ್ಕೊಮ್ಮೆ ಅಥವಾ ಅರ್ಧ ವರ್ಷಕ್ಕೊಮ್ಮೆ ನೀಡುವ ಲೈಸೆನ್ಸ್ ಕ್ರಮ ಅಕಾಲಿಕವೆಂದು ಸಮಿತಿಯು ಅಭಿಪ್ರಾಯ ಪಟ್ಟಿತು. ಅದರ ಬದಲು, ಆಗಿಂದಾಗ್ಯೆ ಅಪೇಕ್ಷಿತ ಸಂದರ್ಭಗಳಿಗನುಸಾರವಾಗಿ ಲೈಸೆನ್ಸ್ ನೀಡುವ ಕ್ರಮವನ್ನು ಜಾರಿಗೆ ತರಲು ಅದು ಶಿಫಾರಸು ಮಾಡಿತು. ದೇಶದ ದುರದೃಷ್ಟವೋ ಅಥವಾ

ಬಿರ್ಲಾ ಸಮೂಹದ ಅದೃಷ್ಟವೋ ಈ ಶಿಫಾರಸು ಜಾರಿಗೆ ಬಂತು. ಬಿರ್ಲಾ ಸಮೂಹ ಇದರ ಅತ್ಯುತ್ತಮ ಪ್ರಯೋಜನ ಪಡೆಯಿತು. ಕನಿಷ್ಟ ಆಸ್ತಿ ಹೊಂದಿದ ಕೆಲವು ಉದ್ದಿಮೆಗಳು ೫ ಕೋಟಿ ರೂ. ಬೆಲೆ ಬಾಳುವ ಲೈಸೆನ್ಸುಗಳಿಗಾಗಿ ಅರ್ಜಿ ಗುಜರಾಯಿಸಿದುವು. ಈ ಹೆಜ್ಜೆ ನೀಡಲ್ಪಟ್ಟ ಉತ್ಪಾದನೆಯನ್ನು ತಲುಪದ ಸ್ಥಿತಿಗೂ ಅನುವು ಮಾಡಿಕೊಟ್ಟಿತು. ಅನೇಕ ಉದ್ಯಮಿಗಳು ನೀಡಲ್ಪಟ್ಟ ಲೈಸೆನ್ಸ್‌ಗಳನ್ನು ಉಪಯೋಗಿಸಿಕೊಳ್ಳಲಿಲ್ಲ. ಕೆಲವರು ಮಿತಿಮೀರಿದ ಉತ್ಪಾದನೆಯತ್ತ ಪಯಣಿಸಿದರೆ, ಇನ್ನು ಹಲವರು ಒಂದು ಸಾಮಗ್ರಿಯ ಉತ್ಪಾದನೆಗೆ ಒಂದಕ್ಕಿಂತ ಹೆಚ್ಚಿನ ಲೈಸನ್ಸನ್ನು ಪಡೆಯುವುದರಲ್ಲಿ ಸಫಲರಾದರು. ಇವು ಕೈಗಾರಿಕಾ ವಿಪ್ಲವಕ್ಕೆಡೆಮಾಡಿಕೊಟ್ಟವು. ಪರಿಣಾಮ : ಯೋಜನಾ ಆಯೋಗವು ಎರಡನೆಯ ಬಾರಿಗೆ ಲೈಸೆನ್ಸಿಂಗ್ ಪದ್ಧತಿಯನ್ನು ಪರಿಶೀಲಿಸಲು ಮತ್ತೊಂದು ಸಮಿತಿಯನ್ನು ಅನಿವಾರ್ಯವಾಗಿ ನೇಮಿಸಬೇಕಾಗಿ ಬಂತು.

ಅದರಂತೆ ಕೈಗಾರಿಕಾ (ಅಭಿವೃದ್ಧಿ ಹಾಗೂ ಶಾಸನ) ವಿಧಿ ೧೯೫೧ರ ಪ್ರಕಾರ ಬೊಂಬಾಯಿ ವಿಶ್ವವಿದ್ಯಾನಿಲಯದ ಡಾ। ಆರ್. ಕೆ. ಹಝಾರಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯು ನೇಮಕಗೊಂಡಿತು. ೧೯೬೭ ರಲ್ಲಿ ಸಮಿತಿ ತನ್ನ ವರದಿಯನ್ನು ಸಲ್ಲಿಸಿತು. ಸ್ವಾಮಿನಾಥನ್ ಸಮಿತಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತಂದುದರ ಫಲವಾಗಿ ತಲೆದೋರಿದ ಅನೇಕ ಸಮಸ್ಯೆಗಳನ್ನು ಈ ವರದಿಯು ಬೆಳಕಿಗೆ ತಂದಿತು.

ಆರ್ಥಿಕ ಶಕ್ತಿಯ ಒಟ್ಟುಗೂಡಿಕೆ ಕೆಲವು ಉದ್ದಿಮೆಗಾರರಲ್ಲಿ ಏಕತ್ರವಾಗಿ ನೆಲೆಗೊಂಡಿರುವುದು; ಕೆಲವೇ ಕೆಲವು ಪ್ರದೇಶಗಳಲ್ಲಿ ಮಾತ್ರ ಕೈಗಾರಿಕಾಭಿವೃದ್ಧಿಯಾಗಿರುವುದು; ಬಿರ್ಲಾ ಸಮೂಹ ಈ ದಿಶೆಯಲ್ಲಿ ಸಿಂಹಪಾಲು ಪಡೆದಿರುವುದು ಅನುಭವಕ್ಕೆ ಬಂತು. ನ್ಯಾಯದ ಬಲವಾದ ಪಹರೆಯಲ್ಲಿ ತನ್ನ ತಾಂತ್ರಿಕ ಹಾಗೂ ಧನಕೌಶಲ್ಯದಿಂದ ಅದು ತನ್ನ ಸ್ವಾಮಿತ್ವವನ್ನು ಮೆರೆಯಲು ಉತ್ತಮ ಅವಕಾಶ ಮಾಡಿಕೊಂಡಿತು.

ವರದಿಯ ಮುಖ್ಯ ಶಿಫಾರಸುಗಳು ಈ ಕೆಳಕಂಡಂತಿವೆ :

೧. ಕೈಗಾರಿಕೆಗಳಿಗೆ ರೂ. ೧ ಕೋಟಿಯವರೆಗೆ ಲೈಸೆನ್ಸ್ ವಿನಾಯಿತಿ ನೀಡುವುದು.

೨. ಮೂಲ ಕೈಗಾರಿಕೆಗಳ ವಿಷಯದಲ್ಲಿ ನಿಷ್ಠುರ ಲೈಸೆನ್ಸಿಂಗ್ ಪದ್ಧತಿ—ವಿಸ್ತರಣೆಗಾಗಿ ಬೇಡಿಬರುವ ಅನುಮತಿ ಪತ್ರಗಳನ್ನು ನಿರ್ಬಂಧಿಸುವುದು.

೩. ದೇಶದ ದೃಷ್ಟಿಯಿಂದ ಅತ್ಯಗತ್ಯವಾದ ಕೈಗಾರಿಕೆಗಳಿಗೆ ಬೇಕಾದ ಆದ್ಯ ಗಮನ ನೀಡಲು ಸಾಧ್ಯವಾಗುವಂತೆ ಯೋಜನಾ ಆಯೋಗವು ತಕ್ಕ ವಿಧಿಗಳನ್ನು ರಚಿಸುವುದು.

ಸರಕಾರವು ನೇಮಿಸಿದ ಮೇಲ್ಕಂಡ ಸಮಿತಿಯು ನೇಮಕ ಅನಧಿಕೃತವಾಗಿತ್ತು. ಆದರೂ ಭಾರತ ಸರಕಾರವು ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಲೈಸೆನ್ಸಿಂಗ್ ನಿರ್ಬಂಧದ ಬಗ್ಗೆ ಒಂದು ನಿಯಮಾವಳಿಯನ್ನು ರಚಿಸಿತು.

೧. ಹೆಚ್ಚಾದ ವಿದೇಶಿ ಬಂಡವಾಳ ಬೇಕಾಗುವ ಮೂಲ ಕೈಗಾರಿಕೆಗಳಿಗೆ ಮಾತ್ರ ಲೈಸೆನ್ಸ್ ನೀಡಿಕೆ.

೨. ಉತ್ಪಾದನೆ ಬಂಡವಾಳದ ಸುಮಾರು ಶೇ. ೧೦ ರಷ್ಟು ಬರುವಂತಹ ಉದ್ಯಮಗಳಿಗೆ ಲೈಸೆನ್ಸ್ ಪಡೆಯುವುದು ಅನಗತ್ಯ.

೩. ಸಣ್ಣ ಪ್ರಮಾಣದ ಕೈಗಾರಿಕೆಗಳು ಲೈಸೆನ್ಸ್ ನಿಷೇಧದಿಂದ ತೊಂದರೆಗೊಳಗಾಗದಂತೆ ನೋಡಿಕೊಳ್ಳಬೇಕು.

೪. ಹೊಸ ಉತ್ಪಾದನೆ ಸದ್ಯದ ಉತ್ಪಾದನೆಯ ಶೇಕಡ ೨೫ನ್ನು ಮೀರದಿದ್ದರೆ ಅತ್ಯಗತ್ಯವಾಗಿ ಬೇಕಾದ ಕೈಗಾರಿಕೆಗಳಿಗೆ ಹೊಸಬಗೆಯ ಸಾಮಗ್ರಿಗಳನ್ನು ಉತ್ಪಾದಿಸಲು ಅನುಮತಿ ನೀಡುವುದು.

೫. ವಿದೇಶಿ ವಿನಿಮಯ ಬೇಡದ ಅಥವಾ ಅದರ ಅಗತ್ಯತೆ ತೀರಾ ಅಲ್ಪವುಳ್ಳ ಕೈಗಾರಿಕಾ ಘಟಕಗಳು ಲೈಸೆನ್ಸ್ ಪಡೆಯದಿರುವುದು.

೧೯೬೭ರಲ್ಲಿ. ಕಳೆದ ದಶಕದಲ್ಲಿ ಪ್ರಚಲಿತವಿದ್ದ ಲೈಸೆನ್ಸಿಂಗ್ ವಿಧಾನದ ಅಧ್ಯಯನಕ್ಕಾಗಿ 'ದತ್ತಸಮಿತಿ'ಯನ್ನು ಸರಕಾರವು ನೇಮಿಸಿತು. 'ಕೈಗಾರಿಕಾ ಲೈಸೆನ್ಸ್ ನೀಡುವ ನೀತಿಯ ಪರಿಶೀಲನಾ ಸಮಿತಿ' ಎಂದು ಇದರ ಹೆಸರು. ಶುಷ್ಕ ತಾರ್ಕಿಕ ಹಾಗೂ ಬಹಳ ವಾದಗ್ರಸ್ತವಾದ ಇದರ ವರದಿಯು ಅನೇಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತದೆ. ಪ್ರಾತ್ಯಕ್ಷಿಕ ಅಂಶಗಳಲ್ಲಿ ಇದು ಕಣ್ಣು ಹೊರಳಿಸಿಲ್ಲ ಎಂಬ ವಾದವಿದೆ. ಈ ವರದಿಯ ಪ್ರಕಾರ ಮೂರು ವಲಯಗಳನ್ನು ಗುರುತಿಸಲಾಗಿದೆ :

೧. ಕೋರ್‌ವಲಯ (ಅತೀ ಮುಖ್ಯವಲಯ) : ಮೂಲ ಹಾಗೂ ಬಹುಮುಖ್ಯ ಕೈಗಾರಿಕೆಗಳನ್ನೊಳಗೊಂಡದ್ದು.

೨. ಮಧ್ಯಮ ವಲಯ : ಬೃಹತ್ ಉದ್ಯಮಗಳು ಹಾಗೂ ವಿದೇಶಿ ಸಂಸ್ಥೆಗಳು ಇದಕ್ಕೆ ಹೊರತಾದವು.

೩. ಸಣ್ಣವಲಯ : ಅತೀ ಮುಖ್ಯ ಗಮನ ಸಲ್ಲಬೇಕಾದ್ದು.

ಕೋರ್ ವಲಯದಲ್ಲಿ ಬರುವ ಉದ್ಯಮಗಳ ಬಗ್ಗೆ ಶಿಸ್ತಿನ ಲೈಸೆನ್ಸಿಂಗ್ ಇರಬೇಕೆಂದೂ, ಮಧ್ಯಮ ವಲಯದಲ್ಲಿ ನಿರ್ದಿಷ್ಟ ಕೈಗಾರಿಕೆಗಳನ್ನು ಸೇರಿಸುವ ಬಗ್ಗೆ ಸೂಕ್ತ

ಕಟ್ಟಳೆಗಳಿರಬೇಕೆಂದೂ ವರದಿಯು ಒತ್ತಿ ಹೇಳುತ್ತದೆ. ಮಧ್ಯಮ ವಲಯದಲ್ಲಿ ಏಕಸ್ವಾಮಿತ್ವವಿರಲು ಅವಕಾಶವಿರಕೂಡದು ಎಂದು ಪ್ರತಿಪಾದಿಸುವ ಇದು ಕಾರ್ಮಿಕ ಶ್ರಮ ಅವಲಂಬಿತ ಹಾಗೂ ಉದ್ಯೋಗಾವಕಾಶ ಹೆಚ್ಚಿಸುವ ಸಣ್ಣ ಪ್ರಮಾಣದ ಕೈಗಾರಿಕೆಗಳು ಕ್ಷಿಪ್ರವಾಗಿ ಅಭಿವೃದ್ಧಿ ಹೊಂದಬೇಕು ಎಂದು ಆಶಿಸುತ್ತದೆ. ಈ ವರದಿಯ ಪ್ರಕಾರ, ಸ್ಥಳ, ಸ್ಥಾನ ನಿಷೇಧಗಳು, ಉತ್ಪಾದನಾ ನಿಷೇಧಗಳು ಮತ್ತು ಸವಿವರ ಯೋಜನಾ ಪಟ್ಟಿಗಳು ಲೈಸೆನ್ಸ್‌ಗಾಗಿ ಗುಜರಾಯಿಸುವ ಅರ್ಜಿಯೊಂದಿಗೆ ಪ್ರತಿಯೊಬ್ಬ ಉದ್ಯಮಿಯಿಂದ ತಯಾರಿಸಲ್ಪಟ್ಟಿರಬೇಕೆಂದಿದೆ. ಈ ಅಂಶಗಳೇ ವರದಿಯನ್ನು ಪ್ರಾತ್ಯಕ್ಷಿಕ ಲೋಕದಿಂದ ದೂರ ತಳ್ಳುತ್ತವೆ.

ದತ್ ಸಮಿತಿಯ ಅಧ್ಯಯನ. ಭಾರತದಲ್ಲಿ ಆರ್ಥಿಕ ಶಕ್ತಿಯು ಕೆಲವೇ ಕೆಲವು ಜನರ ಕೈಯಲ್ಲಿ ಕೇಂದ್ರೀಕೃತವಾಗಿದೆ ಎಂಬ ಅಂಶವನ್ನು ಎತ್ತಿ ಹಿಡಿಯುತ್ತದೆ. ಇದನ್ನು ತಡೆಗಟ್ಟಲು 'ಏಕಸ್ವಾಮ್ಯ ಮತ್ತು ನಿರ್ಬಂಧಿತ ವ್ಯವಹಾರ ನೀತಿಗಳ ಮಸೂದೆ' ಎಂಬ ಪ್ರತ್ಯೇಕ ಮಸೂದೆಯನ್ನು ಶಾಸಕಾಂಗದಲ್ಲಿ ಮಂಡಿಸಿ ಅಂಗೀಕರಿಸಲಾಯಿತು. ರಫ್ತನ್ನು ಗುರಿಯಾಗಿಟ್ಟುಕೊಂಡಿರುವ ಕೆಲವು ಉದ್ಯಮಗಳಿಗೆ ಬೆಳೆಯಲು ಆರೋಗ್ಯಕರ ವಾತಾವರಣ ಕಲ್ಪಿಸಬೇಕೆಂಬ ಅಂಶವನ್ನು ಮರೆಯಬಾರದು: ಅಂದರೆ ಖಾಸಗಿ ವಲಯಕ್ಕೆ ತಕ್ಕ ಸ್ಥಾನ ಮಾನಗಳಿರಬೇಕೆಂಬ ಅಂಶವಿದು. ಸಮಾಜ ಸ್ವಾಮ್ಯವಾದಿ ಆರ್ಥಿಕತೆಯುಳ್ಳ ನಮ್ಮ ದೇಶದಲ್ಲಿ ಉನ್ನತ ಭವಿಷ್ಯದತ್ತ ನಡೆಯಲು ಹಾತೊರೆಯುವ ಯಾವ ಉದ್ಯಮಕ್ಕೂ ಲೈಸೆನ್ಸನ್ನು ನಿರಾಕರಿಸಬಾರದು. ಸರಕಾರಿ ಹಾಗೂ ಖಾಸಗಿ ವಲಯಗಳ ಸಾಮರಸ್ಯದಿಂದ ಬೆರೆತು ನಡೆಯಬೇಕಾಗಿದೆ.

ಸರಕಾರವು ಸಾಧಿಸಲಿಚ್ಛಿಸಿರುವ ಶೇ. ೮ ರಿಂದ ಶೇ. ೧೦ ರಷ್ಟು ಕೈಗಾರಿಕಾ ಉತ್ಪಾದನಾ ಮಟ್ಟ ಲೈಸೆನ್ಸಿಂಗ್ ಮತ್ತು ನಿರ್ಯಾತ ವ್ಯವಸ್ಥೆಗಳಲ್ಲಿ ಉತ್ತಮ ಬದಲಾವಣೆಗಳನ್ನು ತರುವುದರಿಂದ ಸಾಧ್ಯ. (೧೯೭೧ ರಲ್ಲಿ ಶೇ ೩ ರಷ್ಟು ಇಳಿತ ಉಂಟಾಗಿದೆ). ವಲಯಗಳ ನಿರ್ದಿಷ್ಟ ಸ್ಥಾನಗಳನ್ನು ನಿರ್ಧರಿಸಬೇಕಾಗಿದೆ.

ಇನ್ನು ಸಂಪೂರ್ಣ ಲೈಸೆನ್ಸಿಂಗ್ ನಿಷೇಧೀಕರಣ ಇರಬೇಕೋ ಅಥವಾ ಅಂಶತಃ ಲೈಸೆನ್ಸಿಂಗ್ ಇರಬೇಕೊ ಎಂಬುದನ್ನು ಚರ್ಚಿಸೋಣ. ಮುಂಚಿನ ವಿಧಾನ ಜಾರಿಗೆ ಬಂದಲ್ಲಿ ಪ್ರತಿಯೊಬ್ಬನೂ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲು ಉದ್ಯುಕ್ತನಾದಾನು! ಲೈಸೆನ್ಸ್ ಪದ್ಧತಿ ಎಲ್ಲಿ ಉತ್ತಮವೆಂದರೆ ಅಲ್ಲಿ ಎಲ್ಲ ಕೈಗಾರಿಕಾ ಘಟಕಗಳು ಯಂತ್ರಗಳ ನಿರ್ಯಾತವನ್ನು ಅಪೇಕ್ಷಿಸುವುದಿಲ್ಲವೋ ಅಲ್ಲಿ.

ಎರಡನೆಯ ವಿಧಾನವನ್ನು ಹೀಗೆ ಸ್ವಾಗತಿಸಬಹುದು. ಹೆಚ್ಚು ವಿದೇಶಿ ಬಂಡವಾಳ ಬೇಡುವ ಘಟಕಗಳಿಗೆ ಲೈಸೆನ್ಸಿಂಗ್ ಕಡ್ಡಾಯ ಮಾಡಿ. ಹಾಗಲ್ಲದ ಘಟಕಗಳಿಗೆ

ಲೈಸೆನ್ಸಿಂಗ್ ವಿನಾಯಿತಿ ನೀಡುವುದು. ದತ್ ಸಮಿತಿಯು ಆಕ್ಷೇಪಿಸಿದ ಲೈಸೆನ್ಸಿಂಗ್ ವಿನಾಯಿತಿ ಕ್ರಮವನ್ನು ಯೋಜನಾ ಆಯೋಗವು ಕೈಗೆತ್ತಿಕೊಂಡಿದೆ. ಲೈಸೆನ್ಸ್ ನೀಡುವಾಗ ಯಂತ್ರಗಳ ಆಮದನ್ನು ಪ್ರತ್ಯೇಕ ವಿಷಯವಾಗಿ ಪರಿಗಣಿಸಬೇಕೆಂದು ಸಮಿತಿಯು ಅಪೇಕ್ಷಿಸುತ್ತದೆ.

ದೊಡ್ಡ ಕೈಗಾರಿಕಾ ಘಟಕಗಳಿಗೆ ಇನ್ನು ಲೈಸೆನ್ಸನ್ನು ನೀಡಬಾರದೆಂದೂ ಹೊಸ ಕೈಗಾರಿಕಾ ಲೈಸೆನ್ಸಿಂಗ್ ನೀತಿ ಹಾಗೂ ಏಕಸ್ವಾಮಿತ್ವ ಶಾಸನಗಳು ಸಾರುತ್ತಿವೆ. ಇದೊಂದು ಸಮರ್ಥಿಸಿಕೊಳ್ಳಲಾರದಂತಹ ಆರ್ಥಿಕ ಪರಿಸ್ಥಿತಿಯನ್ನು ತಂದೊಡ್ಡಿದೆ. ಲೈಸೆನ್ಸಿಂಗ್ ನೀತಿಯು ಆರ್ಥಿಕ ಪರಿಸ್ಥಿತಿಯಿಂದೊಡಗೂಡಿದ್ದಿರಬೇಕೆ ವಿನಾ ರಾಜಕೀಯ ಉದ್ದೇಶಗಳಿಂದಲ್ಲ. ಅಂದರೆ ಯಾವ ಉದ್ಯಮಕ್ಕೆ ದೇಶದ ಹಿತಾಸಕ್ತಿಯಿದೆಯೋ ಅದಕ್ಕೆ ಪ್ರಾಶಸ್ತ್ಯ ನೀಡಿಕೆ.

ಒಟ್ಟಿನಲ್ಲಿ, ದತ್ ವರದಿಯು ನಿಶ್ಚಿತತೆ ಹಾಗೂ ಸೂಕ್ಷ್ಮವಾದ ವಿವೇಚನೆಗಳಿಲ್ಲದಿರುವುದರಿಂದ ಅನುಷ್ಠಾನಕ್ಕೆ ಯೋಗ್ಯವಾದುದಾಗಿಲ್ಲ. ವಲಯಗಳಲ್ಲಿರಬೇಕಾದ ಪರಸ್ಪರ ಅವಲಂಬನೆಯನ್ನು ಅದು ಧಿಕ್ಕರಿಸಿ ಕಬ್ಬಿಣದ ಬೇಲಿಯನ್ನು ಮಧ್ಯೆ ಬಿಗಿದುಕೊಳ್ಳಲು ಅನುವುಮಾಡಿಕೊಟ್ಟಿದೆ: ಇದರಿಂದ ಹಿತಕರ ಕೈಗಾರಿಕಾ ಬೆಳವಣಿಗೆಗೆ ಭೂಮಿಕೆಗಳಾದ ಸಾಮರಸ್ಯ ಮತ್ತು ಹೊಂದಾಣಿಕೆಗಳನ್ನು ಅಲ್ಲಗಳೆದಂತಾಯಿತು. ಅಲ್ಲದೆ ಬೊಂಬಾಯಿ, ಮಹಾರಾಷ್ಟ್ರ ಕೈಗಾರಿಕೆಗಳು ಕೈ ಸುಟ್ಟುಕೊಂಡ ಪ್ರಸಂಗಗಳು ನಿಷೇಧಗಳು ಅನುಷ್ಠಾನಕ್ಕೆ ತರಲು ಅನುಚಿತ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಶಾಸನಗಳು ಅಧಿಕವಾದಷ್ಟು. ಸಂಕೋಲೆ ಬಿಗಿಯಾದಷ್ಟು ಉಲ್ಲಂಘನೆ ಪ್ರತಿಭಟನೆಗಳು ಹೆಚ್ಚುವುದು ಪ್ರಜಾತಂತ್ರದಲ್ಲಿ ಸಹಜ.

ಇಲ್ಲಿ ಒಂದು ವಿಷಯ ಸ್ಮರಿಸಿಕೊಳ್ಳಬೇಕಾಗಿದೆ. ತುರ್ತಾಗಿ ಹಣದುಬ್ಬರವನ್ನು ಹತೋಟಿಗೆ ತಂದ ದತ್ ಸಮಿತಿ ವರದಿಯಿಂದ ತಲೆದೋರಿರುವ ಅನಿಶ್ಚಿತತೆಗಳು ನಿವಾರಣೆಯಾಗದಿದ್ದರೆ ೧೯೬೬ರಲ್ಲಿ ಪ್ರಾರಂಭವಾದ ಹಣ ವಿನಿಯೋಗದ ಅಭಾವ ಪರಿಸ್ಥಿತಿ ಮತ್ತಷ್ಟು ಹದಗೆಡಬಹುದೆಂದು ಕೇಂದ್ರ ಕೈಗಾರಿಕಾ ಸಲಹಾ ಮಂಡಳಿಯ ಇತ್ತೀಚೆಗೆ ಸೇರಿದ ೨೪ನೆ ಸಭೆಯಲ್ಲಿ ಶ್ರೀ ಭಾಭಾ ಅಭಿಪ್ರಾಯಪಟ್ಟಿದ್ದಾರೆ. ಸ್ವಾಮಿನಾಥನ್ ವರದಿಯು ಬಹಳ ಸ್ವೇಚ್ಛಾ ಪ್ರವೃತ್ತಿಯದ್ದಾದರೆ ದತ್ ಸಮಿತಿಯು ಬಹಳ ಬಿಗಿಯಾದುದಾಗಿ ಏಕಸ್ವಾಮಿತ್ವವನ್ನು ಕಂಡಡೆಯಲ್ಲಾ ಪ್ರತಿಬಂಧಿಸಲು ಪ್ರಯತ್ನಿಸುತ್ತದೆ.

ಆರಕ್ಷಕ ಹೊಸ ಬಂಡವಾಳ ಹೂಡಿ ದೊಡ್ಡ ಪ್ರಮಾಣದ ಕೈಗಾರಿಕಾ ಘಟಕಗಳು ದೇಶದ ಆರ್ಥಿಕತೆಗೆ ಹೊಸ ಸ್ವರೂಪ ಕೊಡಬಲ್ಲವು ಎಂಬುದು ಸರಕಾರಕ್ಕೆ ವಿದಿತವಿರುವ

ಅಂಶ. ಇದನ್ನು ಒಪ್ಪಲು ಸರಕಾರ ಹಿಂದೇಟು ಹಾಕುತ್ತಲಿದೆ. ವಿಸ್ತರಿಸಲು ಹಾಗೂ ಹೊಸ ಘಟಕಗಳನ್ನು ಸ್ಥಾಪಿಸಲು ಅದು ಉತ್ತೇಜನ ನೀಡುತ್ತಿಲ್ಲ. ಲೈಸೆನ್ಸ್ ಕೋರಿ ಬಂದ ಅಸಂಖ್ಯಾತ ಅರ್ಜಿಗಳು ಹಾಗೆಯೇ ಕೊಳೆಯುತ್ತಲಿವೆ. ಇದರ ಕೂಡ ವಿದೇಶಿ ಬಂಡವಾಳ ಮತ್ತು ತಾಂತ್ರಿಕ ಜ್ಞಾನ ಎರವಲಿಗೆ ಸಂಬಂಧಿಸಿದ ಸರಕಾರದ ನೀತಿ ಅಸಮರ್ಪಕವಾಗಿದೆ.

ಲೈಸೆನ್ಸ್ ವಿತರಣಾ ವ್ಯವಸ್ಥೆಯ ಬಗ್ಗೆ ಒಂದು ಮಾತು; ಈಗ ಲೈಸೆನ್ಸಿಂಗ್ ಸಮಿತಿಯು ಅವಲೋಕಿಸಿದ ನಂತರ ಅರ್ಜಿಗಳು ಹೊಸದಾಗಿ ಅಸ್ತಿತ್ವಕ್ಕೆ ಬಂದ ಸಲಹಾ ಸಮಿತಿಗೆ ಬರುತ್ತವೆ. ಈ ಸಮಿತಿಯ ಅಧ್ಯಕ್ಷ ಕೂಡುಬಂಡವಾಳ ಸಂಸ್ಥೆಗಳಿಗೆ ಸಂಬಂಧಿಸಿದ ಇಲಾಖೆಯ ಕಾರ್ಯದರ್ಶಿಯೇ. ಲೈಸೆನ್ಸ್ ನೀಡುವ ಮುನ್ನ ಅರ್ಜಿಯು ಏಕಸ್ವಾಮಿತ್ವ ಸಮಿತಿಯ ಪರಿಶೀಲನೆಗೊಳಗಾಗಬೇಕು. ಯೋಜನೆಗಳನ್ನು ಸಿದ್ಧಪಡಿಸಿ ಸಂಸ್ಕರಿಸಲು ಕೈಗಾರಿಕಾ ಕ್ಷೇತ್ರದಲ್ಲಿ ತಳವೂರಿರುವ ಉದ್ದಿಮೆಗಾರರಿಗೆ ಇರುವ ಸೌಲಭ್ಯ ಹೊಸ ಹಾಗೂ ಮಧ್ಯಮ ಉದ್ದಿಮೆಗಾರರಿಗೆ ಇಲ್ಲವೆಂಬ ಕಾರಣದಿಂದ ಅವರ ಅರ್ಜಿಗಳನ್ನು ತಿರಸ್ಕರಿಸಿದ್ದು ಈಗೀಗ ಕಂಡು ಬರುತ್ತಲಿದೆ. ಅನುಮತಿ ಪತ್ರಗಳಿಗೆ ಬೇಡಿ ಬಂದ ಎಲ್ಲ ಅರ್ಜಿಗಳನ್ನು ತೀವ್ರ ಪರಿಶೀಲನೆಗೆ ಗುರಿಮಾಡುವುದು ಸರಕಾರದ ಮಹತ್ತರ ಕಾರ್ಯವಾಗಿದೆ.

ಇಂದು ದೇಶದಲ್ಲಿ ಆರ್ಥಿಕ ಬೆಳವಣಿಗೆ ಸಾಧಿಸಲು ವಿಪುಲ ಸಂಪತ್ತಿದೆ. ವ್ಯವಸಾಯ ರಂಗದಲ್ಲಿ ಉತ್ಪಾದನೆ ತೃಪ್ತಿಕರವಾಗಿದೆ. ಕ್ರಮಬದ್ಧ ಪ್ರಯತ್ನಗಳನ್ನು ಕೈಗೊಂಡಲ್ಲಿ, ಹಳ್ಳಿಗಳಿಂದ ಧಾರಾಳ ಧನಸಂಚಯ ಮಾಡಬಹುದಾಗಿದೆ. ಇದು ದೇಶದ ಪ್ರಗತಿಗೆ ದಾರಿ ದೀಪವಾಗಬಲ್ಲದು. ಸಾರ್ವಜನಿಕ ಧನ ಸಂಸ್ಥೆಗಳು ತಮ್ಮ ಸ್ನೇಹ ಹಸ್ತ ಇಲ್ಲಿ ನೀಡಲು ಶಕ್ತವಾಗಿವೆ. ಬ್ಯಾಂಕು ಶಾಖಾ ವಿಸ್ತರಣೆ ಈ ದಿಶೆಯಲ್ಲಿ ಒಂದು ಮೈಲಿಗಲ್ಲಾಗಿದೆ.

ದೇಶದ ಶಾಶ್ವತ ಆರ್ಥಿಕ ಸ್ವಾವಲಂಬನೆಯತ್ತ ಸರಕಾರದ ದೃಷ್ಟಿಯಿರಬೇಕು. ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ಕಟ್ಟಳೆಗಳು ಈ ಗುರಿಯ ಪೂರಕಗಳಾಗಿರಬೇಕು. ಸರಕಾರಿ ವಲಯ ವಿಸ್ತರಣೆ ಹುಚ್ಚು ಹುಚ್ಚಾದ ರಾಜಕೀಯ ಚದುರಂಗದಾಟವಾಗಬಾರದು. ರಾಷ್ಟ್ರೀಕರಣ ಎಲ್ಲಿ ಸೂಕ್ತವೋ ಅಲ್ಲಿಗೇ ಸೀಮಿತವಾಗಿರಬೇಕು. ಖಾಸಗಿ ವಲಯವನ್ನು ಮೆಟ್ಟಿ ತುಳಿಯುವ ಮನೋಭಾವನೆ ಎಂದೆಂದಿಗೂ ಸಲ್ಲದು. ದೇಶದ ಉನ್ನತ ಆರ್ಥಿಕ ಸ್ವಾತಂತ್ರ್ಯ ಸಾಧನೆಯಲ್ಲಿ ಖಾಸಗಿವಲಯದ ಪ್ರಮುಖ ಪಾತ್ರವಿರಬೇಕು. ಮೇಧಾವಿಗಳು, ಆರ್ಥಿಕತಜ್ಞರು, ವ್ಯವಹಾರ ಕುಶಲಿಗಳು, ತಾಂತ್ರಿಕ ತಜ್ಞರು ತುಂಬಿ ತುಳುಕುವ ಖಾಸಗಿ ವಲಯ ದೇಶವನ್ನು ಕಟ್ಟಿ ಬೆಳೆಸುವುದರಲ್ಲಿ ತಮ್ಮ ಹಸ್ತವನ್ನು ನೀಡಬಲ್ಲರು. ಆದರೆ ಇವರಿಗೆ ಸರಿಯಾದ ರೀತಿಯಲ್ಲಿ ಉತ್ತೇಜನ ದೊರೆತಲ್ಲಿ

ಇತಿಹಾಸ ಈ ಮಾತಿಗೆ ಪುಷ್ಟಿಕೊಡಬಹುದು. ಹೊಸ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವಂತೆ ಲೈಸೆನ್ಸಿಂಗ್ ವ್ಯವಸ್ಥೆಯು ಪರಿಷ್ಕಾರವಾಗಬೇಕು. ಬದಲಾದ ಆರ್ಥಿಕ ಪರಿಸರಕ್ಕೆ ತಕ್ಕಂತೆ ಜಂಟೀಕ್ಷೇತ್ರ, ಕಂಪೆನಿ ಶಾಸನ ತಿದ್ದುಪಡಿ ಇತ್ಯಾದಿ ನೀತಿ ಬದಲಾಗಬೇಕಾಗಿದೆ.

ಆರ್ಥಿಕ ಅಭಿವೃದ್ಧಿಯಲ್ಲಿ ಬೇಸಾಯದ ಪಾತ್ರ

● ಎಮ್. ಸಿ. ಕೊಡ್ಲಿ

"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯು ಮೇಲು; ಮೇಟಿಯಿಂ ರಾಟಿ ನಡೆದುದಲ್ಲದೆ ದೇಶದಾಟವೇ ಕೆಡುಗು ಸರ್ವಜ್ಞ".

ಜಗತ್ತಿನಲ್ಲಿ ಈಗ ೧೫೦ಕ್ಕೂ ಹೆಚ್ಚು ಸಣ್ಣ ದೊಡ್ಡ ರಾಷ್ಟ್ರಗಳಿವೆ. ಈ ಎಲ್ಲ ದೇಶಗಳೂ ಆರ್ಥಿಕವಾಗಿ ಒಂದೇ ಮಟ್ಟದಲ್ಲಿಲ್ಲ. ಇದರಲ್ಲಿ ಕೆಲವು ದೇಶಗಳು ಆರ್ಥಿಕವಾಗಿ ಮುಂದುವರಿದಿದ್ದು, ಅವುಗಳನ್ನು ಅಭಿವೃದ್ಧಿಹೊಂದಿದ ದೇಶಗಳೆಂದು ಕರೆಯುತ್ತಾರೆ. ಮತ್ತೆ ಕೆಲವು ದೇಶಗಳು ಆರ್ಥಿಕವಾಗಿ ಹಿಂದುಳಿದಿವೆ. ಇವುಗಳನ್ನು ಅಭಿವೃದ್ಧಿಹೊಂದುತ್ತಿರುವ ದೇಶಗಳೆಂದು ಕರೆಯುತ್ತಾರೆ. ಅಮೇರಿಕೆಯ ಸಂಯುಕ್ತ ಸಂಸ್ಥಾನಗಳು, ಕೆನಡಾ, ಆಸ್ಟ್ರೇಲಿಯಾ, ನ್ಯೂಝಿಲಂಡ, ಪಶ್ಚಿಮ ಯುರೋಪ ರಾಷ್ಟ್ರಗಳು, ಜಪಾನ ಮುಂತಾದ ದೇಶಗಳು ಅಭಿವೃದ್ಧಿಹೊಂದಿದ ದೇಶಗಳು. ಏಶಿಯಾ ಖಂಡದ ದೇಶಗಳು, ಆಫ್ರಿಕಾದ ದೇಶಗಳು ಮತ್ತು ದಕ್ಷಿಣ ಅಮೇರಿಕೆಯಲ್ಲಿಯ ಬಹುತೇಕ ರಾಷ್ಟ್ರಗಳು ಅಭಿವೃದ್ಧಿಹೊಂದುತ್ತಿರುವ ದೇಶಗಳು.

ಅಭಿವೃದ್ಧಿಹೊಂದಿದ ದೇಶಗಳನ್ನು ಅಭಿವೃದ್ಧಿಹೊಂದುತ್ತಿರುವ ದೇಶಗಳಿಗೆ ಹೋಲಿಸಲಾಗಿ ನಾವು ಅವುಗಳಲ್ಲಿ ಸಾಕಷ್ಟು ವ್ಯತ್ಯಾಸವನ್ನು ಕಂಡುಕೊಳ್ಳಬಹುದು. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಈ ದೇಶಗಳು ಸಾಕಷ್ಟು ಭಿನ್ನತೆಯನ್ನು ಹೊಂದಿರುತ್ತವೆ. ಅಭಿವೃದ್ಧಿಹೊಂದಿದ ರಾಷ್ಟ್ರಗಳಲ್ಲಿ ವ್ಯಕ್ತಿಯ ಸರಾಸರಿ ವರಮಾನ ಹೆಚ್ಚಾಗಿದ್ದು ಜನಸಾಮಾನ್ಯರು ತಮ್ಮ ಜೀವನವನ್ನು ನೆಮ್ಮದಿಯಿಂದ ಸಾಗಿಸುತ್ತಾರೆ. ಆದರೆ ಅಭಿವೃದ್ಧಿಹೊಂದುತ್ತಿರುವ ಬಡ ದೇಶಗಳಲ್ಲಿ ವ್ಯಕ್ತಿಯ ವಾರ್ಷಿಕ ಸರಾಸರಿ ವರಮಾನ ಕಡಿಮೆ ಇದ್ದು ಬಹುತೇಕ ಜನರು ಕಷ್ಟಮಯ ಜೀವನವನ್ನು ಸಾಗಿಸುತ್ತಾರೆ. ಈ ದೇಶಗಳ ಆರ್ಥಿಕ ರಚನೆಯನ್ನು ನಾವು ನೋಡಿದಾಗ ಅಭಿವೃದ್ಧಿಹೊಂದುತ್ತಿರುವ ಬಡ ದೇಶಗಳಲ್ಲಿ ಬಹುತೇಕ ಜನರು (ಶೇಕಡಾ ೮೦ರಷ್ಟು) ಬೇಸಾಯವನ್ನವಲಂಬಿಸಿ ಜೀವಿಸುತ್ತಾರೆ. ಆದ್ದರಿಂದ ಇಂಥ ದೇಶಗಳಲ್ಲಿ ಗ್ರಾಮೀಣ ಜನರೇ ಹೆಚ್ಚು. ಆದರೆ ಮುಂದುವರಿದ ದೇಶಗಳಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರು ಅತೀ ಕಡಿಮೆ.

ಅಮೇರಿಕೆಯಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರು ಅತೀ ಕಡಿಮೆ. ಅಮೇರಿಕೆಯಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರು ಶೇಕಡಾ ೫ ರಷ್ಟು ಮಾತ್ರ. ಉಳಿದ ಶೇಕಡಾ ೯೫ರಷ್ಟು ಜನರು ಉದ್ದಿಮೆ ಮತ್ತು ವಿವಿಧ ಸೇವಾರಂಗಗಳಲ್ಲಿ ದುಡಿಯುತ್ತಿರುತ್ತಾರೆ. ಹೀಗಾಗಿ ಇಂತಹ ದೇಶಗಳಲ್ಲಿ ಪಟ್ಟಣದ ಜನರೇ ಹೆಚ್ಚಿಗಿರುತ್ತಾರೆ. ಆದ್ದರಿಂದ ದೇಶದ ಆರ್ಥಿಕ ಅಭಿವೃದ್ಧಿಯಾದಂತೆ ಬೇಸಾಯವನ್ನವಲಂಬಿಸಿ ಜೀವಿಸುವವರ ಪ್ರಮಾಣ ಕಡಿಮೆಯಾಗುತ್ತಹೋಗುತ್ತದೆ. ಈ ರೀತಿ ಬೇಸಾಯದಿಂದ ಉಳಿದ ರಂಗಗಳಿಗೆ ಜನರ ವರ್ಗಾವಣೆಯು ಆರ್ಥಿಕ ಅಭಿವೃದ್ಧಿಯ ಲಕ್ಷಣವಾಗಿದೆ. ಈಗ ಮುಂದುವರಿದ ದೇಶಗಳಲ್ಲಿಯೂ ಸಹಿತ ಕೆಲವು ದಶಕಗಳ ಹಿಂದೆ ಬೇಸಾಯವನ್ನವಲಂಬಿಸಿ ಜೀವಿಸುವವರ ಪ್ರಮಾಣವು ಹೆಚ್ಚಾಗಿತ್ತು. ಆ ದೇಶಗಳು ಆರ್ಥಿಕವಾಗಿ ಮುಂದುವರಿದಂತೆ ಈ ಪ್ರಮಾಣವು ಕುಗ್ಗುತ್ತಾಬಂದಿತು.

ಜಗತ್ತಿನಲ್ಲಿಯ ಅನೇಕ ಅಭಿವೃದ್ಧಿಹೊಂದುತ್ತಿರುವ ದೇಶಗಳು ಈಗ ಆರ್ಥಿಕವಾಗಿ ಮುಂದುವರಿಯಲು ಪ್ರಯತ್ನಿಸುತ್ತಿವೆ. ಈ ಆರ್ಥಿಕ ಬದಲಾವಣೆಯಲ್ಲಿ ಬೇಸಾಯವು ಬಹಳ ಮಹತ್ವದ ಪಾತ್ರವನ್ನು ಹೊಂದಿದೆ. ಬೇಸಾಯವು ದೇಶದ ಆರ್ಥಿಕ ಅಭಿವೃದ್ಧಿಗೆ ಈ ಕೆಳಗೆ ಹೇಳಿದ ರೀತಿಯಲ್ಲಿ ಸಹಾಯಕವಾಗುತ್ತದೆ. ಅವು ಯಾವವೆಂದರೆ :

೧) ಆರ್ಥಿಕ ಅಭಿವೃದ್ಧಿಯಾದಂತೆ ಬೇಸಾಯದ ವಸ್ತುಗಳಾದ ಆಹಾರ ಮತ್ತು ಕಚ್ಚಾ ವಸ್ತುಗಳಿಗೆ ಬೇಡಿಕೆ ಹೆಚ್ಚಾಗುತ್ತದೆ. ಬೇಡಿಕೆ ಹೆಚ್ಚಾದಂತೆ ಈ ವಸ್ತುಗಳ ಉತ್ಪಾದನೆಯು ಹೆಚ್ಚದಿದ್ದಲ್ಲಿ ಅವುಗಳ ಬೆಲೆಗಳು ಏರಿ ಆರ್ಥಿಕ ಅಭಿವೃದ್ಧಿಗೆ ಅಡೆತಡೆ ಉಂಟಾಗುತ್ತದೆ.

೨) ಎರಡನೆಯದಾಗಿ, ದೇಶದ ಆರ್ಥಿಕ ಅಭಿವೃದ್ಧಿಯ ಮೊದಲ ಹಂತಗಳಲ್ಲಿ. ಬೇಸಾಯದ ವಸ್ತುಗಳನ್ನು ಬೇರೆ ದೇಶಗಳಿಗೆ ರಫ್ತುಮಾಡುವವರಿಂದ ವಿದೇಶಿ ವಿನಿಮಯವನ್ನು ಗಳಿಸಬಹುದು. ಇಂಥ ವಿದೇಶಿ ವಿನಿಮಯದಿಂದ, ಮುಂದುವರಿದ ದೇಶಗಳಿಂದ ಬಂಡವಾಳ ವಸ್ತುಗಳನ್ನು ಆಮದುಮಾಡಿಕೊಳ್ಳಬಹುದು.

೩) ಮೂರನೆಯದಾಗಿ, ಔದ್ಯಮಿಕ ರಂಗಗಳಿಗೆ ಬೇಕಾದ ಕಾರ್ಮಿಕರನ್ನು ಬೇಸಾಯ ರಂಗದಿಂದ ವರ್ಗಾವಣೆಮಾಡಬಹುದು. ಬೇಸಾಯದಲ್ಲಿ ಪ್ರಗತಿಯಾದಂತೆ, ಬೇಸಾಯ ರಂಗದಲ್ಲಿಯ ಶ್ರಮಿಕರನ್ನು ಬೇರೆ ರಂಗಗಳಿಗೆ ವರ್ಗಾವಣೆಮಾಡಲು ಅನುಕೂಲವಾಗುತ್ತದೆ.

೪) ನಾಲ್ಕನೆಯದಾಗಿ. ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿ ಬೇಸಾಯವೇ ಪ್ರಧಾನ ರಂಗವಾಗಿರುವದರಿಂದ ದೇಶದ ಆರ್ಥಿಕ ಅಭಿವೃದ್ಧಿಗೆ ಬೇಕಾದ ಬಂಡವಾಳವು ಬೇಸಾಯರಂಗದಿಂದಲೇ ಬರಬೇಕಾಗುತ್ತದೆ.

೫) ಕೊನೆಯದಾಗಿ, ಬೇಸಾಯರಂಗದಲ್ಲಿಯ ಜನರ ವರಮಾನ ಹೆಚ್ಚಿದಂತೆ ಅವರು ಬೇರೆ ರಂಗಗಳಿಂದ ವಸ್ತುಗಳನ್ನು ಕೊಳ್ಳುವ ಶಕ್ತಿಯು ಹೆಚ್ಚುತ್ತದೆ. ಈ ರೀತಿಯಾಗಿ ಔದ್ಯಮಿಕ ರಂಗಕ್ಕೆ ಬೇಸಾಯಗಾರರು ಪ್ರೋತ್ಸಾಹ ಕೊಟ್ಟಂತಾಗುತ್ತದೆ.

ಮೇಲಿನ ಐದು ಅಂಶಗಳನ್ನು ನಾವು ಕೂಲಂಕಷವಾಗಿ ವಿವರಿಸುವಾ.

ಹೆಚ್ಚಿನ ಆಹಾರವನ್ನು ಪೂರೈಸುವದು :

ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿ ಆಹಾರದ ಬೇಡಿಕೆಯು ಪ್ರತಿವರುಷ ಹೆಚ್ಚುತ್ತಿರುತ್ತದೆ. ಈ ದೇಶಗಳಲ್ಲಿಯ ಆಹಾರದ ಹೆಚ್ಚಳದ ಗತಿಯನ್ನು ನಾವು ಈ ರೀತಿ ಹೇಳಬಹುದು,

$D = p + ng,$

D = ಆಹಾರದ ಹೆಚ್ಚಳದ ಗತಿ.

p = ಜನಸಂಖ್ಯೆಯು ಬೆಳೆಯುವ ಗತಿ.

g = ವ್ಯಕ್ತಿಯ ವಾರ್ಷಿಕ ವರಮಾನದ ಹೆಚ್ಚಳದ ಗತಿ.

n = ಆಹಾರದ ಬೇಡಿಕೆಯ ಆದಾಯ ಸ್ಥಿತಿಸ್ಥಾಪಕತ್ವ.

ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿ ಆಹಾರದ ಬೇಡಿಕೆಯ ಹೆಚ್ಚಳದ ಗತಿಯು ಬಹಳವಿರುತ್ತದೆ. ಯಾಕೆಂದರೆ ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿ ಜನಸಂಖ್ಯೆಯು ವರುಷಕ್ಕೆ ಶೇಕಡಾ ೨.೫ ರಿಂದ ೩ರ ವರೆಗೆ ಹೆಚ್ಚುತ್ತಾ ನಡೆದಿದೆ. ಜನಸಂಖ್ಯೆಯು ಬೆಳೆದಂತೆ ಆಹಾರದ ಉತ್ಪಾದನೆಯೂ ಹೆಚ್ಚಾಗಬೇಕಾಗುತ್ತದೆ. ಇದು ಅಲ್ಲದೆ ಅಭಿವೃದ್ಧಿಹೊಂದುತ್ತಿರುವ ದೇಶಗಳಲ್ಲಿ ಜನರ ಆಹಾರದ ಬೇಡಿಕೆಯ ಆದಾಯ ಸ್ಥಿತಿಸ್ಥಾಪಕತ್ವವೂ ಬಹಳವಿರುತ್ತದೆ. ಅಂದರೆ ಇಂಥ ದೇಶಗಳಲ್ಲಿ ಜನರ ಆದಾಯ ಹೆಚ್ಚಿದಂತೆ ಅವರು ಹೆಚ್ಚಿಗೆ ಆಹಾರವನ್ನು ಬೇಡುತ್ತಾರೆ. ಒಬ್ಬ ವ್ಯಕ್ತಿಯ ಆದಾಯ ವರುಷಕ್ಕೆ ೧೦೦ ರೂಪಾಯಿಯಿಂದ ಹೆಚ್ಚಾದರೆ ಆ ವ್ಯಕ್ತಿಯು ಆ ೧೦೦ ರೂಪಾಯಿಗಳಲ್ಲಿ ಸುಮಾರು ೬೦ ರಿಂದ ೭೦ ರೂಪಾಯಿಗಳನ್ನು ಹೆಚ್ಚಿಗೆ ಆಹಾರವನ್ನು ಕೊಳ್ಳಲು ಉಪಯೋಗಿಸುತ್ತಾನೆ. ಆದ್ದರಿಂದ ಆಹಾರದ ಬೇಡಿಕೆಯು ಹೆಚ್ಚುತ್ತಾಹೋಗುತ್ತದೆ. ಹೀಗೆ ಆಹಾರದ ಬೇಡಿಕೆಯು, ಜನಸಂಖ್ಯೆಯ ಹೆಚ್ಚಳದಿಂದ ಮತ್ತು ಆದಾಯದ ಹೆಚ್ಚಳದಿಂದ ಹೆಚ್ಚುತ್ತಾ ಹೋದಲ್ಲಿ, ಆಹಾರದ ಉತ್ಪಾದನೆಯೂ ಹೆಚ್ಚಾಗಬೇಕಾಗುತ್ತದೆ. ಒಂದುವೇಳೆ ಆಹಾರದ ಉತ್ಪಾದನೆಯು ಹೆಚ್ಚದಿದ್ದಲ್ಲಿ ಬೆಲೆಗಳು ಏರಿ ಹಣದುಬ್ಬರವು ಪ್ರಾರಂಭವಾಗುತ್ತದೆ. ಈ ರೀತಿಯ ಹಣದುಬ್ಬರವು ಅಭಿವೃದ್ಧಿಹೊಂದುತ್ತಿರುವ ದೇಶಗಳಿಗೆ ಮಾರಕವಾಗಬಲ್ಲದು. ಯಾಕೆಂದರೆ ಅಂಥ ದೇಶಗಳಲ್ಲಿ ಹೆಚ್ಚಿನ ಜನರು ಬಡವರಾಗಿರು

ವದರಿಂದ ಮತ್ತು ಬಡಜನರು ತಮ್ಮ ಆದಾಯದ ಬಹುತೇಕ ಭಾಗವನ್ನು (ಅಂದರೆ ಶೇಕಡಾ ೫೦ ರಿಂದ ೬೦) ಆಹಾರಕ್ಕಾಗಿಯೇ ವೆಚ್ಚಮಾಡುವದರಿಂದ ಬೆಲೆಗಳ ಏರಿಕೆಯಿಂದ ಜನಸಾಮಾನ್ಯರಿಗೆ ಬಹಳ ತೊಂದರೆಯಾಗುತ್ತವೆ. ಆದ್ದರಿಂದ ಆಹಾರದ ಉತ್ಪಾದನೆಯು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಬಹಳ ಮಹತ್ವವನ್ನು ಹೊಂದಿದೆ. ಆಹಾರವು ಬೇಸಾಯದಿಂದಲೇ ಬರುವದರಿಂದ ಬೇಸಾಯದ ಅಭಿವೃದ್ಧಿಯಾಗದ ಹೊರತು ದೇಶದ ಆರ್ಥಿಕ ಅಭಿವೃದ್ಧಿಯಾಗಲಾರದು. ಬೇಸಾಯವು ದೇಶದ ಆರ್ಥಿಕ ಅಭಿವೃದ್ಧಿಯ ಅಡಿಪಾಯವಿದ್ದಂತೆ. ಯಾವದೇ ದೇಶದಲ್ಲಿ ಬೇಸಾಯವು ಹಿಂದುಳಿದಿದ್ದರೆ ಆ ದೇಶದಲ್ಲಿಯ ಉದ್ದಿಮೆ ಮತ್ತು ಉಳಿದ ರಂಗಗಳು ಚಿಕ್ಕವಿದ್ದು ಅಷ್ಟು ಪ್ರಗತಿಯನ್ನು ಹೊಂದಲು ಸಾಧ್ಯವಿಲ್ಲವೆಂದು ಹೇಳಬಹುದು.

ಬೇಸಾಯದ ವಸ್ತುಗಳ ರಫ್ತು :

ಯಾವದೇ ದೇಶದ ಆರ್ಥಿಕ ಅಭಿವೃದ್ಧಿಯ ಮೊದಲ ಹಂತಗಳಲ್ಲಿ ಬೇಸಾಯದ ವಸ್ತುಗಳ ರಫ್ತಿನಿಂದ ವಿದೇಶೀ ವಿನಿಮಯವನ್ನು ಗಳಿಸಬೇಕಾಗುತ್ತದೆ. ಹೀಗೆ ಗಳಿಸಿದ ವಿದೇಶೀ ವಿನಿಮಯವನ್ನು ಬಂಡವಾಳ ವಸ್ತುಗಳಾದ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳಲು ಉಪಯೋಗಿಸಬಹುದು. ಅಭಿವೃದ್ಧಿಹೊಂದುತ್ತಿರುವ ದೇಶಗಳು ಬೇಸಾಯದ ವಸ್ತುಗಳನ್ನು ಬಿಟ್ಟರೆ ಬೇರೆ ಯಾವ ವಸ್ತುಗಳನ್ನು ರಫ್ತು ಮಾಡಲು ಸಾಧ್ಯವಿಲ್ಲ. ಯಾಕೆಂದರೆ ಉಳಿದ ರಂಗಗಳು ಅಷ್ಟು ಅಭಿವೃದ್ಧಿಹೊಂದಿರುವದಿಲ್ಲ. ಕೆಲವೊಂದು ಅಭಿವೃದ್ಧಿಹೊಂದುತ್ತಿರುವ ದೇಶಗಳು ಬೇಸಾಯರಂಗದ ೨ ಅಥವಾ ೩ ವಸ್ತುಗಳನ್ನು ಮಾತ್ರ ರಫ್ತುಮಾಡುತ್ತಿರಬಹುದು. ಉದಾಹರಣಾರ್ಥವಾಗಿ ಆಫ್ರಿಕೆಯ ಕೆಲವೊಂದು ದೇಶಗಳು ಕಾಫಿ, ಕೊಬ್ಬರಿ ಮತ್ತು ಖನಿಜವಸ್ತುಗಳನ್ನು ರಫ್ತು ಮಾಡುತ್ತವೆ. ಮಧ್ಯಪೂರ್ವದ ಕೆಲವೊಂದು ದೇಶಗಳು ಕೇವಲ ಪೆಟ್ರೋಲಿಯಮ್ ರಫ್ತು ಮಾಡುತ್ತವೆ. ಹೀಗೆ ದೇಶಗಳು ಕೇವಲ ಒಂದು ಅಥವಾ ಎರಡು ವಸ್ತುಗಳನ್ನು ರಫ್ತುಮಾಡಿ ವಿದೇಶೀ ವಿನಿಮಯ ಗಳಿಸುವದು ಕೆಲವೊಂದು ವೇಳೆ ಬಹಳ ಗಂಡಾಂತರಕಾರಿಯಾಗಿರುತ್ತದೆ. ಏಕೆಂದರೆ ಈ ವಸ್ತುಗಳ ಬೇಡಿಕೆಯು ಜಾಗತಿಕ ಮಾರುಕಟ್ಟೆಯಲ್ಲಿ ಕಡಿಮೆಯಾದಾಗ ಅವುಗಳನ್ನು ರಫ್ತುಮಾಡುವ ದೇಶಗಳು ತೊಂದರೆಯನ್ನು ಅನುಭವಿಸಬೇಕಾಗುತ್ತದೆ. ಆದ್ದರಿಂದ ಅಭಿವೃದ್ಧಿಹೊಂದುತ್ತಿರುವ ದೇಶಗಳು ತಮ್ಮ ರಫ್ತುಗಳನ್ನು ವಿಸ್ತರಿಸಬೇಕಾಗುತ್ತದೆ. ಈ ರೀತಿಯಾಗಿ ರಫ್ತುಗಳ ವಿಸ್ತರಣೆಯಾಗಬೇಕಾದರೆ ಆ ದೇಶದ ಬೇಸಾಯವು ಮೊದಲು ಸುಧಾರಿಸಬೇಕಾಗುತ್ತದೆ.

ಬೇಸಾಯ ರಂಗದಿಂದ ಉಳಿದ ರಂಗಗಳಿಗೆ ಕಾರ್ಮಿಕರ ವರ್ಗಾವಣೆ :

ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವವರ ಪ್ರಮಾಣ ಹೆಚ್ಚಿಗಿರುತ್ತದೆ. ಉಳಿದ ರಂಗಗಳು ಅಭಿವೃದ್ಧಿ ಹೊಂದುವವರೆಗೆ

ಎಲ್ಲ ಜನರು ಬೇಸಾಯದಲ್ಲಿಯೇ ಉಪಜೀವಿಸಬೇಕಾಗುತ್ತದೆ. ಆದರೆ ಆರ್ಥಿಕ ಅಭಿವೃದ್ಧಿಯಾದಂತೆ ಉದ್ದಿಮೆ ರಂಗದಲ್ಲಿ ಕಾರ್ಮಿಕರ ಬೇಡಿಕೆ ಹೆಚ್ಚಾಗುತ್ತ ಹೋಗುತ್ತದೆ. ಉದ್ದಿಮೆಗಳಲ್ಲಿ ಕಾರ್ಮಿಕರು ಬೇಕಾದಾಗ ಬೇಸಾಯದಿಂದ ಜನರನ್ನು ಉದ್ದಿಮೆಗಳಿಗೆ ವರ್ಗಾವಣೆ ಮಾಡಲು ಬರುತ್ತದೆ. ಈ ವರ್ಗಾವಣೆಯೆಂದರೆ ಕೇವಲ ಕೆಲಸಗಾರರನ್ನು ಬೇಸಾಯವನ್ನು ಬಿಡಿಸಿ, ಕಾರ್ಖಾನೆಗಳಿಗೆ ನೆಟ್ಟಗೆ ಕಳಿಸಿಕೊಡುವದೆಂದು ನಾವು ಭಾವಿಸಬಾರದು. ಬೇಸಾಯದಲ್ಲಿ ಕೆಲಸ ಮಾಡುವವರನ್ನು ತರಬೇತಿಗೊಳಿಸಿ ಕೆಲವೊಂದು ಉದ್ದಿಮೆಗಳಲ್ಲಿ ಅವರನ್ನು ದುಡಿಯಲು ಹಚ್ಚುವದು. ಬೇಸಾಯದಿಂದ ಉದ್ದಿಮೆಗಳಿಗೆ ಕಾರ್ಮಿಕರನ್ನು ವರ್ಗಾವಣೆ ಮಾಡುತ್ತ ಹೋದಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವ ಜನರ ಪ್ರಮಾಣ ಕಡಿಮೆಯಾಗುತ್ತ ಹೋಗುತ್ತದೆ. ಈ ರೀತಿಯ ವರ್ಗಾವಣೆಯು ಆರ್ಥಿಕ ಅಭಿವೃದ್ಧಿಯ ಲಕ್ಷಣವಾಗಿದೆಯೆಂದು ಈ ಮೊದಲೇ ನಾವು ಕಂಡುಕೊಂಡಿದ್ದೇವೆ. ಯಾವದೇ ದೇಶದಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವವರ ಪ್ರಮಾಣವು ಹೆಚ್ಚಾಗಿದ್ದಲ್ಲಿ ಆ ದೇಶವು ಬಡ ದೇಶವೆಂದು ಹೇಳಲು ಯಾವ ಅಡ್ಡಿಯೂ ಇಲ್ಲ. ಹಿಂದುಸ್ಥಾನದಲ್ಲಿ ಬೇಸಾಯವನ್ನವಲಂಬಿಸಿ ಜೀವಿಸುವವರ ಸಂಖ್ಯೆಯು ಶೇಕಡಾ ೭೦ರಷ್ಟಿದೆ. ಆರ್ಥಿಕ ಅಭಿವೃದ್ಧಿಯಾದಂತೆ ಈ ಪ್ರಮಾಣವು ಕ್ರಮೇಣ ಕಡಿಮೆಯಾಗುತ್ತ ಹೋಗುತ್ತದೆ. ಹೀಗೆ ಬೇಸಾಯವನ್ನವಲಂಬಿಸಿ ಜೀವಿಸುವ ಜನಸಂಖ್ಯೆಯ ಪ್ರಮಾಣವು ಕಡಿಮೆಯಾಗಬೇಕಾದರೆ, ಔದ್ಯಮೀಕರಣವು ತ್ವರಿತಗತಿಯಿಂದ ಸಾಗಬೇಕು ಮತ್ತು ಜನಸಂಖ್ಯೆಯು ಕಡಿಮೆ ಪ್ರಮಾಣದಿಂದ ಬೆಳೆಯಬೇಕು. ಉದಾಹರಣಾರ್ಥವಾಗಿ ನಮ್ಮ ದೇಶದಲ್ಲಿ ಜನಸಂಖ್ಯೆಯು ಪ್ರತಿವರ್ಷ ೧ ಕೋಟಿ ೩೦ ಲಕ್ಷದಿಂದ ಹೆಚ್ಚುತ್ತಾ ನಡೆದಿದೆ. ಅಂದರೆ ಪ್ರತಿವರುಷ ಸುಮಾರು ೧ ಕೋಟಿ ಅಥವಾ ಅದಕ್ಕಿಂತಲೂ ಹೆಚ್ಚಿಗೆ ಜನರು ಉದ್ಯೋಗದ ಮಾರುಕಟ್ಟೆಗೆ ಬರುತ್ತಾರೆ. ಈ ಒಂದು ಕೋಟಿ ಜನರಿಗೆ ನಾವು ಉದ್ದಿಮೆ ರಂಗದಲ್ಲಿ ಉದ್ಯೋಗವನ್ನು ಕಲ್ಪಿಸಿಕೊಡಬೇಕಾದರೆ ಪ್ರತಿವರುಷ ಸಾವಿರಾರು ಹೊಸ ಉದ್ದಿಮೆಗಳನ್ನು ಸ್ಥಾಪಿಸಬೇಕು. ಒಂದು ವೇಳೆ ನಾವು ಇವರಿಗೆ ಉದ್ದಿಮೆರಂಗದಲ್ಲಿ ಉದ್ಯೋಗ ಅವಕಾಶಗಳನ್ನು ಕೊಡದೆ ಹೋದಲ್ಲಿ ಅವರು ಬೇಸಾಯ ರಂಗದ ಮೇಲೆ ಅವಲಂಬಿಸಬೇಕಾಗುತ್ತದೆ. ಹೀಗಾಗಿ ಬೇಸಾಯವನ್ನವಲಂಬಿಸಿ ಜೀವಿಸುವವರ ಪ್ರಮಾಣವು ಹೆಚ್ಚಾಗುವ ಸಂಭವವಿರುತ್ತದೆ. ಹೀಗೆ ಆದಲ್ಲಿ ದೇಶವು ಪ್ರಗತಿ ಪಥದ ವಿರುದ್ಧ ದಿಕ್ಕಿನಲ್ಲಿ ಹೋಗುತ್ತದೆಯೆಂದು ಹೇಳಬೇಕಾಗುತ್ತದೆ.

ಉದ್ದಿಮೆ ರಂಗದಲ್ಲಿ ಉದ್ಯೋಗ ಅವಕಾಶಗಳು ನಾವು ಯಾವ ತಾಂತ್ರಿಕ ಮಟ್ಟವನ್ನು ಉಪಯೋಗಿಸುತ್ತೇವೆನ್ನುವದನ್ನು ಅವಲಂಬಿಸಿರುತ್ತದೆ. ನಾವು ಅತೀ ಆಧುನಿಕ ತಾಂತ್ರಿಕತೆಯನ್ನು ಅಳವಡಿಸಿಕೊಂಡರೆ. ಉದ್ದಿಮೆಗಳಲ್ಲಿ ಉದ್ಯೋಗ ಅವಕಾಶಗಳು ಕಡಿಮೆಯಾಗುತ್ತವೆ. ಕೋಟಿಗಟ್ಟಲೆ ರೂಪಾಯಿಗಳ ಬಂಡವಾಳವನ್ನು ಹೂಡಿದರೂ ಕೇವಲ ಕೆಲವು ಜನರಿಗೆ ಉದ್ಯೋಗ ಅವಕಾಶ ಉತ್ಪನ್ನವಾಗುತ್ತದೆ. ದೊಡ್ಡ ದೊಡ್ಡ

ಕಾರ್ಖಾನೆಗಳಲ್ಲಿ ಬಂಡವಾಳ ಬಹಳ ಬೇಕು. ಮತ್ತು ಉದ್ಯೋಗ ಅವಕಾಶಗಳು ಕಡಿಮೆ. ಬಟ್ಟೆಯ ಉತ್ಪಾದನೆಯನ್ನು ನಾವು ಉದಾಹರಣೆಗೆ ತೆಗೆದುಕೊಂಡರೆ ಬಟ್ಟೆಯನ್ನು ದೊಡ್ಡ ಪ್ರಮಾಣದಲ್ಲಿ ಆಧುನಿಕ ಕಾರ್ಖಾನೆಗಳಲ್ಲಿ ಉತ್ಪಾದಿಸಬಹುದು, ಅಥವಾ ಸಣ್ಣ ಪ್ರಮಾಣದ ಕೈಗಾರಿಕೆಗಳಿಂದಲೂ ಉತ್ಪಾದಿಸಬಹುದು. ಒಂದು ವೇಳೆ ದೊಡ್ಡ ಪ್ರಮಾಣದ ತಾಂತ್ರಿಕತೆಯನ್ನು ನಾವು ಅಳವಡಿಸಿಕೊಂಡಲ್ಲಿ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಜೋಡಣೆಯಾಗಬೇಕು. ಮತ್ತು ಅಂಥ ಉದ್ದಿಮೆಗಳಿಂದ ಉದ್ಯೋಗ ಅವಕಾಶಗಳು ಕಡಿಮೆ. ಆದರೆ ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಬಂಡವಾಳ ಕಡಿಮೆ ಬೇಕು ಮತ್ತು ಅಂಥ ಉದ್ದಿಮೆಗಳಲ್ಲಿ ಉದ್ಯೋಗ ಅವಕಾಶಗಳೂ ಜಾಸ್ತಿ. ಆದ್ದರಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಇಂಥಹ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳು ವದರಿಂದ ಉದ್ದಿಮೆ ರಂಗಗಳಲ್ಲಿ ಉದ್ಯೋಗ ಅವಕಾಶ ಹೆಚ್ಚಾಗುತ್ತವೆ. ಈ ರೀತಿ ಬೇಸಾಯವನ್ನವಲಂಬಿಸಿ ಜೀವಿಸುವವರ ಪ್ರಮಾಣವು ಕಡಿಮೆಯಾಗುತ್ತ ಹೋದಲ್ಲಿ ಆ ದೇಶವು ಆರ್ಥಿಕವಾಗಿ ಪ್ರಗತಿಯನ್ನು ಹೊಂದುತ್ತಿದೆಯೆಂದು ಹೇಳಬಹುದು. ಇಂತಹ ಪ್ರಗತಿಗೆ ಜನಸಂಖ್ಯಾ ನಿಯಂತ್ರಣವೂ ಬಹಳ ಸಹಾಯಕವಾಗಬಲ್ಲದು.

ಬಂಡವಾಳ ಜೋಡಣೆಗೆ ಬೇಸಾಯದ ಕೊಡುಗೆ :

ದೇಶದ ಆರ್ಥಿಕ ಅಭಿವೃದ್ಧಿಗೆ ಬಂಡವಾಳ ಬೇಕು. ಉದ್ದಿಮೆಗಳನ್ನು ಸ್ಥಾಪಿಸಲು ರೇಲ್ವೆ ಮತ್ತು ರಸ್ತೆ ಮುಂತಾದ ಅನುಕೂಲತೆಗಳನ್ನು ನಿರ್ಮಾಣ ಮಾಡಲು ಬಂಡವಾಳ ಬೇಕಾಗುತ್ತದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಬೇಸಾಯವೇ ಪ್ರಧಾನ ರಂಗವಾಗಿರುವದರಿಂದ ಬಂಡವಾಳವು ಬೇಸಾಯ ರಂಗದಿಂದಲೇ ಬರಬೇಕಾ ಗುತ್ತದೆ. ಆದ್ದರಿಂದ ದೇಶದ ಆರ್ಥಿಕ ಅಭಿವೃದ್ಧಿಯ ಮೊದಲ ಹಂತಗಳಲ್ಲಿ ಬೇಸಾಯವೇ ಬಂಡವಾಳವನ್ನು ಒದಗಿಸಬೇಕಾಗುತ್ತದೆ. ಬೇಸಾಯ ರಂಗದಿಂದ ಈ ಬಂಡವಾಳವನ್ನು ಬೇರೆ ಬೇರೆ ರೀತಿಯಾಗಿ ಪಡೆಯಬಹುದು. ಮೊದಲನೆಯದಾಗಿ, ದೊಡ್ಡ ಬೇಸಾಯಗಾರರು ತಮ್ಮ ಹಣವನ್ನು ಉದ್ದಿಮೆಗಳಲ್ಲಿ ತೊಡಗಿಸಬಹುದು. ಅಂದರೆ ಬೇಸಾಯಗಾರರು ಉದ್ದಿಮೆಗಳಲ್ಲಿ ಪಾಲುಗಾರರಾಗಬಹುದು ಅಥವಾ ಸ್ವಂತ ಉದ್ದಿಮೆಯನ್ನು ಪ್ರಾರಂಭಿಸಬಹುದು. ಆದರೆ ಈ ರೀತಿಯ ಬಂಡವಾಳ ಜೋಡಣೆಯು ವಿರಳ. ಎರಡನೆಯದಾಗಿ, ಬೇಸಾಯ ರಂಗದ ಮೇಲೆ ವಿವಿಧ ರೀತಿಯ ಕರಗಳನ್ನು ಸರಕಾರವು ಹೇರಿ ಆ ಹಣವನ್ನು ಉದ್ದಿಮೆಗಳಲ್ಲಿ ತೊಡಗಿಸಬಹುದು. ಜಪಾನ ದೇಶವು ಈ ಮಾರ್ಗವನ್ನು ಅನುಸರಿಸಿ ತನ್ನ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿದೆ. ಮೂರನೆಯ ದಾಗಿ ಬೇಸಾಯ ರಂಗದ ವಸ್ತುಗಳಿಗೆ ಕಡಿಮೆ ಬೆಲೆಯನ್ನು ಕೊಟ್ಟು, ಬೇಸಾಯದಿಂದ ಬಂಡವಾಳವನ್ನು ಉಳಿದ ರಂಗಗಳಿಗೆ ವರ್ಗಾವಣೆಯನ್ನು ಮಾಡಲೂ ಬರುತ್ತದೆ. ಉದ್ದಿಮೆ ರಂಗದಿಂದ ಬರುವ ವಸ್ತುಗಳಿಗೆ ಹೆಚ್ಚಿನ ಬೆಲೆಯನ್ನು ನಿರ್ಧರಿಸಿ. ಬೇಸಾಯದ

.ವಸ್ತುಗಳಿಗೆ ಕಡಿಮೆ ಬೆಲೆಯನ್ನು ನಿರ್ಧರಿಸಿದರೆ, ಉದ್ದಿಮೆಗಳಲ್ಲಿ ಲಾಭವು ಹೆಚ್ಚುತ್ತದೆ ಈ ಲಾಭವನ್ನು ಉದ್ದಿಮೆದಾರರು ಮತ್ತೆ ಉದ್ದಿಮೆಗಳಲ್ಲಿ ತೊಡಗಿಸುವದರಿಂದ ಬಂಡವಾಳ ಜೋಡಣೆ ಹೆಚ್ಚುತ್ತಾ ಹೋಗುತ್ತದೆ. ಸಮಾಜವಾದಿ ದೇಶವಾದ ರಶಿಯಾ ತನ್ನ ಬೇಸಾಯವನ್ನು ಈ ರೀತಿ ಶೋಷಿಸಿ ಉದ್ದಿಮೆಯನ್ನು ನಿರ್ಮಾಣ ಮಾಡಿದೆ. ಆದರೆ ಈ ರೀತಿ ಬೇಸಾಯವು ಉದ್ದಿಮೆಗೆ ಬೇಕಾದ ಬಂಡವಾಳವನ್ನು ಒದಗಿಸಬೇಕಾದರೆ. ಬೇಸಾಯವು ಮೊದಲು ಸುಧಾರಿಸಬೇಕಾಗುತ್ತದೆ. ಬೇಸಾಯದ ಉತ್ಪನ್ನವು ಹೆಚ್ಚುತ್ತಿದ್ದಲ್ಲಿ ಹೆಚ್ಚಾದ ಉತ್ಪನ್ನದ ಕೆಲವೊಂದು ಭಾಗವನ್ನು ಬೇರೆ ರಂಗಗಳಿಗೆ ವರ್ಗಾವಣೆ ಮಾಡಿದರೂ ಬೇಸಾಯವು ಕುಗ್ಗುವದಿಲ್ಲ. ಆದ್ದರಿಂದ ಬೇಸಾಯದ ಪ್ರಗತಿಯಾಗದ ಹೊರತು ಉದ್ದಿಮೆಗಳ ಪ್ರಗತಿ ಸಾಧ್ಯವಿಲ್ಲ.

ಹೆಚ್ಚಿನ ಗ್ರಾಮೀಣ ವರಮಾನವು ಉದ್ದಿಮೆರಂಗಕ್ಕೆ ಪ್ರೋತ್ಸಾಹ ಒದಗಿಸಬಲ್ಲದು :

ಬೇಸಾಯದಲ್ಲಿ ಪ್ರಗತಿಯಾದಂತೆ ಗ್ರಾಮೀಣ ಜನರ ವರಮಾನ ಹೆಚ್ಚುತ್ತದೆ. ಗ್ರಾಮೀಣ ಜನರ ಉತ್ಪನ್ನ ಹೆಚ್ಚಾದಲ್ಲಿ ಅವರು ಈ ಉತ್ಪನ್ನದಿಂದ ತಮ್ಮ ಬೇಸಾಯಕ್ಕೆ ಬೇಕಾದ ರಾಸಾಯನಿಕ ಗೊಬ್ಬರ, ಸುಧಾರಿಸಿದ ಉಪಕರಣಗಳನ್ನು ಕೊಳ್ಳುತ್ತಾರೆ. ಹೀಗಾಗಿ ಈ ವಸ್ತುಗಳನ್ನು ಉತ್ಪಾದಿಸುವ ಉದ್ದಿಮೆಗಳಿಗೆ ಪ್ರೋತ್ಸಾಹ ದೊರಕಿ ಔದ್ಯಮೀಕರಣವು ಹೆಚ್ಚುತ್ತದೆ. ಅದೇ ರೀತಿಯಾಗಿ ಗ್ರಾಮೀಣ ಜನರು ತಮ್ಮ ವರಮಾನ ಹೆಚ್ಚಿದಾಗ ಕೆಲವೊಂದು ಉಪಭೋಗಿ ವಸ್ತುಗಳನ್ನು ಸಹಿತ ಕೊಳ್ಳಬಹುದು. ಗ್ರಾಮೀಣ ಜನರು ಹೆಚ್ಚಿಗೆ ಬಟ್ಟೆ, ರೇಡಿಯೋ, ವಾಚ ಮುಂತಾದ ವಸ್ತುಗಳನ್ನು ಕೊಳ್ಳುವದರಿಂದಲೂ ಇಂಥ ಉದ್ದಿಮೆಗಳಿಗೆ ಪ್ರೋತ್ಸಾಹ ಕೊಡುತ್ತಾರೆ. ಆದ್ದರಿಂದ ಬೇಸಾಯದ ಪ್ರಗತಿಯು ದೇಶದ ಆರ್ಥಿಕ ಅಭಿವೃದ್ಧಿಗೆ ಅವಶ್ಯವಾಗಿದೆಯೆಂದು ನಾವು ಹೇಳಬಹುದು.

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಬೇಸಾಯವು ಯಾವ ರೀತಿಯಾಗಿ ಸಹಾಯಕ ವಾಗಬಲ್ಲದೆಂಬುದನ್ನು ನಾವೀಗ ಕಂಡುಕೊಂಡಂತಾಯಿತು. ಈಗ ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ, ಅವು ಅಭಿವೃದ್ಧಿ ಹೊಂದುವ ಕಾಲಕ್ಕೆ ಬೇಸಾಯವು ಯಾವ ರೀತಿಯ ಪಾತ್ರವಹಿಸಿತೆಂಬುದನ್ನು ಆ ದೇಶಗಳ ಅಭಿವೃದ್ಧಿಯ ಅನುಭವಗಳಿಂದ ಕಂಡುಕೊಳ್ಳುವಾ.

ಪಾಶ್ಚಿಮಾತ್ಯ ದೇಶಗಳು :

ನಾವು ಪಾಶ್ಚಿಮಾತ್ಯ ದೇಶಗಳ ಅನುಭವಗಳನ್ನು ನೋಡುವಾಗ ಆ ದೇಶಗಳನ್ನು ಎರಡು ಭಾಗಗಳನ್ನು ಮಾಡುವದು ಒಳಿತು ಮೊದಲನೆಯ ಗುಂಪಿನಲ್ಲಿ ನಾವು

ಹೊಸ ದೇಶಗಳಾದ, ಅಮೇರಿಕೆಯ ಸಂಯುಕ್ತ ಸಂಸ್ಥಾನ, ಕೆನಡಾ, ಆಸ್ಟ್ರೇಲಿಯ, ನ್ಯೂಜಿಲೆಂಡ್ ಕೂಡಿಸಿಕೊಳ್ಳಬಹುದು. ಈ ದೇಶಗಳಲ್ಲಿ ಅವು ಅಭಿವೃದ್ಧಿ ಹೊಂದುವ ಕಾಲಕ್ಕೆ ಜನಸಂಖ್ಯೆ ತೀರ ಕಡಿಮೆ ಇದ್ದು, ಭೂಮಿಯು ವಿಪುಲವಾಗಿದ್ದುದರಿಂದ, ದೊಡ್ಡ ಪ್ರಮಾಣದ ಬೇಸಾಯವನ್ನು ಕೈಕೊಳ್ಳಲು ಅನುಕೂಲವಾಯಿತು. ಎರಡನೆಯ ಗುಂಪಿನಲ್ಲಿ ನಾವು ಪಶ್ಚಿಮ ಯುರೋಪಿನ ರಾಷ್ಟ್ರಗಳಾದ ಇಂಗ್ಲಂಡ, ಫ್ರಾನ್ಸ, ಜರ್ಮನಿ ಮುಂತಾದ ರಾಷ್ಟ್ರಗಳನ್ನು ಕೂಡಿಸಿಕೊಳ್ಳಬಹುದು. ಈ ದೇಶಗಳು ಅಭಿವೃದ್ಧಿ ಹೊಂದುವಾಗ ಈ ದೇಶಗಳಲ್ಲಿ ಜನಸಂಖ್ಯೆಯು ಹೆಚ್ಚಿಗಿತ್ತು.

ಹೊಸ ದೇಶಗಳು :

ಬೇಸಾಯದ ದೃಷ್ಟಿಯಿಂದ ಅಮೇರಿಕೆಯ ಸಂಯುಕ್ತ ಸಂಸ್ಥಾನ, ಕೆನಡಾ, ಆಸ್ಟ್ರೇಲಿಯ ಮತ್ತು ಅರ್ಜೆಂಟಿನಾ ದೇಶಗಳು ಬಹಳ ಅನುಕೂಲವಾದ ಪರಿಸ್ಥಿತಿಯನ್ನು ಹೊಂದಿದ್ದವು. ಈ ದೇಶಗಳು ಅಭಿವೃದ್ಧಿ ಹೊಂದುವ ಕಾಲಕ್ಕೆ ಜನಸಂಖ್ಯೆಯು ಅತೀ ವಿರಳವಾಗಿದ್ದದ್ದರಿಂದ ಮತ್ತು ಭೂಮಿಯು ವಿಪುಲವಾಗಿದ್ದುದರಿಂದ, ದೊಡ್ಡ ಪ್ರಮಾಣದ ಬೇಸಾಯವನ್ನು ಕೈಕೊಳ್ಳಲು ಅನುಕೂಲವಾಯಿತು. ಇಂತಹ ಪರಿಸ್ಥಿತಿಯಲ್ಲಿ ಜನಸಂಖ್ಯೆಯ ಬೆಳವಣಿಗೆಯು ಒಂದು ವರವಾಗಿ ಪರಿಣಮಿಸಿದ್ದರಿಂದ, ಯುರೋಪಿನ ದೇಶಗಳಿಂದ ದೊಡ್ಡ ಪ್ರಮಾಣದಲ್ಲಿ ವಲಸೆಗಾರರನ್ನು ಮತ್ತು ಬಂಡವಾಳವನ್ನು ಆಹ್ವಾನಿಸಲಾಯಿತು. ಸಾರಿಗೆ ಸಂಪರ್ಕಗಳ ಸುಧಾರಣೆಯಾದಂತೆ, ಹೊಸ ಹೊಸ ಭಾಗಗಳು ಬೇಸಾಯಕ್ಕೆ ದೊರಕುತ್ತಾ ಹೋದವು. ಆದ್ದರಿಂದ ಈ ದೇಶಗಳು ಪ್ರಾರಂಭದಿಂದಲೇ, ಅತ್ಯಧಿಕ ಆಹಾರ ಮತ್ತು ಕಚ್ಚಾ ವಸ್ತುಗಳ ಉತ್ಪಾದನೆಯನ್ನು ಹೊಂದಿದವುಗಳಾಗಿದ್ದವು. ಇದೇ ವೇಳೆಗೆ ಯುರೋಪಿನಲ್ಲಿನ ಔದ್ಯಮಿಕ ಕ್ರಾಂತಿಯುಂಡಾಗಿ, ಆ ದೇಶಗಳಲ್ಲಿ ಆಹಾರ ಮತ್ತು ಕಚ್ಚಾ ವಸ್ತುಗಳಿಗೆ ಬೇಡಿಕೆ ಹೆಚ್ಚಾಗಿದ್ದರಿಂದ ಹೊಸ ದೇಶಗಳು ಅದರ ಲಾಭವನ್ನು ಪಡೆದುಕೊಂಡವು. ಮೇಲಾಗಿ ಹೊಸ ದೇಶಗಳು ಮೊದಲೇ ರಾಜಕೀಯ ಸ್ವಾತಂತ್ರ್ಯವನ್ನು ಪಡೆದದ್ದರಿಂದ, ಯುರೋಪಿನ ರಾಷ್ಟ್ರಗಳು ತಮ್ಮ ವಸಾಹತುಗಳ ಮೇಲೆ ಹೇರುತ್ತಿದ್ದ ಆರ್ಥಿಕ ಅಭಿವೃದ್ಧಿಗಿರುವ ಸಾಮಾನ್ಯ ಅಡೆತಡೆಗಳೂ ಸಹಿತ ಈ ದೇಶಗಳಿಗಿರಲಿಲ್ಲ. ಆದ್ದರಿಂದ ಈ ದೇಶಗಳು ಪ್ರಗತಿಪರ ಬೇಸಾಯವನ್ನು ತ್ವರಿತಗತಿಯಿಂದ, ಮತ್ತು ಅತಿ ಕಡಿಮೆ ಪ್ರಯತ್ನದಿಂದ ಸ್ಥಾಪಿಸಿಕೊಂಡವು. ಇಂತಹ ಪ್ರಗತಿಪರ ಬೇಸಾಯವು ಆ ದೇಶಗಳ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಯಿತು.

ಆದರೆ ಪ್ರಗತಿಪರ ಬೇಸಾಯವೊಂದೇ ಆರ್ಥಿಕ ಅಭಿವೃದ್ಧಿಗೆ ಕಾರಣವೆಂದು ನಾವು ಭಾವಿಸಬಾರದು. ಬ್ರಾಝಿಲ ಮತ್ತು ಅರ್ಜೆಂಟಿನಾ ದೇಶಗಳು ಪ್ರಗತಿಪರ ಬೇಸಾಯವನ್ನು ಹೊಂದಿದ್ದರೂ, ಆರ್ಥಿಕ ಅಭಿವೃದ್ಧಿಯನ್ನು ಹೊಂದಲು ಆ ದೇಶ

ಗಳಿಗೆ ಆಗಲಿಲ್ಲ. ಬ್ರಾಝಿಲ ದೇಶವು ತನಗಿದ್ದ ಪ್ರಾರಂಭಿಕ ಅನುಕೂಲತೆಗಳ ಸದುಪಯೋಗವನ್ನು ಮಾಡಿಕೊಳ್ಳಲಿಲ್ಲ. ಆ ದೇಶದ ಬೇಸಾಯವು ಇಬ್ಬಗೆಯ ರೂಪವನ್ನು ತಾಳಿತು. ದೊಡ್ಡ ಪ್ರಮಾಣದ ಬೇಸಾಯ ಮತ್ತು ಜೀವನೋಪಾಯಕ್ಕಾಗಿ ಕೈಕೊಳ್ಳುವ ತೀರ ಹಿಂದುಳಿದ ಬೇಸಾಯ ಒಂದೇ ವೇಳೆಗೆ ಬೆಳೆಯುತ್ತಾ ಹೋದವು. ಜೀವನೋಪಾಯಕ್ಕಾಗಿ ಕೈಕೊಳ್ಳುವ ಬೇಸಾಯವು ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಲಾರದು. ಬ್ರಾಝಿಲ ದೇಶವು ಹಿಂದುಳಿಯಲು ಸಾರಿಗೆ ಮತ್ತು ಶಿಕ್ಷಣ ರಂಗಗಳ ನಿರ್ಲಕ್ಷ್ಯ, ಪ್ರಗತಿಪರ ಭೂ ವ್ಯವಸ್ಥೆಯನ್ನು ಹೊಂದುವಲ್ಲಿ ಅಸಮರ್ಥತೆ, ಮತ್ತು ತಪ್ಪು ರೀತಿಯ ಸಾಮಾಜಿಕ ಹಾಗೂ ರಾಜಕೀಯ ವ್ಯವಸ್ಥೆಗಳು ಕಾರಣಗಳೆಂದು ಹೇಳಬಹುದು.

ಕೇವಲ ಬೇಸಾಯದ ಸುಲಿಗೆಯಿಂದ ಔದ್ಯಮಿಕ ಪ್ರಗತಿಯು ಸಾಧ್ಯವಿಲ್ಲವೆಂಬುದನ್ನು ಅರ್ಜೆಂಟಿನಾ ದೇಶದ ಅನುಭವವು ಹೇಳುತ್ತದೆ. ಆ ದೇಶದ ಬೇಸಾಯವು ಪ್ರಗತಿಪರವಿದ್ದಾಗ್ಯೂ ದೇಶವು ಆರ್ಥಿಕವಾಗಿ ಮುಂದುವರಿಯಲಿಲ್ಲ. ಯಾಕೆಂದರೆ ಆ ದೇಶದಲ್ಲಿ ಭೂಮಿಯು ಕೆಲವೇ ಜನರ ಸೊತ್ತಾಗಿತ್ತು. ಭೂ ಮಾಲಿಕರು ಸಾಮಾಜಿಕ ಮತ್ತು ರಾಜಕೀಯ ಪ್ರಭಾವವನ್ನು ಹೊಂದಿದವರಾಗಿದ್ದರು. ಬೇಸಾಯದಲ್ಲಿ ದುಡಿಯುತ್ತಿದ್ದ ಜನಸಾಮಾನ್ಯನ ಪರಿಸ್ಥಿತಿ ಆಶಾದಾಯಕವಾಗಿರಲಿಲ್ಲ. ಈ ರೀತಿಯ ಸಾಮಾಜಿಕ ಹಾಗೂ ರಾಜಕೀಯ ಪರಿಸ್ಥಿತಿಯು ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಲಾರದು.

ಅದೇ ರೀತಿಯಾಗಿ ಇನ್ನುಳಿದ ದಕ್ಷಿಣ ಅಮೇರಿಕೆಯ ದೇಶಗಳ ಅನಭಿವೃದ್ಧಿಗೆ ಆಯಾ ದೇಶಗಳ ತಪ್ಪು ಸಾಮಾಜಿಕ ವ್ಯವಸ್ಥೆ, ಯುದ್ಧ, ರಾಜಕೀಯ ಅಸ್ಥಿರತೆಗಳು ಕಾರಣವೆಂದು ಹೇಳಲಾಗುತ್ತದೆ.

ಇಂಗ್ಲಂಡ ಮತ್ತು ಪಶ್ಚಿಮ ಯುರೋಪ :

ಹದಿನೆಂಟನೆ ಶತಮಾನದ ಕೊನೆಯ ಭಾಗದಲ್ಲಿ ಔದ್ಯೋಗಿಕ ಕ್ರಾಂತಿಯು ಪ್ರಾರಂಭವಾಗುವ ಪೂರ್ವದಲ್ಲಿ ಪಶ್ಚಿಮ ಯುರೋಪಿನ ರಾಷ್ಟ್ರಗಳು ಬೇಸಾಯದಲ್ಲಿ ಪ್ರಗತಿಯನ್ನು ಸಾಧಿಸಿದ್ದವು. ಅಧಿಕ ಇಳುವರಿ ಕೊಡುವ ಬಟಾಟೆ ಮತ್ತು ಟರ್ನಿಪ ಬೆಳೆಗಳನ್ನು ಬೆಳೆಯುವದಲ್ಲದೆ, ಗೋದಿ ಮುಂತಾದ ಹಳೆಯ ಬೆಳೆಗಳ ಇಳುವರಿಯನ್ನು ಈ ದೇಶಗಳು ಸಾಕಷ್ಟು ಹೆಚ್ಚಿಸಿದ್ದವು. ಹೈನದ ಉತ್ಪಾದನೆಯಲ್ಲಿಯೂ ಪ್ರಗತಿಯನ್ನು ಈ ದೇಶಗಳು ಔದ್ಯೋಗಿಕ ಕ್ರಾಂತಿಯ ಪೂರ್ವದಲ್ಲಿ ಸಾಧಿಸಿದ್ದವು. ಮೇಲಾಗಿ ಈ ದೇಶಗಳಲ್ಲಿ ಹೆಚ್ಚುತ್ತಿರುವ ಬೇಸಾಯದ ಉತ್ಪತ್ತಿಯನ್ನು ಬೆಳೆಯುತ್ತಿರುವ ಜನಸಂಖ್ಯೆಯು ನಿಷ್ಪ್ರಯೋಜನಗೊಳಿಸಲಿಲ್ಲ. ಏಕೆಂದರೆ ಈ ದೇಶಗಳಲ್ಲಿ ಜನಸಂಖ್ಯೆಯು

ಬೆಳವಣಿಗೆಯು ಔದ್ಯಮಿಕ ಕ್ರಾಂತಿಯ ನಂತರ ಪ್ರಾರಂಭವಾಯಿತೆ ಹೊರತು ಔದ್ಯಮಿಕ ಕ್ರಾಂತಿಯ ಪ್ರಾರಂಭದಲ್ಲಲ್ಲ. ಅದ್ದರಿಂದ ಈ ದೇಶಗಳಲ್ಲಿ ಔದ್ಯಮಿಕ ಕ್ರಾಂತಿಯ ವೇಳೆಯಲ್ಲಿ ಪಟ್ಟಣಗಳು ಬೆಳೆದು. ಸಾರಿಗೆ ಸಂಪರ್ಕದಲ್ಲಿ ಸಾಕಷ್ಟು ಸುಧಾರಣೆಗಳಾಗಿ, ಗ್ರಾಮೀಣ ಪ್ರದೇಶಗಳಲ್ಲಿ ಬೇಸಾಯದಿಂದ ಹೊರಬಂದ ಒಂದು ಶ್ರಮಿಕವರ್ಗ ಉತ್ಪನ್ನವಾಗಿ ಈ ಜನರು ಉದ್ದಿಮೆಗಳಲ್ಲಿ ಕೆಲಸಮಾಡಲು ಪ್ರಾರಂಭಿಸಿದರು.

ಔದ್ಯಮಿಕ ಕ್ರಾಂತಿಯು ಮೊದಲು ಪ್ರಾರಂಭವಾದ ಇಂಗ್ಲೆಂಡ ದೇಶದಲ್ಲಿ, ೧೮೩೦ ರ ವರೆಗೆ, ಬೇಸಾಯವು ಪಟ್ಟಣಗಳಿಗೆ ಆಹಾರವನ್ನು ಪೂರೈಸಲು ಸಮರ್ಥವಾಯಿತು. ಇಂಗ್ಲೆಂಡಿನ ವಸ್ತುಗಳಿಗೆ ಪರದೇಶಗಳಲ್ಲಿ ಬೇಡಿಕೆ ಹೆಚ್ಚುತ್ತಾ ಹೋದಂತೆ ಉದ್ದಿಮೆಗಳು ಬೆಳೆದು ಪಟ್ಟಣದ ನಿವಾಸಿಗಳಿಗೆ ಉದ್ದಿಮೆಗಳಲ್ಲಿ ಕೆಲಸ ಸಿಗುತ್ತಾ ನಡೆಯಿತು. ಮುಂದೆ ಜನಸಂಖ್ಯೆ ಬೆಳೆಯುತ್ತಾ ಹೋದಂತೆ ಈ ಹೆಚ್ಚಾದ ಜನಸಂಖ್ಯೆಯು ಹೊಸ ದೇಶಗಳಿಗೆ ವಲಸೆ ಹೋಗಲು ಪ್ರಾರಂಭಿಸಿತು. ಹೀಗಾಗಿ ಇಂಗ್ಲೆಂಡಿನಲ್ಲಿ ಜನಸಂಖ್ಯೆ ಬೆಳೆದರೂ ಅದರ ದುಷ್ಪರಿಣಾಮಗಳು ಆ ದೇಶದ ಆರ್ಥಿಕ ಅಭಿವೃದ್ಧಿಯ ಮೇಲೆ ಆಗಲಿಲ್ಲ.

ಅದೇ ರೀತಿಯಾಗಿ ಫ್ರಾನ್ಸ್, ಜರ್ಮನಿ, ಸ್ವೀಡನ್ ಮತ್ತು ಬೆಲ್ಜಿಯಮ್ ದೇಶಗಳ ಆರ್ಥಿಕ ಅಭಿವೃದ್ಧಿಯು ಆ ದೇಶಗಳ ಉತ್ಪಾದನೆಯನ್ನು ಅವಲಂಬಿಸಿದ್ದಿತು.

ರಶಿಯಾ :

ನಾವೀಗ ರಶಿಯಾ ದೇಶದ ಅನುಭವವನ್ನಷ್ಟು ನೋಡುವಾ. ೧೯೧೭ ರ ಅಕ್ಟೋಬರ ಕ್ರಾಂತಿಯ ನಂತರ ಅಧಿಕಾರಕ್ಕೆ ಬಂದ ಬೊಲ್ಶೆವಿಕ್ ಆಡಳಿತವು ದೊಡ್ಡ ಜಮೀನುದಾರರಿಂದ ಭೂಮಿಯನ್ನು ಕಿತ್ತುಕೊಂಡ ನಂತರ ರೈತರು ಭೂಮಿಯನ್ನು ನೇರವಾಗಿ ತಮ್ಮ ತಮ್ಮಲ್ಲಿಯೇ ಹಂಚಿಕೊಂಡರು. ಇದರಿಂದಾಗಿ ೧೯೧೮ರಿಂದ ೧೯೨೧ರ ವರೆಗೆ ಬೇಸಾಯ ರಂಗದಲ್ಲಿ ಸ್ವಲ್ಪ ಅರಾಜಕತೆಯುಂಟಾಗಿತ್ತು. ಸರಕಾರವು ರೈತರಿಂದ ಆಹಾರವನ್ನು ಒತ್ತಾಯ ಪೂರ್ವಕ ವಸೂಲ ಮಾಡುತ್ತಿತ್ತು. ಈ ರೀತಿಯ ಸರಕಾರಿ ನೀತಿಗೆ ರೈತರು ಕೋಪಗೊಂಡದ್ದರಿಂದ ಸರಕಾರವು ಒತ್ತಾಯಪೂರ್ವಕ ಆಹಾರ ವಸೂಲಿಯ ಬದಲಾಗಿ, ಆಹಾರ ಕರವನ್ನು ಆಚರಣೆಗೆ ತಂದಿತು. ಆದರೆ ಬೇಸಾಯದ ಉತ್ಪಾದನೆಯ ಬೆಲೆಗಳು ಕಡಿಮೆ ಇದ್ದದ್ದರಿಂದ ರೈತರು ತಾವು ಪೇಟೆಯಲ್ಲಿ ಮಾರುವ ಉತ್ಪಾದನೆಯ ಭಾಗವನ್ನು ಕಡಿಮೆಮಾಡಿ ತಾವೇ ಹೆಚ್ಚಿಗೆ ಉಪಭೋಗ ಮಾಡಲು ಪ್ರಾರಂಭಿಸಿದರು. ಅದ್ದರಿಂದ ೧೯೨೮ ರ ಸುಮಾರಿಗೆ, ಸರಕಾರವು ಸಾರ್ವಜನಿಕ ಬೇಸಾಯವನ್ನು ಜಾರಿಗೆ ತಂದಿತು. ೧೯೩೬ ರ ಸುಮಾರಿಗೆ ಸಾರ್ವಜನಿಕ ಬೇಸಾಯ ಮಾರ್ಗ ಜಾರಿಗೆ ಬಂದಿತು. ರೈತರು ಸಾರ್ವಜನಿಕ ಬೇಸಾಯದ ನೀತಿಯನ್ನು ವಿರೋಧಿಸಿ ಬೇಸಾಯಕ್ಕೆ ಬೇಕಾದ ದನಕರುಗಳನ್ನು ಕೊಂದು ತಿಂದರೆಂದೂ, ಬೇಸಾಯದ ಉಳಿದ ಬಂಡವಾಳವೂ ಕಡಿಮೆಯಾಯಿತೆಂದೂ. ಸಾಕಷ್ಟು ಭಾಗದಲ್ಲಿ ಬರಗಾಲ ಪರಿಸ್ಥಿತಿಯುಂಟಾಗಿ ರೈತರಿಗೆ ಬಹಳ ತೊಂದರೆಯಾಯಿತೆಂದೂ ಹೇಳಲಾಗುತ್ತದೆ. ಆದರೂ ಸಹಿತ ಸಾರ್ವಜನಿಕ ಬೇಸಾಯದಿಂದ ರಶಿಯಾ ಸರಕಾರವು

ರೈತರಿಂದ ಆಹಾರ ಧಾನ್ಯಗಳನ್ನು ಕಡಿಮೆ ಬೆಲೆಗೆ ಕೊಂಡುಕೊಳ್ಳಲು ಸಾಧ್ಯವಾಯಿತು. ಸಾರ್ವಜನಿಕ ಬೇಸಾಯದಿಂದ ಸರಕಾರವು ಬೇಸಾಯವನ್ನು ಯಾಂತ್ರೀಕರಣಗೊಳಿಸಲೂ ಸಾಧ್ಯವಾಯಿತು. ಆದರೆ ಎಷ್ಟೋ ಈ ಯಂತ್ರಗಳು, ರೈತರು ಈ ಸರಕಾರಿ ನೀತಿಯನ್ನು ವಿರೋಧಿಸಿ ಕೊಂದ ದನಕರುಗಳ ಬದಲಾಗಿ ಉಪಯೋಗಿಸಲು ತಂದವುಗಳಾಗಿದ್ದವೆಂದು ಹೇಳಲಾಗುತ್ತದೆ. ೧೯೩೮ ರ ಸುಮಾರಿಗೆ ಸಾರ್ವಜನಿಕ ಬೇಸಾಯದಿಂದ ಕೇವಲ ಶೇಕಡಾ ೧೦ ರಷ್ಟು ಹೆಚ್ಚಿನ ಭೂಮಿಯು ಸಾಗುವಳಿ ಮಾಡಲಾಯಿತೆಂದು ತಿಳಿದು ಬರುತ್ತದೆ. ಆದರೆ ಬೇಸಾಯದಲ್ಲಿಯ ಕೆಲಸಗಾರರ ಪ್ರಮಾಣವು ಶೇಕಡಾ ೧೫ ರಿಂದ ೨೦ರಷ್ಟು ಕಡಿಮೆಯಾಗಿದ್ದರಿಂದ, ಬೇಸಾಯ ಕೆಲಸಗಾರರ ಉತ್ಪತ್ತಿಯು ೧೯೨೬ ರಿಂದ ೧೯೩೮ರ ಸುಮಾರಿಗೆ ಶೇಕಡಾ ೨೫ ರಿಂದ ೩೦ರಷ್ಟು ಹೆಚ್ಚಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಬೇಸಾಯದ ಉತ್ಪತ್ತಿ ಹೆಚ್ಚಾದಂತೆ ಬೇಸಾಯ ರಂಗದಿಂದ ಕಾರ್ಮಿಕರನ್ನು ಔದ್ಯಮಿಕ ರಂಗಕ್ಕೆ ವರ್ಗಾಯಿಸಲು ರಶಿಯಾ ಸರಕಾರಕ್ಕೆ ಸಾಧ್ಯವಾಯಿತು. ಬೇಸಾಯ ರಂಗದಲ್ಲುಳಿದ ಕಾರ್ಮಿಕರು ಹೆಚ್ಚಿಗೆ ಉಪಯೋಗವನ್ನು ಮಾಡದಂತೆ ಆಹಾರವನ್ನು ಔದ್ಯಮಿಕ ರಂಗಕ್ಕೆ ವರ್ಗಾವಣೆ ಮಾಡಿ ರಶಿಯಾ ಸರಕಾರವು ತನ್ನ ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿತು. ಬೇಸಾಯ ರಂಗದ ಶೋಷಣೆಯನ್ನು ಮಾಡಿ ರಶಿಯಾ ಉದ್ದಿಮೆಗಳನ್ನು ಸೃಷ್ಟಿಸಿತು.

ಆದರೂ ಸಹಿತ ಸಾರ್ವಜನಿಕ ಬೇಸಾಯದಿಂದ ರಶಿಯಾ ಸರಕಾರವು ಹೆಚ್ಚಿನ ಲಾಭವನ್ನು ಪಡೆಯಲಿಲ್ಲವೆಂದು ಹೇಳಬಹುದು. ಸ್ಟಾಲಿನ್‌ರ ಆಳ್ವಿಕೆ ಕೊನೆಗೊಂಡ ನಂತರ, ೧೯೫೩ರಲ್ಲಿ ಕೃಶ್ಚೇವರ ಹೇಳಿಕೆಯ ಪ್ರಕಾರ ೧೯೪೦ ರಿಂದ ೧೯೫೨ರ ವರೆಗಿನ ವೇಳೆಯಲ್ಲಿ, ಔದ್ಯಮಿಕ ಉತ್ಪಾದನೆಯು ಎರಡು ಪಟ್ಟು ಹೆಚ್ಚಾದರೆ, ಬೇಸಾಯದ ಉತ್ಪಾದನೆಯು ಕೇವಲ ಶೇಕಡಾ ೧೦ರಷ್ಟು ಹೆಚ್ಚಾಯಿತೆಂದು ತಿಳಿದು ಬರುತ್ತದೆ.

ಪಾಶ್ಚಿಮಾತ್ಯ ದೇಶಗಳ ಅನುಭವದ ಪಾಠ :

ಅಭಿವೃದ್ಧಿ ಹೊಂದುತ್ತಿರುವ ಈಗಿನ ಏಶಿಯಾ ಖಂಡದ ದೇಶಗಳ ಪರಿಸ್ಥಿತಿಗೂ ಮತ್ತು ಪಾಶ್ಚಿಮಾತ್ಯ ದೇಶಗಳು ತಾವು ಅಭಿವೃದ್ಧಿ ಹೊಂದುವಾಗಿನ ಪರಿಸ್ಥಿತಿಗೂ ಸಾಕಷ್ಟು ಅಂತರವಿದ್ದಾಗ್ಯೂ, ಪಾಶ್ಚಿಮಾತ್ಯ ರಾಷ್ಟ್ರಗಳ ಅನುಭವದಿಂದ, ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಕೆಲವೊಂದು ಪಾಠಗಳನ್ನು ಕಲಿಯಬಹುದು. ಮೊದಲನೆಯದಾಗಿ ಬೇಸಾಯದ ಉತ್ಪಾದನೆಯನ್ನು ಹೆಚ್ಚಿಸದೆ ಔದ್ಯಮಿಕ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲ. ರಶಿಯಾ, ಇಂಗ್ಲಂಡ ಮತ್ತು ಪಶ್ಚಿಮ ಯುರೋಪಿನ ರಾಷ್ಟ್ರಗಳಲ್ಲಿ ಬೇಸಾಯವನ್ನು ಶೋಷಿಸಿ ಔದ್ಯಮಿಕ ಅಭಿವೃದ್ಧಿಯನ್ನು ಸಾಧಿಸಲಾಯಿತು. ಬೇಸಾಯದ ಮೇಲೆ ಕರಗಳನ್ನು ಹೇರಿ ಉದ್ದಿಮೆಗಳನ್ನು ಸ್ಥಾಪಿಸಲು ಬಂಡವಾಳ ನಿರ್ಮಾಣಿಸಲಾಯಿತು. ಗ್ರಾಮಗಳನ್ನು ಸುಲಿದು ಪಟ್ಟಣಗಳನ್ನು ನಿರ್ಮಾಣ ಮಾಡ

ಲಾಯಿತು. ಬೇಸಾಯವನ್ನು ಈ ರೀತಿ ಸುಲಿಗೆ ಮಾಡಬೇಕಾದರೆ ಆ ಬೇಸಾಯವು ಹೆಚ್ಚಿಗೆ ಉತ್ಪಾದನೆಯನ್ನು ಮಾಡಲು ಸಮರ್ಥವಾಗಿತ್ತೆಂದು ಅರ್ಥ. ಅಂದರೆ ಬೇಸಾಯವು ಪ್ರಗತಿಯನ್ನು ಸಾಧಿಸಿದರೆ ಮಾತ್ರ ಈ ರೀತಿ ಆರ್ಥಿಕ ಭಾರವನ್ನು ಅದ ಹೊರಲು ಸಾಧ್ಯ.

ಎರಡನೆಯದಾಗಿ, ಪ್ರಾರಂಭದಲ್ಲಿ ಬೇಸಾಯವು ಪ್ರಗತಿಪರವಿದ್ದಾಗ್ಯೂ ಮುಂದೆ ಬೇಸಾಯವನ್ನು ಅಲಕ್ಷಿಸಿದರೆ ದೇಶದ ಆರ್ಥಿಕ ಅಭಿವೃದ್ಧಿಗೆ ಇದರಿಂದ ಅಡೆತಡೆಗ ಳುಂಟಾಗುತ್ತದೆಯೆಂಬುದು ರಶಿಯಾ ಮತ್ತು ಫ್ರಾನ್ಸ್ ದೇಶಗಳ ಅನುಭವದಿಂದ ತಿಳಿದು ಬರುತ್ತದೆ.

ಮೂರನೆಯದಾಗಿ ಚಿಕ್ಕ ಪ್ರಮಾಣದ ಬೇಸಾಯವನ್ನು ಕೂಡಲೇ ದೊಡ್ಡ ಪ್ರಮಾಣದ, ಯಾಂತ್ರಿಕರಣ ಬೇಸಾಯವನ್ನಾಗಿ ಮಾರ್ಪಡಿಸಿದರೆ ಗ್ರಾಮೀಣ ಪ್ರದೇಶ ಗಳಲ್ಲಿ ನಿರುದ್ಯೋಗ ಮತ್ತು ಪಟ್ಟಣಗಳ ತೀವ್ರ ಬೆಳವಣಿಗೆ ಮುಂತಾದ ಸಮಸ್ಯೆಗಳು ಉದ್ಭವಿಸುತ್ತವೆಯೆಂಬುದನ್ನು ರಶಿಯಾ ದೇಶದ ಅನುಭವದಿಂದ ತಿಳಿಯಬಹುದು.

ಕೊನೆಯದಾಗಿ, ಬೇಸಾಯವು ಪ್ರಗತಿಪರವಿದ್ದಾಗ್ಯೂ, ಔದ್ಯಮಿಕ ಅಭಿವೃದ್ಧಿಗೆ ಬೇಸಾಯವನ್ನು ಮಿತಿಮೀರಿ ಸುಲಿಗೆಮಾಡಿದರೆ ಬೇಸಾಯವು ಹದಗೆಟ್ಟು ದೇಶದ ಆರ್ಥಿಕ ಅಭಿವೃದ್ಧಿಗೆ ಧಕ್ಕೆ ಬರಬಹುದೆಂಬುದನ್ನು ಅರ್ಜೆಂಟಿನಾ ದೇಶದ ಪೆರಾನ್ ಆಡಳಿತ ಅವಧಿಯ ನೀತಿಗಳಿಂದ ತಿಳಿದು ಬರುತ್ತದೆ.

ಏಶಿಯಾದ ಆರ್ಥಿಕ ಅಭಿವೃದ್ಧಿಯಲ್ಲಿ ಬೇಸಾಯದ ಪಾತ್ರ :

ಏಶಿಯಾ ಖಂಡದ ರಾಷ್ಟ್ರಗಳು ಆರ್ಥಿಕವಾಗಿ ಹಿಂದುಳಿದಿದ್ದು ಜನಸಂಖ್ಯೆಯ ಸಮಸ್ಯೆಯನ್ನು ಎದುರಿಸುತ್ತಿವೆ. ಈ ದೇಶಗಳು ಕೆಲವು ವರ್ಷಗಳ ಹಿಂದೆ ಯುರೋಪ ರಾಷ್ಟ್ರಗಳ ವಸಾಹಾತುಗಳಾಗಿದ್ದವು. ಆ ವೇಳೆಯಲ್ಲಿ ಈ ದೇಶಗಳು ಆರ್ಥಿಕ ಶೋಷ ಣೆಗೆ ಒಳಗಾಗಿದ್ದವು. ಪರಕೀಯ ಆಡಳಿತವು ಈ ದೇಶಗಳ ಕೈಗಾರಿಕೆಗಳನ್ನು ನಾಶಪಡಿಸಿ ದ್ದಲ್ಲದೆ, ಔದ್ಯಮೀಕರಣವನ್ನು ತಡೆಹಿಡಿಯಿತು. ಇಂತಹ ವೇಳೆಯಲ್ಲಿ ಈ ದೇಶಗಳಲ್ಲಿ ಜನಸಂಖ್ಯಾ ಸ್ಫೋಟ ಸಂಭವಿಸಿತು. ಹೀಗಾಗಿ ಈ ದೇಶಗಳಲ್ಲಿ ಜನರ ವಾರ್ಷಿಕ ಸರಾ ಸರಿ ಆದಾಯ ಯುರೋಪಿನ ರಾಷ್ಟ್ರಗಳು ತಾವು ಆರ್ಥಿಕ ಅಭಿವೃದ್ಧಿಯನ್ನು ಪ್ರಾರಂಭ ಮಾಡುವ ವೇಳೆಯಲ್ಲಿ ಇದ್ದ ಜನರ ವಾರ್ಷಿಕ ಸರಾಸರಿ ಆದಾಯಕ್ಕಿಂತ ಕಡಿಮೆ ಇದೆ. ಈಗ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಹೊರಟಿರುವ ಈ ರಾಷ್ಟ್ರಗಳು ಅನೇಕ ತೊಂದರೆಗಳನ್ನು ಅನುಭವಿಸುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಈ ರಾಷ್ಟ್ರಗಳು ರಶಿ ಯಾದ ಮಾದರಿಯನ್ನು ಅನುಕರಿಸಲು ಸಿದ್ಧವಾಗಿವೆ. ಈಗಾಗಲೆ ಚೀನಾದೇಶವು ಇಂತಹ ಮಾದರಿಯನ್ನು ಅಳವಡಿಸಿಕೊಂಡು ತನ್ನ ದೇಶದ ಆರ್ಥಿಕ ಅಭಿವೃದ್ಧಿಯನ್ನು

ಸಾಧಿಸಿದೆ. ಬೇರೆ ರಾಷ್ಟ್ರಗಳು ಈ ಮಾದರಿಯನ್ನು ಅಳವಡಿಸಿಕೊಳ್ಳುವ ಪೂರ್ವದಲ್ಲಿ, ಜಪಾನ ದೇಶದ ಆರ್ಥಿಕ ಅಭಿವೃದ್ಧಿಯ ಮಾದರಿಯ ಕಡೆಗೆ ತಮ್ಮ ಗಮನ ಹರಿಸು ವದು ಒಳಿತೆಂದು ಪಾಶ್ಚಿಮಾತ್ಯ ಅರ್ಥಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ.

ಜಪಾನ ದೇಶದ ಅನುಭವ :

ಅನೇಕ ಅರ್ಥಶಾಸ್ತ್ರಜ್ಞರ ದೃಷ್ಟಿಯಲ್ಲಿ ಜಪಾನ ದೇಶದ ಆರ್ಥಿಕ ಅಭಿವೃದ್ಧಿಯು ಜಗತ್ತಿನಲ್ಲಿಯೇ ಒಂದು ಗಮನಾರ್ಹವಾದ ಸಂಗತಿಯಾಗಿದೆ. ಜನನಿಬಿಡವಾದಂಥ ಏಶಿಯಾದ ರಾಷ್ಟ್ರಗಳಿಗೆ ಜಪಾನದ ಯಶಸ್ಸು ಒಂದು ಮಾದರಿಯಾಗಬಲ್ಲದು. ೧೮೯೦ ರಿಂದ ೧೯೨೦ ರ ಅವಧಿಯಲ್ಲಿ ಜಪಾನ ದೇಶವು ಬೇಸಾಯದ ಉತ್ಪಾದನೆಯನ್ನು ಶೇಕಡಾ ೭೭ ರಷ್ಟು ಹೆಚ್ಚಿಸಿತು. ಅದೇ ವೇಳೆಯಲ್ಲಿ ಸಾಗುವಳಿ ಭೂಮಿಯು ಶೇಕಡಾ ೨೧ ರಷ್ಟು ಹೆಚ್ಚಾದರೆ ಪ್ರತಿ ಎಕರೆ ಉತ್ಪಾದನೆಯು ಶೇಕಡಾ ೪೬ರಷ್ಟು ಹೆಚ್ಚಾಯಿತು. ಈ ಸಮಯದಲ್ಲಿ ಜನಸಂಖ್ಯೆ ಬೇಸಾಯದ ಉತ್ಪಾದನೆಗಿಂತ ಕಡಿಮೆ ಪ್ರಮಾಣದಲ್ಲಿ. ಅಂದರೆ ಶೇಕಡಾ ೪೪ ರಷ್ಟು ಹೆಚ್ಚಾಯಿತು. ಆದರೆ ಬೇಸಾಯದ ಕಾರ್ಮಿಕರ ಸಂಖ್ಯೆ ಶೇಕಡಾ ೧೪ ರಷ್ಟು ಕಡಿಮೆಯಾಯಿತು. ಅಂದರೆ ೩೦ ವರ್ಷದ ಸಮಯದಲ್ಲಿ ಜಪಾನ ದೇಶವು, ಆಹಾರ ಧಾನ್ಯದ ಉತ್ಪಾದನೆಯನ್ನು ಪ್ರತಿವ್ಯಕ್ತಿಗೆ ಶೇಕಡಾ ೨೦ ರಷ್ಟು ಹೆಚ್ಚಿಸಿತೆಂದು ಹೇಳಬಹುದು. ಬೇಸಾಯ ಕಾರ್ಮಿಕರ ಉತ್ಪಾದನೆಯು ಇದೇ ವೇಳೆ ಯಲ್ಲಿ ಇಮ್ಮಡಿಗೊಂಡಿತು.

ಜಪಾನ ದೇಶವು ತನ್ನ ಆರ್ಥಿಕ ಅಭಿವೃದ್ಧಿಯನ್ನು ಪ್ರಾರಂಭಿಸಿದಾಗ ಹೆಚ್ಚಿನ ಜನಸಂಖ್ಯೆ ಇದ್ದಿತಲ್ಲದೆ. ವ್ಯಕ್ತಿಯ ಸರಾಸರಿ ವರಮಾನ ಈಗಿನ ಏಶಿಯಾ ಖಂಡದ ದೇಶಗಳ ಸರಾಸರಿ ವರಮಾನಕ್ಕಿಂತ ಅಷ್ಟೇನು ಹೆಚ್ಚಿಗೆ ಇರಲಿಲ್ಲ. ಮೇಲಾಗಿ ರೈತರ ಹಿಡುವಳಿಗಳೂ ಸಹಿತ ಎರಡು ಅಥವಾ ಮೂರು ಎಕರೆಗಳಷ್ಟೇ ಇದ್ದಾಗ್ಯೂ, ಬೇಸಾಯ ದಲ್ಲಿ ಪ್ರಗತಿಯನ್ನು ಸಾಧಿಸಲು ಪ್ರಬಲ ಕಾರಣಗಳೇನೆಂಬುದನ್ನು ನಾವು ನೋಡುವಾ.

ಜಪಾನ ದೇಶದಲ್ಲಿ ಬೇಸಾಯದ ಉತ್ಪಾದನೆಯು ಹೆಚ್ಚಲು ಮೂರು ಪ್ರಬಲ ಕಾರಣಗಳು ಇವೆಯೆಂದು ಹೇಳಲಾಗುತ್ತದೆ. ಅವು ಯಾವುವೆಂದರೆ :

೧) ದೊಡ್ಡ ಪ್ರಮಾಣದಲ್ಲಿ ರಾಸಾಯನಿಕ ಗೊಬ್ಬರದ ಉಪಯೋಗ

೨) ಸುಧಾರಿಸಿದ ಭತ್ತದ ತಳಿಗಳ ಅಭಿವೃದ್ಧಿ ಮತ್ತು ಉಪಯೋಗ

೩) ಸುಧಾರಿಸಿದ ರೀತಿಯಲ್ಲಿ ನೀರಾವರಿ ಉಪಯೋಗ ಮತ್ತು ಸಸಿಗಳನ್ನು ನೆಡುವ ರೀತಿ.

ಜಪಾನ ದೇಶವು ಹೆಚ್ಚಿಗೆ ಬಂಡವಾಳವನ್ನು ಉಪಯೋಗಿಸದೆ ಬೇಸಾಯದ ಸುಧಾರಣೆಯನ್ನು ಸಾಧಿಸಿತು. ಉದ್ದಿಮೆ ರಂಗದಲ್ಲಿಯೂ ಸಹಿತ ಜಪಾನ ದೇಶವು ಚಿಕ್ಕ ಪ್ರಮಾಣದ ಕೈಗಾರಿಕೆಗಳಿಗೆ ಬಹಳ ಮಹತ್ವವನ್ನು ಕೊಟ್ಟಿತು. ಜನಸಂಖ್ಯೆ ಹೆಚ್ಚಿಗಿರುವ ಏಶಿಯಾದ ರಾಷ್ಟ್ರಗಳಿಗೆ ಈ ಮಾರ್ಗವು ಬಹಳ ಅನುಕೂಲವಾಗಿದೆಯೆಂದು ಹೇಳಬಹುದು.

ಆದರೆ ದೇಶದ ಆರ್ಥಿಕ ಅಭಿವೃದ್ಧಿಯ ಲಾಭಗಳು ಜಪಾನ ದೇಶದ ಬೇಸಾಯಕ್ಕೆ ಲಭಿಸಿದವೆಂದು ಹೇಳಲಿಕ್ಕಾಗದು, ಯಾಕೆಂದರೆ ಬೇಸಾಯದ ಉತ್ಪತ್ತಿಯ ಬಹುಭಾಗವನ್ನು ಸರಕಾರವು ಕರಗಳ ಮೂಲಕ ತೆಗೆದುಕೊಂಡು ಉದ್ದಿಮೆಗಳನ್ನು ಸ್ಥಾಪಿಸಲು ಉಪಯೋಗಿಸಿತು. ಕೆಲವೊಂದು ಭಾಗವು ಗ್ರಾಮೀಣ ಪ್ರದೇಶದ ಜಮೀನುದಾರರಿಗೆ ಲಭಿಸಿದರೂ, ಈ ಹಣವನ್ನು ಅವರು ಗ್ರಾಮೀಣ ಪ್ರದೇಶದಲ್ಲಿ ಚಿಕ್ಕ ಉದ್ದಿಮೆಗಳನ್ನು ಸ್ಥಾಪಿಸಲು ಉಪಯೋಗಿಸಿದರು. ಆದ್ದರಿಂದ ಬೇಸಾಯದ ಸುಧಾರಣೆಯಾಗದೆ ಜಪಾನ ದೇಶದ ಔದ್ಯಮಿಕ ಪ್ರಗತಿಯು ಸಾಧ್ಯವಿರಲಿಲ್ಲ. ಇದು ಅಲ್ಲದೆ ಹೆಚ್ಚುತ್ತಿರುವ ಬೇಸಾಯದ ಉತ್ಪತ್ತಿಯು ಜಪಾನದೇಶದ ಆರ್ಥಿಕ ಅಭಿವೃದ್ಧಿಗೆ ಬೇರೆ ರೀತಿಯಿಂದಲೂ ಸಹಾಯಮಾಡಿತು. ಮೊದಲನೆಯದಾಗಿ, ಆಹಾರಧಾನ್ಯಗಳ ಆಮದಿಗಾಗಿ ವಿದೇಶಿ ವಿನಿಮಯವನ್ನು ಬಳಸುವ ಅವಶ್ಯಕತೆ ತಪ್ಪಿತು. ಎರಡನೆಯದಾಗಿ ಆಹಾರಧಾನ್ಯಗಳ ಬೆಲೆಗಳು ತಗ್ಗಿ ಔದ್ಯಮೀಕರಣದಿಂದ ಸಂಭವಿಸುವ ಹಣದುಬ್ಬರವು ತಪ್ಪಿ, ಕೂಲಿಯ ದರಗಳು ಕಡಿಮೆಯಾಗಿ, ಲಾಭಾಂಶವು ಹೆಚ್ಚಿ, ಔದ್ಯಮೀಕರಣವು ವೇಗದಿಂದ ಸಾಗಿತು. ಕೊನೆಯದಾಗಿ ಬೇಸಾಯದ ಪ್ರಗತಿಯಾದಂತೆ, ಉದ್ದಿಮೆಗಳಿಗೆ ಬೇಕಾದ ಕಾರ್ಮಿಕರನ್ನು ಬೇಸಾಯವು ಪೂರೈಸಿತು.

ಚೀನಾ ದೇಶದ ಉದಾಹರಣೆ :

ಪಾಶ್ಚಿಮಾತ್ಯ ಅರ್ಥಶಾಸ್ತ್ರಜ್ಞರು ಚೀನಾ ಮತ್ತು ಹಿಂದುಸ್ಥಾನ ದೇಶಗಳ ಅಭಿವೃದ್ಧಿಯನ್ನು ಕೂಲಂಕಶವಾಗಿ ನೋಡುತ್ತಿದ್ದಾರೆ. ಈ ಎರಡೂ ಬೃಹತ್ ದೇಶಗಳು ಸರ್ವಸಾಧಾರಣ ಒಂದೇ ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿದ್ದು, ತಮ್ಮ ಆರ್ಥಿಕ ಅಭಿವೃದ್ಧಿಯನ್ನು ತುಸು ಹೆಚ್ಚು ಕಡಿಮೆ ಒಂದೇ ವೇಳೆಗೆ ಪ್ರಾರಂಭಿಸಿದವು. ಆದರೆ ಅವುಗಳು ಬೇರೆ ಬೇರೆ ರಾಜಕೀಯ ವ್ಯವಸ್ಥೆಯನ್ನು ಹೊಂದಿದವುಗಳಾಗಿರುತ್ತವೆ. ಆದರೂ ಸಹಿತ ಒಂದು ದೇಶದ ಅನುಭವವು ಮತ್ತೊಂದು ದೇಶಕ್ಕೆ ಮಾರ್ಗದರ್ಶನ ನೀಡಬಲ್ಲದು. ಈ ದೃಷ್ಟಿಯಿಂದ ಚೀನಾ ದೇಶದ ಮಾದರಿಯನ್ನು ನಾವು ಸ್ವಲ್ಪಮಟ್ಟಿಗೆ ತಿಳಿದುಕೊಳ್ಳುವಾ.

ಪ್ರೊಫೆಸರ್ ಮಲೆನ್‌ಬಾಮ್ ಅವರು ಹಿಂದುಸ್ಥಾನ ಮತ್ತು ಚೀನಾ ದೇಶಗಳ ಅಭಿವೃದ್ಧಿಯ ತುಲನಾತ್ಮಕ ಅಭ್ಯಾಸವನ್ನು ಮಾಡಿ ೧೯೫೦ ರ ದಶಕದಲ್ಲಿ ಚೀನಾ ದೇಶವು

ಬೇಸಾಯರಂಗದಲ್ಲಿ ಮತ್ತು ಔದ್ಯಮಿಕ ರಂಗದಲ್ಲಿ ಹಿಂದುಸ್ಥಾನಕ್ಕಿಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿತೆಂದು ಅಭಿಪ್ರಾಯ ಪಟ್ಟಿದ್ದಾರೆ. ಜನತಾ ಪಕ್ಷದ ಪಾರ್ಲಿಮೆಂಟ ಸದಸ್ಯರೂ, ಅರ್ಥಶಾಸ್ತ್ರಜ್ಞರೂ ಆದ ಸುಬ್ರಹ್ಮಣ್ಯಸ್ವಾಮಿಯವರೂ ಸಹಿತ ಚೀನಾ ದೇಶವು ಬೇಸಾಯ ರಂಗ ಮತ್ತು ಔದ್ಯಮಿಕ ರಂಗದಲ್ಲಿ ಹಿಂದುಸ್ಥಾನಕ್ಕಿಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿರುವದಾಗಿ ಹೇಳುತ್ತಾರೆ. ಚೀನಾ ದೇಶದಲ್ಲಿ ರಾಸಾಯನಿಕ ಗೊಬ್ಬರದ ಉಪಯೋಗ, ಮತ್ತು ನೀರಾವರಿ ಹೊಂದಿದ ಭೂಮಿಯ ಪ್ರಮಾಣ, ಹಿಂದುಸ್ಥಾನಕ್ಕಿಂತ ಹೆಚ್ಚಿಗಿದೆ. ಮೇಲಾಗಿ ಚೀನಾ ದೇಶದಲ್ಲಿ ಫಲವತ್ತಾದ ಭೂಮಿಯನ್ನು ಆಹಾರ ಧಾನ್ಯಗಳ ಬೆಳವಣಿಗೆಗೆ ಉಪಯೋಗಿಸಿ, ಕಡಿಮೆ ಫಲವತ್ತಾದ ಭೂಮಿಯನ್ನು ಉಳಿದ ಬೇಸಾಯದ ಹುಟ್ಟುವಳಿಗಳನ್ನು ಬೆಳೆಸಲು ಉಪಯೋಗಿಸುವದಾಗಿ ತಿಳಿದುಬರುತ್ತದೆ. ಅದೇ ರೀತಿಯಾಗಿ ಚೀನಾ ದೇಶದಲ್ಲಿ ಒಂದಕ್ಕಿಂತ ಹೆಚ್ಚಿನ ಬೆಳೆ ತೆಗೆಯುವ ಭೂಮಿಯ ಪ್ರಮಾಣವೂ ಹೆಚ್ಚಿಗಿರುವದಾಗಿ ಕಂಡುಬರುತ್ತದೆ. ಈ ರೀತಿಯಾಗಿ ಚೀನಾ ದೇಶವು ಹೆಚ್ಚಿಗೆ ರಾಸಾಯನಿಕ ಗೊಬ್ಬರದ ಉಪಯೋಗ, ನೀರಾವರಿ ವಿಸ್ತರಣೆ, ಹೆಚ್ಚು ಇಳುವರಿ ಕೊಡುವ ಬೀಜಗಳ ಉಪಯೋಗ ಮತ್ತು ಒಂದಕ್ಕಿಂತ ಹೆಚ್ಚಿನ ಬೆಳೆ ತೆಗೆಯುವ ವಿಧಾನಗಳಿಂದ ಬೇಸಾಯದಲ್ಲಿ ಪ್ರಗತಿಯನ್ನು ಸಾಧಿಸಿದೆ. ಔದ್ಯಮಿಕ ರಂಗದಲ್ಲಿ ಚೀನಾ ದೇಶವು ಉದ್ಯೋಗ ಅವಕಾಶಗಳನ್ನು ವಿಸ್ತರಿಸುವ ದೃಷ್ಟಿಯಿಂದ ಚಿಕ್ಕ ಮತ್ತು ಗ್ರಾಮೀಣ ಉದ್ದಿಮೆಗಳಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದೆ. ಹೀಗಾಗಿ ಚೀನಾ ದೇಶವು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸಮರ್ಥವಾಯಿತೆಂದು ಹೇಳಬಹುದು. ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯದ ಕಡೆಗೆ ಹೆಚ್ಚಿನ ಗಮನವನ್ನು ಚೀನಾ ದೇಶವು ಕೊಟ್ಟು ಈ ಸಮಸ್ಯೆಗಳನ್ನು ತನ್ನದೇ ಆದ ರೀತಿಯಲ್ಲಿ ಬಿಡಿಸಲು ಪ್ರಯತ್ನಿಸಿದೆ.

ಹಿಂದುಸ್ಥಾನದ ಅನುಭವ :

ನಮ್ಮ ದೇಶದಲ್ಲಿಯೂ ಸಹಿತ ಬೇಸಾಯದ ಸುಧಾರಣೆಯಾಗದ ಹೊರತು ಔದ್ಯೋಗಿಕ ಪ್ರಗತಿಯನ್ನು ಸಾಧಿಸಲು ಸಾಧ್ಯವಿಲ್ಲವೆಂಬುದನ್ನು ಮೊದಲನೆಯ ಪಂಚವಾರ್ಷಿಕ ಯೋಜನೆಯು ಒತ್ತಿಹೇಳುತ್ತದೆ. ಆದರೆ ಎರಡನೆಯ ಪಂಚವಾರ್ಷಿಕ ಯೋಜನೆಯಿಂದ ಔದ್ಯೋಗಿಕ ಪ್ರಗತಿಯ ಕಡೆಗೆ ಹೆಚ್ಚಿನ ಗಮನ ಕೊಟ್ಟು ಬೇಸಾಯವನ್ನು ಅಲಕ್ಷಿಸಲಾಯಿತು. ಯಾಕೆಂದರೆ ಎರಡನೆಯ ಯೋಜನೆಯ ಮೇಳೆಗೆ ರಶಿಯಾ ದೇಶದ ಮಾದರಿಯು ಯೋಜಕರ ಮೇಲೆ ಪ್ರಭಾವ ಬೀರಿತು. ಇದರಿಂದ ದೊಡ್ಡ ಉದ್ದಿಮೆಗಳಿಗೆ ಮಹತ್ವ ಕೊಡಲಾಯಿತು. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಈ ನೀತಿಯನ್ನು ಮುಂದುವರಿಸಲಾಯಿತು. ಇದರಿಂದಾಗಿ ೬೦ ರ ದಶಕದ ಮಧ್ಯದಲ್ಲಿ ಆಹಾರದ ಕೊರತೆಯಾಗಿ ಬೆಲೆಗಳು ವಿಪರೀತ ಏರಹತ್ತಿದವು.

ಈ ವೇಳೆಗೆ ಬೇಸಾಯದಲ್ಲಿ ರಾಸಾಯನಿಕ ಗೊಬ್ಬರದ ಉಪಯೋಗ ಮತ್ತು ಹೆಚ್ಚು ಇಳುವರಿ ಕೊಡುವ ಬೀಜಗಳ ಉಪಯೋಗ ಮುಂತಾದ ತಾಂತ್ರಿಕತೆಯು ಬಳಕೆಯಲ್ಲಿ ಬಂದಿತು. ಇದರಿಂದಾಗಿ ನಮ್ಮ ದೇಶದಲ್ಲಿ ಭತ್ತ ಮತ್ತು ಗೋದಿಯ ಬೆಳವಣಿಗೆಯಲ್ಲಿ ಹಸಿರು ಕ್ರಾಂತಿಯನ್ನು ಸಾಧಿಸಲಾಯಿತು. ಬೇಸಾಯದ ಅಭಿವೃದ್ಧಿಯ ದೆಶೆಯಿಂದ ಬೇಸಾಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಯಿತಲ್ಲದೆ, ಸಂಶೋಧನಾ ಕೇಂದ್ರಗಳನ್ನೂ ಸ್ಥಾಪಿಸಲಾಯಿತು. ಮುಂದೆ ೧೯೭೪ ಎಪ್ರಿಲ ೧ರಂದು ಪ್ರಾರಂಭವಾದ ಐದನೆಯ ಪಂಚವಾರ್ಷಿಕ ಯೋಜನೆಯು ಬೇಸಾಯ ಮತ್ತು ಉದ್ದಿಮೆ ರಂಗಗಳಿಗೆ ಗಟ್ಟಿಮುಟ್ಟಾದ ಅಡಿಪಾಯ ಹಾಕಲಾಗಿದೆ ಎಂಬ ಭಾವನೆಯಿಂದ ಮುಂದುವರಿಯಿತು. ಆದರೆ ಐದನೆಯ ಪಂಚವಾರ್ಷಿಕ ಯೋಜನೆಯು ೧೯೭೯ರಲ್ಲಿ ಮುಗಿಯುವ ಬದಲು ಒಂದು ವರ್ಷ ಮೊದಲೆ ಕೊನೆಗೊಂಡು ೧೯೭೮ರ ಎಪ್ರಿಲ ೧ರಂದು ಆರನೆಯ ಪಂಚವಾರ್ಷಿಕ ಯೋಜನೆ ಪ್ರಾರಂಭವಾಯಿತು. ಆರನೆಯ ಪಂಚವಾರ್ಷಿಕ ಯೋಜನೆಯ ಗುರಿಗಳೆಂದರೆ ನಿರುದ್ಯೋಗವನ್ನು ಹತ್ತು ವರುಷಗಳಲ್ಲಿ ತೊಡೆದುಹಾಕುವದು, ಬಡವರ ಜೀವನ ಮಟ್ಟವನ್ನು ಸುಧಾರಿಸುವದು ಮತ್ತು ಗ್ರಾಮೀಣ ಜನರಿಗೆ ಸಾರ್ವಜನಿಕ ವಸ್ತುಗಳನ್ನು ಮತ್ತು ಸೇವೆಯನ್ನು ಒದಗಿಸುವದು. ಆರನೆಯ ಪಂಚವಾರ್ಷಿಕ ಯೋಜನೆಯು ಚಿಕ್ಕ ಮತ್ತು ಗ್ರಾಮೀಣ ಕೈಗಾರಿಕೆಗಳಿಗೆ ಬಹಳ ಮಹತ್ವವನ್ನು ಕೊಟ್ಟಿದೆ. ೧೯೭೭–೭೮ರಲ್ಲಿ ೧೨·೪ ಕೋಟಿ ಟನ್ ಇದ್ದ ಆಹಾರದ ಉತ್ಪಾದನೆಯನ್ನು ೧೯೮೨–೮೩ ರ ಸುಮಾರಿಗೆ ೧೪·೪ ಕೋಟಿ ಟನ್‌ಗಳಿಗೇರಿಸುವದು ಆರನೆಯ ಪಂಚವಾರ್ಷಿಕ ಯೋಜನೆಯ ಗುರಿಯಾಗಿದೆ.

ಉಪಸಂಹಾರ :

ಆದ್ದರಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಆಹಾರದ ಉತ್ಪಾದನೆಯನ್ನು ಹೆಚ್ಚಿಸದೆ ಆರ್ಥಿಕ ಅಭಿವೃದ್ಧಿಯ ಮಾರ್ಗದಲ್ಲಿ ಮುನ್ನಡೆಯಲು ಸಾಧ್ಯವಿಲ್ಲ. ಈಗ ಅಭಿವೃದ್ಧಿ ಹೊಂದಿದ ದೇಶಗಳಾದ ಅಮೇರಿಕೆಯ ಸಂಯುಕ್ತ ಸಂಸ್ಥಾನ, ಕೆನಡಾ, ಮುಂತಾದ ಹೊಸ ದೇಶಗಳು ಹೆಚ್ಚಿನ ಆಹಾರ ಧಾನ್ಯಗಳನ್ನು ಮೊದಲಿನಿಂದಲೆ ಪಡೆದವುಗಳಾಗಿದ್ದವು. ಅದೇ ರೀತಿಯಾಗಿ ಪಶ್ಚಿಮ ಯುರೋಪಿನ ರಾಷ್ಟ್ರಗಳೂ ಸಹಿತ ಔದ್ಯೋಗಿಕ ಕ್ರಾಂತಿಯ ಪೂರ್ವದಲ್ಲಿ ಬೇಸಾಯದ ಪ್ರಗತಿಯನ್ನು ಸಾಧಿಸಿ ಆಹಾರದ ಉತ್ಪಾದನೆಯನ್ನು ಹೆಚ್ಚಿಸಿದ್ದವು. ಮುಂದೆ ಔದ್ಯೋಗಿಕ ಕ್ರಾಂತಿಯಾದಂತೆ ಈ ದೇಶಗಳು ಔದ್ಯೋಗಿಕ ಸರಕುಗಳನ್ನು ಬೇರೆ ದೇಶಗಳಿಗೆ ರಫ್ತು ಮಾಡಿ ತಮಗೆ ಬೇಕಾದ ಹೆಚ್ಚಿನ ಆಹಾರ ಧಾನ್ಯ ಮತ್ತು ಕಚ್ಚಾ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಪ್ರಾರಂಭಿಸಿದವು. ರಶಿಯಾ ದೇಶವೂ ಕೂಡ ಪ್ರಾರಂಭದಲ್ಲಿ ಬೇಸಾಯದ ಪ್ರಗತಿಯಿಂದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿತು. ಮುಂದೆ ಬೇಸಾಯವನ್ನು ಅಲಕ್ಷಿಸಿದ್ದರಿಂದ ತುಂಬಾ ತೊಂದರೆಯನ್ನು ಅನುಭವಿಸಬೇಕಾಯಿತು.

ಜನಸಂಖ್ಯೆ ಹೆಚ್ಚಿಗಿರುವ ಏಶಿಯಾದ ದೇಶಗಳಲ್ಲಿ ಆಹಾರದ ಉತ್ಪಾದನೆಯನ್ನು ಹೆಚ್ಚಿಸದೆ ಆರ್ಥಿಕ ಪ್ರಗತಿಯು ಸಾಧ್ಯವಿಲ್ಲವೆಂಬುದನ್ನು ನಾವು ಕಂಡುಕೊಂಡಂತಾಯಿತು. ಜಪಾನ ಮತ್ತು ಚೀನಾ ದೇಶಗಳು ಹೇಗೆ ಆಹಾರ ಉತ್ಪಾದನೆಯನ್ನು ಹೆಚ್ಚಿಸಿ ತಮ್ಮ ಆರ್ಥಿಕ ಅಭಿವೃದ್ಧಿಯಲ್ಲಿ ಮುನ್ನಡೆದಿವೆ ಎಂಬುದನ್ನು ನಾವು ಕಂಡುಕೊಂಡೆವು. ನಮ್ಮ ದೇಶದಲ್ಲಿಯೂ ಕೂಡ ಇತ್ತಿತ್ತಲಾಗಿ ಆಹಾರ ಸ್ವಾವಲಂಬನೆಯನ್ನು ನಾವು ಸಾಧಿಸಿದ್ದೇವೆ. ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಬೇಸಾಯಕ್ಕೆ ಮತ್ತು ಗ್ರಾಮೀಣ ಅಭಿವೃದ್ಧಿಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದು, ನಾವು ಮುಂದೆ ಬೇಸಾಯದ ಉತ್ಪಾದನೆಯನ್ನು ಹೆಚ್ಚಿಸಲು ಅನುಕೂಲವಾಗುತ್ತದೆ.

ಗ್ರಂಥ ಋಣ

1 Johnston B. F. & Mellor J. W. : The Role of Agriculture in Economic Development, **American Economic Review,** Sept. 1961.

2 Nicholls William H. : The Place of Agriculture in Economic Development, in Carl Eicher & Lawrente Witt (Ed) **Agriculture in Economic Development,** McGraw Hill June, 1964.

3 Thorbecke Erik : The Role and function of Agricultural Development in National Economic Growth in **Economic Development of Agriculture,** Iowa State University Press 1966.

4 Charan Singh : **India's Economic Policy–The Gandhian Blue-print,** New Delhi, Vikas Publishing House, 1978.

5 Subramaniam Swamy : **Economic Growth of China and India** Chicago, The University of Chicago Press 1973.

ನೀಳಕಿ : ಮಧ್ಯ ಜಪಾನಿನ ಒಂದು ಗ್ರಾಮ

● ಎಚ್. ವಿ. ನಾಗೇಶ್

೧. ಪೀಠಿಕೆ

ಜಪಾನ್ ಏಶಿಯಾದ ರಾಷ್ಟ್ರ. ಇತರ ಅನೇಕ ರಾಷ್ಟ್ರಗಳಂತೆ ಜಪಾನ್ ಕೂಡಾ ವಿಪರೀತ ಜನಸಾಂದ್ರತೆಯನ್ನು ಹೊಂದಿದೆ. ೧೯೬೦ರ ಸುಮಾರಿಗೆ ಈ ಚಿಕ್ಕ ದ್ವೀಪ ಸಮೂಹದಲ್ಲಿ ಹತ್ತುಕೋಟಿಗೂ ಮೀರಿದ ಜನಸಂಖ್ಯೆಯಿತ್ತು. ಇದರಲ್ಲಿ ಅರ್ಧದಷ್ಟು ಗ್ರಾಮವಾಸಿಗಳು. ಉಳಿದರ್ಧ ಜಪಾನೀಯರು ಜನನಿಬಿಡವಾದ ನಗರಗಳಲ್ಲಿದ್ದರು. ಗಮನಿಸಬೇಕಾದ ಒಂದು ಮಾತೆಂದರೆ ನಗರವಾಸಿಗಳಾದ ಐದುಕೋಟಿ ಜನರಲ್ಲಿ ಮೂರನೆಯ ಒಂದು ಪಾಲಿನಷ್ಟು ಜನರು ಟೋಕಿಯೋ, ಒಸಾಕಾ ಮೊದಲಾದ ಆರು ಮಹಾನಗರಗಳಲ್ಲಿ ವಾಸವಾಗಿದ್ದರು. ಇಂಥ ಬೃಹತ್‌ಗಾತ್ರದ ಮಹಾನಗರಗಳು ಒಂದೆಡೆಗಿದ್ದರೆ, ನೂರು–ನೂರೈವತ್ತು ಜನರಿರುವ ಸಹಸ್ರಾರು ಚಿಕ್ಕ ಗ್ರಾಮಗಳು ಇನ್ನೊಂದೆಡೆಗಿದ್ದುವು. ಇವುಗಳು ಕೃಷಿಕರ ನೆಲೆಗಳಾಗಿದ್ದುವು. ಇಲ್ಲಿ ಕೃಷಿಕರಲ್ಲದ ಗ್ರಾಮವಾಸಿಗಳ ಸಂಖ್ಯೆ ತೀರ ಕಡಿಮೆ. ಬಹಳೆಂದರೆ ಸುಮಾರು ೪%ರಷ್ಟು ಇರ ಬಹುದು. ಇವರಲ್ಲಿ ಹೆಚ್ಚಿನವರು ಮೀನುಗಾರರು ಅಥವಾ ಗಣಿ ಕೆಲಸಗಾರರಿದ್ದಾರೆ.

ಜಪಾನೀ ಭಾಷೆಯಲ್ಲಿ ಗ್ರಾಮಾಂತರ ಪ್ರದೇಶವನ್ನು ಸೂಚಿಸುವ ಮೂರು ಮುಖ್ಯ ಪದಗಳಿವೆ. ಅವೆಂದರೆ 'ಬುರಾಕು', 'ಓಆರಘಾ' ಮತ್ತು 'ಮೂರಾ'. 'ಮೂರಾ' ಎಂಬುದು ನಾಲ್ಕೈದು ಸಾವಿರ ಜನಸಂಖ್ಯೆಯಿರುವ ಆಡಳಿತ ಗ್ರಾಮ. 'ಓಆರಘಾ' ಎಂಬುದು ಅದರ ಒಂದು ವಿಭಾಗ. ಪ್ರತಿಯೊಂದು 'ಓಆರಘಾ'ದಲ್ಲಿ ಹತ್ತಾರು'ಬುರಾಕು' ಗಳಿರುತ್ತವೆ 'ಮೂರಾ' ಅಥವಾ ಆಡಳಿತ ಗ್ರಾಮವು ಸಮಾಜಶಾಸ್ತ್ರಜ್ಞರ ಅರ್ಥದಲ್ಲಿ ಗ್ರಾಮವಲ್ಲ. ಅದು ಸರಕಾರದ ಕಚೇರಿಗಳಿರುವ ಹಾಗೂ ಅನೇಕ ಗ್ರಾಮಗಳನ್ನೊಳ ಗೊಂಡ ಒಂದು ಪ್ರಾದೇಶಿಕ ವಿಭಾಗ ಎನ್ನಬಹುದು, 'ಓಆರಘಾ' ಎಂಬುದು ಗ್ರಾಮಗಳ ಸಮೂಹವೇ ಹೊರತು ಪ್ರತ್ಯೇಕವಾದ ಗ್ರಾಮವಲ್ಲ. ಜನವಸತಿ ಹಾಗೂ ಸಾಮಾಜಿಕ ಸಮಗ್ರತೆಯ ದೃಷ್ಟಿಯಿಂದ ನೂರಕ್ಕಿಂತ ಕಡಿಮೆ ಮನೆಯಿರುವ ಈ 'ಬುರಾಕು'ಗಳೇ ನಿಜವಾದ ಗ್ರಾಮಗಳು. ಜಪಾನಿನ ಸಾಮಾಜಿಕ ಪರಂಪರೆಯ ನಿರಂತರತೆಯನ್ನೂ ಶಕ್ತಿ

ಯನ್ನೂ ಇತ್ತೀಚಿನ ಸ್ಥಿತ್ಯಂತರಗಳನ್ನೂ ಈ ಪುಟ್ಟ ಸಮುದಾಯದಲ್ಲಿಯೇ ಕಾಣಬಹುದು.

ಜಪಾನೀ ಗ್ರಾಮಗಳ ಅಧ್ಯಯನವು ಹಲವು ಕಾರಣಗಳಿಂದ ಮಹತ್ವ ಪಡೆದಿದೆ. ಒಂದನೆಯದಾಗಿ, ಮೇಲೆ ಹೇಳಿದಂತೆ ಜಪಾನಿನ ಜನಸಂಖ್ಯೆಯ ಅರ್ಧದಷ್ಟು ಜನರು ಗ್ರಾಮಾಂತರ ಪ್ರದೇಶದಲ್ಲಿರುತ್ತಾರೆ. ಎರಡನೆಯದಾಗಿ, ಕೃಷಿ ಗ್ರಾಮಗಳ ಸಂಸ್ಕೃತಿಯೇ ಜಪಾನ್ ದೇಶದ ಜನರ ವ್ಯಕ್ತಿತ್ವವನ್ನು ರೂಪಿಸಿದೆ. ಹಾಗೆ ನೋಡಿದರೆ ಈಗ ನಗರ ವಾಸಿಗಳಾಗಿರುವವರಲ್ಲಿ ಬಹುಪಾಲು ಜನರು ಗ್ರಾಮೀಣ ಹಿನ್ನೆಲೆಯಿಂದ ಬಂದವರಿದ್ದಾರೆ. ಮೂರನೆಯದಾಗಿ, ಜಪಾನೀ ಸಂಸ್ಕೃತಿಯ ಮುಖ್ಯ ಲಕ್ಷಣಗಳನ್ನು ಈ ವರೆಗೆ ಗ್ರಾಮೀಣ ಸಮುದಾಯಗಳೇ ರಕ್ಷಿಸಿಕೊಂಡು ಬಂದಿವೆ. ಇವೆ ಮಾತುಗಳನ್ನು ನಾವು ಭಾರತೀಯ ಗ್ರಾಮಗಳ ಬಗೆಗೂ ಹೇಳಬಹುದೇನೋ! ಏನಿದ್ದರೂ ಭಾರತೀಯ ಗ್ರಾಮ ಹಾಗೂ ಜಪಾನಿನ ಬುರಾಕುಗಳ ನಡುವಿರುವ ಸಾಮ್ಯ-ವೈಷಮ್ಯಗಳನ್ನು ಸಮಾಜಶಾಸ್ತ್ರಜ್ಞರು ಗಮನಿಸಬೇಕು.

೨. ನೀಈಯೆ ಬುರಾಕು ಹಿನ್ನೆಲೆ

ನೀಈಯೆ ಎಂಬುದು ಜಪಾನಿನ ಕೇಂದ್ರದ್ವೀಪವಾದ ಹೊನಶುವಿನ ಪಶ್ಚಿಮಾರ್ಧದಲ್ಲಿದೆ. ಅದು ಗಾತ್ರದಲ್ಲಿ ಬಲು ಚಿಕ್ಕ ಗ್ರಾಮ. ನೀಈಯೆ ಗುಡ್ಡವೊಂದರ ತಪ್ಪಲಿನಲ್ಲಿದ್ದು ಪೈನ್ ಮರಗಳಿಂದ ಆವೃತವಾಗಿದೆ. ಅಲ್ಲಿ ಇಪ್ಪತ್ತನಾಲ್ಕು ಮನೆಗಳಿದ್ದು ಅವುಗಳಲ್ಲಿ ನೂರಮೂವತ್ತು ಜನರು ವಾಸವಾಗಿದ್ದಾರೆ, ಅವರೆಲ್ಲರೂ ಕೃಷಿಕರು. ಅವರ ಮುಖ್ಯ ಬೆಳೆ ಭತ್ತ. ಕಡಿಮೆಯೆಂದರೆ ಮೂರು ಬೆಳೆ ತೆಗೆಯುವುದು ಅವರ ವಾಡಿಕೆ. ಭತ್ತವನ್ನಲ್ಲದೆ ಗೋದಿ, ಕಾಳುಕಡಿ, ಹಣ್ಣು ಹಂಪಲು, ತರಕಾರಿಗಳನ್ನೂ ಅವರು ಬೆಳೆಸುತ್ತಾರೆ. ಅಲ್ಲಿ ಸಮೃದ್ಧವಾಗಿ ಬೆಳೆಯುವ ಕಡ್ಡಿಹುಲ್ಲಿನಿಂದ ಚಾಪೆ ಹೆಣೆಯುತ್ತಾರೆ. ತಾವು ಬೆಳೆಯುವ ಧಾನ್ಯಗಳ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ನೀಈಯೆಯ ಕೃಷಿಕರು ಹೊರಗಿನ ಮಾರುಕಟ್ಟೆಗಳಿಗೆ ಕಳುಹಿಸುತ್ತಾರೆ. ಹಣ್ಣುಹಂಪಲು, ತರಕಾರಿ ಇತ್ಯಾದಿ ಕೇವಲ ಮಾರುಕಟ್ಟೆಗೆ ಮೀಸಲಾಗಿದೆ ಎಂದರೆ ತಪ್ಪಿಲ್ಲ. ಬಣ್ಣದ ಚಾಪೆಗಳು ಒಳ್ಳೇ ಆದಾಯ ತರುತ್ತವೆ. ನೀಈಯೆ ಜಲಸಮೃದ್ಧಿಯ ಗ್ರಾಮ. ಅಲ್ಲಿ ಎಕ್ರೆಗೆ ಹತ್ತುಟನ್ ಭತ್ತ ಬೆಳೆಯುತ್ತದೆ. ಆದರೆ ಲಭ್ಯವಿರುವ ಕೃಷಿ ಭೂಮಿ ಬಹಳ ಕಡಿಮೆ. ಇದನ್ನು ಸರಿಯಾಗಿ ಗ್ರಹಿಸಬೇಕಾದರೆ ಒಂದು ನಿದರ್ಶನವನ್ನು ಕೊಡಬಹುದು. ನೀಈಯೆ ಗ್ರಾಮವು ಕಾಮೋ ಎಂಬ ಮೂರಾಕ್ಕೆ ಸೇರಿದ್ದು. ಇಂಥ ಮೂವತ್ತು ಗ್ರಾಮಗಳಿಂದ ಕೂಡಿದ ಕಾಮೋ ಮೂರಾದ ವಿಸ್ತೀರ್ಣ ಒಂದು ಚದುರಮೈಲಿಗೂ ಕಡಿಮೆ. ಅಂದ ಮೇಲೆ ನೀಈಯೆ ಗ್ರಾಮದ ಗಾತ್ರವನ್ನು ಊಹಿಸಿಕೊಳ್ಳಬಹುದು. ನೀಈಯೆಯ ಪ್ರತಿಯೊಂದು ಕುಟುಂಬಕ್ಕೆ ಹೊಲಗದ್ದೆ ಬಯಲು ಭೂಮಿ ಕೂಡಿ ಸರಾಸರಿ ಎರಡೂವರೆ ಎಕರೆಗಿಂತ ಕಡಿಮೆ ಭೂಮಿಯಿದೆ. ಹೀಗಾಗಿ ಭೂಮಿ ಎಂದರೆ ಇವರಿಗೆ ಬಂಗಾರ.

ಮೂರು ಬೆಳೆ ತೆಗೆಯಲು ಅನುಕೂಲವಾಗುವಂತೆ ಕಾಲುವೆಗಳನ್ನು ತೋಡಿ, ಜಲಮಾರ್ಗಗಳನ್ನು ಜೋಡಿಸಿ, ಸಿಕ್ಕಷ್ಟು ಭೂಮಿಯನ್ನು ರೂಢಿಸಿಕೊಂಡಿದ್ದಾರೆ. ಸಾಕಷ್ಟು ಗೊಬ್ಬರ, ಉಪಕರಣಗಳ ಸಹಾಯ ಪಡೆಯುತ್ತಾರೆ. ಮೈಮುರಿದು ದುಡಿಯುತ್ತಾರೆ. ಕೃಷಿಭೂಮಿಯ ಅಭಾವದಿಂದಾಗಿ ಅವರು ಪರಸ್ಪರ ಅವಲಂಬನೆಯಿಂದ ಹಾಗೂ ಸಹಕಾರದಿಂದ ಬಾಳುವುದು ಅನಿವಾರ್ಯವಾಗಿದೆ. ಇದಕ್ಕೆ ಇನ್ನೂ ಒಂದು ಪ್ರಬಲ ಕಾರಣವಿದೆ. ಜಪಾನ್ ದ್ವೀಪಗಳಲ್ಲಿ ಜನವಸತಿಯೂ, ಕೃಷಿಯೂ, ಸಂಪರ್ಕ ಸಂಚಾರ ಕೈಗಾರಿಕೆಗಳೂ ಅಲ್ಲಿನ ಬಹು ಸಂಕೀರ್ಣವಾದ ಹಾಗೂ ವ್ಯವಸ್ಥಿತವಾದ ನೀರಾವರಿ ಕಾಲುವೆಗಳ ಮೇಲೆ ಮತ್ತು ಒಳಚರಂಡಿ ವ್ಯವಸ್ಥೆ, ನೆರೆ ನಿಯಂತ್ರಣ ಕಾಲುವೆ ಹಾಗೂ ಜಲಮಾರ್ಗಗಳ ಮೇಲೆ ಅವಲಂಬಿಸಿಕೊಂಡಿವೆ. ಮಾನವ ಶರೀರದ ಅಸಂಖ್ಯಾತ ನರ ತಂತುಗಳು ಶರೀರವನ್ನೆಲ್ಲ ವ್ಯಾಪಿಸಿಕೊಂಡಿರುವಂತೆ ಈ ವ್ಯವಸ್ಥೆಗಳು ದೇಶವನ್ನೆಲ್ಲ ಆವರಿಸಿಕೊಂಡಿವೆ. ಈ ಜಲವ್ಯವಸ್ಥೆಯನ್ನು ಜಪಾನೀ ಕೃಷಿಕರು ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಿರಬೇಕಾಗುತ್ತದೆ ಹಾಗೂ ಸದಾ ದುರಸ್ತಿಯಿಂದಿಡಬೇಕಾಗುತ್ತದೆ. ಇದರಿಂದಾಗಿ ಪರಸ್ಪರ ಸಹಕಾರಭಾವನೆ ಅವಶ್ಯಕವೆನಿಸುತ್ತದೆ. ಅಲ್ಲದೆ ಅವಲಂಬನೆಯ ಭಾವನೆಗಳನ್ನು ಜನರು ಪುರಸ್ಕರಿಸಬೇಕಾಗುತ್ತದೆ. ಇಷ್ಟೇ ಅಲ್ಲ, ಬೀಜ ನೆಡುವಾಗಲೂ ಪೈರು ಕೊಯ್ಯುವಾಗಲೂ ನೆರೆಹೊರೆಯವರ ಸಹಕಾರವನ್ನು ನಂಬಿಕೊಂಡಿರುತ್ತಾರೆ. ನೀಈಬೆಯ ಜನರ ಜೀವನದಲ್ಲಿ ಇದು ನಿಚ್ಚಳವಾಗಿ ಕಂಡುಬರುತ್ತದೆ. ಅಲ್ಲಿಯ ಕೃಷಿಕರು ತಮ್ಮ ಸಮುದಾಯಕ್ಕೆ ಯಾವಾಗಲೂ ಋಣಿಯಾಗಿರುತ್ತಾರೆ. ಅವರು ವೈಯಕ್ತಿಕ ಭಾವನೆಗಳನ್ನು ಆದಷ್ಟು ಹತ್ತಿಕ್ಕುತ್ತಾರೆ. ಸಮುದಾಯದ ಹಿತದಲ್ಲಿಯೇ ತಮ್ಮ ಹಿತವು ಅಡಗಿದೆಯೆಂಬುದನ್ನು ಅವರು ತಿಳಿದುಕೊಂಡಿದ್ದಾರೆ.

ನೀಈಬೆ ಒಂದು ಪ್ರಗತಿಪರ ಗ್ರಾಮವೆಂದರೆ ತಪ್ಪಲ್ಲ. ಈ ಪ್ರಗತಿಪರತೆಯ ಗುಟ್ಟೇನು? ಸಾಮಾನ್ಯವಾಗಿ ಮಹಾನಗರಗಳ ಹತ್ತಿರದಲ್ಲಿರುವ ಗ್ರಾಮಗಳು ಪ್ರಗತಿಪರ ಸಾಮಾಜಿಕ ಲಕ್ಷಣಗಳನ್ನು ಹೊಂದುವುದು ಸಹಜ. ಆದರೆ ನೀಈಬೆ ಬುರಾಕು ಟೋಕಿಯೋದಂಥ ಮಹಾನಗರದಿಂದ ನೂರಾರು ಮೈಲು ದೂರದಲ್ಲಿದೆ. ಆದರೂ ಅಲ್ಲಿಯ ಕೃಷಿಕರು ಪ್ರಗತಿಪರರಾಗಿದ್ದಾರೆ. ಚಿಕ್ಕ ಹಿಡುವಳಿಯನ್ನು ಹೊಂದಿದ್ದರೂ ಒಳ್ಳೆಯ ಆದಾಯವನ್ನು ಪಡೆಯುತ್ತಾರೆ. ಭೂಪ್ರಮಾಣವನ್ನು ಗಣನೆಗೆ ತೆಗೆದುಕೊಂಡರೆ ಅಲ್ಲಿನ ಜನಸಂಖ್ಯೆಯು ಬೇಕಾದುದಕ್ಕಿಂತ ಹೆಚ್ಚಾಗಿದೆ. ಆದರೂ ನೀಈಬೆಯಲ್ಲಿ ನಿರುದ್ಯೋಗಿಗಳಿಲ್ಲ. ಸುತ್ತುಮುತ್ತಲಿನ ಹಳ್ಳಿಗಳಲ್ಲಿಯೂ ನಿರುದ್ಯೋಗಿಗಳಾದ ಜನರಿಲ್ಲ. ಇದಕ್ಕೆ ಕಾರಣವೆಂದರೆ ಆ ಪ್ರದೇಶದಲ್ಲಿ ನೂರಾರು ವರ್ಷಗಳಿಂದ ಊರ್ಜಿತದಲ್ಲಿರುವ ಜಲ ನಿಯಂತ್ರಣ ವ್ಯವಸ್ಥೆ ಹಾಗೂ ಕೃಷಿ ಮತ್ತು ಸಹಕಾರ ಪದ್ಧತಿಗಳೆಂದರೆ ತಪ್ಪಿಲ್ಲ. ಇಂಥ ವ್ಯವಸ್ಥೆಗಳಿಂದ ಜನರು ತಮಗೆ ಬೇಕಾಗುವುದಕ್ಕಿಂತ ಹಲವು ಪಟ್ಟು ಬೆಳೆ ಬೆಳೆದು ಅದನ್ನು ನಗರಗಳಿಗೆ ಮಾರಿ ಹಣ ಸಂಪಾದಿಸುತ್ತಾರೆ. ಅಲ್ಲದೆ

ಹೀಗೆ ಬಂದಹಣದಿಂದ ತಮ್ಮ ಕುಟುಂಬದ ಕೆಲವು ಸದಸ್ಯರನ್ನು ವಿದ್ಯಾಭ್ಯಾಸಕ್ಕೋ ನೌಕರಿಗೋ ಹೊರಗೆ ಕಳುಹಿಸುತ್ತಾರೆ. ನೀ ಈಖೆಯ ಜನರು ಯಾರನ್ನೂ ವಿನಾಕಾರಣ ಮನೆಯಲ್ಲಿ ಉಳಿಸಿಕೊಳ್ಳುವುದಿಲ್ಲ.

೩. ನೀಈಖೆಯ ಸಾಮಾಜಿಕ ವ್ಯವಸ್ಥೆ

ಜಪಾನ್‌ದ್ವೀಪಸಮೂಹಗಳ ಉದ್ದಗಲಕ್ಕೂ ನೀಈಖೆಯಂಥ ಸಾವಿರಾರು ಚಿಕ್ಕ ಬುರಾಕುಗಳಿವೆ. ಅವು ಸಮಗ್ರ ಸಮುದಾಯಗಳು. ಅವುಗಳಿಗೆ ತಮ್ಮದೇ ಆದ ಅಸ್ತಿತ್ವವಿದೆ; ರಚನೆ, ನಿಯಂತ್ರಣ, ಆಸ್ತಿಪಾಸ್ತಿಗಳಿವೆ. ನೀಈಖೆಯಲ್ಲಿ ಇಡೀ ಸಮುದಾಯಕ್ಕೆ ಸೇರಿದ ಆಸ್ತಿಪಾಸ್ತಿ ಬಹಳಿಲ್ಲವಾದರೂ ಒಂದು ಪ್ರಾರ್ಥನಾಮಂದಿರ, ಸ್ಮಶಾನ, ಕೆರೆಗಳು, ಬೆಂಕಿ ಆರಿಸುವ ಯಂತ್ರ ಇತ್ಯಾದಿ ಇವೆ. ನೀಈಖೆಯಲ್ಲಿ ಇಪ್ಪತ್ತನಾಲ್ಕು ಕುಟುಂಬಗಳಿವೆ. ಇವುಗಳು ಬೇರೆ ಬೇರೆ ಐದು ವಂಶಗಳಿಗೆ ಸೇರಿವೆ. ಬಂಧು ಬಳಗಕ್ಕೆ ಇಲ್ಲಿ ತುಂಬಾ ಬೆಲೆಕೊಡುತ್ತಾರೆ. ಆದರೆ ಗ್ರಾಮವೆಂಬುದು ಬಂಧುಬಳಗದ ಗುಂಪಲ್ಲ. ಅದು ಮುಖ್ಯವಾಗಿ ಪ್ರಾದೇಶಿಕ ಆಧಾರ ಹೊಂದಿದ ಗುಂಪು. ಗ್ರಾಮಸ್ಥರು ಹೊರಗಿನವರನ್ನು ಸುಲಭವಾಗಿ ಕರೆದುಕೊಳ್ಳುವುದಿಲ್ಲ. ೪೦–೫೦ ವರ್ಷಗಳ ಕಾಲ ನೆಲೆನಿಂತ ಕುಟುಂಬಗಳನ್ನೂ ಇಲ್ಲಿನ ಗ್ರಾಮಸ್ಥರು ಹೊರಗಿನವರಂತೆ ಕಂಡರೆ ಆಶ್ಚರ್ಯವಿಲ್ಲ. ನೀಈಖೆ ಬುರಾಕು ಕಾಲು ಶತಮಾನದ ಅವಧಿಯಲ್ಲಿ ಹೊರಗಿನಿಂದ ಬಂದ ಕೇವಲ ನಾಲ್ಕು ಕುಟುಂಬಗಳನ್ನು ಸ್ವೀಕರಿಸಿದೆ. ಹೀಗೆ ನೀಈಖೆಯು ತನ್ನ ಸಂಪ್ರದಾಯಗಳನ್ನು ಉಳಿಸಿಕೊಳ್ಳಲು ಹಾಗೂ ಹೊರಗಿನ ಪ್ರಭಾವಗಳಿಂದ ರಕ್ಷಣೆ ಪಡೆಯಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ.

ನೀಈಖೆ ತನ್ನತನವನ್ನೂ ಒಕ್ಕಟ್ಟನ್ನೂ ಉಳಿಸಿಕೊಳ್ಳುವುದು ಹೇಗೆ? ಈ ವಿಚಾರದಲ್ಲಿ ನೀಈಖೆಯ ಕೆಲವು ವೈಶಿಷ್ಟ್ಯಗಳನ್ನು ನಾವು ಗಮನಿಸಬಹುದು. ಸ್ವಲ್ಪೇ ಭೂಮಿಯಲ್ಲಿ ಬಹಳಷ್ಟು ಬೆಳೆಯಲು ಅನುಕೂಲವಾಗುವಂತೆ ನೀಈಖೆಯ ಜನರು ಒತ್ತೊತ್ತಾಗಿ ಇರುವುದನ್ನೂ, ಸಹಕಾರದಿಂದ ಬಾಳುವುದನ್ನೂ ಕಲಿತಿದ್ದಾರೆ. ಅವರಿಗೆ ನಗರದ ಜನರಿಗೆ ಸಿಗುವಂಥ ಅನೇಕ ಸೌಕರ್ಯ ಸೌಲಭ್ಯಗಳಿಲ್ಲ. ನಗರವಾಸಿಗಳಿಗೆ ಸುಲಭವಾಗಿ ಸಿಗುವ ಪರಿಪರಿಯ ಸಾಮಾಜಿಕ ಭದ್ರತೆ, ಸರಕಾರದ ಸಹಾಯ. ಸಂರಕ್ಷಣೆಗಳೂ ಇವರಿಗೆ ಇಲ್ಲ. ಹೀಗಾಗಿ ವ್ಯಕ್ತಿಗಳು ತಮ್ಮ ಕುಟುಂಬದಿಂದ ಸಿಗುವ ರಕ್ಷಣೆಯನ್ನು ಹೆಚ್ಚಾಗಿ ನೆಚ್ಚಿಕೊಂಡಿರುತ್ತಾರೆ. ಇದರಂತೆಯೇ ಕುಟುಂಬಗಳು ತಮ್ಮ ವಂಶಕ್ಕೂ, ವಂಶಗಳು ತಮ್ಮ ಬುರಾಕುವಿಗೂ ಗಟ್ಟಿಯಾಗಿ ಅಂಟಿಕೊಂಡಿವೆ. ಹೊರಗಿನ ಶಕ್ತಿಗಳೂ ವ್ಯವಸ್ಥೆಗಳೂ ಗ್ರಾಮದ ಸಮಗ್ರತೆ ಹಾಗೂ ಒಕ್ಕಟ್ಟನ್ನು ಮನ್ನಿಸಿವೆ. ಅಷ್ಟೇ ಅಲ್ಲ, ಕೆಲವು ಸಂದರ್ಭಗಳಲ್ಲಿ ಹೊರಗಿನ ವ್ಯವಸ್ಥೆಗಳು ಗ್ರಾಮದ ಸಮಗ್ರತೆಯನ್ನು ಪ್ರೋತ್ಸಾಹಿಸಿದ್ದೂ ಇದೆ. ಉದಾಹರಣೆಗೆ. ಹಿಂದಿನ ಕಾಲದಲ್ಲಿ ತೆರಿಗೆಗಳನ್ನು ಹೇರುವಾಗ ಬುರಾಕುವನ್ನು

ಒಂದು ಘಟಕವೆಂದು ಲೆಕ್ಕ ಹಾಕಿ ಇಡೀ ಬುರಾಕುವಿನ ಮೇಲೆ ತೆರಿಗೆ ಹೇರಲಾಗುತ್ತಿತ್ತು. ಬುರಾಕುವಿನ ಕುಟುಂಬಗಳು ಸಂಪ್ರದಾಯದ ಪ್ರಕಾರ ಲೆಕ್ಕಾಚಾರ ಹಾಕಿ ಇದನ್ನು ಸಲ್ಲಿಸುತ್ತಿದ್ದವು. ಇದೇ ರೀತಿಯಲ್ಲಿ ಬುರಾಕುವಿನ ರಸ್ತೆಗಳನ್ನು ದುರಸ್ತಿಗೊಳಿಸುವಾಗ ಅಥವಾ ನೀರುಗಾಲುವೆಗಳನ್ನು ದುರಸ್ತಿಗೊಳಿಸುವಾಗ ಇಡೀ ಬುರಾಕುವಿನಿಂದ ವಂತಿಗೆಯನ್ನು ವಸೂಲಿಮಾಡಲಾಗುತ್ತಿತ್ತು. ಇಂಥ ಸಂಪ್ರದಾಯಗಳು ಬುರಾಕುವಿನ ಸಮಗ್ರತೆಯನ್ನು ಬಲಪಡಿಸುತ್ತಿದ್ದವು.

ನಾವು ನೀಈಯಿ ಗ್ರಾಮದ ಸಾಮುದಾಯಿಕ ರೂಪವನ್ನು ಇನ್ನೊಂದು ದಿಟ್ಟಿನಿಂದಲೂ ನೋಡಬಹುದು. ನೀಈಯಿಯು ರಾಜಕೀಯವಾಗಿ ಬುರಾಕು ಅಥವಾ ಗ್ರಾಮವೆನ್ನಿಸಿಕೊಂಡಂತೆ ಸಾಮಾಜಿಕ ಅದು 'ಕೋಜೂ' ಎನ್ನಿಸಿ ಕೊಳ್ಳುತ್ತದೆ. ಅಂದರೆ ನೀಈಯಿ ಬುರಾಕನ್ನು ನೀಈಯಿ ಕೋಜೂ ಎಂದೂ ಕರೆಯಬಹುದು. ಜಪಾನಿನ ಸಂಪ್ರದಾಯದ ಪ್ರಕಾರ 'ಕೋಜೂ' ಅಂದರೆ ಸಹಕಾರ ತತ್ವದ ಮೇಲೆ ಕೆಲಸಮಾಡುವ ಒಂದು ಸಮುದಾಯ. ಅದಕ್ಕೆ ಹಿಂದಿನ ಕಾಲದಲ್ಲಿ "ಬೌದ್ಧೀಯರ ಸಂಘ"ವೆಂಬ ಧಾರ್ಮಿಕ ಅರ್ಥವೂ ಇತ್ತು. ಆದರೆ ಬರಬರುತ್ತ 'ಕೋಜೂ' ಎಂದರೆ ಗ್ರಾಮಸ್ಥರ ಸಹಕಾರಿ ಸಮಾಜ ಎಂಬ ಅರ್ಥ ಪ್ರಾಪ್ತಿಯಾಯಿತು. ಗ್ರಾಮದಲ್ಲಿರುವ ಹೆಚ್ಚಿನ ಜನರು ಒಂದೇ ಧಾರ್ಮಿಕ ಪಂಗಡಕ್ಕೆ ಸೇರಿರುತ್ತಿದ್ದರು. ಅವರು ಬೌದ್ಧರೇ ಇರಲಿ, ಶಿಂಟೋ ಅಥವಾ ಬೇರೆ ಯಾರೇ ಇರಲಿ. ಎಲ್ಲರೂ ಒಂದೇ ಕೋಜುವಿಗೆ ಸೇರಿದವರು. ಆರ್ಥಿಕ ದೃಷ್ಟಿಯಿಂದ ಜನರಲ್ಲಿ ಅಂತರಗಳಿದ್ದರೂ ಕೋಜುವಿಗೆ ಸೇರಿದವರೆಲ್ಲ ಸರಿಸಮಾನರು ಎಂಬ ಭಾವನೆ ಇರುತ್ತಿತ್ತು. ಅವರು ಪ್ರತಿತಿಂಗಳ ಹನ್ನೆರಡನೆಯ ದಿನ ಸರತಿಯ ಪ್ರಕಾರ ಬುರಾಕುವಿನ ಒಂದೊಂದು ಮನೆಯಲ್ಲಿ ಸಭೆಸೇರಿ ಭಜನೆ ಪ್ರಾರ್ಥನೆಗಳನ್ನು ಸಲ್ಲಿಸುತ್ತಿದ್ದರು. ಇಲ್ಲಿ ಗ್ರಾಮದ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಕೋಜೂ ಸಭೆಯಲ್ಲಿ ಹಾಜರಾಗವುದು ಅನೇಕ ವಿಧಗಳಲ್ಲಿ ಮಹತ್ವಪೂರ್ಣವಾಗಿತ್ತು. ಮೂರಾ (ಆಡಳಿತ ಗ್ರಾಮ)ದಿಂದ ಬರುವ ಸಲಹೆ ಸೂಚನೆಗಳನ್ನೂ ಆದೇಶಗಳನ್ನೂ ಇದೇ ಸಭೆಯಲ್ಲಿ ಜನರು ಚರ್ಚಿಸುತ್ತಿದ್ದರು ಹಾಗೂ ಎಲ್ಲರ ಸಮಕ್ಷಮ ಮಹತ್ವದ ನಿರ್ಣಯಗಳನ್ನು ತೆಗೆದುಕೊಳ್ಳುತ್ತಿದ್ದರು.

ಮೂರಾ ಆಡಳಿತಗ್ರಾಮದ ಕಚೇರಿಯಿಂದ ಕಳುಹಿಸಿದ ಸುದ್ದಿಯು ಗ್ರಾಮಸ್ಥರಿಗೆ ತಲುಪಿ ಅವರು ಅದನ್ನು ಕೋಜೂ ಸಭೆಯಲ್ಲಿ ಚರ್ಚೆಮಾಡುವ ವಿಧಾನ ಒಳ್ಳೆ ಕುತೂಹಲಕಾರಿಯಾಗಿದೆ. ಮುಖ್ಯವಾಗಿ ಅಲ್ಲಿನ ಸಂಪರ್ಕ ವಿಧಾನ ಹೇಗಿತ್ತು ಎಂಬುದನ್ನು ನಾವಿಲ್ಲಿ ನೋಡೋಣ. ಮೂರಾದ ಸಂದೇಶವಾಹಕನು ತನ್ನ ಕಚೇರಿಯ ಸಂದೇಶವನ್ನು 'ಬುರಾಕು ಕ್ಯಾಟೋ' ಎಂಬುವನ ಮನೆಗೆ ತಂದು ಮುಟ್ಟಿಸುತ್ತಾನೆ. ಅದು ಬಾಯಿ ಮಾತಿನಲ್ಲಿರಬಹುದು ಅಥವಾ ಬರವಣಿಗೆಯಲ್ಲಿರಬಹುದು. ಇತ್ತೀಚಿಗಿನ ದಿನಗಳಲ್ಲಿ

ಹೆಚ್ಚಿನ ಸಂದೇಶಗಳು ಬರವಣಿಗೆಯಲ್ಲೇ ಬರುತ್ತವೆ. ರಟ್ಟಿನಹಾಳೆ ಅಥವಾ ಹಲಗೆಯ ಮೇಲೆ ಸಂದೇಶಗಳನ್ನು ಬರೆದಿರುತ್ತಾರೆ. ಬುರಾಕು ಕ್ಯಾಟೋ ಎಂಬುವನು ಪ್ರಾರ್ಥನಾ ಗುಂಪಿನ ಮುಂದಾಳು. ಇವನು ತನಗೆ ತಲುಪಿದ ಸಂದೇಶವನ್ನು ತನ್ನ ಅತಿ ಹತ್ತಿರದ ನೆರೆಮನೆಯವನಿಗೆ ತಲುಪಿಸುತ್ತಾನೆ. ಆ ನೆರೆಮನೆಯವನು ತನ್ನ ಹತ್ತಿರದ ನೆರೆಯವನಿಗೆ ಮುಟ್ಟಿಸುತ್ತಾನೆ. ಹೀಗೆ ಒಂದು ಮನೆಯಿಂದ ಇನ್ನೊಂದು ಮನೆಗೆ ತಲುಪುತ್ತಾ ಕೊನೆಗೆ ಅದು ಸುತ್ತುತಿರುಗಿ ಮತ್ತೆ ಕ್ಯಾಟೋವಿನ ಮನೆಗೆ ಬರುತ್ತದೆ. (ಇಂಥದೇ ವ್ಯವಸ್ಥೆಯನ್ನು ಪ್ರಸ್ತುತ ಲೇಖಕನು ಮಲೆನಾಡಿನ ಹಳ್ಳಿಗಳಲ್ಲಿ ಕಂಡಿದ್ದಾನೆ. ಕೆಳಗೆ ಕೊಟ್ಟ ಗ್ರಂಥಋಣವನ್ನು ನೋಡಿ) ಇದು ಸಂಪ್ರದಾಯದಿಂದ ನಿರ್ಧರಿಸಲ್ಪಡುವ ಸಂಪರ್ಕಚಕ್ರ, ಪ್ರತಿಸಲವೂ ಸಂದೇಶಗಳು ಇದೇ ಚಕ್ರಾಕಾರದ ಮಾರ್ಗದಲ್ಲಿ ಜನರಿಗೆ ತಲುಪುತ್ತವೆ. ನೀಈಬೆಯಲ್ಲಿ ಪ್ರತಿ ತಿಂಗಳು ನಡೆಯುವ ಸಭೆಗಳೂ ಕೂಡಾ ಇದೇ ಚಕ್ರಾಕಾರದ ಮಾರ್ಗವನ್ನು ಅನುಸರಿಸಿ ಬೇರೆ ಬೇರೆ ಮನೆಗಳಲ್ಲಿ ನಡೆಯುತ್ತವೆ. ಯಾರೂ ತಮ್ಮ ಸರತಿಯನ್ನು ತಪ್ಪಿಸಲು ಇಷ್ಟ ಪಡುವುದಿಲ್ಲ. ಸಭೆಗಳನ್ನು ತಮ್ಮ ಮನೆಗಳಲ್ಲಿ ನಡೆಯಿಸುವುದರಿಂದ ಯಾರಿಗೂ ಹೆಚ್ಚಿನ ಆರ್ಥಿಕ ಭಾರ ಬೀಳುವುದಿಲ್ಲ. ಸಭೆಯ ಖರ್ಚಿಗೆಂದು ಎಲ್ಲಾ ಕುಟುಂಬಗಳು ನಿಯಮದಂತೆ ವಂತಿಗೆ ಕೊಡುವುದರಿಂದ ಆತಿಥೇಯ ಕುಟುಂಬಕ್ಕೆ ಕಷ್ಟವಿಲ್ಲ. ಅಲ್ಲದೆ ಇದು ಪ್ರತಿಷ್ಠೆಯ ಪ್ರಶ್ನೆಯೂ ಹೌದು ಹೀಗಾಗಿ ಕುಟುಂಬಗಳು ತಮ್ಮ ಸರತಿಗಾಗಿ ಕಾಯುತ್ತಿರುತ್ತವೆ. ನೀಈಬೆಯಲ್ಲಿರುವ ಇಪ್ಪತ್ತನಾಲ್ಕು ಕುಟುಂಬಗಳಲ್ಲಿ ಕೇವಲ ಒಂದು ಕುಟುಂಬವು ಮಾತ್ರ ಈ ಚಕ್ರದಿಂದ ಹೊರಗುಳಿದಿದೆ. ಅದರ ಹಿರಿಯನು ತನ್ನ ವೈಯಕ್ತಿಕ ಕಾರಣಗಳಿಗಾಗಿ ಗ್ರಾಮದ ಪರಿಪಾಠಗಳನ್ನು ತಿರಸ್ಕರಿಸಿ ಬೇರೆಯಾಗಿ ಬಾಳುತ್ತಿದ್ದಾನೆ. ಮೊದಮೊದಲು ಕೋಜೂ ಸದಸ್ಯರೆಲ್ಲ ಅವನನ್ನು ಬಹಿಷ್ಕರಿಸಿದ್ದರು. ಅವನು ಜಗ್ಗಲಿಲ್ಲ ಬರಬರುತ್ತ. ಗ್ರಾಮಸ್ಥರು ಅವನನ್ನು ಸಹಿಸಿಕೊಂಡು ಸುಮ್ಮನಿದ್ದುಬಿಟ್ಟರು.

ಮೂಲರೂಪದಲ್ಲಿ ಕೋಜೂ ಏನೇ ಆಗಿರಲಿ. ಈಗ ಅದು ಕೇವಲ ಪ್ರಾರ್ಥನಾ ಸಮೂಹವೆಂದು ತಿಳಿಯಬಾರದು. ಅದಕ್ಕೆ ಹಲವು ಮತ್ತು ಕಾರ್ಯಭಾರಗಳಿವೆ. ಅದು ಗ್ರಾಮದ ದೇವಾಲಯಗಳನ್ನು ದುರಸ್ತಿಮಾಡಲು ಬೇಕಾದ ಜನರನ್ನೂ ಧನವನ್ನೂ ಸಂಗ್ರಹಿಸುತ್ತದೆ. ಅದು ಗ್ರಾಮದ ಹೊರಗಿನ ಸಭೆಗಳಿಗೆ ತನ್ನ ಪ್ರತಿನಿಧಿಗಳನ್ನು ಕಳುಹಿಸುತ್ತದೆ. ಇನ್ನೂ ಅನೇಕ ಲೌಕಿಕ ಕಾರ್ಯಗಳನ್ನೂ ಅದು ನಿರ್ವಹಿಸುತ್ತದೆ. ಉದಾಹರಣೆಗೆ ಗ್ರಾಮಕ್ಕೆ ಪ್ರಪ್ರಥಮ ಬಾರಿಗೆ ಬರುವ ವಧುವನ್ನು ಸ್ವಾಗತಿಸಲು ಕೋಜೂವಿಗೆ ಸೇರಿದ ಎಲ್ಲರೂ ಒಟ್ಟಾಗಿ ಬರಬೇಕು ಎಂಬ ಸಂಪ್ರದಾಯವಿತ್ತು. ಅದೇ ರೀತಿಯಲ್ಲಿ ಸ್ಮಶಾನ ಯಾತ್ರೆಯಲ್ಲೂ ಕೋಜೂವಿನ ಎಲ್ಲ ಸದಸ್ಯರು ಒಟ್ಟಾಗುತ್ತಾರೆ. ಇತ್ತೀಚಿಗಿನ ದಿನಗಳಲ್ಲಿ ರೆಡ್‌ಕ್ರಾಸ್ ಅಥವಾ ಬೇರೆ ಯಾವುದೇ ಕಾರಣಕ್ಕಾಗಿ

ವಂತಿಗೆ ಕೊಡಬೇಕೆಂದು ಮೂರಾ ಕಚೇರಿ ನಿರ್ಧರಿಸಿದರೆ ಅಂಥ ವಂತಿಗೆಯನ್ನು ಕೂಡಿಸುವ ಹೊಣೆಯು ಕೋಜೂವಿಗೆ ಸೇರಿದ್ದು. ಹೀಗೆ ವಿವಿಧ ಬಗೆಯ ಸಾಮುದಾಯಿಕ ಕಾರ್ಯಗಳನ್ನು ಕೋಜೂ ನಿರ್ವಹಿಸುತ್ತದೆ.

'ಕೋಜೂ' ಮತ್ತು 'ಬುರಾಕು' ಸಮಾನಾರ್ಥಕ ಪದಗಳಲ್ಲ ಎಂದು ಹಿಂದೆ ಹೇಳಿದ್ದೇವೆ. ಬುರಾಕು ಎಂಬುದು ಪ್ರಾದೇಶಿಕ ಸಮುದಾಯ. ಇದರಲ್ಲಿ ಕೋಜೂ ಎಂಬುದು ಸಹಕಾರ ತತ್ವದ ಮೇಲೆ ಕೆಲಸಮಾಡುವ ಒಂದು ಸಹಕಾರಿ ಸಮೂಹ ಅದು ಮೂಲಾರ್ಥದಲ್ಲಿ ಧಾರ್ಮಿಕ ಸಮೂಹವಾದರೂ ಈಗ ಹೆಚ್ಚಾಗಿ ಲೌಕಿಕ ಕಾರ್ಯಗಳನ್ನು ನಿರ್ವಹಿಸುತ್ತದೆ. ಬಹಳೆಂದರೆ ೪೦–೫೦ ಕುಟುಂಬಗಳು ಅದರಲ್ಲಿ ಸೇರಿರುತ್ತವೆ. ಬುರಾಕುವಿನ ಗಾತ್ರ ಬೆಳೆದಂತೆ ಅಲ್ಲಿ ಎರಡೋ ಮೂರೋ ಕೋಜೂಗಳು ಹುಟ್ಟಿ ಸ್ವತಂತ್ರವಾಗಿ ಕೆಲಸಮಾಡಬಹುದು. ಗ್ರಾಮದ ಸದಸ್ಯರೆಲ್ಲ ಬುರಾಕುವಿನ ಸದಸ್ಯರು ಮಾತ್ರವಲ್ಲ; ಒಂದಲ್ಲ ಒಂದು ಕೋಜುವಿನ ಸದಸ್ಯರೂ ಹೌದು. ಆದರೆ ಆಗೊಮ್ಮೆ ಈಗೊಮ್ಮೆ ಧಾರ್ಮಿಕ ಕಾರಣಗಳಿಗಾಗಿಯೋ ಅಥವಾ ತೀರ ವೈಯಕ್ತಿಕ ಕಾರಣಗಳಿಗಾಗಿಯೋ ಯಾವುದಾದರೊಂದು ಕುಟುಂಬವು ಕೋಜು ಗುಂಪಿನಿಂದ ಹೊರಗುಳಿಯುವುದಿದೆ. ನೀಈಯೆಯಲ್ಲಿ ಇಂಥ ಒಂದು ಕುಟುಂಬವು ಕೋಜೂವಿನಿಂದ ಹೊರಗೆ ಉಳಿದದ್ದನ್ನು ನಾವು ನೋಡಿದೆವು. ಪ್ರತಿಯೊಂದು ಗ್ರಾಮದಲ್ಲಿ ಒಂದು ಅಥವಾ ಎರಡು ಕೋಜೂಗಳಿವೆ. ಗ್ರಾಮಸ್ಥರು ಇದರ ಸದಸ್ಯರಾಗಿರುತ್ತಾರೆ. ಕೋಜೂ ಸಮೂಹವಲ್ಲದೇ ಇತರ ಸಹಕಾರಿ ವ್ಯವಸ್ಥೆಗಳೂ ಗ್ರಾಮಗಳಲ್ಲಿ ಇರಬಹುದು. ಉದಾಹರಣೆಗೆ, ನೀಈಯೆ ಗ್ರಾಮದಲ್ಲಿ ಯುವಕರ ಸಹಕಾರಿ ಗುಂಪೊಂದು ಅಸ್ತಿತ್ವದಲ್ಲಿದೆ.

ಇನ್ನು ಜಪಾನೀ ಗ್ರಾಮೀಣರ ಕುಟುಂಬಪ್ರೇಮದ ಬಗ್ಗೆ ಒಂದೆರಡು ಮಾತು. ಕೋಜೂ ಸಮೂಹವು ಎಷ್ಟೇ ಮಹತ್ವಪಡೆದಿದ್ದರೂ ಗ್ರಾಮೀಣನು ತಾನು ಪ್ರಥಮತಃ ತನ್ನ ಕುಟುಂಬದ ಸದಸ್ಯನೆಂದು ತಿಳಿದಿರುತ್ತಾನೆ. ಸಾಂಪ್ರದಾಯಿಕ ಚೀನೀಯರಂತೆ ಜಪಾನೀಯರಲ್ಲೂ ಕುಟುಂಬಪ್ರೇಮ ಅಥವಾ ಕುಟುಂಬತ್ವ ಭಾವನೆಯು ಪ್ರಬಲವಾಗಿದೆ. ಈಚೆಗಿನ ದಿನಗಳಲ್ಲಿ ಈ ಭಾವನೆಗೆ ಧಕ್ಕೆ ತಗುಲಿದೆ. ಏನಿದ್ದರೂ ವ್ಯಕ್ತಿಯು ತನ್ನ ವೈಯಕ್ತಿಕ ಲಾಭಕ್ಕಿಂತ ಕುಟುಂಬದ ಹಿತ, ಲಾಭ, ಪ್ರತಿಷ್ಠೆಗಳಿಗೆ ಹೆಚ್ಚು ಮಹತ್ವ ಕೊಡುತ್ತಾನೆ.

ಒಟ್ಟಿನಲ್ಲಿ ಜಪಾನ್ ದೇಶದ ಗ್ರಾಮವು ಹೊರಗಿನವರಿಗೆ ಪ್ರವೇಶ ನೀಡದ 'ಮುಚ್ಚಿದ' ಅಥವಾ 'ಅವೃತವಾದ' ಸಮುದಾಯ. ಅದು ಒಂದು ಸಮಗ್ರ ಸಮುದಾಯ. ಕೃಷಿಭೂಮಿಯ ತುಟಾಗ್ರತೆ ಇರುವುದರಿಂದಲೂ, ಇರುವಷ್ಟು ಭೂಮಿಯಲ್ಲಿ ಆದಷ್ಟು ಬೆಳೆ ತೆಗೆಯಲು ಗ್ರಾಮೀಣ ಜನರು ಉತ್ಸುಕರಾಗಿರುವುದರಿಂದಲೂ ಹೊರಗಿನವರು ಅವರಿಗೆ ಬೇಡ. ಆರ್ಥಿಕ ಮತ್ತಿತರ ಕಾರಣಗಳಿಗಾಗಿ ಅವರು ಕುಟುಂಬ

ಪ್ರೇಮಿಗಳಾಗಿದ್ದಾರೆ, ಹಾಗೆಯೆ ಗ್ರಾಮಾಭಿಮಾನ ಉಜ್ವಲವಾದುದು. ಅವರಿಗೆ ವೈಯಕ್ತಿಕ ಉತ್ಕರ್ಷದ ಭಾವನೆ ಇಲ್ಲವೆಂದಲ್ಲ. ಆದರೆ ಅವನ್ನವರು ತಮ್ಮ ಕುಟುಂಬದ ಉತ್ಕರ್ಷದೊಡನೆ ಹೊಂದಾಣಿಸಿಕೊಂಡಿದ್ದಾರೆ.

೪. ಬದಲಾವಣೆಯ ಗಾಳಿಗಳು

ಜಪಾನೀ ಗ್ರಾಮಗಳು ಅನೇಕ ಶಕ್ತಿಗಳ ಆಘಾತಕ್ಕೆ ಸಿಕ್ಕಿ ಬದಲಾಗುತ್ತಿವೆ. ದ್ವಿತೀಯ ಮಹಾಯುದ್ಧದ ನಂತರ ಬದಲಾವಣೆಯ ಗಾಳಿ ಬಲವಾಗುತ್ತಿದೆ. ಯುದ್ಧಾನಂತರದ ಆರ್ಥಿಕ ಅಭಿವೃದ್ಧಿ, ಸ್ಥಾನಿಕ ಸರಕಾರದಲ್ಲಿ ಉಂಟಾದ ಬದಲಾವಣೆಗಳು, ತೀವ್ರಗತಿಯಲ್ಲಿ ವಿಸ್ತರಿಸಿದ ಶಿಕ್ಷಣ ಸೌಕರ್ಯಗಳು, ತೆರಿಗೆಗಳಲ್ಲಿ ಉಂಟಾದ ಕಡಿತ, ಮುಂತಾದ ಹಲವಾರು ಸಂಗತಿಗಳು ಗ್ರಾಮೀಣ ಜೀವನದ ಮೇಲೆ ಪ್ರಭಾವ ಬೀರಿವೆ. ನೀಈಖೆಯಂಥ ಗ್ರಾಮಗಳು ಈಗ ಹೆಚ್ಚು ಹೆಚ್ಚಾಗಿ ಪೇಟೆಗಳಿಗಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿವೆ. ಇದರಿಂದಾಗಿ ಗ್ರಾಮಗಳ ಉದ್ಯೋಗ ಮತ್ತು ಕುಟುಂಬ ರಚನೆಯ ಮೇಲೆ ಪರಿಣಾಮವುಂಟಾಗಿದೆ. ಹೊಸ ಆದಾಯಕರ ಧೋರಣೆಯಿಂದಾಗಿ ವೈಯಕ್ತಿಕ ಹಿತಾಸಕ್ತಿಗಳು ಹೆಚ್ಚಿವೆಯೆಂದು ಹೇಳುತ್ತಾರೆ. ಹೀಗಿದ್ದರೂ ಜಪಾನಿನ ಗ್ರಾಮೀಣ ಸಮಾಜ ವ್ಯವಸ್ಥೆಯಲ್ಲಿ ಈ ಬದಲಾವಣೆಗಳನ್ನು ಅಳವಡಿಸಿಕೊಳ್ಳುವ ಶಕ್ತಿ ಇದೆ ಎನ್ನಿಸುತ್ತದೆ. ಹೊಸ ಶಕ್ತಿಗಳಿಂದ ಉದ್ಭವಿಸಿದ ಸ್ಪರ್ಧಾಭಾವನೆ, ವೈಯಕ್ತಿಕತೆಯ ಭಾವನೆ ಹಾಗೂ ಹೊಸತಿನ ಬಗ್ಗೆ ಲವಲವಿಕೆಗಳನ್ನು ಗ್ರಾಮೀಣನು ತನ್ನ ಕುಟುಂಬದ ಶ್ರೇಯಸ್ಸು ಹಾಗೂ ಪ್ರತಿಷ್ಠೆಗಾಗಿ ಬಳಸಿಕೊಳ್ಳುತ್ತಾನೆ. ಹೀಗೆ ಸಂಪ್ರದಾಯ ಮತ್ತು ಆಧುನಿಕತೆಯ ನಡುವೆ ಬಹುಮಟ್ಟಿನ ಸಮತೋಲ ಸಾಧ್ಯವಾಗುತ್ತದೆ.

ಇದು ಸುಮಾರು ೧೯೫೦ ರ ವರೆಗಿನ ಮಾತಾಯಿತು. ಈಗ ಗ್ರಾಮೀಣ ಜಪಾನಿನಲ್ಲಿ ಬೇರೆ ಪ್ರಭಾವಗಳೂ ಕಾರ್ಯೋನ್ಮುಖವಾಗಿವೆ. ಯುದ್ಧಾನಂತರದಲ್ಲಿ ಜಪಾನು ಪಾಶ್ಚಿಮಾತ್ಯ ಸಂಸ್ಕೃತಿ (ಅದರಲ್ಲೂ ಅಮೇರಿಕನ್ ಸಂಸ್ಕೃತಿ) ಮತ್ತು ನಾಗರಿಕತೆಯ ಪ್ರಭಾವಕ್ಕೆ ಒಳಗಾಯಿತು. ಇತರ ಎಷ್ಟೋ ಹಳ್ಳಿಗಳಂತೆ ನೀಈಖೆಯೂ ೧೯೫೭ ರಲ್ಲಿ ಅಮೇರಿಕೆಯು ಕೊಡಮಾಡಿದ ಯಂತ್ರೀಕರಣ ಹಾಗೂ ಆಧುನೀಕರಣದ ಕಾರ್ಯಕ್ರಮವನ್ನು ಹಾಕಿಕೊಂಡಿತು. ಯಂತ್ರೀಕರಣದಿಂದ ಹೊಲಗದ್ದೆ, ನೀರುಗಾಲುವೆ, ಬಾವಿ, ಮನೆ, ಅಡಿಗೆಮನೆಗಳು ಹೊಸರೂಪು ಪಡೆದಿವೆ. ಬೇಸಾಯ ತ್ವರಿತಗೊಂಡಿದೆ. ಹೈನುಗಾರಿಕೆ ಬೆಳೆದಿದೆ. ನೀಈಖೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೂ, ಆರ್ಥಿಕಾಭಿವೃದ್ಧಿಯ ಚಟುವಟಿಕೆಗಳೂ ಪ್ರಾರಂಭವಾಗಿವೆ. ಅಮೇರಿಕನ್ ಕಾರ್ಯಕ್ರಮವು ಪ್ರಾರಂಭವಾದ ಸ್ವಲ್ಪೇ ಅವಧಿಯಲ್ಲಿ ಮುಖ್ಯವಾದ ಮೂರು ಬದಲಾವಣೆಗಳುಂಟಾದುವು ಎಂದು ಸಮೀಕ್ಷೆಗಳು ತಿಳಿಸುತ್ತವೆ. ಮೊದಲನೆಯದಾಗಿ, ಯಂತ್ರತಂತ್ರಗಳ ಹೆಚ್ಚಿನ ಪರಿಚಯವಿರುವ ಕಿರಿಯರು ಕೃಷಿಯಲ್ಲಿ ಹೆಚ್ಚಿನ ಹೊಣೆಹೊತ್ತಿದ್ದಾರೆ.

ಇದರಿಂದಾಗಿ ಅವರಿಗೆ ಬುರುಕಾಮಿನಲ್ಲಿ ಹೆಚ್ಚಿನ ಸ್ಥಾನಮಾನ ಸಿಗುತ್ತಿದೆ. ಎರಡನೆಯದಾಗಿ, ಹಿಂದೆ ನಾಲ್ಕಾರು ಕುಟುಂಬಗಳು ಒಟ್ಟಿಗೆ ಕೂಡಿಮಾಡುತ್ತಿದ್ದ ಕೆಲಸಗಳನ್ನು ಈಗ ಯಂತ್ರಗಳು ನಿರ್ವಹಿಸಬಹುದಾಗಿದೆ. ಇದರಿಂದಾಗಿ ಕುಟುಂಬದ ನಡುವಿನ ಸಹಕಾರ ಹಿಂದಿನಂತೆ ಅನಿವಾರ್ಯವೆನ್ನಿಸುವುದಿಲ್ಲ. ಮೂರನೆಯದಾಗಿ, ಈ ಹಿಂದೆ ಊರಿನ ಹೊರಗೆ ಇರುತ್ತಿದ್ದ ಜನರು ಮತ್ತು ನೌಕರಿಗೆಂದು ಹೋದವರು ಗ್ರಾಮಜೀವನದಲ್ಲಿ ಅಷ್ಟೊಂದು ಮಹತ್ವದ ಸ್ಥಾನಪಡೆಯುತ್ತಿರಲಿಲ್ಲ. ಈಗ ಹೊಸ ವಿಧಾನಗಳಿಂದಾಗಿ ಅವರೂ ಪೂರ್ಣಪ್ರಮಾಣದ ಸದಸ್ಯರಾಗಿ ಭಾಗವಹಿಸುವುದು ಸಾಧ್ಯವಾಗಿದೆ. ಒಟ್ಟಿನಲ್ಲಿ ಬದಲಾವಣೆಯ ಗಾಳಿ ಬಲವಾಗಿ ಬೀಸುತ್ತಿದೆ. ಗ್ರಾಮೀಣ ಜಪಾನು ಈ ಗಾಳಿಯ ಹೊಡೆತ ತಾಳಿಕೊಂಡೀತೆ ?

ಗ್ರಂಥಋಣ

1 Beardsley, Hall & Ward : **Village Japan**

2 Embree, J. F. : A Japanese **Village-Suye Mura** (Kegan Paul, London, 1946)

3 ನಾಗೇಶ್. ಎಚ್. ಎ. : 'ಪಟ್ಟಿಯ ಚಿತ್ರ' **ಕರ್ನಾಟಕ ಭಾರತಿ**, ಕ. ವಿಶ್ವವಿದ್ಯಾಲಯ, (ಸಂಪುಟ 6, ಸಂಚಿಕೆ 2)

ಗ್ರಾಮೀಣ ವೃದ್ಧರು

● ಡಾ. ಕೆ. ಜಿ. ಗುರುಮೂರ್ತಿ

ಯಾವುದೇ ಸಂಸ್ಕೃತಿಯ ಮಟ್ಟವನ್ನು ಅದರಲ್ಲಿ ವೃದ್ಧರಿಗೆ, ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ನೀಡಿರುವ ಗೌರವ, ಸ್ಥಾನಮಾನದಿಂದ ಅಳೆಯಬಹುದು. ಅನೇಕ ಸಮಾಜಗಳಲ್ಲಿ ವೃದ್ಧರಿಗೆ ನೀಡಿರುವ ಸ್ಥಾನಮಾನಗಳು, ಆರೈಕೆ–ರಕ್ಷಣೆಗಳು ಅವರ ಮೇಲಿನ ಕರುಣೆ ಮಾತ್ರದಿಂದಾಗಿರದೆ ಸಮಾಜಕ್ಕೆ ಅವರು ಮಾಡಿರುವ ಸೇವೆ ಮತ್ತು ಅವರಲ್ಲಿನ ವಯೋಜ್ಞಾನ, ಪರಿಣತೆ, ಪರಿಪೂರ್ಣ ವ್ಯಕ್ತಿತ್ವ ಮುಂತಾದವುಗಳಿಗೆ ನೀಡುವ ಗೌರವವಾಗಿರುತ್ತದೆ. ಇಂದು ಆಧುನಿಕತೆಗೆ, ವಿಶೇಷ ಜ್ಞಾನಕ್ಕೆ ಹೆಚ್ಚಿನ ಗೌರವವಿರುವುದರಿಂದ ವೃದ್ಧರು ಮಾಡುವ ಕಾರ್ಯಗಳು, ಆಡುವ ಮಾತು ಮತ್ತು ಆಚಾರ ವಿಚಾರಗಳು ಹಳೆಯ ತಲೆಮಾರಿನವಿದ್ದು ತರುಣ ಪೀಳಿಗೆ ಇವರನ್ನು ಅಷ್ಟಾಗಿ ಗೌರವದಿಂದ ಕಾಣದಿರಬಹುದು. ಈ ಕಾರಣದಿಂದ ಎರಡೂ ಗುಂಪುಗಳಲ್ಲಿ ದ್ವಂದ್ವ ಮತ್ತು ಬಿಗುತನದ ವಾತಾವರಣ ಏರ್ಪಟ್ಟಿರಬಹುದು. ಆದರೆ ಎಲ್ಲಾ ಕಾಲದಲ್ಲಿಯೂ, ಎಲ್ಲಾ ಸಮಾಜಗಳಲ್ಲಿಯೂ ಅದರಲ್ಲೂ ಜನಪದ ಸಂಸ್ಕೃತಿಯ ನೆರಳಲ್ಲಿರುವ ಗ್ರಾಮೀಣ ಸಮಾಜದಲ್ಲಿ, ಹಿರಿಯರಿಗೆ ಹೆಚ್ಚಿನ ಆದ್ಯತೆ, ಗೌರವ ಇರುವುದನ್ನು ಕಾಣುತ್ತೇವೆ.

ಗ್ರಾಮೀಣ ಸಮಾಜದಲ್ಲಿ ಹಿರಿಯರಿಗೆ ಹೆಚ್ಚಿನ ಗೌರವ ನೀಡಿರುವುದಕ್ಕೆ ಅನೇಕ ಕಾರಣಗಳಿವೆ. ಅವರು ತಮ್ಮ ಯೌವ್ವನದಲ್ಲಿ ನಾಲ್ಕು ಜನಕ್ಕೆ ಬೇಕಾದವರಾಗಿ, ಮರ್ಯಾದೆಯಿಂದ ನಡೆದು, ನ್ಯಾಯ ಪರಿಹಾರದಲ್ಲಿ ಭಾಗವಹಿಸಿ ಸರಿಯಾಗಿ ದುಡಿದು ತಮ್ಮ ಕುಟುಂಬದ ಆರೈಕೆ ಮಾಡಿದುದೇ ಕಾರಣವಿರುತ್ತದೆ. ಇಂತಹ ವ್ಯಕ್ತಿಯನ್ನು ಗ್ರಾಮಸ್ಥರು ನ್ಯಾಯ ಪರಿಹಾರಕ್ಕೆ ಕರೆಯುತ್ತಾರೆ ಮಾತ್ರವಲ್ಲ ಅವರ ನಿರ್ಣಯವನ್ನು ಸರ್ವವಿಧದಿಂದಲೂ ಮಾನ್ಯಮಾಡುತ್ತಾರೆ. ಯಾರಿಗಾದರೂ ಅನ್ಯಾಯವಾಗಿದ್ದರೆ, ತೊಂದರೆಯಾಗಿದ್ದರೆ, ಸಹಾಯ, ಮಾರ್ಗದರ್ಶನ ಬೇಕಾದರೆ ಗ್ರಾಮದ ಹಿರಿಯರು ಸಹಾಯಮಾಡಲು ಸದಾ ಸಿದ್ಧರಿರುತ್ತಾರೆ. ಅವರೂ ತಮ್ಮ ಘನತೆ–ಗೌರವವನ್ನು ಬಿಟ್ಟು, ಸಂಬಂಧಪಟ್ಟವರಲ್ಲಿಗೆ ಹೋಗಿ, ಸೂಕ್ತ ನೆರವು ನೀಡುತ್ತಾರೆ. ಆದ್ದರಿಂದ ಅನೇಕ ವೇಳೆ ಸಮಾಜದಲ್ಲಿ ಘರ್ಷಣೆಗಳು ತಪ್ಪುತ್ತವೆ ಮತ್ತು ಸೂಕ್ತ ಸಂಬಂಧಗಳು

ಏರ್ಪಡುತ್ತವೆ. ಹಳೆಯದನ್ನು ಉಳಿಸಿಕೊಂಡು. ಅದನ್ನೇ ಮುಂದಿನ ಪೀಳಿಗೆಗೆ ನೀಡುವಲ್ಲಿ ಹಿರಿಯ ಪೀಳಿಗೆಯವರು ಮಹತ್ವವಾದ ಸ್ಥಾನವನ್ನು ಪಡೆದಿರುತ್ತಾರೆ. ಜನಪದ ಹಾಡುಗಳು. ಕುಣಿತ. ನಾಟಕ. ಕಥೆ. ವೈದ್ಯ, ಹೀಗೆ ಅನೇಕ ಉಪಯುಕ್ತ ಜ್ಞಾನವನ್ನು ಹಿರಿಯ ಪೀಳಿಗೆಯಿಂದ ಕಿರಿಯರು ಕಲಿಯುತ್ತಾರೆ. ಅನೇಕ ಗ್ರಾಮೀಣ ಕುಶಲ ಕಲೆಗಳನ್ನು ಕಲಿಸಲು ಇಂದಿಗೂ ವಿದ್ಯಾಕೇಂದ್ರಗಳಿಲ್ಲದಿದ್ದು ಈ ಕಾರ್ಯವನ್ನು ಹಿರಿಯರು ಮಾಡುತ್ತಿದ್ದಾರೆ. ಜನಪದ ವೈದ್ಯರಂಗದಲ್ಲಿ ವೃದ್ಧರ ಪಾತ್ರ ಹಿರಿದು. ಗ್ರಾಮಸ್ಥರು ತಮ್ಮ ಸಂಪ್ರದಾಯದಿಂದಾಗಿ ಅಥವಾ ಆರ್ಥಿಕ ಅನಾನುಕೂಲತೆಯಿಂದಾಗಿ ಆಧುನಿಕ ವೈದ್ಯರ ಕಡೆ ಹೋಗದಾದಾಗ ಜನಪದ ವೈದ್ಯನಲ್ಲಿ ನುರಿತ ಹಿರಿಯರು ಅವರ ನೆರವಿಗೆ ಬರುತ್ತಾರೆ. ರೋಗಗಳು ಗಿಡಮೂಲಿಕೆಗಳ ಬಗ್ಗೆ ಪರಿಣತೆ ಮುಂತಾದವುಗಳಿಂದ ವೃದ್ಧರು ಗ್ರಾಮೀಣ ಜನರಿಗೆ ಮತ್ತು ದನ–ಕರುಗಳಿಗೆ ಬರುವ ರೋಗಗಳನ್ನು ನಿವಾರಿಸುವಲ್ಲಿ ಹೆಚ್ಚಿನ ನೆರವಾಗುತ್ತಾರೆ. ಇಂದಿಗೂ ಗ್ರಾಮೀಣ ಸಮಾಜದಲ್ಲಿ ಮನೆಯ ಯಜಮಾನ, ಜಾತಿ ಮತ್ತು ಊರ ಮುಂದಾಳುಗಳುಗಳು ವೃದ್ಧರಿರುತ್ತಾರೆ. ಅಂದಾಕ್ಷಣ ಕೇವಲ ವಯಸ್ಸಿಗೇ ಆದ್ಯತೆ ನೀಡಲಾಗಿದೆ ಎಂದಲ್ಲ: ಅನುಭವಕ್ಕೂ ಆದ್ಯತೆ ನೀಡುತ್ತಾರೆ.

ಗ್ರಾಮೀಣ ಸಮಾಜ ಸಂಪ್ರದಾಯಸ್ಥ ಸಮಾಜ. ಅಲ್ಲಿಯ ಎಲ್ಲಾ ಕಾರ್ಯ ಕಟ್ಟಳೆಗಳಿಗೆ ಸಂಪ್ರದಾಯದ ನಿಬಂಧನೆ ಇರುತ್ತದೆ. ಆದ್ದರಿಂದ ಇಲ್ಲಿ ಯಾವುದೇ ಕೆಲಸವಿರಲಿ ಅಲ್ಲಿ ಹಿರಿಯರ ನೆರವು ಬೇಕು. ಇವರು ಜೀವನದಲ್ಲಿ ಅನುಭವ ಉಳ್ಳ, ಕಷ್ಟ–ಸುಖಗಳನ್ನುಂಡು ಜೀವನವಲ್ಲಿ ಕಾದಾಡಿದವರಾದ್ದರಿಂದ ಇವರಿಗೆ ಸೈರಣೆ. ಮುಂದಾಲೋಚನೆಮಾಡುವ ಅನುಭವವಿರುತ್ತದೆ. ಯಾವ ಸಂದರ್ಭದಲ್ಲಿ ಹೇಗೆ ವರ್ತಿಸಬೇಕೆಂಬ ಅನುಭವವೂ ಇರುತ್ತದೆ. ಉದಾಹರಣೆಗೆ ವಿವಾಹ ಮುಂತಾದ ಕಾರ್ಯಗಳನ್ನು ಮಾಡುವಾಗ ಅಥವಾ ಶವ ಸಂಸ್ಕಾರದಂತಹ ದುಃಖದ ಕಾರ್ಯವನ್ನು ಮಾಡುವಾಗ ಹಿರಿಯರು ಯಾವ ಭಾವನೆಗಳಿಗೂ ಒಳಗಾಗದೆ. ಎಲ್ಲಾ ಕೆಲಸಗಳನ್ನು ಸರಿಯಾಗಿ ನೋಡಿಕೊಂಡು ಹೋಗಬಲ್ಲರು. ಅನೇಕ ವೇಳೆ ವಿವಾಹ ಸಂಬಂಧವನ್ನು ಕೂಡಿಸುವಂತಹ ಸೂಕ್ಷ್ಮ ವಿಚಾರದಲ್ಲಿ, ಜಗಳ ಪರಿಯಾರದಲ್ಲಿ. ಹಿರಿಯರಾದವರು ಮಾತ್ರ, ತಮ್ಮ ಸೈರಣೆಯನ್ನು ಕಳೆದುಕೊಳ್ಳದೆ ಈ ಕೆಲಸಮಾಡಬಲ್ಲರು. ಎಲ್ಲಿ ಉತ್ತಮವಾದ ಕನ್ಯೆ ಇದೆ ಎಂಬುದನ್ನು ತಮಗೆ ಗೊತ್ತಿರುವವರನ್ನೆಲ್ಲಾ ಕೇಳಿ. ಅವರ ಕುಲಗೋತ್ರಗಳನ್ನು. ರೀತಿನೀತಿಗಳನ್ನು. ನಡೆವಳಿಕೆಗಳನ್ನು ಸ್ವಲ್ಪವೂ ಬೇಜಾರಿಲ್ಲದೆ ವಿಚಾರಿಸಿ ಕೊಡುಕೊಳ್ಳುವ ವಿಚಾರಗಳನ್ನು ಮಾತಾಡಲು ಅವರಲ್ಲಿಗೆ ಎಷ್ಟು ಸಾರಿ ಬೇಕಾದರೂ ಹೋಗಿ ಬರಲು ಸಿದ್ಧರಿರುತ್ತಾರೆ. ಯಾವ ಸಂದರ್ಭದಲ್ಲಿ ಹೇಗೆ ಮಾತಾಡಿ ಜಾರಿಕೊಳ್ಳಬೇಕೆಂಬುದೂ ಇವರಿಗೆ ಗೊತ್ತಿರುತ್ತದೆ. ಅಲ್ಲದೆ ಇವರು ತಮ್ಮ ಜೀವನ ವೃತ್ತಿಯಿಂದ ಬಿಡುಗಡೆ ಹೊಂದಿದವರಾದ್ದರಿಂದ ಸಾಕಷ್ಟು ವಿರಾಮವೂ

ಇರುತ್ತದೆ. ಈ ಎಲ್ಲಾ ಕಾರ್ಯಗಳಿಂದ ಗ್ರಾಮೀಣ ಸಮಾಜದಲ್ಲಿ ವೃದ್ಧರು ಉತ್ತಮ ಸ್ಥಾನಮಾನಗಳನ್ನು ಹೊಂದಿದ್ದರು. ಇಂದು ಔದ್ಯೋಗಿಕತೆ, ಆಧುನಿಕ ವಿದ್ಯೆಯಿಂದಾಗಿ ತರುಣರು ಗ್ರಾಮದಿಂದ ಹೊರಗೆ ನೌಕರಿ ಹಿಡಿದು ಹೊರ ಹೋಗುತ್ತಿರುವುದರಿಂದ ಕಳ್ಳು ಬಳ್ಳಿ, ಜಾತಿ ಮತ್ತು ಸಮುದಾಯದ ಸಂಬಂಧಗಳು ಸಡಿಲವಾಗುವುದರಿಂದ ವೃದ್ಧರು ತಮ್ಮ ಹಿಂದಿನ ಸ್ಥಾನಮಾನಗಳನ್ನು, ಗೌರವ ಮತ್ತು ಉಪಯುಕ್ತತೆಯನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಕಾರಣದಿಂದ ಗ್ರಾಮೀಣ ವೃದ್ಧರಿಗೂ ಅನೇಕ ಸಮಸ್ಯೆಗಳು ಹುಟ್ಟಿಕೊಂಡಿವೆ.

ವೃದ್ಧಾಪ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಅಭ್ಯಾಸಮಾಡುವ 'ಜೆರೊಂಟಾಲಜಿ' ಎಂಬ ಶಾಸ್ತ್ರ ಬಂದಿದೆ (Jorontology). ವೃದ್ಧಾಪ್ಯ, ವೃದ್ಧರ ಸಮಸ್ಯೆಗಳು, ಅವುಗಳ ನಿವಾರಣೆ, ಮುಂತಾದವುಗಳನ್ನು ಅಭ್ಯಾಸ ವಿಷಯವನ್ನಾಗಿ ಉಳ್ಳ ಈ ಶಾಸ್ತ್ರವು ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚಿನ ಅಭಿವೃದ್ಧಿ ಹೊಂದಿದೆ. ಇದಕ್ಕೆ ಆ ಸಮಾಜಗಳಲ್ಲಿ ವೃದ್ಧರಿಗಿರುವ ಗೌರವ ಆರೈಕೆಗಳೇ ಕಾರಣ. ಸಮಾಜ ರಚನೆ, ಕಾರ್ಯಗಳು, ಬದಲಾಗುತ್ತಿರುವ ಸಮಾಜ ಸನ್ನಿವೇಶ ಕುಟುಂಬದ ರಚನೆ ಮತ್ತು ಕಾರ್ಯಗಳನ್ನು ಬದಲಾವಣೆ ಮುಂತಾದವನ್ನು ಶಾಸ್ತ್ರೋಕ್ತವಾಗಿ ಅಭ್ಯಾಸಮಾಡಿ ಸೂಕ್ತ ಪರಿಹಾರ ಕಾರ್ಯಕೈಗೊಳ್ಳಲು ಈ ಶಾಸ್ತ್ರ ನೆರವಾಗಿದೆ. ಅಮೇರಿಕಾ, ರಶ್ಯಾ, ಬ್ರಿಟನ್ ಮುಂತಾದ ದೇಶಗಳಲ್ಲಿ ವೃದ್ಧರಿಗೆ ಪ್ರತ್ಯೇಕ ಧಾಮಗಳು, ಆಸ್ಪತ್ರೆಗಳು, ಮನರಂಜನಾ ಕೇಂದ್ರಗಳು, ಅವರಿಗೆಂದೇ ವಿಶೇಷವಾದ ಸಾರಿಗೆ–ಸಂಪರ್ಕ ಮುಂತಾದ ವ್ಯವಸ್ಥೆಮಾಡಿ ಅನುಕೂಲತೆ ಒದಗಿಸಲಾಗಿದೆ.

ಹಿಂದುಳಿದ ಹಾಗೂ ಮುಂದುವರೆಯುತ್ತಿರುವ ಸಮಾಜಗಳೂ ಈಗಾಗಲೇ ವೃದ್ಧರ ಮತ್ತು ವೃದ್ಧಾಪ್ಯದ ಸಮಸ್ಯೆಗಳ ಬಗೆಗೆ ತಮ್ಮ ಗಮನ ಹರಿಸುತ್ತಿವೆ. ವೃದ್ಧರ ಸಮಸ್ಯೆಗಳು, ಅವರಿಗಿರುವ ಸಮಾಜದ ಆರ್ಥಿಕ ಹಾಗೂ ಔದ್ಯೋಗಿಕ ಅಭಿವೃದ್ಧಿಯನ್ನು ಅವಲಂಬಿಸಿವೆ ಎನ್ನಬಹುದು. ಆರ್ಥಿಕವಾಗಿ ಹಿಂದುಳಿದ ಸಮಾಜಗಳು ಸಂಪ್ರದಾಯಸ್ಥ ಸಮಾಜಗಳೂ ಹೌದು. ಇಲ್ಲಿ ಕುಟುಂಬ, ಕಳ್ಳುಬಳ್ಳಿ, ಜಾತಿ, ಊರು ಮುಂತಾದ ಸಂಸ್ಥೆಗಳಿಗೆ ಇನ್ನೂ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ. ವೃದ್ಧರು ತಮಗಾಗಿ ದುಡಿದ ಹಿರಿಯರೆಂದು ಅವರ ಮುಂದಿನ ಪೀಳಿಗೆ ಅವರನ್ನು ಗೌರವ, ಆದರ, ಭಕ್ತಿ ಮತ್ತು ಕರ್ತವ್ಯ ದೃಷ್ಟಿಯಿಂದ ನೋಡಿಕೊಳ್ಳುತ್ತವೆ. ಮಾನಸಿಕವಾಗಿಯೂ ಹಿರಿಯ–ಕಿರಿಯ ತಲೆಮಾರಿನಲ್ಲಿ ಹೆಚ್ಚಿನ ಅನ್ಯೋನ್ಯತೆ ಇರುತ್ತದೆ. ಇದಕ್ಕೆ ಇಂದಿನ ವೃದ್ಧರು ತಮ್ಮ ತಾರುಣ್ಯದಲ್ಲಿ ತಮ್ಮೆಲ್ಲಾ ಸಂಪನ್ಮೂಲಗಳನ್ನು ತಮ್ಮವರು ಎನ್ನುವ ಎಲ್ಲರ ಸುಖಕ್ಕೆ, ಸಂತೋಷಕ್ಕೆ ಉಪಯೋಗಿಸಿ ದುಡಿದಿರುತ್ತಾರೆ. ಈ ವಿಷಯ ತಿಳಿದಿರುವ ಕಿರಿಯ ಪೀಳಿಗೆ ಅವರ ಬಗೆಗೆ ಹೆಚ್ಚಿನ ಗೌರವ–ಭಕ್ತಿ ಭಾವನೆಯನ್ನು ತಾಳಿದ್ದು

ಇವರನ್ನು ವೃದ್ಧಾಪ್ಯದಲ್ಲಿ ಕಾಪಾಡುವದು ನಮ್ಮ ಕರ್ತವ್ಯ ಮತ್ತು ಧರ್ಮವೆಂದು ತಿಳಿಯುತ್ತಾರೆ. ಆದ್ದರಿಂದ ಅನೇಕ ಭೌತಿಕ ಕೊರತೆಗಳಿದ್ದರೂ ಈ ಹಿಂದುಳಿದ ಸಮಾಜದಲ್ಲಿಯ ವೃದ್ಧರು ಮಾನಸಿಕವಾಗಿ ಸುಖಿಗಳು. ಅನೇಕ ಮುಂದುವರೆದ ದೇಶಗಳಲ್ಲಿ ವೃದ್ಧರಿಗೆ ಎಲ್ಲಾ ತರಹದ ಭೌತಿಕ ಅನುಕೂಲತೆಗಳನ್ನು ನೀಡಿದ್ದರೂ, ಅವರು ತಮ್ಮ ಮಕ್ಕಳು ಮತ್ತು ತಮ್ಮವರಿಂದ ಅನಾದರಣೆಗೆ ಗುರಿಯಾಗಿರುವುದರಿಂದ ಮಾನಸಿಕವಾಗಿ ಅಸುಖಿಗಳಾಗಿರುತ್ತಾರೆ. ಇನ್ನೂ ಕೆಲವರು ತಮ್ಮ ವೃದ್ಧಾಪ್ಯದಲ್ಲಿ ತಮ್ಮ ಮಕ್ಕಳಿಂದ ಯಾವ ನೆರವನ್ನೂ ಇಚ್ಛಿಸದಿದ್ದುದರಿಂದ ಅವರಿಗೆ ಇಂತಹ ಮಾನಸಿಕ ತೊಂದರೆ ಇರುವುದಿಲ್ಲ.

ಈಗಾಗಲೇ ಅನೇಕರ ಕಲ್ಯಾಣ ಕಾರ್ಯದ ಹೊರೆಹೊತ್ತಿರುವ ಸಮಾಜಕ್ಕೆ ವೃದ್ಧರ ಸಮಸ್ಯೆಯೂ ಸೇರಿಕೊಂಡಿದೆ. ವೃದ್ಧರ ಸಮಸ್ಯೆಗಳ ಪರಿಹಾರ ಕಾರ್ಯವನ್ನು ಸಮಾಜ ಕೈಗೆತ್ತಿಕೊಳ್ಳಬೇಕೇ ಅಥವಾ ಬೇಡವೇ ಎಂದು ವಾದಮಾಡಿದ ಕಾಲ ಒಂದಿತ್ತು. ಈಗಾಗಲೇ ಶಿಶುಗಳ. ಬಾಲಕರ. ತರುಣರ. ಕುಟುಂಬದ ವಿಧವೆಯರ, ಅಂಧರ, ಅಂಗವಿಕಲರ. ಮನೋವಿಕಾರಕ್ಕೆ ಗುರಿಯಾದವರ, ಕೂಲಿಕಾರರ ಮುಂತಾದ ಇನ್ನೂ ಅನೇಕ ಗುಂಪುಗಳ ಕಲ್ಯಾಣ ಕಾರ್ಯ ಹೊತ್ತ ಸಮಾಜಕ್ಕೆ ವೃದ್ಧರ ಕಲ್ಯಾಣಕಾರ್ಯದಂತಹ ಮತ್ತೊಂದು ಹೊರೆಯನ್ನು ಹೇರುವದು ಅಂದಿನ ಕೆಲವು ಸಮಾಜ ಕಾರ್ಯಕರ್ತರಿಗೆ ಸರಿಕಾಣಲಿಲ್ಲ. ಕೆಲವೊಂದು ಜನ ವೃದ್ಧರು ತಮ್ಮ ತಾರುಣ್ಯದಲ್ಲಿ ಉಳಿಸಿದ ಹಣದಿಂದ ಜೀವನ ಮಾಡಬಹುದೆಂದೂ. ತಮ್ಮ ಮಕ್ಕಳ ಬಳಿ ಇರಬಹುದೆಂದೂ ವಾದಮಾಡಿ, ಅನುಪಯುಕ್ತ ವೃದ್ಧರಮೇಲೆ ಖರ್ಚುಮಾಡುವ ಈ ಹಣವನ್ನೇ ಯಾವುದಾದರೂ ಉಪಯುಕ್ತ ಗುಂಪಿನಮೇಲೆ ಮಾಡಬೇಕೆಂದು ವಾದಿಸಿದ್ದರು. ಇದಕ್ಕೆ ವಿರುದ್ಧವಾಗಿ ವೃದ್ಧರ ಕಲ್ಯಾಣದ ಹೊಣೆ ಸಮಾಜದ ಕರ್ತವ್ಯ, ತಮ್ಮ ತಾರುಣ್ಯದಲ್ಲಿ ಸಮಾಜಕ್ಕೆ ದುಡಿದು ವೃದ್ಧರಾಗಿರುವ ಇವರ ಹೊಣೆ ಸಮಾಜದ್ದೇ ಎಂದು ಉಳಿದವರು ವಾದ ಮಾಡಿದರು. ವೃದ್ಧರನ್ನು ಗೌರವದಿಂದ ಕಾಣುವುದು, ಅವರ ಕಲ್ಯಾಣ ಕಾರ್ಯ ಮಾಡುವುದು ಸಮಾಜದ ಕರ್ತವ್ಯವೆಂದು ನಿರ್ಣಯಿಸಿದ ಮೇಲೆ ಅವರ ಕಲ್ಯಾಣ ಕಾರ್ಯವನ್ನು ತೆಗೆದುಕೊಳ್ಳಲಾಯಿತು. ವೃದ್ಧರ ಸಮಸ್ಯೆಗಳೇ ಇಲ್ಲವೆಂದವರು ಮುಂದೆ ಇವುಗಳ ಪರಿಹಾರ ಕಾರ್ಯ ಕೈಗೊಂಡಾಗ ಇನ್ನೂ ಅನೇಕ ಸಮಸ್ಯೆಗಳಿರುವುದು ಕಂಡುಬಂದಿತು. ಇವುಗಳಲ್ಲಿ ಅನಾರೋಗ್ಯ, ಸೂಕ್ತ ಆರೈಕೆ ಇಲ್ಲದ್ದು, ಅಂಗವಿಕಲತೆ, ಮಾನಸಿಕ ತೊಂದರೆ ಮುಂತಾದವು ಮುಖ್ಯವಾದವು.

ವೃದ್ಧರನ್ನು ವಳೆಯ ತಲೆಮಾರಿನವರು, ಹಿರಿಯರು, ಮುಪ್ಪಿನವರು. ಅನುಪಯುಕ್ತರು, ಅವಲಂಬಿಗಳು. ಸಾಂಪ್ರದಾಯಸ್ಥರು ಹೀಗೆ ಅನೇಕ ಅರ್ಥವಿರುವ ಶಬ್ದಗಳಿಂದ ಕರೆಯಲಾಗುವುದು. ಈ ಎಲ್ಲಾ ಶಬ್ದಗಳಿಗೂ ತಮ್ಮದೇ ಆದ ಸಾಮಾಜಿಕ

ಅರ್ಥವಿದೆ. ಆಧುನಿಕತೆಯು ಎಲ್ಲಿಯುಲ್ಲಿರುವವರು ವೃದ್ಧರನ್ನು ಸಂಪ್ರದಾಯವಾದಿಗಳು, ಹಳೆಯ ಕಾಲದವರೆನ್ನಬಹುದು. ಅವರ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಹಳೆಯತನ ಎದ್ದು ಕಾಣುವುದರಿಂದ ಅವರನ್ನು ಹೀಗೆ ಕರೆಯುತ್ತಾರೆ. ಅವರು ಮುದಿಯ ವಯಸ್ಸಿನವರಿದ್ದು, ಆರ್ಥಿಕವಾಗಿ ಕುಟುಂಬಕ್ಕೆ, ಸಮಾಜಕ್ಕೆ ನೇರವಾಗಿ ಹಾಗೂ ಹೆಚ್ಚಿನ ನೆರವನ್ನು ನೀಡಲಾರದ್ದರಿಂದ ಅವರನ್ನು ಇತರರಮೇಲೆ ಅವಲಂಬಿಗಳೆಂದೂ ಕರೆಯುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಅವರು ಅನುಪಯುಕ್ತರೂ ಅಲ್ಲದೆ ಅಶಕ್ತತೆಯಿಂದಾಗಿ ಪರಾವಲಂಬಿಗಳೂ ಇರಬಹುದು.

ವೃದ್ಧರ ಸ್ಥಾನಮಾನಗಳು ಗ್ರಾಮೀಣ ಸಮಾಜದಲ್ಲಿ ಮಾತ್ರ ಅಷ್ಟಾಗಿ ಅನುಪಯುಕ್ತವಾಗಿಲ್ಲ. ಇವರು ಅಶಕ್ತರು, ರೋಗಿಗಳು, ಅಂಗವಿಕಲರೂ ಆಗಿದ್ದರೂ ಅವರ ಉಪಯುಕ್ತತೆಯನ್ನು ಬೌದ್ಧಿಕವಾಗಿ ಪಡೆಯಲಾಗುತ್ತದೆ. ತಮ್ಮ ಅನುಭವ, ಪರಿಣತೆಗಳಿಂದಾಗಿ ಗಳಿಸಿದ ಅಪಾರ ಜ್ಞಾನವನ್ನು ವೃದ್ಧರು ಕುಳಿತಲ್ಲಿಯಿಂದಲೇ ಉಪಯೋಗಿಸಿ ಸಮಾಜಕ್ಕೆ ಉಪಯುಕ್ತ ಕಾರ್ಯ ಮಾಡಬಲ್ಲರು. ಆದರೆ ಇಂದು ಗ್ರಾಮೀಣ ಸಮಾಜದಲ್ಲಿ ಇವರ ಉಪಯುಕ್ತತೆಯನ್ನು ಪಡೆಯಲು ಇರುವ ಅವಕಾಶಗಳು ವಿರಳ. ಅಶಕ್ತರು, ರೋಗಿಗಳೂ ಆದ ಇವರು ಗ್ರಾಮೀಣ ಆರ್ಥಿಕ ಚಟುವಟಿಕೆಯಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸದಿದ್ದುದರಿಂದ ಅನುಪಯುಕ್ತ ವ್ಯಕ್ತಿಗಳಾಗುತ್ತಾರೆ. ಅನೇಕ ವೇಳೆ ಆಧುನಿಕತೆಯ ನೆರಳಿನಲ್ಲಿರುವ ಅವರ ಮಕ್ಕಳು, ಗ್ರಾಮಸ್ಥರು, ಅವರ ಬೌದ್ಧಿಕ ಜ್ಞಾನವನ್ನು ಉಪಯೋಗಿಸಲು ಒಪ್ಪದಿರಬಹುದು. ಈ ಕಾರಣದಿಂದ ಗ್ರಾಮೀಣ ವೃದ್ಧರು ತಮ್ಮ ಕುಟುಂಬಕ್ಕೆ, ಸಮಾಜಕ್ಕೆ ಅನುಪಯುಕ್ತರಾಗುತ್ತಾರೆ.

ಇಂದಿನ ಗ್ರಾಮೀಣ ವೃದ್ಧರ ಅನೇಕ ಸಮಸ್ಯೆಗಳು ಇಡೀ ಗ್ರಾಮೀಣ ಸಮಾಜದ ಸಮಸ್ಯೆಗಳಾಗಿವೆ. ಇಡೀ ಗ್ರಾಮೀಣ ಸಮಾಜವನ್ನು ಅಭಿವೃದ್ಧಿ ಮಾಡಿದರೆ ವೃದ್ಧರ ಸಮಸ್ಯೆಯ ಜೊತೆಗೆ ಇನ್ನೂ ಅನೇಕ ತೊಂದರೆಗಳು ನಿವಾರಣೆಯಾಗುತ್ತವೆ. ಆದರೆ ಕೆಲವೊಂದು ಕಾರಣದಿಂದ ಈ ಕೆಲಸ ಅಷ್ಟು ಸುಲಭವಾಗಿ ಆಗದು. ವೃದ್ಧರ ಮೊದಲನೆಯ ಸಮಸ್ಯೆ ಎಂದರೆ ಅನಾರೋಗ್ಯ, ಅನಕ್ಷರತೆ, ಸಂಪ್ರದಾಯ. ಈ ಹಿನ್ನೆಲೆಯ ಸಮಾಜದಲ್ಲಿರುವ ಜನರು ಬಹುಬೇಗ ವೃದ್ಧರಾಗುತ್ತಾರೆ. ಅನೇಕರು ಚಿಕ್ಕ ವಯಸ್ಸಿನಲ್ಲೇ ವಿವಾಹವಾಗಿ ಸಂಸಾರದ ಜವಾಬ್ದಾರಿಯನ್ನು ಹೊರುವುದರಿಂದ ೪೦-೪೫ ವರ್ಷಕ್ಕೆ ವೃದ್ಧರಂತಾಗಿಬಿಡುತ್ತಾರೆ. ಆರೋಗ್ಯ, ನೈರ್ಮಲ್ಯದ ಬಗೆಗೆ ಸೂಕ್ತ ಜ್ಞಾನವಿಲ್ಲದ ಇವರು ಸದಾ ರೋಗಿಗಳಾಗಿರುತ್ತಾರೆ. ಗ್ರಾಮೀಣ ವಾತಾವರಣವೂ ಸದಾ ಅನಾರೋಗ್ಯದಿಂದ ತುಂಬಿರುತ್ತದೆ. ವೃದ್ಧರು ರೋಗಗ್ರಸ್ಥರಾಗಿದ್ದಾಗ ಸರಿಯಾದ ಚಿಕಿತ್ಸೆ ಇಲ್ಲದ್ದು ಉಳಿದ ಸಮಸ್ಯೆ. ತಾವಾಗಿಯೇ ವೈದ್ಯರ ಕಡೆ ಹೋಗಲು ಹಣವಿಲ್ಲದ್ದು, ಪರಾವಲಂಬಿಗಳಾಗಿರುವುದು ಅವರ ಜೀವನದಲ್ಲಿ ಕಷ್ಟಗಳನ್ನು ತರುತ್ತದೆ. ಅನೇಕರ

ವೃದ್ಧಾಪ್ಯದಲ್ಲಿ ಅವರಿಗೆ ಸೂಕ್ತವಾದ ಮತ್ತು ಉತ್ತಮವಾದ ಆರೈಕೆ, ಔಷಧೋಪಚಾರ-ಗಳು ಮತ್ತು ಊಟ-ಉಪಚಾರಗಳಿಲ್ಲದೆ ಇನ್ನೂ ಹಲವಾರು ವರ್ಷಗಳು ಬದುಕಬಹುದಾದಂತಹವರೂ ಅಕಾಲ ಮರಣಹೊಂದುತ್ತಾರೆ.

ಉಳಿದ ಸಮಾಜಗಳಂತೆ ಗ್ರಾಮೀಣ ಸಮಾಜದಲ್ಲಿ ನಿವೃತ್ತಿ ವಯಸ್ಸೆಂಬುದಿಲ್ಲ. ಗ್ರಾಮೀಣ ವೃತ್ತಿಗಳು ಈ ನಿವೃತ್ತಿ ಜೀವನಕ್ಕೆ ಅವಕಾಶವನ್ನೇ ನೀಡುವುದಿಲ್ಲ. ಆದ್ದರಿಂದ ತನ್ನ ವೃತ್ತಿಯಲ್ಲಿ ನಿರತರಾದ ವ್ಯಕ್ತಿಗಳು ತಮ್ಮ ತಾರುಣ್ಯದಲ್ಲಿ ಹೆಚ್ಚಿನ, ನಂತರ ವಯಸ್ಸಾದಂತೆ ಕ್ರಮೇಣ ತಮ್ಮ ಶ್ರಮವನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ವಯಸ್ಸಾದ ನಂತರ ತಮ್ಮ ಜಾತಿಯ ಕಸುಬನ್ನು ಬಿಟ್ಟು ಹಗುರವಾದ ವೃತ್ತಿಯಲ್ಲಿ ತೊಡಗಲು ಅವರಿಗೆ ಸಂಪ್ರದಾಯ ಅಡ್ಡಿಬರುತ್ತದೆ. ಪರಿಣತೆ ಮತ್ತು ಅವಕಾಶಗಳು ಇರುವುದಿಲ್ಲ. ಆದ್ದರಿಂದ ವೃದ್ಧಾಪ್ಯದಲ್ಲಿ ಇವರ ಕಾಲಹರಣಕ್ಕೆ ತೊಂದರೆಯಾಗುತ್ತದೆ. ಕಿರಿಯರ ಮನೋಭಾವನೆಗಳು, ಅಭಿರುಚಿಗಳು ಬೇರೆಯೇ ಇರುವುದರಿಂದ ಅಥವಾ ಅವರು ತಮ್ಮ ದಿನನಿತ್ಯವೃತ್ತಿಗಳಲ್ಲಿ ತೊಡಗಿರುವುದರಿಂದ ಅವರು ವೃದ್ಧರೊಡನೆ ಹೆಚ್ಚಿಗೆ ಬೆರೆಯುವುದಿಲ್ಲವಾದ್ದರಿಂದ ವೃದ್ಧರು ತಮ್ಮ ಸರಿವಯಸ್ಸಿನವರೊಂದಿಗೆ ಹರಟೆ ಹೊಡೆಯುವುದೇ ಕಾಲಕ್ಷೇಪವಾಗುತ್ತದೆ. ಅವಿದ್ಯಾವಂತರಾದ ಇವರು ಪತ್ರಿಕೆ, ಪುಸ್ತಕ ಮುಂತಾದವನ್ನು ಓದಿ ಕಾಲಕಳೆಯುವಂತೆಯೂ ಇಲ್ಲ. ಹಳ್ಳಿಗಳಲ್ಲಿ ಸಿನಿಮಾ, ನಾಟಕ ಮುಂತಾದ ಅವಕಾಶಗಳೂ, ಸಭೆ-ಸಮಾರಂಭ ಮುಂತಾದವುಗಳೂ ಇರುವುದಿಲ್ಲ. ಹೀಗೆ ಉಪಯುಕ್ತ ರೀತಿಯಲ್ಲಿ ಕಾಲಕಳೆಯುವ ಅವಕಾಶಗಳಿಲ್ಲದೆ ಮಾನಸಿಕವಾಗಿ ತೊಂದರೆಗೊಳಗಾಗುತ್ತಾರೆ.

ಕೆಲವು ವೃದ್ಧರು ತಮ್ಮ ವಿಶೇಷ ಜ್ಞಾನಗಳಾದ ವೈದ್ಯ, ಮಾಯ, ಮಂತ್ರ, ಪುರಾಣ ಹೇಳುವುದು ಮುಂತಾದವುಗಳ ಮೂಲಕ ಕಾಲಕ್ಷೇಪ ಮಾಡಬಹುದು. ಇನ್ನು ಕೆಲವರು ತಮ್ಮವರಿಗೆ ಬೇಕೆಂದ ಕಡೆ ಲಗ್ನ ಕೂಡಿಸುವ ಕಾರ್ಯದಲ್ಲಿ ತೊಡಗಿ ಅವರಿಗೆ ನೆರವಾಗುವುದರ ಜೊತೆಗೆ ತಮ್ಮ ಕಾಲವನ್ನು ಉಪಯುಕ್ತ ರೀತಿಯಲ್ಲಿ ಕಳೆಯಬಹುದು. ಇನ್ನು ಉಳಿದವರು ತೀರ್ಥಯಾತ್ರೆ ಮುಂತಾದವುಗಳಿಗೆ ಹೋಗಬಹುದು. ಆದರೆ ಇಂತಹವರ ಸಂಖ್ಯೆ ಬಹಳ ಕಡಿಮೆ. ಇದಕ್ಕೆ ವಿದ್ಯೆ, ಜ್ಞಾನ, ಆರೋಗ್ಯ, ಹಣ ಬೇಕಾಗುತ್ತದೆ.

ಅನೇಕ ಗ್ರಾಮೀಣ ವೃದ್ಧರ ಮತ್ತೊಂದು ಸಮಸ್ಯೆ ಎಂದರೆ ಅವರು ಅನಾಥರಾಗಿರುವುದು. ಇಂದು ಸಾಮಾಜಿಕ ಬದಲಾವಣೆಯಿಂದಾಗಿ ಒಬ್ಬಿಬ್ಬರನ್ನು ಬಿಟ್ಟು ಉಳಿದ ಮಕ್ಕಳು ಗ್ರಾಮೀಣ ಸಮಾಜದಿಂದ ಹೊರಗೆ, ನಗರಗಳಲ್ಲಿ ನೌಕರಿಯಲ್ಲಿರುತ್ತಾರೆ. ನಗರವಾಸಿಗಳಾದ ಈ ಮಕ್ಕಳು ಸ್ಥಳಾಭಾವ, ಆರ್ಥಿಕ ಅಡಚಣೆ ಮತ್ತು ಹಳೆಯ ಸಂಬಂಧಿಕರಲ್ಲದವರು (ಸೋದರಿಕೆಯಲ್ಲದವರು) ಸೊಸೆಯಂದಿರಾಗಿ ಬಂದಿರು

ವುದರಿಂದ ವೃದ್ಧರು ಅವರೊಟ್ಟಿಗಿರಲಾರರು. ಹೋದರೂ ಅಲ್ಲಿಯ ಕ್ರಮಬದ್ಧ, ಲಯಬದ್ಧ ಜೀವನಕ್ಕೆ ಹೊಂದಿಕೊಳ್ಳದೆ ಹಿಂತಿರುಗಬಹುದು. ಆಗ ಹಳ್ಳಿಯಲ್ಲಿರುವ ಒಬ್ಬನೇ ಮಗ ಮತ್ತು ಅವನ ಹೆಂಡತಿ ಪ್ರೀತಿಯಿಂದ ನೋಡಿಕೊಳ್ಳಲಿ, ನೋಡಿಕೊಳ್ಳ ದಿರಲಿ, ಅವನಲ್ಲೇ ಇರಬೇಕಾಗುತ್ತದೆ. ಹಿಂದಿನ ಕಾಲದಲ್ಲಿ ಸಮಾಜದಲ್ಲಿ ಕಳ್ಳು–ಬಳ್ಳಿ ಸಂಬಂಧ, ಜಾತಿ ಸಮುದಾಯದ ಸಂಬಂಧಗಳು ಉತ್ತಮವಾಗಿದ್ದಾಗ, ಒಬ್ಬ ಸಂಬಂಧಿ ಮತ್ತೊಬ್ಬ ಸಂಬಂಧಿಯ ನೆರವಿಗೆ ಬರುತ್ತಿದ್ದುದರಿಂದ ವೃದ್ಧರಿಗೆ ಅಷ್ಟಾಗಿ ತೊಂದರೆ ಇರುತ್ತಿರಲಿಲ್ಲ. ಇಂದಿನ ದಿನಗಳಲ್ಲಿ ಈ ಸಂಬಂಧಗಳೂ ನಶಿಸಿ ಹೋಗುತ್ತಿರುವುದರಿಂದ ಅನೇಕ ವೃದ್ಧರು ಅನಾಥರಾದಂತೆ ಭಾವಿಸಿ, ಮನೆಯಿಂದ ಹೊರ ಬಂದು ಭಿಕ್ಷೆ ಬೇಡಲು ಪ್ರಾರಂಭಿಸುತ್ತಾರೆ. ಕೆಲವರು ತಮ್ಮ ಮಕ್ಕಳ ಮೇಲೆ ಹೆಚ್ಚಿನ ಭರವಸೆಯನ್ನು ಹೊಂದಿದ್ದು ಅವರು ಅದನ್ನು ಪಡೆಯದಾದಾಗ ಮಾನಸಿಕ ವೇತನೆ ಗೊಳಗಾಗುತ್ತಾರೆ. ಹೀಗೆ ವೃದ್ಧರ ಸಮಸ್ಯೆ ಕೇವಲ ವೃದ್ಧ್ಯಾಪ್ಯದ್ದಾಗಿರದೆ ಉಳಿದ ಅನೇಕ ಸಾಮಾಜಿಕ ರಂಗಗಳಿಗೂ ಪ್ರವೇಶಿಸುತ್ತದೆ.

ಗ್ರಾಮೀಣ ಸಮಾಜ ಇನ್ನೂ ಜನಪದ ಸಂಸ್ಕೃತಿಯ ನೆರಳಲ್ಲಿದೆ. ಇಲ್ಲಿರುವ ಅಧಿಕಾರಸ್ಥಾನಗಳಿಗೆ ಆಸೆ ಪಡುವದರಲ್ಲಿ ಒಂದು ಬಗೆಯ ದ್ವಂದ್ವ ಮತ್ತು ಬಿಗುವಿನ ಸಂಬಂಧಗಳಿರುತ್ತವೆ. ಈ ಅಭಾವ ಪರಿಸ್ಥಿತಿಯಿಂದಾಗಿ ವೃದ್ಧರು ತಮ್ಮ ಸ್ಥಾನಗಳನ್ನು ಕೊನೆಯವರೆಗೂ ಬಿಟ್ಟುಕೊಡಲು ಸಿದ್ಧರಿರುವುದಿಲ್ಲ. ಇದಕ್ಕೆ ಸಂಪ್ರದಾಯದ ಬೆಂಬಲವೂ ಇರುತ್ತದೆ. ಆದರೆ ಇಂದು ಆಧುನಿಕ ಜಗತ್ತಿನ ನೆರಳು ಗ್ರಾಮಗಳಿಗೂ ಬಡಿದು ಅಲ್ಲಿಯ ತರುಣರು ಹಳೆಯ ವಿಚಾರದ ಮತ್ತು ಮನೋಭಾವನೆಯ ವೃದ್ಧರಿಂದ ಈ ಅಧಿಕಾರ ಸ್ಥಾನಗಳನ್ನು ಕಿತ್ತುಕೊಳ್ಳುತ್ತಾರೆ. ಇದಕ್ಕಾಗಿ ಈ ಎರಡು ಗುಂಪುಗಳ ನಡುವೆ ಒಂದು ವಿಧದ ಪೈಪೋಟಿ ನಡೆಯುತ್ತದೆ. ತರುಣ ಪೀಳಿಗೆ ವೃದ್ಧರನ್ನು ಅನೇಕ ಕತೆಕಟ್ಟಿ, ಹೆಸರಿಟ್ಟು, ಹಿಯ್ಯಾಳಿಸುತ್ತಾರೆ. ಇಂತಹ ಸನ್ನಿವೇಶಕ್ಕೆ ಹೊಂದಿಕೊಳ್ಳುವುದು ವೃದ್ಧರಿಗೆ ಸಮಸ್ಯೆಯಾಗಿದೆ. ಆದ್ದರಿಂದ ಈ ಎರಡೂ ಗುಂಪುಗಳ ಮನೋಭಾವನೆ ಯನ್ನು ಬದಲಾಯಿಸುವಂತಹ ಸನ್ನಿವೇಶವನ್ನು ನಿರ್ಮಿಸುವ ಕಾರ್ಯ ಮಾಡಿ ಇದನ್ನು ನಿವಾರಿಸಬೇಕು.

ಹೀಗೆ ಗ್ರಾಮೀಣ ವೃದ್ಧರ ಹಿನ್ನೆಲೆ ಮತ್ತು ಸಮಸ್ಯೆಗಳು ನಗರವಾಸಿಗಳಿಂದ ಭಿನ್ನವಾಗಿರುವುದರಿಂದ ಗ್ರಾಮೀಣ ವೃದ್ಧರನ್ನು ಬೇರೆಯೇ ಆದ ಗುಂಪೆಂದು ಪರಿಗಣಿಸ ಬೇಕು ಮತ್ತು ಅವರ ಸಮಸ್ಯೆಗಳನ್ನು ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕು. ಆಗಮಾತ್ರ ಅವರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ನೀಡಲು ಸಾಧ್ಯ. ಪಾಶ್ಚಿಮಾತ್ಯ ದೇಶದಲ್ಲಿಯಂತೆ ಮತ್ತು ಕಲ್ಯಾಣ ರಾಜ್ಯದ ಅಂಗವಾಗಿ ಈಗಾಗಲೇ ಗ್ರಾಮೀಣ ವೃದ್ಧರಿಗೂ ಮಾಸಿಕ ವಿರಾಮವೇತನ ಮುಂತಾದ ಅನುಕೂಲತೆ ನೀಡಲಾಗಿದೆ. ಆದರೆ

ಅನೇಕ ರಾಜ್ಯ ಸರಕಾರಗಳು ಕೇವಲ ಹಿಂದುಳಿದ ಮತ್ತು ಆರ್ಥಿಕವಾಗಿ ಬಡ ಜಾತಿಯವರಿಗೆ ಮಾತ್ರ ಈ ಧನ ಸಹಾಯದ ಅವಕಾಶ ಮಾಡಿಕೊಟ್ಟಿದೆ. ಈ ಸಹಾಯಗಳು ಎಲ್ಲಾ ವೃದ್ಧರಿಗೂ ಸಲ್ಲಬೇಕಲ್ಲದೆ ಕೇವಲ ಒಂದೆರಡು ವರ್ಗಕ್ಕಲ್ಲ. ಏಕೆಂದರೆ ಅಭಿಮಾನದಿಂದ ಕೆಲವು ವರ್ಗಕ್ಕೆ ಸೇರಿದ ವೃದ್ಧರ ಈ ಅನುಕೂಲತೆ ಪಡೆಯಲು ಮುಂದೆ ಬರಲಾರರು. ಇದೇ ರೀತಿಯಲ್ಲಿ ವೃದ್ಧರಿಗೆಂದು ಎಲ್ಲಾ ಅನುಕೂಲತೆಗಳಿರುವ ಧಾಮಗಳನ್ನು ತೆರೆಯಬೇಕು. ವೃದ್ಧರ ಈ ಧಾಮಗಳು ಸಾಧ್ಯವಾದಷ್ಟು ಮಟ್ಟಿಗೆ ವೃದ್ಧರ ಊರುಗಳಿಗೆ. ಸಂಬಂಧಿಕರಿಗೆ ಹತ್ತಿರವಿದ್ದು ಆಗಾಗ ಅವರು ನೋಡುವಂತಿರಬೇಕು. ಸೂಕ್ತ ಸಾರಿಗೆ ಸಂಪರ್ಕಗಳೂ ಇರಬೇಕು. ಎಲ್ಲಕ್ಕಿಂತ ಮಿಗಿಲಾಗಿ ಈ ಧಾಮಗಳ ಬಗೆಗೆ ಸಾಮಾಜಿಕವಾಗಿ ಗೌರವ ಬರುವಂತಹ ಸನ್ನಿವೇಶ ಏರ್ಪಡಿಸಬೇಕು. ಇವು ಅನಾಥರಿಗೆ, ಬಡಬಗ್ಗರಿಗೆ ಮಾತ್ರ ತೆರೆದ ಧಾಮಗಳಲ್ಲ; ಎಲ್ಲಾ ವೃದ್ಧರಿಗಾಗಿ ತೆರೆದಂತಹವು ಎನ್ನುವ ಭಾವನೆ ಬಂದರೆ ಮಾತ್ರ ಎಲ್ಲಾ ವರ್ಗದ ವೃದ್ಧರೂ ಇಲ್ಲಿರಲು ಬರುತ್ತಾರೆ. ಇಲ್ಲದಿದ್ದರೆ ಅಭಿಮಾನಿಯಾದ ಯಾವ ವೃದ್ಧರೂ, ಅವರು ಎಷ್ಟೇ ಬಡವರಿರಲಿ, ಅನಾಥರಿರಲಿ ತಮ್ಮ ಮೇಲೆ ಈ ಅನಾಥನೆಂಬ, ಬಡವನೆಂಬ ಬಿರುದನ್ನು ತೆಗೆದುಕೊಳ್ಳಲು ಸಿದ್ಧರಿರುವುದಿಲ್ಲ. ಅಲ್ಲದೆ ಇಂತಹ ಧಾಮಗಳಲ್ಲಿ ತಮ್ಮ ವೃದ್ಧ ತಂದೆ ತಾಯಂದಿರನ್ನಿಡುವುದು ನಮಗೂ ಅಗೌರವ ತರುವ ವಿಷಯವೆಂದು ಈ ವೃದ್ಧರ ಮಕ್ಕಳೂ ಭಾವಿಸಿ ಅವರನ್ನು ಅಲ್ಲಿಡಲು ಒಪ್ಪಲಾರರು. ಆದ್ದರಿಂದ ಸರಕಾರ ಇಂತಹ ಧಾಮಗಳನ್ನು ಸೂಕ್ತವಾದ ಕಡೆ ತೆರೆದು, ಎಲ್ಲರಿಗೂ ಮುಕ್ತವಿಡಬೇಕು. ಕೊನೆಯದಾಗಿ ವೃದ್ಧರ ಬಗೆಗೆ ಸಮಾಜವು ಗೌರವ ಭಾವವನ್ನು ತಾಳುವಂತೆ ಮಾಡಬೇಕು. ಇಂದು ವೃದ್ಧರಿಗಿರುವ ಸ್ಥಾನಮಾನಗಳು, ಗೌರವಗಳು ಕರುಣೆಯಿಂದ, ಔದಾರ್ಯದಿಂದ, ಕುರುಡು ಪ್ರೀತಿಯಿಂದ ನೀಡಿದವುಗಳೇ ವಿನಹ ನಿಜವಾದ ಭಾವನೆಯಿಂದಲ್ಲ. ಇಂತಹ ನಿಜವಾದ ಭಾವನೆ ಮೂಡುವಂತೆ ಮಾಡಲು ಈಗ ಪ್ರಚಾರದಲ್ಲಿರುವ ವೃದ್ಧರ ಅದರಲ್ಲೂ ವೃದ್ಧೆಯರ ಬಗೆಗಿರುವ ಜನಪದ ಕತೆಗಳನ್ನು ತೆಗೆದು ಹಾಕಿ ವೃದ್ಧರೆಂದರೆ ಅನುಭವಿಗಳು, ಪ್ರೀತಿ ಪಾತ್ರರು, ದಯಾಳುಗಳು, ದೈವಭಕ್ತಿಯುಳ್ಳವರು. ತಮ್ಮ ತಾರುಣ್ಯದಲ್ಲಿ ಸಮಾಜದ ಹಿತಕ್ಕೆ ದುಡಿದವರು ಎನ್ನುವ ಭಾವನೆ ಬರುವ ಕತೆಗಳನ್ನು, ವಿಚಾರಗಳನ್ನು ಹೆಚ್ಚು ಹೆಚ್ಚು ಪ್ರಚಾರ ಮಾಡಬೇಕು. ಇದರಿಂದಾಗಿ ಸಮಾಜದಲ್ಲಿ ಒಂದು ಹೊಸ ವಾತಾವರಣವೇ ನಿರ್ಮಾಣವಾಗಿ ವೃದ್ಧರ ಸ್ಥಾನಮಾನಗಳೂ ಉತ್ತಮಗೊಳ್ಳುತ್ತವೆ.

● ●

ಶೈಕ್ಷಣಿಕ ಸಮಸ್ಯೆಗಳು : ಕರ್ನಾಟಕದ ಗ್ರಾಮವೊಂದರ ಅಧ್ಯಯನ*

● ಎ. ಕೆ. ಬರಡೋಲ

ಯಾವುದೇ ಮಾನವ ಗುಂಪಿನ ಆರ್ಥಿಕ, ಸಾಮಾಜಿಕ, ಬೌದ್ಧಿಕ ಹಾಗೂ ರಾಜಕೀಯ ವ್ಯವಸ್ಥೆ ಮುಂದುವರಿಯಲು ಅಥವಾ ಮುಂದಿನ ಪೀಳಿಗೆಗೆ ಅದನ್ನು ನೀಡಲು ಶಿಕ್ಷಣ ಅವಶ್ಯ. ಮಾನವ ಶಾಸ್ತ್ರಜ್ಞರಿಗೆ 'ಶಿಕ್ಷಣ' ಎನ್ನುವದು ಕೇವಲ ಶಾಲೆ-ಕಾಲೇಜಗಳಿಗೆ ಸೀಮಿತವಾಗಿರದೆ ಅದು ಸಾಂಸ್ಕೃತೀಕರಣ ಕ್ರಿಯೆ (process of enculturation) ಆಗಿರುತ್ತದೆ. ಅದು ಮಗುವಿಗೆ ಸಮಾಜದ ಒಬ್ಬ ಸಾಧಾರಣ ಹಾಗೂ ಹೊಣೆಗಾರ ಮಾನವನಾಗಲು ಸಹಾಯ ಮಾಡುತ್ತದೆ. ಸಾಂಸ್ಕೃತೀಕರಣವು ಜೀವನದ ಒಂದು ಪೂರ್ಣ ಕ್ರಿಯೆಯಾಗಿದೆ. ಆದರಿಂದ ಮನುಷ್ಯನು ತನ್ನ ಸಂಸ್ಕೃತಿಯ ನಡೆನುಡಿ ಹಾಗೂ ಪದ್ಧತಿಗಳನ್ನು, ಸಮಾಜದಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಮತ್ತು ತನ್ನದೇ ಆದ ಔದ್ಯೋಗಿಕ ಜಾಣಾಕ್ಷತೆಯನ್ನು ಕಲಿಯುತ್ತಾನೆ. ಶಿಕ್ಷಣದಿಂದ ಮಕ್ಕಳಿಗೆ ಸಮಾಜೀಕರಣ (socialization) ಆಗುತ್ತದೆ. ಆದರಿಂದ ಮಕ್ಕಳಲ್ಲಿ ಸಾಮಾಜಿಕ ಬದಲಾವಣೆ ಆಗುತ್ತದೆ. ಜೇಮ್ಸ್ ಕ್ವಿಲ್ಲನ್ (೧೯೬೩) ಹೇಳುವಂತೆ "ಶಿಕ್ಷಣವು ಒಂದು ಸಾಂಸ್ಕೃತಿಕ ಕ್ರಿಯೆ. ಅದರಿಂದ ಜನರು ತಮ್ಮ ಸಂಸ್ಕೃತಿಯು ಮುಂದೆ ಸಾಗಲು ಅವಶ್ಯವಿರುವ ಸ್ವಭಾವವನ್ನು ಕಲಿಯುತ್ತಾರೆ." ಮನುಷ್ಯನಿಗೆ ಶಿಕ್ಷಣವನ್ನು ಒದಗಿಸುವ ಅಂಗಗಳಲ್ಲಿ ಶಾಲೆಯೂ ಒಂದು. ಶಾಲೆಯಲ್ಲಲ್ಲದೆ ಮಾನವನಿಗೆ ಸಮಾಜದ ಬೇರೆ ಅಂಗಗಳಲ್ಲಿಯೂ ಶಿಕ್ಷಣ ದೊರೆಯುತ್ತದೆ. ಶಿಕ್ಷಣ ಕೊಡುವದು ಕೇವಲ ಶಾಲೆಗಳಿಂದ ಮಾತ್ರ ಸಾಧ್ಯವೆಂದು ತಿಳಿಯುವದು ತಪ್ಪು. ಒಂದು ವೇಳೆ ಹಾಗೆ ತಿಳಿದರೆ. ಕೇವಲ ಅಶಿಕ್ಷಿತ ಜನರು, ಅಲೆಮಾರಿ ಜನಾಂಗಗಳು, ಹಾಗೂ ಶಾಲೆ ಇಲ್ಲದಲ್ಲಿ ವಾಸಮಾಡಿಕೊಂಡಿರುವ ಜನರು ತಮ್ಮ ಮಕ್ಕಳಿಗೆ ಶಿಕ್ಷಣವನ್ನೇ ಕೊಡುವದಿಲ್ಲವೆಂದು ಅರ್ಥವಾಗಬಹುದು. ಅವರು

---

* ಪ್ರಸ್ತುತ ಪ್ರಬಂಧಕ್ಕೆ ಬೇಕಾದ ವಿಷಯವನ್ನು ಕಲೆಹಾಕುವಲ್ಲಿ ನೆರವಾದ ಡಾ. (ಶ್ರೀಮತಿ) ಮಹಾಲೆಯವರಿಗೂ ಮತ್ತು ಈ ಲೇಖನವನ್ನು ಬರೆಯುವಲ್ಲಿ ನೆರವಾದ ಡಾ. ಕೆ.ಜಿ. ಗುರುಮೂರ್ತಿ, ಡಾ. ಎಸ್. ಕೆ. ಕಡೆತೋಟದ ಹಾಗೂ ಶ್ರೀ ಬಿ. ಬಿ. ಬಿರಾದಾರ ಅವರಿಗೂ ಲೇಖಕರು ಆಭಾರಿಯಾಗಿದ್ದಾರೆ.

ತಮ್ಮ ಉದ್ಯೋಗದ ಶಿಕ್ಷಣವನ್ನು ತಮ್ಮ ಮನೆಯಲ್ಲಿಯೇ ಕೊಡುತ್ತಾರೆ. ಅದೂ ಒಂದು ರೀತಿಯ ಶಿಕ್ಷಣವೇ ಸರಿ.

ಶಿಕ್ಷಣತಜ್ಞರೂ ಹಾಗೂ ಮಾನವ ಶಾಸ್ತ್ರಜ್ಞರು. ಶಾಲಾ (ಔಪಚಾರಿಕ) ಶಿಕ್ಷಣವನ್ನು ಅಭ್ಯಸಿಸಿದ್ದಾರೆ. ಇವರಿಬ್ಬರಲ್ಲಿ ಕೆಲವು ವೈವಿಧ್ಯತೆಗಳು ಕಂಡು ಬರುತ್ತವೆ. ಶಿಕ್ಷಣತಜ್ಞರು ಅದನ್ನು ಸಾಮಾಜಿಕ ಹಿನ್ನೆಲೆ ಇಲ್ಲದೇ ಅಭ್ಯಸಿಸುತ್ತಾರೆ. ಮಾನವ ಶಾಸ್ತ್ರಜ್ಞರು ಔಪಚಾರಿಕ ಶಿಕ್ಷಣ ಪದ್ಧತಿಯನ್ನು ಅಭ್ಯಸಿಸುವಾಗ ಅದರ ಮೇಲೆ ಪರಿಣಾಮ ಬೀರುವಂತಹ ಸಾಂಸ್ಕೃತಿಕ ಅಂಶಗಳಾದ ಕೌಟುಂಬಿಕ ಹಿನ್ನೆಲೆ. ಜಾತಿ. ಭಾವನೆಗಳು (feelings), ಮೌಲ್ಯಗಳು (values), ಸಾಮಾಜಿಕ ರಚನೆ, (Social structure) ಆರ್ಥಿಕ ಪರಿಸ್ಥಿತಿ. ಇತ್ಯಾದಿಗಳನ್ನು ಗಮನಕ್ಕೆ ತಂದುಕೊಳ್ಳುತ್ತಾರೆ. ಇವೆಲ್ಲವುಗಳು ಔಪಚಾರಿಕ ಶಿಕ್ಷಣದ ಮೇಲೆ ಒಂದಿಲ್ಲೊಂದು ರೀತಿಯಲ್ಲಿ ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷವಾಗಿ ಪರಿಣಾಮ ಬೀರುತ್ತವೆ.

ಮಾನವಶಾಸ್ತ್ರಜ್ಞರು ಔಪಚಾರಿಕ ಶಿಕ್ಷಣವನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವಾಗ ಜನರ ಉಚ್ಚ ಶಿಕ್ಷಣವನ್ನಷ್ಟೇ ಅಲ್ಲದೇ ಪ್ರಾಥಮಿಕಪೂರ್ವ. ಪ್ರಾಥಮಿಕ. ಮಾಧ್ಯಮಿಕ. ಹಾಗೂ ವೃತ್ತಿಶಿಕ್ಷಣ ಎಲ್ಲವುಗಳನ್ನು ಅಭ್ಯಸಿಸುತ್ತಾರೆ. ಅದರ ಪ್ರಗತಿ ಅಥವಾ ಅಪ್ರಗತಿಯ ಕಾರಣಗಳನ್ನು ಕಂಡು ಹಿಡಿದು ಸಮಾಜದ ಮೇಲೆ ಅದರ ಪರಿಣಾಮವನ್ನು ವಿಶ್ಲೇಷಿಸುತ್ತಾರೆ.

ಔಪಚಾರಿಕ ಶಿಕ್ಷಣ ಎಂದರೆ ವರ್ಗದ ಕೋಣೆಯಲ್ಲಿ, ಪ್ರಾಯೋಗಿಕ ಶಾಲೆಯಲ್ಲಿ ಹಾಗೂ ಆಟದ ಬಯಲಿನಲ್ಲಿ ಕೊಟ್ಟು ಕಾಯದೆ ತತ್ವಗಳ ಮುಖಾಂತರ ನಡೆಸಿಕೊಂಡು ಹೋಗುವ ಶಿಕ್ಷಣ. ಅದು ಯಶಸ್ವಿ ಹಾಗೂ ಪರಿಣಾಮಕಾರಿ ಆಗದ್ದಕ್ಕೆ ಪ್ರತಿಯೊಂದು ಗ್ರಾಮವು ಸಾಮಾಜಿಕ ಹಿನ್ನೆಲೆಯಲ್ಲಿ ತನ್ನದಾದ ಸಮಸ್ಯೆಗಳನ್ನು ಹೊಂದಿದೆ. ಪ್ರಸ್ತುತ ಪ್ರಬಂಧದಲ್ಲಿ ಒಂದು ಗ್ರಾಮದ ಔಪಚಾರಿಕ ಶೈಕ್ಷಣಿಕ ಸಮಸ್ಯೆಗಳನ್ನು ಅಭ್ಯಸಿಸಲಾಗಿದೆ. ಔಪಚಾರಿಕ ಶಿಕ್ಷಣ ಎಂಬ ಅರ್ಥಕೊಡಲು ಇಲ್ಲಿ 'ಶಿಕ್ಷಣ' ಎಂಬ ಶಬ್ದ ಬಳಸಲಾಗಿದೆ.

ಪ್ರಸ್ತುತ ಪ್ರಬಂಧಕ್ಕೆ ಬೇಕಾದ ವಿಷಯವನ್ನು ಹಾಸನ ಜಿಲ್ಲೆಯ ಶಾಂತಿಗ್ರಾಮ ಎಂಬ ಹಳ್ಳಿಯಿಂದ ಸಂಗ್ರಹಿಸಲಾಗಿದೆ. ಶಾಂತಿಗ್ರಾಮವು ಹಾಸನದಿಂದ ಹದಿಮೂರು ಕಿ. ಮೀ. ದೂರದಲ್ಲಿ ನಾಲ್ವತ್ತೆಂಟನೆಯ ನಂಬರಿನ ರಾಷ್ಟ್ರೀಯ ಹೆದ್ದಾರಿಯಾದ ಬೆಂಗಳೂರು–ಮಂಗಳೂರು ರಸ್ತೆಗೆ ಹೊಂದಿಕೊಂಡಿರುತ್ತದೆ. ಈ ಗ್ರಾಮವು ಹೋಬಳಿಯ ಕೇಂದ್ರ ಸ್ಥಳವಾಗಿದೆ. ಈ ಹೋಬಳಿಗೆ ಅಮ್ಮನಗುಡಿ ಕೊಪ್ಪಲು. ಕೆರೆಮುಂದಿನ ಕೊಪ್ಪಲು, ದ್ಯಾವಿಹಳ್ಳಿ. ತ್ಯಾವಿಹಳ್ಳಿ. ಒಡ್ಡರ ಕೊಪ್ಪಲು, ಅಡ್ಡಿಹಳ್ಳಿ, ಮತ್ತು ಬಂಡಿಹಳ್ಳಿ ಈ ಗ್ರಾಮಗಳು ಸೇರಿಕೊಂಡಿರುತ್ತವೆ. ಶಾಂತಿಗ್ರಾಮಕ್ಕೆ ತನ್ನದೇ ಆದ ಪಂಚಾ

ಯುತಿ ಸಮಿತಿ ಇದೆ. ಸಮೀಪದ ಹಳ್ಳಿಗರ ಅನುಕೂಲಕ್ಕಾಗಿ ಇಲ್ಲಿ ಪ್ರತಿ ರವಿವಾರ ಸಂತೆ ನೆರೆಯುತ್ತದೆ. ಮಾಧ್ಯಮಿಕ ಶಾಲೆಯವರೆಗೆ ವಿದ್ಯಾಸಂಸ್ಥೆಗಳನ್ನು ಹೊಂದಿದ ಈ ಗ್ರಾಮವು ಸುತ್ತುಮುತ್ತಲಿನ ಹಳ್ಳಿಗಳಿಗೆ ಶೈಕ್ಷಣಿಕ ಕೇಂದ್ರವೂ ಆಗಿರುತ್ತದೆ. ಇಲ್ಲಿ ವರ್ಷದಲ್ಲಿ ಸರಾಸರಿ ನಾಲ್ವತ್ತು ಅಂಗುಲ ಮಳೆ ಬೀಳುತ್ತದೆ. ಎರಡು ದೊಡ್ಡ ಕೆರೆಗಳು ಸೇರಿದಂತೆ ಈ ಊರಲ್ಲಿ ಒಟ್ಟು ಹತ್ತು ಕೆರೆಗಳಿವೆ. ದೊಡ್ಡ ಕೆರೆಗಳಲ್ಲಿಯ ನೀರನ್ನು ಗ್ರಾಮಸ್ಥರು ವ್ಯವಸಾಯಕ್ಕೆ ಉಪಯೋಗಿಸಿದರೆ, ಉಳಿದ ಕೆರೆಗಳಲ್ಲಿಯ ನೀರನ್ನು ದನಕರುಗಳಿಗೆ ಮತ್ತು ಬಟ್ಟೆ ಒಗೆಯಲು ಉಪಯೋಗಿಸುತ್ತಾರೆ. ಎಲ್ಲರೂ ಕುಡಿಯಲು ಬಾವಿಯ ನೀರನ್ನು ಮಾತ್ರ ಬಳಕೆ ಮಾಡುತ್ತಾರೆ. ಈ ಗ್ರಾಮದಲ್ಲಿ ಎಂಟು ಸಾರ್ವಜನಿಕ ಬಾವಿಗಳಿದ್ದು ಇವು ಗ್ರಾಮದ ವಿವಿಧ ಸ್ಥಳಗಳಲ್ಲಿವೆ. ಹರಿಜನರಿಗೆಂದೇ ಅವರ ಕೇರಿಯಲ್ಲಿ ಪ್ರತ್ಯೇಕ ಬಾವಿಯಿದೆ. ಉಳಿದ ಬಾವಿಗಳಲ್ಲಿ ಅವರಿಗೆ ಪ್ರವೇಶವಿಲ್ಲವಾದ್ದರಿಂದ ನೀರು ಬೇಕಾದರೆ ಮೇಲಿನ ಜಾತಿಯವರಿಂದ ಪಡೆದುಕೊಳ್ಳುತ್ತಾರೆ. ಸ್ಥಿತಿವಂತ ಕುಟುಂಬಗಳು ತಮ್ಮವೇ ಆದ ಸ್ವಂತ ಬಾವಿಗಳನ್ನು ಹೊಂದಿವೆ. ಊರಿನ ಒಟ್ಟು ಭೂಮಿಯ ಕ್ಷೇತ್ರ ೩೧೪೨ ಎಕರೆ ಇದ್ದು. ಇದರ ೬೧೧ ಎಕರೆಯಲ್ಲಿ ನೀರಾವರಿ ಸಹಾಯದಿಂದ ಹಾಗೂ ೧೪೮೨ಎಕರೆಯಲ್ಲಿ ಮಳೆಯ ಸಹಾಯದಿಂದ ಬೆಳೆಯನ್ನು ತೆಗೆಯುತ್ತಾರೆ. ಇನ್ನುಳಿದ ಕೆಲವು ಎಕರೆಯಲ್ಲಿ ಊರು ಇದ್ದು, ಉಳಿದುದೆಲ್ಲ ಬೀಳುಬಿದ್ದಿದೆ. ಇಲ್ಲಿಯ ಮುಖ್ಯ ಬೆಳೆಗಳೆಂದರೆ ರಾಗಿ. ಭತ್ತ. ಜೋಳ ಹಾಗೂ ತೆಂಗು. ಇಲ್ಲಿಯ ಜನರ ಪ್ರಧಾನ ಆಹಾರ ರಾಗಿ. ಒಕ್ಕಲುತನವೇ ಇಲ್ಲಿಯ ಮುಖ್ಯ ಉದ್ಯೋಗವಾದರೂ ಭೂಮಿ ಇಲ್ಲದವರು ಕೂಲಿ, ನೌಕರಿ ಹಾಗೂ ವ್ಯಾಪಾರಮಾಡಿ ಜೀವನ ಸಾಗಿಸುತ್ತಾರೆ. ಈ ಗ್ರಾಮಕ್ಕಿರುವ ಅನುಕೂಲತೆಗಳಲ್ಲಿ ಸರಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವು ಒಂದು. ಇದರ ಉಪಯೋಗವನ್ನು ಸುತ್ತುಮುತ್ತಲಿನ ಹಳ್ಳಿಗರು ಪಡೆಯುತ್ತಾರೆ. ಇಲ್ಲಿ ಸಬ್ ಪೋಸ್ಟ್ ಆಫೀಸ್ ಮಟ್ಟದ ಸೌಕರ್ಯವಿದ್ದು ಜೊತೆಗೆ ಟೆಲಿಫೋನಿನ ಅನುಕೂಲತೆಯೂ ಇದೆ. ಯಂತ್ರನಡೆಸಲು. ಬೀಸಲು. ನೀರೆತ್ತಲು. ಮನೆಯ ಹಾಗೂ ಬೀದಿಯ ದೀಪ ಉರಿಸಲು ವಿದ್ಯುತ್‌ಶಕ್ತಿಯನ್ನು ಬಳಸಲಾಗುತ್ತದೆ. ಇಲ್ಲಿ ಹಿಂದೂ, ಜೈನ. ಮುಸಲ್ಮಾನ್ ಹಾಗೂ ಕ್ರಿಶ್ಚಿಯನ್ ಧರ್ಮಕ್ಕೆ ಸೇರಿದ ಜನರು ವಾಸವಾಗಿದ್ದಾರೆ. ಈ ಗ್ರಾಮದಲ್ಲಿ ಒಟ್ಟು ಹದಿಮೂರು ಸಣ್ಣ ದೊಡ್ಡ ದೇವಾಲಯಗಳಿದ್ದು ಇವು ಗ್ರಾಮ ಜೀವನಕ್ಕೆ ಸಹಾಯಮಾಡಿವೆ.

ಶಾಂತಿಗ್ರಾಮದಲ್ಲಿ ಬ್ರಾಹ್ಮಣ. ಜೈನ. ಲಿಂಗಾಯತ. ಒಕ್ಕಲಿಗ, ಶೆಟ್ಟಿಗ, ವಿಶ್ವಕರ್ಮ. ಹಜಾಮ. ಕುರುಬ. ಬೆಸ್ತ. ಮಡಿವಾಳ, ಗಾಣಿಗ. ನಾಯಕ. ಕೊರ್ಚ. ಕ್ರಿಶ್ಚಿಯನ್. ಮುಸಲ್ಮಾನ್ ಮತ್ತು ಹರಿಜನ ಹೀಗೆ ಒಟ್ಟು ಹದಿನಾರು ಜಾತಿಗಳಿವೆ. ಒಕ್ಕಲಿಗರು ಮತ್ತು ಶೆಟ್ಟಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಗ್ರಾಮದಲ್ಲಿ ಒಟ್ಟು ೩೫೭ ಕುಟುಂಬಗಳಿದ್ದು ಜನಸಂಖ್ಯೆ ೨೧೪೨ ಇದೆ. ಗ್ರಾಮದ ವಾಸಸ್ಥಾನವು ಜಾತಿಗಳ

ಆಧಾರದ ಮೇಲೆ ಓಣಿಗಳಾಗಿ ವಿಭಾಗಿಸಲ್ಪಟ್ಟಿವೆ. ಬ್ರಾಹ್ಮಣರು, ಲಿಂಗಾಯತರು, ಹಾಗೂ ಜೈನರನ್ನುಳಿದು ಎಲ್ಲರೂ ಮಾಂಸಾಹಾರಿಗಳಾಗಿದ್ದಾರೆ. ಹರಿಜನರು ಊರ ಹೊರಗೆ ವಾಸವಾಗಿದ್ದಾರೆ. ಊರಲ್ಲಿಯ ಬಹುಪಾಲು ವಿದ್ಯಾವಂತರು ಜೈನ ಹಾಗೂ ಬ್ರಾಹ್ಮಣ ಗುಂಪಿಗೆ ಸೇರಿದವರಾಗಿದ್ದಾರೆ. ಗ್ರಾಮದಿಂದ ಹೊರಗೆ ಹೋಗಿ ನೌಕರಿ ಮಾಡುವವರಲ್ಲಿ ಬ್ರಾಹ್ಮಣರೇ ಹೆಚ್ಚು. ಅವರು ಹೊರಗೆ (ಬೇರೆ ಸ್ಥಳಗಳಲ್ಲಿ) ನೌಕರಿ ಮಾಡುತ್ತಿರುವದರಿಂದ, ಗುರುಮೂರ್ತಿ (೧೯೭೭) ಹೇಳುವಂತೆ ಹೊರಪ್ರಪಂಚದೊಂದಿಗೆ ಸಂಪರ್ಕಹೊಂದಿ ತಪ್ಪು ಮನೋಭಾವನೆಯನ್ನು ವಿಶಾಲಪಡಿಸಿಕೊಂಡಿದ್ದಾರೆ. ಆದ್ದರಿಂದ ಇಲ್ಲಿಯ ಜೀವನದ ಎಲ್ಲ ರಂಗಗಳಲ್ಲಿಯೂ ಇವರ ಪ್ರಭಾವ ಕಂಡುಬರುತ್ತದೆ. ಈ ಗ್ರಾಮದ ಸಾಕ್ಷರತೆ (literacy) ಪ್ರತಿಶತ ೨೬.೭೮. ಇದೆ. ಇಲ್ಲಿಯ ೫೨ ಜನ ತರುಣ–ತರುಣಿಯರು ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಊರಲ್ಲಿ ಈಗಾಗಲೇ ಡಿಗ್ರಿ ಪಡೆದ ೧೦ ಜನರಿದ್ದಾರೆ.

ಇಲ್ಲಿ ಸರಕಾರಿ ಶಿಶುವಿಹಾರ, ಮಹಿಳಾಮಂಡಳ ಶಿಶುವಿಹಾರ, ಗಂಡುಮಕ್ಕಳ, ಕಿರಿ ಪ್ರಾಥಮಿಕ ಶಾಲೆ, ಹೆಣ್ಣುಮಕ್ಕಳ ಕಿರಿ ಪ್ರಾಥಮಿಕ ಶಾಲೆ, ಹಿರಿ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆ, ವಾಣಿಜ್ಯ ಸಂಸ್ಥೆ ಮತ್ತು ಮಹಿಳಾಮಂಡಳ ಹೊಲಿಗೆ ಶಾಲೆ ಹೀಗೆ ಶೈಕ್ಷಣಿಕ ಸಂಸ್ಥೆಗಳಿವೆ.

ಶಿಶುವಿಹಾರ ಶಿಕ್ಷಣ : ಶಾಂತಿಗ್ರಾಮದಲ್ಲಿ ಎರಡು ಶಿಶುವಿಹಾರಗಳಿವೆ. ಇದರಲ್ಲಿ ಒಂದು ಮಹಿಳಾಮಂಡಳದ ಆಶ್ರಯದಲ್ಲಿ ಹಾಗೂ ಮೇಲ್ವಿಚಾರಣೆಯಲ್ಲಿದ್ದು ಇನ್ನೊಂದು ಸರಕಾರದಿಂದ ನಡೆಯುತ್ತಿದೆ. ಹರಿಜನ ಜಾತಿಯ ಮಕ್ಕಳು ಮಾತ್ರ ಸರಕಾರಿ ಶಿಶುವಿಹಾರಕ್ಕೆ ಹೋಗುತ್ತಿದ್ದು ಹರಿಜನೇತರ ಮಕ್ಕಳು ಮಹಿಳಾಮಂಡಳ ಶಿಶುವಿಹಾರಕ್ಕೆ ಹೋಗುತ್ತಾರೆ.

ಮಹಿಳಾಮಂಡಳದ ಶಿಶುವಿಹಾರಕ್ಕೆ ವಾರ್ಷಿಕ ಸಹಾಯಧನ ೧೨೦೦ ರೂ., ಇದ್ದು ಇನ್ನುಳಿದ ವೆಚ್ಚವನ್ನು ಊರಿನವರೇ ವಹಿಸಿಕೊಳ್ಳುತ್ತಾರೆ. ಹತ್ತನೇ ತರಗತಿ ಪಾಸಾದ ಒಬ್ಬ ಸ್ತ್ರೀಯನ್ನು ಇಲ್ಲಿ ಶಿಕ್ಷಕಿ ಎಂದು ನೇಮಿಸಿಕೊಳ್ಳಲಾಗಿದೆ. ಅವರಿಗೆ ತಿಂಗಳಿಗೆ ೮೦ ರೂ. ವೇತನವನ್ನು ನೀಡಲಾಗುತ್ತದೆ. ಅವರು ನರ್ಸರಿ ಶಿಕ್ಷಣತರಬೇತಿ ಹೊಂದಿಲ್ಲ. ಕಡಿಮೆ ವೇತನ ಕೊಡುವದರಿಂದ ತರಬೇತಿಹೊಂದಿದ ಶಿಕ್ಷಕರು ಯಾರೂ ಬರಲು ಒಪ್ಪುವದಿಲ್ಲ. ಆರ್ಥಿಕ ಅಸಹಾಯಕತೆ ಇರುವದರಿಂದ, ತರಬೇತಿಹೊಂದಿದ ಶಿಕ್ಷಕರಿಲ್ಲದೇ ಶಿಶುವಿಹಾರವನ್ನು ನಡೆಯಿಸಲಾಗುತ್ತದೆ. ಕಡಿಮೆ ಸಹಾಯಧನವು ಇಲ್ಲಿಯ ಶಿಕ್ಷಣದ ಒಂದು ಸಮಸ್ಯೆ.

ಮಹಿಳಾಮಂಡಳದ ಶಿಶುವಿಹಾರವು ಗ್ರಾಮಪಂಚಾಯತಿಯ ಒಂದು ಹಳೆಯ ಕಟ್ಟಡದಲ್ಲಿ ತನ್ನ ಕಾರ್ಯ ನಿರ್ವಹಿಸುತ್ತದೆ. ಇದರಲ್ಲಿ ಒಂದು ದೊಡ್ಡ ಕೋಣೆ

ಹಾಗೂ ಎರಡು ಚಿಕ್ಕ ಕೋಣೆಗಳಿವೆ. ವಿದ್ಯಾಕೇಂದ್ರಕ್ಕಾಗಿ ಇದನ್ನು ಕಟ್ಟಿಸಿರುವುದೇ ಅಲ್ಲವಾದ್ದರಿಂದ ಇಲ್ಲಿ ಬೆಳಕು ಅಷ್ಟು ಸರಿಯಾಗಿ ಬೀಳುವದಿಲ್ಲ. ಕಟ್ಟಡವು ಭದ್ರವಾಗಿಲ್ಲ. ಇದರಿಂದ ಇಲ್ಲಿ ಶಿಶುವಿಹಾರ ನಡೆಸಲು ಅನುಕೂಲ ವಾತಾವರಣವಿಲ್ಲ. ಮಕ್ಕಳಿಗೆ ಹೊರಗೆ ಆಡಲು ಆಟದ ಬಯಲು ಇಲ್ಲ. ಅವುಗಳ ಬೌದ್ಧಿಕಮಟ್ಟ ಹೆಚ್ಚಿಸಲು ಅವಶ್ಯವಾದ ಆಟಿಗೆ ಸಾಮಾನುಗಳು. ಚಿತ್ರಪಟಗಳು ಹಾಗೂ ಇತರ ಉಪಕರಣಗಳು ಕಡಿಮೆ ಇರುವದರಿಂದ ಮಕ್ಕಳ ಬೌದ್ಧಿಕ ಬೆಳವಣಿಗೆ ಹೆಚ್ಚು ಆಗದಿರುವದು ಸಹಜವಾಗಿದೆ.

ಇಲ್ಲಿ ಪ್ರತಿ ಮಗುವಿಗೆ ತಿಂಗಳಿಗೆ ೨೫ ಪೈಸೆ ಫೀ ನಿಗದಿ ಪಡಿಸಲಾಗಿದೆ. ಶಿಕ್ಷಣಕ್ಕಾಗಿ ಅಷ್ಟು ಹಣ ವೆಚ್ಚ ಮಾಡಲು ಪಾಲಕರು ಹೆಚ್ಚಿನ ಸಂಖ್ಯೆಯಲ್ಲಿ ಸಿದ್ಧರಿಲ್ಲ. ಮತ್ತು ಶಾಲೆಯಲ್ಲಿ ಮಕ್ಕಳಿಗೆ ಫೀ ತೆಗೆದುಕೊಂಡು ಬರಲು ಹೇಳಿದರೆ ಹಾಗೂ ಅವರಿಗೆ ಸರಿಯಾಗಿ ಅಲ್ಪೋಪಹಾರ ಕೊಡದಿದ್ದರೆ ತಮ್ಮ ಮಕ್ಕಳನ್ನು ಶಿಶುವಿಹಾರಕ್ಕೆ ಕಳಿಸಲು ಹಿಂಜರಿಯುತ್ತಾರೆ. ಒಟ್ಟಿನಲ್ಲಿ ತಮ್ಮ ಮಕ್ಕಳನ್ನು ಶಿಶುವಿಹಾರಕ್ಕೆ ಕಳಿಸುವಂತಹ ಜನರು ಕಡಿಮೆ. ಆದರೂ ಕೆಲವು ಜನ ತಮ್ಮ ಮಕ್ಕಳಿಗೆ ಶಿಶುವಿಹಾರ ಶಿಕ್ಷಣ ಅವಶ್ಯ ಎಂಬುದನ್ನು ತಿಳಿದಿದ್ದಾರೆ. ಸರಕಾರದಿಂದ ನಿಗದಿಪಡಿಸಿದ ಮಕ್ಕಳ ಸಂಖ್ಯೆ ಇವರಲ್ಲಿ ೩೦. ಆದರೆ ೫೦ ರಿಂದ ೬೫ರವರೆಗೆ ಮಕ್ಕಳು ಶಿಶುವಿಹಾರಕ್ಕೆ ಬರುತ್ತಾರೆ. ಹಣ್ಣು ಮುಂತಾದ ಅಲ್ಪೋಪಹಾರ ಕೊಡಲು ೩೦ ಮಕ್ಕಳಿಗೆ ಬರುವ ಸಹಾಯ ಧನದಲ್ಲೇ ಶಿಶುವಿಹಾರಕ್ಕೆ ಬರುವ ಎಲ್ಲ ಮಕ್ಕಳಿಗೂ ಹಂಚಲಾಗುತ್ತದೆ. ಅಲ್ಪೋಪಹಾರವನ್ನು ವಾರದಲ್ಲಿ ಎರಡು ಅಥವಾ ಮೂರು ದಿವಸ ಮಾತ್ರ ಕೊಡಲಾಗುತ್ತದೆ. ಅಲ್ಪೋಪಹಾರ ಕೊಟ್ಟ ದಿವಸ. ಇನ್ನುಳಿದ ದಿನಕ್ಕಿಂತಲೂ ಮಕ್ಕಳ ಸಂಖ್ಯೆ ಹೆಚ್ಚು ಇರುತ್ತದೆ. ಈ ಅಲ್ಪೋಪಹಾರಕ್ಕಾಗಿ ಹಾಗೂ ಶಿಶುವಿಹಾರ ಶಿಕ್ಷಕಿಯ ವೇತನಕ್ಕಾಗಿ ಹಣ ಇಲ್ಲದ ಪ್ರಸಂಗದಲ್ಲಿ ಮಹಿಳಾ ಮಂಡಳದ ಅಧ್ಯಕ್ಷರು ತಮ್ಮ ಸ್ವಂತ ಹಣ ವಿನಿಯೋಗಿಸಿ ಸರಕಾರದಿಂದ ಸಹಾಯ ಧನ ಬಂದನಂತರ ತಮ್ಮ ಹಣವನ್ನು ಹಿಂದಕ್ಕೆ ಪಡೆದ ನಿದರ್ಶನಗಳಿವೆ. ಆದರೆ ಗ್ರಾಮದ ಜನರು ತಪ್ಪು ಭಾವನೆಯಿಂದ ಅವರು ಹಣವನ್ನು ದುರುಪಯೋಗ ಮಾಡಿಕೊಂಡಿರುವರೆಂದು ಆಪಾದಿಸಿದ್ದುಂಟು. ಇದಕ್ಕೆ ಅನೇಕ ನಿದರ್ಶನಗಳು ಆಗಿ ಹೋದದ್ದು ತಿಳಿದು ಬಂದಿದೆ. ಶಿಕ್ಷಣ ಸಂಸ್ಥೆಯನ್ನು ನೋಡಿಕೊಳ್ಳುವಂತಹ ಸಮಾಜ ಕಾರ್ಯವನ್ನು ಜವಾಬ್ದಾರಿಯಿಂದ ಮಾಡುವ ಜನ ಪ್ರತಿನಿಧಿಗಳನ್ನಾಗಲೂ ಕೂಡಾ ಜನರು ಅವರನ್ನು ಆಪಾದಿಸುವದು ಒಂದು ವಿಷಾದಕರ ಸಂಗತಿಯೇ ಸರಿ.

ಹದಿಮೂರು ಜನ ಮಹಿಳೆಯರಿರುವ ಸಮಿತಿಯು ಇದರ ಮೇಲ್ವಿಚಾರಣೆಯ ಕಾರ್ಯನಿರ್ವಹಿಸುತ್ತದೆ. ಇದು ಪ್ರಾಥಮಿಕ ಶಾಲೆಗಳ ಮೇಲ್ವಿಚಾರಣೆಗಿರುವ ಶಾಲಾ ಸುಧಾರಣಾ ಸಮಿತಿಗೆ ಸರಿಸಮಾನವಾದುದು. ಯಾವುದೇ ಮಹತ್ವದ ವಿಷಯದ ಬಗ್ಗೆ ತೀರ್ಮಾನ ಕೈಕೊಳ್ಳುವಾಗ ಈ ಸಮಿತಿಯು ಸಭೆ ಕರೆದು ಚರ್ಚಿಸ

ಬೇಕಾದಷ್ಟು ನಿಯಮವಾದುದರಿಂದ ಅದರ ಪ್ರಕಾರ ಸಭೆ ಕರೆಯಲಾಗುತ್ತದೆ. ಸದಸ್ಯರ ಮನೆಗಳಿಗೆ ಹೋಗಿ ಅವರಿಗೆ ಮೀಟಿಂಗ್ ಬಗ್ಗೆ ತಿಳಿಸಿ ಅವರ ಸಹಿ ತೆಗೆದುಕೊಂಡು ಬರಲಾಗುತ್ತದೆ. ಆದರೆ ಸಾಮಾನ್ಯವಾಗಿ ಅವರು ಬಹಳಷ್ಟು ಸಮಯದಲ್ಲಿ ಸಭೆಗೆ ಬರುವದಿಲ್ಲ. ಅದನ್ನು ಮಹಿಳಾ ಮಂಡಳದ ಅಧ್ಯಕ್ಷರು ಕೆಲವೇ ಸದಸ್ಯರೊಂದಿಗೆ ಮಾಡಿ ನಂತರ ನಿರ್ಣಯಗಳಿಗೆ ಅವರ ಸಹಿ ತೆಗೆದುಕೊಳ್ಳುತ್ತಾರೆ. ನಿಜವಾಗಿ ನೋಡಿದರೆ ಇದು ಹೀಗಾಗಬಾರದಾದರೂ ಅಧ್ಯಕ್ಷರ ಹೇಳಿಕೆಯ ಪ್ರಕಾರ ಇದು ಅನಿವಾರ್ಯವಾಗಿದೆ. ಸದಸ್ಯರು ತಮ್ಮ ಜವಾಬ್ದಾರಿಯನ್ನು ಚೆನ್ನಾಗಿ ಅರಿತಿದ್ದರೂ ಕೂಡ ಸಭೆಯಲ್ಲಿ ಭಾಗವಹಿಸುವಷ್ಟು ಸಮಯ ವ್ಯಯಮಾಡಲು ಅವರು ಸಿದ್ಧರಿಲ್ಲ. ಸಮಯ ಒಂದು ಕಾರಣವಾದರೆ ಅವರು ಅಧ್ಯಕ್ಷರ ಮೇಲಿಟ್ಟ ನಂಬಿಕೆ ಇನ್ನೊಂದು ಕಾರಣವಾಗಿರುತ್ತದೆ.

ಸಿಬ್ಬಂದಿಯ ನೇಮಣೂಕಿಯಲ್ಲಿ ಅಧ್ಯಕ್ಷರ ಜಾತಿಗೆ ಪ್ರಾಧಾನ್ಯತೆ ದೊರೆತದ್ದು ಮಹಿಳಾ ಮಂಡಳ ಶಿಶುವಿಹಾರದಲ್ಲಿ ಕಂಡು ಬರುತ್ತದೆ. ಇದಕ್ಕೆ ಕಾರಣವೆಂದರೆ ಸಂಸ್ಥೆ ಅವರ ತ್ಯಾಗದಿಂದ ಬೆಳೆದುಕೊಂಡು ಬಂದಿದೆ. ಆದ್ದರಿಂದ ತಮ್ಮ ಜನಾಂಗದವರನ್ನು ನೇಮಿಸಿಕೊಳ್ಳುವುದನ್ನು ಅವರು ಸಮರ್ಥಿಸಿಕೊಳ್ಳುತ್ತಾರೆ.

ಸರಕಾರಿ ಶಿಶುವಿಹಾರವು ಸಮಾಜ ಕಲ್ಯಾಣ ಇಲಾಖೆಯಿಂದ ಸ್ಥಾಪಿತವಾದ ಮಹಿಳಾ ಕಲ್ಯಾಣ ಕೇಂದ್ರದ ಅಂಗವಾಗಿ ನಡೆಯುತ್ತದೆ. ಇದು ಹಿಂದುಳಿದ ವರ್ಗದವರಿಗಾಗಿಯೇ ಸ್ಥಾಪಿತವಾಗಿದ್ದು ಹರಿಜನರ ವಸತಿಗೃಹಗಳ ಹತ್ತಿರ ಇರುವದರಿಂದ ಅವರಿಗೆ ಹೆಚ್ಚು ಅನುಕೂಲವಾಗಿದೆ. ಮಹಿಳೆಯರಿಗೆ ಹೊಲಿಗೆ ಶಿಕ್ಷಣ ಕೊಡುವದು, ಹಾಗೂ ಚಿಕ್ಕ ಮಕ್ಕಳ ಪಾಲನೆ ಮಾಡುವದರ ಜೊತೆಗೆ ಶಿಶುವಿಹಾರ ನಡೆಸುವದು ಈ ಕೇಂದ್ರದ ಉದ್ದೇಶವಾಗಿದೆ. ಈ ಸದ್ಯ ಇಲ್ಲಿ ಮಕ್ಕಳ ಪಾಲನೆ ಮಾಡುವದರ ಜೊತೆಗೆ ಶಿಶುವಿಹಾರವನ್ನು ನಡೆಯಿಸಲಾಗುತ್ತದೆ. ಮಕ್ಕಳು ಮುಂಜಾನೆ ಬಂದು ಸಂಜೆಯವರೆಗೆ ಇಲ್ಲಿಯೇ ಇರುತ್ತವೆ. ಸರಕಾರವು ಇಲ್ಲಿಗೆ ಬರುವ ಎಲ್ಲ ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡುತ್ತದೆ. ಮಕ್ಕಳನ್ನು ಈ ಕೇಂದ್ರಕ್ಕೆ ಕಳಿಸಿ ಕೆಲವು ಮಹಿಳೆಯರು ತಮ್ಮ ತಮ್ಮ ಹೊಲಿ ಮನೆ ಕೆಲಸ ಹಾಗೂ ಕೂಲಿ ಮುಂತಾದ ಉದ್ಯೋಗಗಳಿಗೆ ಹೋಗುತ್ತಾರೆ. ಇದು ಇಂತಹ ಮಹಿಳೆಯರಿಗೆ ಒಳ್ಳೆಯ ಅನುಕೂಲಕರವಾಗಿದೆ. ಇದು ಇಲ್ಲದಿದ್ದರೆ ಹರಿಜನ ತಾಯಂದಿರು ತಮ್ಮ ಮಕ್ಕಳನ್ನು ನೋಡಿಕೊಳ್ಳಲು ತಾವೇ ಅಥವಾ ಬೇರೊಬ್ಬರು ಮನೆಯಲ್ಲಿ ಇರಬೇಕಾಗುತ್ತಿತ್ತು. ಆದ್ದರಿಂದ ಅವರ ಜೀವನೋಪಾಯದ ಆದಾಯದಲ್ಲಿ ಸ್ವಲ್ಪ ಮಟ್ಟಿಗಾದರೂ ಕಡಿಮೆ ಆಗುವ ಸಾಧ್ಯತೆ ಇತ್ತು.

ಶಾಂತಿಗ್ರಾಮದ ಎರಡೂ ಶಿಶುವಿಹಾರಗಳಲ್ಲಿ ಶಿಕ್ಷಕಿಯರು ಒಬ್ಬೊಬ್ಬರೇ ಇರುವದು ಇಲ್ಲಿಯ ಒಂದು ಸಮಸ್ಯೆ. ಶಿಕ್ಷಕಿ ರಜೆಯಮೇಲೆ ಇದ್ದಾಗ ಮಕ್ಕಳಿಗೆ ಪಾಠ ಹೇಳಿಕೊಡಲು ಯಾರೂ ಇಲ್ಲದಂತಾಗಿ ಅವು ತಮ್ಮ ಮನಬಂದಂತೆ ಆಟಪಾಟಗಳಲ್ಲಿ ಹಾಗೂ ಜಗಳದಲ್ಲಿ ಕಾಲಕಳೆದು ತಮ್ಮ ಮನಬಂದಾಗ್ಗ ಮನೆಗೆ ಹೋಗುತ್ತವೆ. ಇದಲ್ಲದೆ ಎಷ್ಟೋ ಸಲ ಇಲ್ಲಿ ಪಾಠ ಕ್ರಮಗಳು ಸಾಗುವಲ್ಲಿ ಅಡೆತಡೆ ಉಂಟಾಗುತ್ತದೆ. ಅದಕ್ಕೆ ಕಾರಣಗಳೆಂದರೆ ಪಾಠ ಹೇಳಿಕೊಡುವದರ ಜೊತೆ ಶಿಕ್ಷಕಿಗೆ ಶಿಶುವಿಹಾರದ ಇನ್ನುಳಿದ ಕೆಲಸಗಳೂ ಸಾಕಷ್ಟು ಇರುತ್ತವೆ. ಮೇಲ್ವಿಚಾರಣೆಗಾಗಿ ಮೇಲ್ವಿಚಾರಕರು ಬಂದಾಗ ಅವರ ಜೊತೆ ಶಿಶುವಿಹಾರದ ಆಗುಹೋಗುಗಳನ್ನು ಹೇಳಲು, ಆಹಾರ ಸಾಮಗ್ರಿಗಳನ್ನು ಕೊಂಡುಕೊಳ್ಳಲು. ಹಾಗೂ ಮಕ್ಕಳ ಪಾಲಕರು ಬಂದಾಗ ಅವರಿಗೆ ಕೆಲವು ವಿಷಯಗಳನ್ನು ತಿಳಿಸಲು ಎಷ್ಟೋ ಸಮಯ ವ್ಯಯವಾಗುತ್ತದೆ. ಶಿಕ್ಷಕಿ ಬೇರೆ ಕಾರ್ಯಕಲಾಪಗಳಲ್ಲಿ ನಿರತಳಾದ ಸಮಯದಲ್ಲಿ ಮಕ್ಕಳು ತಮ್ಮಷ್ಟಕ್ಕೆ ತಾವೇ ತಮಗೆ ತಿಳಿದದ್ದನ್ನು ಮಾಡುತ್ತಿರುತ್ತವೆ. ಇದರ ದುಷ್ಪರಿಣಾಮವು ಶಿಕ್ಷಣದಮೇಲೆ ಖಂಡಿತ ಆಗುತ್ತದೆ. ಇದನ್ನು ತಡೆಗಟ್ಟಬೇಕಾದರೆ ಇಬ್ಬರು ಶಿಕ್ಷಕಿಯರಿರದೆ ಸಾಧ್ಯವಿಲ್ಲೆಂಬುದು ಎರಡೂ ಶಿಶುವಿಹಾರದ ಶಿಕ್ಷಕಿಯರ ಸ್ಪಷ್ಟ ಅಭಿಪ್ರಾಯವಾಗಿದೆ.

ಪ್ರಾಥಮಿಕ ಶಿಕ್ಷಣ : ರಾಜ್ಯದ ಎಲ್ಲ ಹಳ್ಳಿಗಳಂತೆ ಶಾಂತಿಗ್ರಾಮದ ಪ್ರಾಥಮಿಕ ಶಿಕ್ಷಣದ ಪೂರ್ಣ ಹೊಣೆಗಾರಿಕೆ ಸರಕಾರದ ಮೇಲಿರುವದರಿಂದ ಇಲ್ಲಿ ಅದು ಸುಗಮವಾಗಿ ಸಾಗಿದ್ದರೂ ಒಂದೆರಡು ಸಮಸ್ಯೆಗಳು ತೋರುತ್ತವೆ. ಇಲ್ಲಿರುವ ಹೆಣ್ಣುಮಕ್ಕಳ ಕಿರಿ ಪ್ರಾಥಮಿಕ ಶಾಲೆಯಲ್ಲಿ ಮೂವರು ಶಿಕ್ಷಕರಿದ್ದು, ನಾಲ್ಕುವರ್ಗಗಳಿವೆ. ಇಬ್ಬರು ಶಿಕ್ಷಕರು ಒಂದೊಂದು ವರ್ಗಗಳನ್ನು ಹಾಗೂ ಒಬ್ಬ ಶಿಕ್ಷಕನು ಎರಡು ವರ್ಗಗಳನ್ನು ನೋಡಿಕೊಳ್ಳುತ್ತಾರೆ. ಎರಡು ವರ್ಗಗಳಿಗೆ ಕೂಡಿ ಒಬ್ಬನೇ ಶಿಕ್ಷಕನಿರುವದರಿಂದ ಎರಡು ಕ್ಲಾಸುಗಳಲ್ಲಿ ಯಾವದಾದರೊಂದು ವರ್ಗವು ಅಲಕ್ಷ್ಯವಾಗುತ್ತದೆ. ಅಥವಾ ಎರಡಕ್ಕೂ ಸರಿಯಾಗಿ ಕಲಿಸಲು ಪ್ರಯತ್ನಿಸಿದಾಗ ಕೆಲವು ಸಲ ಎರಡೂ ಅಲಕ್ಷ್ಯವಾಗುತ್ತವೆ. ಹೀಗಾಗಿ ಆ ವರ್ಗದಲ್ಲಿರುವ ಮಕ್ಕಳು ಎಷ್ಟು ವಿದ್ಯಾ ಸಂಪಾದನೆ ಮಾಡಬೇಕೋ ಅಷ್ಟು ಮಾಡದೇ ಅಪೂರ್ಣತೆಯಾಗಿ ಹೇಗೋ ಮುಂದಿನವರ್ಗಗಳಿಗೆ ಹೋಗುತ್ತವೆ. ಅಥವಾ ಕೆಲವು ಸಲ ಅವು ತೇರ್ಗಡೆಹೊಂದದೆ ಅದೇ ವರ್ಗದಲ್ಲಿ ಉಳಿಯುತ್ತವೆ. ಹೀಗೆ ಪಾಸಾಗಿ ಹೋದ ಕೆಲವು ಮಕ್ಕಳಲ್ಲಿ ಮುಂದಿನ ವರ್ಗದ ಪಠ್ಯಕ್ರಮವನ್ನು ಕಲಿಯುವಷ್ಟು ಬೌದ್ಧಿಕ ಸಾಮರ್ಥ್ಯ ಬಂದಿರುವದಿಲ್ಲ. ಅದರಿಂದ ಶಿಕ್ಷಣ ಕಠಿಣವೆನಿಸಿ ಅದರಲ್ಲಿ ಜಿಗುಪ್ಸೆ ಹೊಂದಿ ಶಿಕ್ಷಣವನ್ನೇ ಅರ್ಧಕ್ಕೆ ನಿಲ್ಲಿಸುವ ಸಾಧ್ಯತೆಗಳಿವೆ. ಇದರಲ್ಲಿ ಶಿಕ್ಷಕನನ್ನು ದೂಷಿಸುವಂತಿಲ್ಲ. ಏಕೆಂದರೆ ಒಬ್ಬ ಶಿಕ್ಷಕನಿಗೆ ಎರಡು ವರ್ಗಗಗಳನ್ನು ಕೊಟ್ಟರೆ ಅವನು ಎಷ್ಟು ಪ್ರಯತ್ನ ಮಾಡಿದರೂ ಸಫಲವಾಗದು. ಸರಕಾರ ಇಂತಹ ಶಾಲೆಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಶಿಕ್ಷಕರನ್ನು ಒದಗಿಸಬೇಕು ಎಂಬುದು ಗ್ರಾಮಸ್ಥರ ಅಭಿಪ್ರಾಯವಾಗಿದೆ.

ಮಾಧ್ಯಮಿಕ ಶಿಕ್ಷಣ : ಶಾಂತಿಗ್ರಾಮದಲ್ಲಿರುವ ಸರಕಾರಿ ಮಾಧ್ಯಮಿಕ ಶಾಲೆಗೆ ಸ್ಥಳೀಯ ವಿಧ್ಯಾರ್ಥಿಗಳಲ್ಲದೆ ಸುತ್ತುಮುತ್ತಲಿನ ಹಳ್ಳಿಗಳಾದ ತ್ರಾವಿಹಳ್ಳಿ, ದೇವಿಹಳ್ಳಿ. ಹನುಮನಹಳ್ಳಿ. ಗಾಡೇನಹಳ್ಳಿ, ರಂಗನಾಥಪುರ, ಮಳಲಿ, ಬ್ಯಾಡರಹಳ್ಳಿ, ಹಾಲದಹಳ್ಳಿ, ಮಡೇನೂರು, ಮೆಂಗೆರೆ. ಕಂಕೆರೆ. ದಾಡದಹಳ್ಳಿ, ಬಂಡಿಹಳ್ಳಿ, ಕೆರೆ ಮುಂದಿನಕೊಪ್ಪಲು ಮತ್ತು ತಿಮ್ಮನ ಗುಡಿಕೊಪ್ಪಲು ಮುಂತಾದ ಸ್ಥಳಗಳಿಂದ ಬರುತ್ತಿದ್ದು ವಿದ್ಯಾರ್ಥಿಗಳ ಸಂಖ್ಯೆ ಪ್ರತಿವರ್ಷವೂ ೨೦೦ ರಿಂದ ೨೫೦ ರ ವರೆಗೆ ಇದೆ. ಇವರಲ್ಲಿ ಪರವೂರಿನ ವಿಧ್ಯಾರ್ಥಿಗಳೇ ಬಹಳ. ಈ ಶಾಲೆಯ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪರಿಣಾಮ ಅಷ್ಟು ಸಮಾಧಾನಕರವಾಗಿಲ್ಲ. ಇದಕ್ಕೆ ಅನೇಕ ಕಾರಣಗಳಿವೆ. ಬೇರೆ ಬೇರೆ ಹಳ್ಳಿಗಳಿಂದ ಶಾಲೆಗೆ ಬರುವ ವಿಧ್ಯಾರ್ಥಿಗಳು ಐದರಿಂದ ಹತ್ತು ಕಿಲೋಮೀಟರಗಳ ದೂರವನ್ನು ನಡೆದು ಬರುತ್ತಿರುವದರಿಂದ ಅವರಿಗೆ ದೈಹಿಕವಾಗಿ ಹೆಚ್ಚಿನ ದಣಿವಾಗುವದು ಸಹಜವಾಗಿದೆ. ಈ ಕಾರಣದಿಂದ ವಿದ್ಯಾರ್ಥಿಗಳಿಗೆ ಮನೆಯಲ್ಲಿ ಅಭ್ಯಸಿಸಲು ಸಮಯ ಮತ್ತು ಉತ್ಸಾಹ ಇರುವದಿಲ್ಲ. ಇದರ ಕೆಟ್ಟ ಪರಿಣಾಮವು ಶಾಲೆಯ ವಾರ್ಷಿಕ ಪರೀಕ್ಷೆಯ ಫಲಿತಾಂಶದ ಮೇಲಾಗಿದೆ.

ಹತ್ತನೆಯ ತರಗತಿಯ ಅಭ್ಯಾಸದಲ್ಲಿ ಹಿಂದೆ ಇದ್ದ ಹಳ್ಳಿಯ ವಿಧ್ಯಾರ್ಥಿಗಳಿಗೋಸ್ಕರ ೧೯೭೫–೭೬ನೇ ಶೈಕ್ಷಣಿಕ ವರ್ಷದಿಂದ ಪ್ರಾರಂಭಿಕ (pilot) ತಳಹದಿ ಮೇಲೆ ರಾಜ್ಯ ಸರಕಾರ ಒಂದು ಹೊಸ ಯೋಜನೆ ಪ್ರಾರಂಭಿಸಿದೆ. ಇದು ಹಾಸನ ಜಿಲ್ಲೆಯ ಮೂರು ಮಾಧ್ಯಮಿಕ ಶಾಲೆಗಳಲ್ಲಿ ಮಾತ್ರ ಅಸ್ತಿತ್ವದಲ್ಲಿದ್ದು ಇವುಗಳಲ್ಲಿ ಶಾಂತಿಗ್ರಾಮವೂ ಒಂದು. ಇದು ಹರಿಜನ ವಿಧ್ಯಾರ್ಥಿಗಳಿಗೆ ಕಡ್ಡಾಯವಾಗಿದ್ದು ಇನ್ನುಳಿದ ಜಾತಿಯ ವಿದ್ಯಾರ್ಥಿಗಳಿಗೆ ಐಚ್ಛಿಕವಾಗಿದೆ. ಈ ಯೋಜನೆಯನ್ವಯ ಮಾಧ್ಯಮಿಕ ಶಾಲೆಯ ಶಿಕ್ಷಕರಿಂದಲೇ ದಿನಾಲು ಎರಡು ತಾಸು ವಿಶೇಷ ಬೋಧನೆಗೆ ವರ್ಗಗಳನ್ನು ನಡೆಯಿಸಲಾಗುತ್ತದೆ. ಇದರಿಂದ ಹರಿಜನ-ಗಿರಿಜನ ಹಾಗೂ ಅಭ್ಯಾಸದಲ್ಲಿ ಹಿಂದುಳಿದ ವಿಧ್ಯಾರ್ಥಿಗಳ ಪ್ರಗತಿ ಆಗಬಹುದೆಂದು ನಿರೀಕ್ಷಿಸಲಾಗಿದೆ.

ಹೊಲಿಗೆ ಶಿಕ್ಷಣ :

ಶಾಂತಿಗ್ರಾಮದಲ್ಲಿ ಮಹಿಳಾ ಮಂಡಳದ ಆಶ್ರಯದಲ್ಲಿ ಒಂದು ಹೊಲಿಗೆ ಶಾಲೆ ಇದ್ದು ಈ ಹಿಂದೆ ಊರಿನ ಹೆಣ್ಣು ಮಕ್ಕಳಿಗೆ ಇಲ್ಲಿ ಹೊಲಿಗೆ ಶಿಕ್ಷಣವನ್ನು ಮಹಿಳಾ ಮಂಡಳದ ಶಿಶುವಿಹಾರದ ಶಿಕ್ಷಕಿಯೇ ಮಧ್ಯಾಹ್ನ ಸಮಯಲ್ಲಿ. ಮೂರು ಗಂಟೆಗಳ ಕಾಲ ಈ ಶಿಕ್ಷಣವನ್ನು ಕೊಡುತ್ತಿದ್ದಳು. ಈ ಸಧ್ಯದ ಶಿಕ್ಷಕಿ ಹೊಲಿಗೆಯಲ್ಲಿ ತರಬೇತಿ ಹೊಂದಿಲ್ಲವಾದ್ದರಿಂದ ಕಲಿಸುವದಿಲ್ಲ. ಸ್ವಲ್ಪಮಟ್ಟಿಗೆ ಹೊಲಿಗೆ ಜ್ಞಾನ ಇದ್ದಂಥ ಹೆಣ್ಣು ಮಕ್ಕಳು ತಾವೇ ಬಂದು ಕೆಲಹೊತ್ತು ಕಲಿತು ಹೋಗುತ್ತಾರೆ. ಹೊಲಿಗೆಯನ್ನು ಬಲ್ಲ ಶಿಕ್ಷಕಿ ಇಲ್ಲಿ ಇಲ್ಲದಿದ್ದುದು ಒಂದು ಸಮಸ್ಯೆಯಾಗಿದೆ. ಈ ಹೊಲಿಗೆ ಶಾಲೆಯಲ್ಲಿ

ಇಲ್ಲಿಯವರೆಗೆ ೪೩ ಜನ ಹೆಣ್ಣು ಮಕ್ಕಳು ಹೊಲಿಗೆ ಶಿಕ್ಷಣವನ್ನು ಪಡೆದಿದ್ದು ಅದರಲ್ಲಿ ೧೧ ಜನ ತಮ್ಮ ತಮ್ಮ ಮನೆಯಲ್ಲಿ ಸ್ವಂತ ಹೊಲಿಗೆ ಯಂತ್ರಗಳನ್ನಿಟ್ಟು ಹೊಲಿಗೆಯನ್ನು ಪ್ರಾರಂಭಿಸಿದ್ದಾರೆ. ಇದರಿಂದಾಗಿ ಹೊಲಿಗೆ ಕೇವಲ ಗಂಡು ಮಕ್ಕಳ ಉದ್ಯೋಗವೆನ್ನುವ ಭಾವನೆ ಬದಲಾಗಿ ಹೆಣ್ಣುಮಕ್ಕಳೂ ಅದನ್ನು ಮಾಡಬಲ್ಲರೆಂಬುದು ಕಂಡುಬರುತ್ತದೆ. ಅದಲ್ಲದೆ ಈ ವೃತ್ತಿ ಅವರ ಕುಟುಂಬದ ಆದಾಯಕ್ಕೆ ಒಳ್ಳೆಯ ಸಾಧನೆ ಆಗಿದೆ. ಇಂತಹ ವೃತ್ತಿಶಿಕ್ಷಣದಿಂದ ಸ್ತ್ರೀಯರ ಸ್ಥಾನಮಾನಗಳು ಕ್ರಮೇಣ ಬದಲಾಗುತ್ತ ಸಾಗಿವೆ.

ವಾಣಿಜ್ಯ ಶಿಕ್ಷಣ :

ಶಾಂತಿಗ್ರಾಮದಲ್ಲಿ ಶ್ರೀ ವಾಣಿಜ್ಯ ಸಂಸ್ಥೆ ಎಂಬ ಬೆರಳಚ್ಚು (Typewriting) ಕೇಂದ್ರ ಇದ್ದು ಈ ಸಂಸ್ಥೆ ಇಂಗ್ಲೀಷ್ ಹಾಗೂ ಕನ್ನಡದಲ್ಲಿ ಬೆರಳಚ್ಚು ವರ್ಗಗಳನ್ನು ನಡೆಸುತ್ತದೆ. ಇದಕ್ಕೆ ಸರಕಾರದಿಂದ ಸ್ವಲ್ಪ ಮಟ್ಟಿಗೆ ಧನಸಹಾಯವೂ ಉಂಟು. ಈ ಧನಸಹಾಯ ಬಹಳ ಕಡಿಮೆ ಪ್ರಮಾಣದಲ್ಲಿದ್ದು ಕ್ಲಾಸುಗಳನ್ನು ನಡೆಯಿಸುವದು ದುಸ್ತರವಾಗಿದೆ. ಆದರೂ ಇದರ ಪ್ರಿನ್ಸಿಪಾಲರು ತಮ್ಮ ಸ್ವಂತ ಹಣದಿಂದ ಸಂಸ್ಥೆ ನಡೆಯಿಸಿಕೊಂಡು ಹೋಗುತ್ತಿದ್ದಾರೆ. ಪ್ರಿನ್ಸಿಪಾಲರ ಮನೆಯಲ್ಲಿಯೇ ಒಂದು ಕೋಣೆಯಲ್ಲಿ ವರ್ಗಗಳು ನಡೆಯುತ್ತವೆ. ಕನ್ನಡ ಬೆರಳಚ್ಚು ಶಿಕ್ಷಣ ಕಲಿಯುವ ಎಲ್ಲ ವಿಧ್ಯಾರ್ಥಿಗಳಿಗೂ ಜ್ಯೂನಿಯರ್ ಹಾಗೂ ಸಿನಿಯರ್ ಗ್ರೇಡ್ ಪರೀಕ್ಷಗಳಿಗೆ ಕ್ರಮವಾಗಿ ೧೦೦ರೂ ಹಾಗೂ ೧೫೦ರೂ ವಾರ್ಷಿಕ ವಿಧ್ಯಾರ್ಥಿವೇತನವನ್ನು ಕೊಡುತ್ತಾರೆ. ಇದರಲ್ಲಿ ಪ್ರತಿ ವರ್ಷವೂ ಸರಾಸರಿ ೩೦ ವಿಧ್ಯಾರ್ಥಿಗಳನ್ನು ಹೊರತು ಪಡಿಸಿ, ಇಲ್ಲಿ ಕಲಿತ ಎಲ್ಲರಿಗೂ ನೌಕರಿ ದೊರೆತಿದೆ. ನೌಕರಿಯ ಸಾಧ್ಯತೆ ಈ ಶಿಕ್ಷಣಕ್ಕೆ ಹೆಚ್ಚು ಇದ್ದುದರಿಂದ ಸಮೀಪದ ಹಳ್ಳಿಗಳಿಂದಲೂ ಇದು ವಿಧ್ಯಾರ್ಥಿಗಳನ್ನು ಆಕರ್ಷಿಸಿದೆ. ಊರಿನ ವಿಧ್ಯಾರ್ಥಿಗಳಿಗೆ ಇದೊಂದು ಒಳ್ಳೆಯ ವೃತ್ತಿಶಿಕ್ಷಣ ಕೇಂದ್ರವಾಗಿದ್ದು ಅನುಕೂಲವಾಗಿದೆ.

ಸರಕಾರಿ ಗಂಡು ಮಕ್ಕಳ ವಿದ್ಯಾರ್ಥಿ ವಸತಿಗೃಹ :

ಈ ವಸತಿ ಗೃಹವು ಇಲ್ಲಿ ೧೯೬೭ರಲ್ಲಿ ಸ್ಥಾಪನೆ ಆಗಿದ್ದು, ಇದು ಸಂಪೂರ್ಣವಾಗಿ ರಾಜ್ಯಸರಕಾರದ ನೆರವಿನಿಂದ ಕಾರ್ಯ ನಿರ್ವಹಿಸುತ್ತದೆ. ಈ ವಸತಿ ಗೃಹದಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಹಾಗೂ ಮಾಧ್ಯಮಿಕ ಶಾಲೆಯಲ್ಲಿ ಓದುವವರಿಗೆ ಸ್ಥಳಾವಕಾಶ ಕಲ್ಪಿಸಿಕೊಡಲಾಗುತ್ತದೆ. ಇದರಲ್ಲಿ ನಿಗದಿ ಪಡಿಸಿದ ವಿದ್ಯಾರ್ಥಿಗಳ ಸಂಖ್ಯೆ ೨೫ ಇದೆ. ಇದರಲ್ಲಿ ಮುಖ್ಯವಾಗಿ ಹರಿಜನ–ಗಿರಿಜನರಿಗೆ ಪ್ರಾತಿನಿಧ್ಯ ಕೊಡಲಾಗುತ್ತದೆ. ಅಂಥ ವಿದ್ಯಾರ್ಥಿಗಳಿಲ್ಲದಿದ್ದಲ್ಲಿ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳೊಡನೆ ಸಮಾಲೋಚಿಸಿ ಇನ್ನುಳಿದ ಜನಾಂಗದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುವದು. ಇದು ಶಾಂತಿಗ್ರಾಮದಲ್ಲಿ ಓದುವ ಬೇರೆ ಹಳ್ಳಿಯ ಬಡವಿದ್ಯಾರ್ಥಿಗಳಿಗೆ ಬಹಳ

ಅನುಕೂಲಕರವಾಗಿದೆ. ಇಲ್ಲಿ ಬಹಳ ವಿದ್ಯಾರ್ಥಿಗಳು ಪ್ರವೇಶ ಕೋರಿದ್ದು ನಿಗದಿ ಪಡಿಸಿದ ಸಂಖ್ಯೆ ಕಡಿಮೆ ಇರುವದೊಂದು ಸಮಸ್ಯೆ ಆಗಿದೆ. ಇಲ್ಲಿಯ ವಿದ್ಯಾರ್ಥಿ ಸಂಖ್ಯೆಯನ್ನು ಸರಕಾರದವರು ಹೆಚ್ಚಿಸಿ ಪ್ರವೇಶ ಕೋರುವ ಎಲ್ಲ ವಿದ್ಯಾರ್ಥಿಗಳಿಗೆ ಸ್ಥಳಾವಕಾಶ ಮಾಡಿಕೊಡಬೇಕು. ಹಾಗೆ ಮಾಡಿದಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಪರಿಣಾಮ ಸುಧಾರಣೆ ಆಗುವದರಲ್ಲಿ ಸಂಶಯವಿಲ್ಲ.

ಜಾತಿ ಮತ್ತು ಶಿಕ್ಷಣ (Caste & Education) :

ಶಾಂತಿಗ್ರಾಮದಲ್ಲಿಯೂ ಇನ್ನುಳಿದ ಭಾರತದ ಹಳ್ಳಿಗಳಲ್ಲಿರುವಂತೆ ಜಾತಿ ಪದ್ಧತಿ ಇರುವದರಿಂದ ಅದು ಜನರ ಸಾಮಾಜಿಕ ಜೀವನದ ಮೇಲೆ ಸಾಕಷ್ಟು ಪರಿಣಾಮ ಬೀರಿದ್ದು ಅದರ ಪ್ರಭಾವ ಶಿಕ್ಷಣದ ಮೇಲೆಯೂ ಕಂಡು ಬರುತ್ತದೆ. ಹರಿಜನರ ಮಕ್ಕಳೇ ಹೆಚ್ಚಾಗಿ ಹೋಗುತ್ತಿರುವ ಸರಕಾರಿ ಶಿಶುವಿಹಾರಕ್ಕೆ ಹರಿಜನೇತರ ಜಾತಿಯ ಯಾವ ಪಾಲಕರೂ ತಮ್ಮ ಮಕ್ಕಳನ್ನು ಕಳಿಸಲು ಮನಸ್ಸು ಮಾಡುವದಿಲ್ಲ. ಅದಕ್ಕೆ ಕಾರಣವೆಂದರೆ ಅಲ್ಲಿ ಕೇವಲ ಹರಿಜನ ಮಕ್ಕಳೇ ಇರುತ್ತವೆ. ಇದರಿಂದ ಜಾತಿ ಪದ್ಧತಿಯ ಆಳವಾದ ಬೇರುಗಳು ಇಲ್ಲಿ ಊರಿರುವದು ಇನ್ನೂ ಸ್ಪಷ್ಟವಾಗಿ ಕಂಡು ಬರುತ್ತದೆ.

ಬಾಲಾಶ್ರಮ :

ಹಳ್ಳಿಗಳಲ್ಲಿ ಕೆಲವು ಮಕ್ಕಳು ಯಾವಾಗಲೂ ಹೊಲಮನೆ ಕೆಲಸಗಳಲ್ಲಿ ತಮ್ಮದಾದ ಸಹಾಯ ಸಲ್ಲಿಸುತ್ತಿರುತ್ತಾರೆ. ಈ ಗ್ರಾಮದಲ್ಲಿ ಈ ಪರಿಸ್ಥಿತಿ ಇದ್ದೇ ಇದೆ. ಇಲ್ಲಿ ಸುಗ್ಗಿಯಲ್ಲಿ ಮಕ್ಕಳು ಶಾಲೆ ತಪ್ಪಿಸಿ ತಮ್ಮ ತಂದೆ ತಾಯಿಗಳ ಕೆಲಸದಲ್ಲಿ ನೆರವಾಗುತ್ತಾರೆ. ಆ ವೇಳೆಯಲ್ಲಿ ಮಕ್ಕಳ ಶಾಲೆ ತಪ್ಪಿ ಪ್ರಗತಿ ಕುಂಠಿತವಾಗುವದು ಸಹಜವಾಗಿದೆ. ಮಕ್ಕಳು ಬರದೇ ಇದ್ದರೂ ಪಾಲಕರು ಬಲವಂತಮಾಡಿ ಮಕ್ಕಳನ್ನು ಕೆಲಸಕ್ಕೆ ತೊಡಗಿಸುತ್ತಾರೆ. ಇದರ ಮೂಲ ಕಾರಣ ಅವರ ಬಡತನವಾಗಿದೆ. ಸುಗ್ಗಿಯೆಂದರೆ ಅವರೆಲ್ಲರಿಗೆ ಬಹಳ ಮಹತ್ವದ್ದು. ಸುಗ್ಗಿಯ ಸಮಯದಲ್ಲಿ ಕೆಲವು ಕಾಳು ಕಡಿಗಳನ್ನು, ದವಸಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಈ ಸಮಯದಲ್ಲಿ ಸಂಗ್ರಹಿಸಿದ್ದನ್ನು ಇಡೀ ವರ್ಷ ಉಪಯೋಗಿಸುತ್ತಾರೆ. ಅದ್ದರಿಂದ ಆ ಸಮಯದಲ್ಲಿ ಶಾಲೆ ತಪ್ಪಿಸುವದು ಮಕ್ಕಳಿಗೆ ಅನಿವಾರ್ಯವಾಗಿ ಪರಿಣಮಿಸುತ್ತದೆ. ಸುಗ್ಗಿ ಶಾಲೆಯ ಕೆಲವು ವಿದ್ಯಾರ್ಥಿಗಳಿಗೆ ಆತಂಕವೇ ಸರಿ. ಶಾಲೆಯ ಕಾರ್ಯಾಲಯದ ಕೆಲವು ಕಾಗದ ಪತ್ರಗಳಿಂದಲೂ ಇದು ಕಂಡು ಬರುತ್ತದೆ. ಮಕ್ಕಳ ಹಾಜರಿ ಪ್ರಕಾರ ಸುಗ್ಗಿಯ ಸಮಯದಲ್ಲಿ ಶಾಲೆಗೆ ಬರುವ ಮಕ್ಕಳ ಸಂಖ್ಯೆಯು ಮೂರರಲ್ಲಿ ಒಂದು ಪಾಲು ಕಡಿಮೆ ಇರುತ್ತದೆ. ಕೆಲವು ಶಿಕ್ಷಕರು ವಿದ್ಯಾರ್ಥಿಗಳ ಹಾಗೂ ಪಾಲಕರ ಮನವೊಲಿಸಿದರೂ ಇದು ಅನಿವಾರ್ಯವಾಗಿದೆ. ಇದರ ಬಗ್ಗೆ ಪಾಲಕರನ್ನು ವಿಚಾರಿಸಿದಾಗ

ಕಲಿತಷ್ಟು ಕಲಿಯಲಿ ಎನ್ನುತ್ತಾರೆ. ಅವರು ಅದರ ಪರಿಣಾಮದ ಬಗ್ಗೆ ಹೆಚ್ಚು ಚಿಂತಿಸದೆ ಮಕ್ಕಳ ದುರುಪಯೋಗ ಮಾಡುತ್ತಿದ್ದುದು ಕಂಡು ಬರುತ್ತದೆ.

ಭಾರತದ ಪ್ರತಿ ಹಳ್ಳಿಯಲ್ಲಿಯಂತೆ ಶಿಕ್ಷಣದಲ್ಲಿ ಶಾಂತಿಗ್ರಾಮದಲ್ಲಿಯೂ ಪ್ರತಿಯೊಂದು ಮಗುವಿಗೂ ಸಮಾನ ಅವಕಾಶ ಕೊಡಲಾಗುತ್ತದೆ. ಆದರೆ ಎಷ್ಟೋ ಮಕ್ಕಳು ಇದರ ಸದುಪಯೋಗ ಪಡೆಯಲು ಅಸಮರ್ಥರಾಗಿದ್ದಾರೆ. ಇಲ್ಲಿ ಡಾ। ಮಹಾಲೆ (೧೯೭೫) ಹೇಳುವಂತೆ "ಜಾತಿ, ಉತ್ಪನ್ನ, ಹಾಗೂ ಕಲಿಯುವ ಪದ್ಧತಿ ಎಲ್ಲವುಗಳು ಒಂದಕ್ಕೊಂದು ಸಂಬಂಧಿಸಿವೆ. ಯಾವಾಗಲೂ ಹಿಂದುಳಿದ ಜಾತಿಯ ಜನರ ಉತ್ಪನ್ನ ಕಡಿಮೆ ಇರುವದರಿಂದ ಇಂಥ ಜನರಲ್ಲಿ ಶೈಕ್ಷಣಿಕ ಅಪವ್ಯಯ (wastage) ಮತ್ತು ನಿಲ್ಲಿಸುವಿಕೆ ಹೆಚ್ಚು ಕಂಡು ಬರುತ್ತದೆ." ಈ ಗ್ರಾಮದಲ್ಲಿ ಮಾಧ್ಯಮಿಕ ಶಿಕ್ಷಣ ಪಡೆದು ಮುಂದೆ ಓದಲು ಹೆಚ್ಚು ಜನ ಇಚ್ಛೆ ಪಡುವದಿಲ್ಲ. ಇದು ಒಕ್ಕಲಿಗರಲ್ಲಿ ಹಾಗೂ ಪರಿಜನರಲ್ಲಿ ಕಂಡು ಬರುತ್ತದೆ. ಇದರಿಂದ ಶಿಕ್ಷಣ ಅಪೂರ್ಣವಾಗುವದೊಂದು ಇಲ್ಲಿಯ ದೊಡ್ಡ ಸಮಸ್ಯೆಯಾಗಿದೆ. ಡಾ। ಕಡೆತೋಟದ (೧೯೭೭) ತಮ್ಮ ಗ್ರಂಥದಲ್ಲಿ "ಹರಿಜನರು ತತ್ವತಃ ತಮ್ಮ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣಕ್ಕಿಂತ ಮೇಲಿನ ಶಿಕ್ಷಣ ಕೊಡಿಸಲು ಇಚ್ಛೆ ಪಡುವದಿಲ್ಲ. ಇಂದಿಗೂ ಉಚ್ಚ ಶಿಕ್ಷಣ ಇವರನ್ನು ಆಕರ್ಷಿಸಿಲ್ಲ. ಬಡತನ ಹಾಗೂ ಜಾತಿ ಸಂಪ್ರದಾಯಗಳು ಇವಕ್ಕೆ ಮುಖ್ಯ ಕಾರಣ" ಎಂದು ಹೇಳುವಂತೆ ನಿರಕ್ಷರಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿಯ ಹರಿಜನ ಮತ್ತು ಒಕ್ಕಲಿಗರಲ್ಲಿ ಇರುವದು ಸ್ಪಷ್ಟವಾಗಿ ತಿಳಿದುಬರುತ್ತದೆ. ಮಹಿಳಾ ನಿರಕ್ಷರತೆಯ ಪ್ರಮಾಣ ಇವೇ ಜಾತಿಗಳಲ್ಲಿ ಹೆಚ್ಚಿದೆ.

ಮಾನವನ ಜೀವನ ಸುಗಮವಾಗಿ ಸಾಗುವದಕ್ಕೆ ಇಂದಿನ ಜೀವನದಲ್ಲಿ ಶಿಕ್ಷಣ ಅಗತ್ಯ ಎಂಬುದನ್ನು ತಿಳಿದುಕೊಂಡು ಮಕ್ಕಳಿಗೆ ಶಿಕ್ಷಣ ಕೊಡಿಸುವವರು ಈ ಗ್ರಾಮದಲ್ಲಿ ಬಹಳ ಕಡಿಮೆ. ಅವರು ಹೆಚ್ಚಾಗಿ ನೌಕರಿ ಆಶೆಗಾಗಿ ಕೊಡಿಸುತ್ತಾರೆಂಬುದು ಪಾಲಕರನ್ನು ವಿಚಾರಿಸಿದಾಗ ತಿಳಿದುಬರುತ್ತದೆ.

ಡಾ॥ ಗುರುಮೂರ್ತಿ (೧೯೭೭) ತಮ್ಮ "ಗ್ರಾಮೀಣ ಮಗು" ಎಂಬ ಲೇಖನದಲ್ಲಿ ಹೇಳುವಂತೆ "ನಮ್ಮಲ್ಲಿ ಸಧ್ಯ ಜಾರಿಯಲ್ಲಿರುವ ಕಡ್ಡಾಯ ಶಿಕ್ಷಣವನ್ನು ಅಕ್ಷರಶಃ ಜಾರಿಗೆ ತರಬೇಕು. ಅಂದರೆ ೧೭ ವರ್ಷಕ್ಕೆ ಕೆಳಗಿನವರೆಲ್ಲರನ್ನು ಕಡ್ಡಾಯವಾಗಿ ಶಾಲೆಗೆ ಕಳಿಸಬೇಕು. ಈ ಶಾಲೆಗಳಲ್ಲಿ ಅವರಿಗೆ ಆರೋಗ್ಯ, ನೈರ್ಮಲ್ಯ ಮತ್ತು ಓದು ಬರಹದ ಬಗ್ಗೆ ಕಲಿಸುವದರ ಜೊತೆಗೆ ಸರಿಯಾದ ಊಟ, ಬಟ್ಟೆ, ಮುಂತಾದವನ್ನು ಒದಗಿಸಬೇಕು. ಆದರೆ ಇಂದು ಸಾಕಷ್ಟು ಶಾಲಾಕಟ್ಟಡಗಳು, ಶಿಕ್ಷಕರು, ಪುಸ್ತಕ, ಹಣ ಮುಂತಾದವು ಇಲ್ಲದೆ ಇದು ಕೇವಲ ಸರಕಾರದ ಧೋರಣೆ ಮಾತ್ರವಾಗಿದೆ. ಇದರಿಂದ ಅವರ ಶಿಕ್ಷಣ ಅಷ್ಟೇ ಅಲ್ಲ ಇತರ ಕಲ್ಯಾಣಕಾರ್ಯಗಳೂ ಕುಂಠಿತವಾಗಿವೆ.

ಇದುವರೆಗೆ ಚರ್ಚಿಸಿದ ಶೈಕ್ಷಣಿಕ ಸಮಸ್ಯೆಗಳು ಶಾಂತಿಗ್ರಾಮಕ್ಕೆ ಸಂಬಂಧಿಸಿವೆ. ಯಾದರೂ ಇವು ಕರ್ನಾಟಕದ ಇನ್ನುಳಿದ ಹಳ್ಳಿಗಳಲ್ಲಿ ಇಲ್ಲದಿಲ್ಲ. ಇದೇ ಸ್ಥಿತಿ ಇನ್ನು ಮುಂದೆಯೂ ಉಳಿದರೆ ಸರಕಾರ ಇಚ್ಛಿಸಿದಷ್ಟು ಶೈಕ್ಷಣಿಕ ಪ್ರಗತಿ ಆಗುವದಿಲ್ಲ. ಅದಲ್ಲದೇ ಶಿಕ್ಷಣದ ಅವನತಿ ಆಗುತ್ತದೆ. ಆದ್ದರಿಂದ ಶಾಲೆಗಳಿಗೆ ಕಟ್ಟಡ, ಹೆಚ್ಚು ವಿದ್ಯಾರ್ಥಿಗಳಿಗೆ ವಸತಿ ಒದಗಿಸುವಲ್ಲಿ ಸರಕಾರವು ಮಕ್ಕಳ ಶಿಕ್ಷಣದ ಜೊತೆ ವಯಸ್ಕರ ಶಿಕ್ಷಣವನ್ನು ಕಾರ್ಯಗತಗೊಳಿಸಬೇಕು. ಮಕ್ಕಳ ಶಿಕ್ಷಣಕ್ಕೆ ಮಹತ್ವ ಕೊಟ್ಟಷ್ಟು ವಯಸ್ಕರ ಶಿಕ್ಷಣಕ್ಕೂ ಮಹತ್ವ ಕೊಟ್ಟರೆ ನಿರಕ್ಷರತೆ ಕಡಿಮೆ ಆಗಿ ಗ್ರಾಮಜೀವನದ ಉನ್ನತಿಗಾಗಿ ರಾಷ್ಟ್ರಪ್ರಗತಿಯಾಗುವದರಲ್ಲಿ ಸಂಶಯವಿಲ್ಲ.

ಗ್ರಂಥಋಣ

1. ಗುರುಮೂರ್ತಿ ಕೆ. ಜಿ. "ಗ್ರಾಮೀಣ ಮಗು", ಮಾನವಿಕ ಭಾರತಿ ಸಂಚಿಕೆ ೧, ಸಂಪುಟ ೧, ೧೯೭೭. ಪುಟ ೧೧೦.
2. Halbar B, S. and Madan T. N. Caste and Educational Institutions in Mysore State, Karnatak University, Dharwar, 1967.
3. Kadetotad N. K. (1977). Religion and society among the Harijans, Karnataka University, Dharwar
4. Mahale P. V. (1975) Education in a Rural Setting—A study of A Mysore Village (unpuplished Ph. D. Thesis submitted to Karnatak University, Dharwar).
5. Quillen. I James (1963). "Problems and Prospects" in George D. Spindler (ed). Education and Culture. New Yark, Holt Rinehort and Winston.

ಭಾರತದ ಸಂಚಾರಿ ಜನಸಮೂಹಗಳು

● ಬಿ. ಎಚ್. ಅವಾತಿ

ಅನೇಕ ಶತಮಾನಗಳಿಂದ ಭಾರತವಲ್ಲಿ ಕೆಲವು ಬುಡಕಟ್ಟಿನ ಜನಾಂಗಗಳೂ ಸೇರಿದಂತೆ ಹಲವಾರು ಸಂಚಾರಿ ಜನಸಮೂಹಗಳು ಕಾಣಬರುತ್ತವೆ. ಜೀವನ ನಿರ್ವಹಣೆಗೆ ಅಪರಾಧಗಳನ್ನೇ ಮುಖ್ಯ ಸಾಧನವಾಗಿಟ್ಟುಕೊಂಡು, ಸಮಾಜವಿರೋಧಿ ಕೃತಿಗಳಲ್ಲಿ ತೊಡಗಿದ ಕೇವಲ ಕೆಲವೇ ಸಮೂಹಗಳ ಮತ್ತು ಸಮುದಾಯಗಳ ಕಡೆಗೆ ಸಮಾಜ ಹಾಗೂ ಸರಕಾರಗಳು ಕಳೆದೆರಡು ಶತಮಾನಗಳಿಂದ ಗಮನವೀಯುತ್ತಾ ಬಂದಿವೆ. ಸ್ವಾತಂತ್ರ್ಯದಿಂದೀಚೆಗೆ ಭಾರತದಲ್ಲಿ ತ್ವರಿತಗತಿಯಲ್ಲಿ ಸಾಗುತ್ತಿರುವ ಆರ್ಥಿಕ. ಸಾಮಾಜಿಕ ನಿರ್ಲಕ್ಷತೆಯನ್ನನುಭವಿಸಿದ ಹಲವಾರು ಸಂಚಾರಿ ಸಮೂಹಗಳ ಸಾಮಾಜಿಕ ಸಮೀಕ್ಷೆ ಅತ್ಯವಶ್ಯವೆಂದೇ ಹೇಳಬಹುದು.

ಅಲೆಮಾರಿ ಸಮೂಹಗಳು ಭಾರತಕ್ಕಷ್ಟೇ ಸೀಮಿತವಾಗಿರದಿದ್ದರೂ ಭಾರತದಲ್ಲಿ ಕಾಣಬರುವ ಈ ಸಮೂಹಗಳ ಸ್ವರೂಪ. ಸಾಮಾಜಿಕ ಜೀವನ. ಸಂಸ್ಕೃತಿ, ಉದ್ಯೋಗ ಮತ್ತು ಸಮಸ್ಯೆಗಳು ಬೇರೆ ದೇಶಗಳ ಅಲೆಮಾರಿಗಳ ಜನಜೀವನಕ್ಕಿಂತ ಬಹಳಷ್ಟು ಭಿನ್ನವಾಗಿರುವುದನ್ನು ಕಾಣಬಹುದು. ಭಾರತದ ಅಲೆಮಾರಿ ಸಮೂಹಗಳು ಮುಖ್ಯವಾಗಿ ೧) ಬುಡಕಟ್ಟು ಜನಾಂಗಗಳ ಮೂಲಗಳಿಂದ. ೨) ಪರಿಶಿಷ್ಟ ಜಾತಿ ಮತ್ತು ಇತರೇ ನಿಮ್ನವರ್ಗಗಳ ಮೂಲಗಳಿಂದ ಮತ್ತೂ ೩) ಅನುಸೂಚಿತ ಸಮುದಾಯಗಳ (ಹಿಂದಿನ ಅಪರಾಧಿ ಸಮೂಹಗಳು) ಮೂಲಗಳಿಂದ ಬಂದವರಾಗಿದ್ದಾರೆ.

ಅಲೆಮಾರಿಗಳು ಅಂದರೆ ಯಾರು ? ಯಾವಾಗಲೂ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸುತ್ತ ಜೀವನ ನಿರ್ವಹಣೆ ಮಾಡುವ ಜನರಿಗೆ ಅಲೆಮಾರಿಗಳು ಎಂದು ಕರೆಯುತ್ತಾರೆ. ಸ್ಥಳ ಬದಲಾವಣೆಯೊಂದಿಗೆ ಸಂಚರಿಸುವ ಜನರೇ ಸಂಚಾರಿಗಳು ಅಥವಾ ಅಲೆಮಾರಿಗಳು. ಇವರನ್ನು "ಹೆಗಲ ಮೇಲೆ ಮನೆ ಹೊತ್ತು ಅಲೆದಾಡುವ ಜನರೆಂದು" ವರ್ಣಿಸುವದುಂಟು. ಜಗತ್ತಿನ ಎಲ್ಲಾ ಭಾಗಗಳಲ್ಲಿ ಕಾಣಬರುವ

ಮತ್ತು ಎಲ್ಲರಿಗೂ ಪರಿಚಿತವಿರುವ ಕೊರವಂಜಿಗಳನ್ನು ಇಲ್ಲಿ ಉದಾಹರಿಸಬಹುದು. ಬೇರೆಬೇರೆ ಗೋತ್ರಗಳ ಸಮೂಹಗಳನ್ನು ಹೊಂದಿದ ಈ ಅಲೆಮಾರಿಗಳು ತಮ್ಮ ಕುಟುಂಬಗಳ ಎಳೆಯರು, ವೃದ್ಧರಾದಿಯಾಗಿ ಎಲ್ಲಾ ಸದಸ್ಯರೊಂದಿಗೆ ಮತ್ತು ಸಾಕಿದ ಪಶು-ಪಕ್ಷಿಗಳೊಂದಿಗೆ ದೇಶದ ನಾನಾ ಭಾಗಗಳಲ್ಲಿ ಸಂಚರಿಸುತ್ತಾರೆ. ಎತ್ತು, ಆಕಳು, ಕತ್ತೆ, ಕುದುರೆ ಮುಂತಾದ ಸಾಕುಪ್ರಾಣಿಗಳ ಮೇಲೆ ತಾವು ವಾಸಿಸುವದಕ್ಕೆ ನಿರ್ವಹಿಸಿಕೊಂಡಿರುವ ಡೇರೆ ಮತ್ತು ನಿತ್ಯೋಪಯೋಗಿ ಸಲಕರಣೆಗಳನ್ನು ಹೇರಿಕೊಂಡು, ಎಳೆಯರೂ, ವೃದ್ಧರೂ ಅಲ್ಲದೇ ಅಸ್ವಸ್ಥರನ್ನೂ ಸಹ ಕೂರಿಸಿಕೊಂಡು ಸಂಚಾರ ಕೈಕೊಳ್ಳುವ ಈ ಜನರ ದೃಶ್ಯವು ಒಂದು ಇಡೀ ಸಮುದಾಯವೇ ಸ್ಥಳಾಂತರಗೊಳ್ಳುವದೇನೋ ಎಂಬಂತೆ ಗೋಚರಿಸುತ್ತದೆ. ಗ್ರಾಮಗಳ ಮತ್ತು ಪಟ್ಟಣಗಳ ಹೊರವಲಯಗಳಲ್ಲಿ ನೀರಿನ ಸಂಗ್ರಹ ಸಮೀಪವಿರುವ ಸ್ಥಾನಗಳನ್ನಾರಿಸಿಕೊಂಡು ತಾತ್ಪೂರ್ತಿಕ ಗುಡಿಸಲುಗಳನ್ನು ನಿರ್ಮಿಸಿಕೊಳ್ಳುತ್ತಾರೆ. ಅನೇಕ ಕುಟುಂಬಗಳನ್ನೊಳಗೊಂಡಿರುವ ಈ ಸಮೂಹಕ್ಕೆ ಸಾಮಾನ್ಯವಾಗಿ ವಯಸ್ಕನಾದ ಮತ್ತು ಅನುಭವಿಯಾದ ಪುರುಷನೊಬ್ಬ ಮುಖಂಡನಾಗಿರುತ್ತಾನೆ. ಕೆಲವೊಂದು ಸಮೂಹಗಳಲ್ಲಿ ಸ್ತ್ರೀಯರೂ ಸಹ ಮುಖಂಡತ್ವವನ್ನು ವಹಿಸಿಕೊಂಡು ಕಾರ್ಯನಿರ್ವಹಿಸುವದುಂಟು. ಭಾರತದಲ್ಲಿ ಕಾಣಬರುವ ಈ ಸಂಚಾರೀ ಸಮೂಹಗಳನ್ನು ಮುಖ್ಯವಾಗಿ ಮೂರು ಭಾಗಗಳಲ್ಲಿ ವಿಂಗಡಿಸಬಹುದು: ೧) ಬುಡಕಟ್ಟಿನ ಸಮುದಾಯಗಳಿಗೆ ಸಂಬಂಧಿಸಿದವರು ೨) ಪರಿಶಿಷ್ಟ ಜಾತಿ ಮತ್ತು ಇತರೇ ನಿಮ್ನವರ್ಗಗಳಿಗೆ ಸಂಬಂಧಿಸಿದವರು ಮತ್ತು ೩) ಅನುಸೂಚಿತ ಸಮುದಾಯಗಳಿಗೆ ಸಂಬಂಧಿಸಿದವರು.

ಬುಡಕಟ್ಟು ಸಮುದಾಯಗಳ ಮೂಲದವರಾದ ಅನೇಕ ಅಲೆಮಾರಿ ಸಮೂಹಗಳು ಭಾರತದ ಉದ್ದಗಲಕ್ಕೂ ಪಸರಿಸಿದ್ದಾರೆ. ಅವರಲ್ಲಿ ಕೆಲವರು ಆಹಾರ ಪದಾರ್ಥಗಳ ಅನ್ವೇಷಣೆಯಲ್ಲಿಯೂ ಮತ್ತು ಬೇಟೆಯಾಡುವುದರಲ್ಲಿಯೂ ತೊಡಗಿದ್ದರು. ತಲೆತಲಾಂತರಗಳಿಂದ ಬಂದ ಈ ಉದ್ಯೋಗಗಳು ಕಾಲಾಂತರದಲ್ಲಿ ಜೀವನ ನಿರ್ವಹಣೆಗೆ ತೊಂದರೆದಾಯಕವಾಗಿ ಮತ್ತು ಅಸಾಧ್ಯವಾಗಿ ಕಂಡುಬಂದಾಗ ಹೊಲ, ಗದ್ದೆಗಳಲ್ಲಿ ಬೆಳೆಗಳನ್ನು ಅಪಹರಣ ಮಾಡುವ ಮತ್ತು ಹಳ್ಳಿ ಪಟ್ಟಣಗಳಲ್ಲಿ ಕಳವು ಮಾಡುವ ಕಾರ್ಯಗಳಲ್ಲಿ ನಿರತರಾದರು. ಬುಡಕಟ್ಟು ಮೂಲದವರಾದ ಇತರೇ ಬಹಳಷ್ಟು ಸಮೂಹಗಳು ಹಾವಾಡಿಗರಾಗಿಯೂ, ಮಂಗ ಮತ್ತು ಕರಡಿಗಳನ್ನು ಆಡಿಸುವವರಾಗಿಯೂ, ಭವಿಷ್ಯ ಹೇಳುವವರಾಗಿಯೂ, ಜಾದೂಗಾರರಾಗಿಯೂ, ದೈವೀಶಕ್ತಿಯನ್ನು ಹೊಂದಿದವರಾಗಿಯೂ, ಹಾಡು ಮತ್ತು ನೃತ್ಯಗಾರರಾಗಿಯೂ, ಪಶು ವೈದ್ಯ ಮತ್ತು ನಾಟಿ ವೈದ್ಯರಾಗಿಯೂ, ಸೂಳೆಗಾರಿಕೆಯಲ್ಲಿ ತೊಡಗಿದವರಾಗಿಯೂ, ದೊಂಬರಾಟ ಪ್ರದರ್ಶನಕಾರರಾಗಿಯೂ ಜೀವನ ನಿರ್ವಹಣೆಯಲ್ಲಿ ತೊಡಗಿದರು. ಇದೇ ವಿಭಾಗಕ್ಕೆ ಸೇರಿದ ಮಾಲಾ ಪಂಡಾರಾಮು, ಅಲ್ಲಾರ, ಕಳ್ಳಿಕ್ಕಾತ ಮತ್ತು

ಬರಹೋರ ಈ ಸಮೂಹಗಳು ಗಡ್ಡೆ ಗೆಣಸುಗಳನ್ನು ಹುಡುಕುವುದರಲ್ಲಿ, ಮೀನಗಾರಿಕೆಯಲ್ಲಿ ಮತ್ತು ಬೇಟೆಯಾಡುವಿಕೆಯಲ್ಲಿ ನಿರತರಾಗಿದ್ದಾರೆ. ಅತಿಯಾಗಿ ತಿರುಗಾಟದ ಪ್ರವೃತ್ತಿಯನ್ನು ಹೊಂದಿದ ಗಡಿಯೂರ, ಲೋಹಾರ. ಅಗಾರಿಯಾ. ಘಿಸಾಲ್ಡಿಯಾರ ಮುಂತಾದವರು ಕರಕುಶಲತೆಗೆ ಹೆಸರಾಗಿದ್ದಾರೆ. ಇವರು ಕಲ್ಲು, ಕಟ್ಟಿಗೆ ಮತ್ತು ಲೋಹಗಳಲ್ಲಿ ತಮ್ಮ ಕರಕುಶಲತೆಯನ್ನು ಪ್ರದರ್ಶಿಸುತ್ತಾರೆ. ಸಾಮಾನ್ಯವಾಗಿ ಉತ್ತರ ಭಾರತದಲ್ಲಿ ಕಾಣಬರುವ ಬಂಜಾರರು ಮತ್ತು ದಕ್ಷಿಣದಲ್ಲಿ ಕಾಣಬರುವ ಕೊರವರು ಉಪ್ಪು, ಕಾಳುಕಡಿ ಮತ್ತು ಇತರೇ ಜೀನಸುಗಳ ವ್ಯಾಪಾರಸ್ಥರಾಗಿದ್ದಾರೆ. ಜೋಗಿ ಸಮೂಹದವರು ಸಂಚಾರಿ ಜೀವನಕ್ಕೆ ತಮ್ಮ ಜೀವನ ದರ್ಶನವೇ ಕಾರಣವೆನ್ನುತ್ತಾರೆ. ಹೆಳವ, ದುರಗಿಮುರಗಿ, ಮುಂತಾದ ಕೆಲ ಸಮೂಹಗಳು ತಮ್ಮ ಅಲೆಮಾರಿ ಜೀವನಕ್ಕೆ ದೈವೀ ಶಕ್ತಿಯ ಆದೇಶವೇ ಕಾರಣವೆಂದು ತಿಳಿಸುತ್ತಾರೆ. ಭೋಪಾ ಅನ್ನುವವರು ತಮ್ಮ ಅಧಿದೇವತೆಯನ್ನು ತೃಪ್ತಿಪಡಿಸಲಿಕ್ಕೆಂದೇ ಹಾಡುತ್ತ, ನೃತ್ಯ ಮಾಡುತ್ತ ದೇಶಾಂತರ ಪರ್ಯಟನ ಮಾಡುತ್ತಾರೆ. ಹಾಡು ಕುಣಿತಗಳಲ್ಲಿ ಮೈ ಮರೆತಾಗ ದೇವತೆಗಳು ಇವರಲ್ಲಿ ಕೆಲವರ ಮೈದುಂಬುವದೆಂಬ ಬಲವಾದ ನಂಬಿಕೆಯೂ ಇವರಲ್ಲುಂಟು. ನೂಟ ಮತ್ತು ಚಂದ್ರವೇದಿ ಸಮೂಹದವರು ಅನೈತಿಕ ಲೈಂಗಿಕ ವ್ಯವಹಾರಗಳಲ್ಲಿ ತೊಡಗಿರುತ್ತಾರೆ. ಸಂಪ್ರದಾಯ, ಪರಂಪರೆ ಮತ್ತು ಅಧಿದೇವತೆಯ ಆದೇಶವೇ ಈ ರೀತಿಯ ಜೀವನಕ್ಕೆ ಮುಖ್ಯ ಕಾರಣಗಳೆಂದು ಕಂಡು ಬರುತ್ತದೆ. ಈ ಕಸಬಿನಿಂದ ಜೀವನ ನಿರ್ವಹಣೆ ಸಾಗದಾಗ ಇವರು ಭಿಕ್ಷೆ ಬೇಡುವದೂ ಉಂಟು. ಆದರೂ ಭಿಕ್ಷುಕ ವೃತ್ತಿಯನ್ನೇ ಅವಲಂಬಿಸಿದ ಭಿಕ್ಷುಕರಿಗಿಂತ ಇವರು ತೀರಾ ಭಿನ್ನ. ಯಾಕೆಂದರೆ ಭಿಕ್ಷುಕರು ಕೇವಲ ಭಿಕ್ಷೆಯನ್ನೇ ಅವಲಂಬಿಸಿ ಕೆಲವೊಂದು ಸಾರಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾರೆ. ರಾಜಸ್ಥಾನ ಮತ್ತು ದಿಲ್ಲಿ ಪ್ರದೇಶಗಳಲ್ಲಿ ಕಂಡು ಬರುವ "ಅಹೇರಿ" ಅನ್ನುವವರು ಬೇಟೆಯಾಡುವುದರಲ್ಲಿ ಮತ್ತು ಬಿದಿರಿನ ಕೆಲಸದಲ್ಲಿ ತೊಡಗಿರುತ್ತಾರೆ. ಈ ಸಮೂಹದ ಒಂದು ಭಾಗವು ಚಾಪೆಗಳನ್ನು ಹೆಣೆಯುವುದರಲ್ಲಿ ಮತ್ತು ಅರಣ್ಯದಲ್ಲಿ ಹೇರಳವಾಗಿ ಸಿಗುವ ವಸ್ತುಗಳನ್ನು ಕಲೆಹಾಕುವುದರಲ್ಲಿ ನಿರತರಾಗಿರುತ್ತಾರೆ. ಈ ನೆಪದಲ್ಲಿ ಇವರು ದರೋಡೆಗಳನ್ನು ಮಾಡುವುದುಂಟು. ದರೋಡೆಯ ಸ್ಥಳವನ್ನು ಸಾಮಾನ್ಯವಾಗಿ ತಾವು ವಾಸವಾಗಿರುವ ಸ್ಥಾನದಿಂದ ದೂರದಲ್ಲಿ ಆಯ್ಕೆಮಾಡಿಕೊಳ್ಳುತ್ತಾರೆ. ಉತ್ತರ ಪ್ರದೇಶ, ಪಶ್ಚಿಮ ಬಂಗಾಲ ಮತ್ತು ಬಿಹಾರಗಳಲ್ಲಿ ಕಾಣಬರುವ ಬಹೇಲಿಯಾ ಅನ್ನುವವರು ಬೇಟೆಯಾಡಿ ಮತ್ತು ಪಕ್ಷಿಗಳನ್ನು ಹಿಡಿದು ತಮ್ಮ ಜೀವನ ನಿರ್ವಹಣೆಯನ್ನು ಮಾಡಿಕೊಳ್ಳುತ್ತಾರೆ. ಪಶ್ಚಿಮ ಬಂಗಾಲ ಮತ್ತು ಬಿಹಾರಗಳಲ್ಲಿ ಸಾಮಾನ್ಯವಾಗಿ ಸಂಚರಿಸುವ ಲೋಧಾ ಸಮೂಹದವರು ಅರಣ್ಯ ಪ್ರದೇಶದಲ್ಲಿ ಆಹಾರಾನ್ವೇಷಣೆಯಲ್ಲಿ ತೊಡಗಿರುತ್ತಾರೆ. ಕೆಲವೊಂದು ಜನರು ಹೊಲಗದ್ದೆಗಳಲ್ಲಿ ಕೂಲಿಕಾರರಾಗಿದ್ದಾರೆ.

ಈ ಸಮೂಹವನ್ನು ಅಪರಾಧಿ ಸಮೂಹವೆಂದೂ ಪರಿಗಣಿಸುವದುಂಟು. ಇವರು ಬೇಟೆಯಾಡುತ್ತಿದ್ದ ಮತ್ತು ಆಹಾರಾನ್ವೇಷಣೆ ಮಾಡುತ್ತಿದ್ದ ಅರಣ್ಯ ಪ್ರದೇಶಗಳನ್ನು ಇತ್ತಿತ್ತಲಾಗಿ ಉಳುವ ಭೂಮಿಯನ್ನಾಗಿ ಪರಿವರ್ತಿಸಲಾಗುತ್ತಿದೆ. ಇದರಿಂದಾಗಿ ತಮ್ಮ ಮೂಲ ಉದ್ಯೋಗಕ್ಕೆ ಸಂಚಕಾರ ಬಂದಾಗ ಇವರು ಅಪರಾಧಿ ಕೃತ್ಯಗಳಲ್ಲಿ ತೊಡಗಿದ್ದುಂಟು. ಬಿಹಾರದಲ್ಲಿ ಸಂಚರಿಸುವ ತುರಿ ಸಮೂಹವು ಮುಂಡಾ ಬುಡಕಟ್ಟಿನ ಮೂಲದ್ದಾಗಿದೆ. ಸಾಮಾನ್ಯವಾಗಿ ಹಳ್ಳಿಗಳ ಹೊರವಲಯಗಳಲ್ಲಿ ವಾಸ ಮಾಡುವ ಇವರು ಬೆತ್ತದ ಕೆಲಸದಲ್ಲಿ ನಿಪುಣರಾಗಿದ್ದಾರೆ. ಗಂಗಾನದಿಯ ದಕ್ಷಿಣ ಭಾಗದ ಕೊಳ್ಳಗಳಲ್ಲಿ ವಾಸಿಸುವ ದರ್ಕಾರ ಸಮೂಹದವರು ಒಮ್ಮೆ ಅಡವಿಯಲ್ಲಿ ವಾಸಿಸುವ ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿದ್ದರು. ಈಗವರು ಕೂಲಿಕಾರರಾಗಿ. ಒಕ್ಕಲಿಗರಾಗಿ, ಕಮ್ಮಾರರಾಗಿ ಮತ್ತು ಕೆಲವೊಂದು ಜನರು ಹಾವಾಡಿಗರಾಗಿ ಜೀವನ ಸಾಗಿಸುತ್ತಾರೆ. ಪಶ್ಚಿಮ ಬಂಗಾಲ ಮತ್ತು ಬಿಹಾರದ ಬೆಡಿಯಾ ಸಮೂಹದಲ್ಲಿ ಕೆಲವರು ಒಂದು ಸ್ಥಳದಲ್ಲಿ ಕಾಯಂ ನೆಲೆಯೂರಿದ್ದರೆ, ಇನ್ನೂ ಕೆಲವರು ಸಂಚಾರಿಗಳಾಗಿಯೇ ಇದ್ದಾರೆ. ಇವರು ಹಲವಾರು ಉದ್ಯೋಗಗಳನ್ನು ಕೈಕೊಂಡಿದ್ದಾರೆ. ಡೊಂಬರಾಟ, ಕೋಳಿ ಮತ್ತು ಇತರ ಪಶುಪಕ್ಷಿಗಳನ್ನು ಸಾಕುವದು, ಹಾವಾಡಿಸುವದು ಮತ್ತು ಜಾದೂ ಮಾಡುವದು, ಮೀನಿನ ಗಾಳಗಳನ್ನು ತಯಾರಿಸುವದು, ಹಣಿಗೆ, ಪೂಜಿ. ಹಗ್ಗ, ಕಾಲ್ಪಳಿ ಮುಂತಾದವುಗಳನ್ನು ತಯಾರಿಸಿ ಮಾರುವದು ಇವರು ಕೈಕೊಂಡ ಉದ್ಯೋಗಗಳಲ್ಲಿ ಕೆಲವೊಂದು. ಇವರು ಅರಣ್ಯದಲ್ಲಿ ದೊರೆಯುವ ಔಷಧ ಪದಾರ್ಥಗಳನ್ನು ಮಾರುವುದೂ ಉಂಟು. ಕಳ್ಳತನ, ಅಪಹರಣ ಮುಂತಾದ ಕೆಲಸಗಳಿಗಾಗಿ ಇವರಿಗೆ ಕೆಲವೊಮ್ಮೆ ಕೆಟ್ಟ ಹೆಸರು ಬಂದುದೂ ಉಂಟು. ಇವರಲ್ಲಿ ಕೆಲವರು ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದ್ದಾರೆ. ಮಹಾರಾಷ್ಟ್ರ, ಮಧ್ಯಪ್ರದೇಶ ಮತ್ತು ಸಿಂಧ ಪ್ರಾಂತದಲ್ಲಿ ಕಾಣುವ ಪಾರ್ಧಿಗಳು ಚಿತ್ತಾಕರ್ಷಕ ಮತ್ತು ವೈವಿಧ್ಯಮಯ ಅಲೆಮಾರಿ ಸಮೂಹಗಳು. ತಮ್ಮ ಕಾರ್ಯ ಮತ್ತು ವೈಚಿತ್ರ್ಯಕ್ಕಾಗಿ ಇವರು ಹಲವು ಭಾಗಗಳಾಗಿ ವಿಂಗಡಿಸಲ್ಪಟ್ಟಿದ್ದಾರೆ. ಫಾನ್ಸಿ ಪಾರ್ಧಿಗಳು ಪಶು. ಪಕ್ಷಿ, ಪ್ರಾಣಿಗಳನ್ನು ಹಿಡಿಯುವುದರಲ್ಲಿ ಮತ್ತು ಪಳಗಿಸುವುದರಲ್ಲಿ ನಿಪುಣರಿದ್ದಾರೆ. ಚೀತಾ ಪಾರ್ಧಿಗಳು ಚಿರತೆಗಳನ್ನು ಪಳಗಿಸುವುದರಲ್ಲಿ ಮತ್ತು ತರಬೇತು ಗೊಳಿಸುವುದರಲ್ಲಿ ನಿಷ್ಣಾತರಾಗಿದ್ದಾರೆ, ಟಾಕಿಯಾ ಅನ್ನುವ ಸಮೂಹವು ಬೀಸುವ ಕಲ್ಲುಗಳನ್ನು ತಯಾರಿಸುವ ಮತ್ತು ದುರಸ್ತಿ ಮಾಡುವ ಉದ್ಯೋಗವನ್ನು ಕೈಕೊಂಡಿದ್ದಾರೆ. ಅವರಲ್ಲಿ ಕೆಲವರು ಚಾಣಾಕ್ಷ ಮತ್ತು ನುರಿತ ಬೇಟೆಗಾರರಿದ್ದಾರೆ! ದರೋಡೆ, ಕಳವು, ಸುಲಿಗೆ ಮುಂತಾದ ಕೃತ್ಯಗಳಿಗಾಗಿಯೂ ಇವರು ಕುಪ್ರಸಿದ್ಧರಾಗಿದ್ದಾರೆ. ಆದ್ದರಿಂದ ಯಾವುದೊಂದು ಸ್ಥಳದಲ್ಲಿ ಇವರು ಬೀಡು ಬಿಟ್ಟ ಕ್ಷಣದಿಂದಲೇ ಸುತ್ತಮುತ್ತಲಿನ ಹಳ್ಳಿಗರು ತಮ್ಮ ಆಸ್ತಿ–ಪಾಸ್ತಿ, ದನ, ಕರು, ಕುರಿ ಮುಂತಾದವುಗಳು ಈ ಜನರಿಂದ ಅಪಹರಿಸಲ್ಪಡದಂತೆ ವಿಶೇಷ ಮುಂಜಾಗ್ರತೆ ಮತ್ತು ಕಾಳಜಿ ತೆಗೆದುಕೊಳ್ಳುತ್ತಾರೆ.

ಎರಡನೇ ವಿಭಾಗದಲ್ಲಿ ಬುಡಕಟ್ಟುಗಳಿಗೆ ಸಂಬಂಧವಿಲ್ಲದ ಆದರೆ ಹಲವಾರು ಜಾತಿ, ಧರ್ಮಗಳಿಗೆ ಸೇರಿದ ಕೆಲವೊಂದು ಸಂಚಾರಿ ಸಮೂಹಗಳನ್ನು ಸೇರಿಸಬಹುದು. ಮೂಲತಃ ಇವರು ಕೆಳ ಜಾತಿಗಳಿಗೆ ಸೇರಿದವರು. ಇವರಲ್ಲಿ ಕೆಲವರು ಹರಿಜನ ವರ್ಗಕ್ಕೂ ಸೇರಿದವರುಂಟು. ಬಹಳಷ್ಟು ಜನರು ಹಿಂದುಗಳಾದರೆ ಕೆಲವೊಂದು ಜನರು ಮುಸಲ್ಮಾನ ಮತಾವಲಂಬಿಗಳಾಗಿಯೂ ಇದ್ದಾರೆ. ಮೊದಲಿಗೆ ಇವರು ತಮ್ಮ ತಮ್ಮ ಪರಂಪರಾಗತವಾದ ಉದ್ಯೋಗಗಳಿಗೆ ಅಂಟಿಕೊಂಡಿದ್ದರು. ಕಾಲಾಂತರದಲ್ಲಿ ಪರಿಸ್ಥಿತಿಯ ಒತ್ತಡಕ್ಕೆ ಸಿಲುಕಿ ಇವರು ಅಲೆಮಾರಿ ಜೀವನಕ್ಕೆ ಅಂಟಿಕೊಳ್ಳಬೇಕಾಯಿತು.

ಉತ್ತರ ಭಾರತದ ಕಾಶ್ಮೀರ ರಾಜ್ಯದಲ್ಲಿ ಕಾಣಬರುವ ಮತ್ತು ಒಂದು ಕಸಬನ್ನವಲಂಬಿಸಿ ಅದಕ್ಕಾಗಿ ಸಂಚರಿಸುವ ಅಲೆಮಾರಿಗಳೆಂದರೆ ಬಾಂಡರು. ಅವರಿಗೆ ಭಗತ ಎಂದೂ ಕರೆಯುತ್ತಾರೆ. ಮನರಂಜನೆಗೋಸುಗ ಹಾಡಿ, ಕುಣಿದು ಜನರನ್ನು ರಂಜಿಸುವ ಪರಂಪರಾಗತವಾಗಿ ಬಂದ ಕಸಬಿನೊಂದಿಗೆ ಇವರು ಭಿಕ್ಷೆಬೇಡುವದೂ ಉಂಟು. ವಿವಿಧ ವೇಷ ಧರಿಸುವ 'ಬಹುರೂಪಿಯೂ' ಅನ್ನುವವರು ಪಂಜಾಬ ಪ್ರಾಂತದಲ್ಲಿ ಕಾಣಸಿಗುತ್ತಾರೆ. ಆಧ್ಯಾತ್ಮಿಕ, ಧಾರ್ಮಿಕ ಅಲ್ಲದೇ ಪೌರಾಣಿಕ ಹಿನ್ನೆಲೆಯುಳ್ಳ ಆಟ, ನಾಟಕಗಳನ್ನು ಪ್ರದರ್ಶಿಸುವದು ಇವರ ವೈಶಿಷ್ಟ್ಯ. ಉತ್ತರ ಭಾರತದ ಮುಸಲ್ಮಾನ ಮತದವರಾದ 'ಖಲಂದರ' ಅನ್ನುವ ಸಮೂಹದ ಇವರು ದೊಂಬರಾಟ ಮತ್ತು ಇತರೇ ಪ್ರದರ್ಶನಗಳನ್ನು ಒದಗಿಸುತ್ತಾರೆ. ಕರಡಿಗಳನ್ನು ಪಳಗಿಸಿ ಅವುಗಳ ಪ್ರದರ್ಶನ ನೀಡುವದು, ಮಂಗಗಳಿಂದ ವಿವಿಧ ಚಮತ್ಕಾರಗಳನ್ನು ಮಾಡಿಸುವದು ಅಲ್ಲದೇ ಮುಂಗಸಿಗಳನ್ನು ಪ್ರದರ್ಶಿಸುವದು ಇವರು ಕೈಕೊಂಡ ಕಸಬುಗಳಲ್ಲಿ ಮುಖ್ಯವಾದವುಗಳು. ಗುಜರಾತದ 'ಬಾವಾರಿಯಾ' ಅನ್ನುವವರು ಹಬ್ಬ, ಮದುವೆ ಮುಂತಾದ ಉತ್ಸವ ಸಮಾರಂಭಗಳಲ್ಲಿ ಮೊದಲೇ ನಿರ್ಧರಿಸಿದ ಹಣಕಾಸಿನ ಕರಾರಿನಂತೆ ವಿನೋದ ಮತ್ತು ಆಟ, ನಾಟಕ ಪ್ರದರ್ಶನವನ್ನು ನೀಡುತ್ತಾರೆ.

ಮಹಾರಾಷ್ಟ್ರದಲ್ಲಿ ಮತ್ತು ಕರ್ನಾಟಕ ಮಹಾರಾಷ್ಟ್ರ ಗಡಿಗುಂಟ ಕಾಣಸಿಗುವ ಗೊಂದಳಿಗರು ಜಾನಪದ ಹಾಡುಗಾರಿಕೆಯಲ್ಲಿ ನಿಪುಣರು. ಮಧ್ಯಪ್ರದೇಶ, ಉತ್ತರ ಪ್ರದೇಶ ಮತ್ತು ಗುಜರಾತ ಪ್ರಾಂತಗಳಲ್ಲಿ ಕಾಣಬರುವ 'ನ್ಯಾಟ' ಅನ್ನುವವರು ದೊಂಬರಾಟ ಪ್ರದರ್ಶಿಸಿ, ಜೀವನ ಸಾಗಿಸುತ್ತಾರೆ. ಇದಲ್ಲದೇ ಪ್ರಾಣಿಗಳ ಕೊಂಬುಗಳಿಂದ ಕರಕುಶಲ ವಸ್ತುಗಳನ್ನು ತಯಾರಿಸುವದು ಮತ್ತು ಕಾಡು ಹಂದಿಗಳ ಬೇಟೆಯಾಡುವದೂ ಉಂಟು. ನ್ಯಾಟ ಸ್ತ್ರೀಯರು ಹಚ್ಚೆ ಚುಚ್ಚುವದರಲ್ಲಿ ನಿಪುಣರು. ಕೆಲ ನ್ಯಾಟ ಸ್ತ್ರೀಯರು ತಾವು ಹೋದಲ್ಲೆಲ್ಲಾ ಅಲ್ಲಿಯ ಪುರುಷರೊಡನೆ ಲೈಂಗಿಕ ಸಂಬಂಧ ಬೆಳೆಸಿ ಹಣ ಸಂಪಾದಿಸುವದೂ ವಾಡಿಕೆಯಲ್ಲಿದೆ. ಅಡವಿಯಲ್ಲಿ ಸಿಗುವ ಔಷಧಯುಕ್ತವಾದ ಗಡ್ಡೆ, ಬೇರು, ಸೊಪ್ಪುಗಳ ಜ್ಞಾನವಿದ್ದವರು ಕೆಲವೊಂದು ರೋಗಗಳನ್ನೂ ಸಹ

ಗುಣಪಡಿಸುತ್ತಾರೆ. ಮುಸಲ್ಮಾನ ಮತಾವಲಂಬಿಗಳಾದ ಸಿಕ್ಕಲಿಗಾರ ಅನ್ನುವ ಸಮೂಹದವರು ಕತ್ತರಿ, ಚಾಕು, ಚೂರಿ ಮುಂತಾದವುಗಳನ್ನು ಸಾಣೆ ಹಿಡಿಯುತ್ತ ಯಾವಾಗಲೂ ತಿರುಗಾಡುತ್ತಿರುತ್ತಾರೆ. ಇವರು ಆಯುಧಗಳನ್ನು ಹರಿತಗೊಳಿಸುವವರೂ ಮತ್ತು ಆಯುಧಗಳ ವಿಷಯಕ್ಕೆ ವಿಶೇಷ ಜ್ಞಾನವಿದ್ದವರೂ ಆಗಿದ್ದರೆಂದು ತಿಳಿದುಬರುತ್ತದೆ.

ಮೂರನೆಯ ವಿಭಾಗವು ಅಲೆಮಾರಿ ಜೀವನಕ್ಕಂಟಿಕೊಂಡ ಅನುಸೂಚಿತ ಸಮೂಹಗಳನ್ನು ಮಾತ್ರ ಒಳಗೊಂಡಿದೆ. ಇವರೆಸಗುತ್ತಿದ್ದ ವಿವಿಧ ಅಪರಾಧ ಮತ್ತು ವಿವಿಧತೆಗಾಗಿ ಇವರಲ್ಲಿ ಸಾಕಷ್ಟು ಅಂತರವನ್ನು ಗುರುತಿಸಬಹುದು. ಅಪರಾಧಗಳನ್ನೇ ಜೀವನೋಪಾಯವನ್ನಾಗಿ ಮಾಡಿಕೊಂಡಿದ್ದಕ್ಕಾಗಿ ಇವರು ಹಲವಾರು ಕಾರಣಗಳನ್ನು ಕೊಡುತ್ತಾರೆ. ಕೆಲವೊಂದು ಸಮೂಹದವರ ಪೂರ್ವಜರು ಸೈನಿಕ ವೃತ್ತಿಯಲ್ಲಿದ್ದರೆಂದು ತಿಳಿದುಬರುತ್ತದೆ. ಸೈನಿಕ ಜೀವನದಿಂದ ಬಿಡುಗಡೆಹೊಂದಿದ ನಂತರ ಕಾಲಪ್ರವಾಹಕ್ಕೆ ಸಿಕ್ಕು ಅಸಹಾಯಕತೆಯ ಮೂಲಕ ಅಲೆಮಾರಿಗಳಾಗಬೇಕಾಯಿತೆಂದು ಇವರು ಹೇಳುವದುಂಟು. ಸಾಮಾನ್ಯವಾಗಿ ಇವರು ಪ್ರಾಚೀನ ಕಾಲದವರಂತೆ ಗಡ್ಡೆಗೆಣಸು ಹುಡುಕುತ್ತ ಬೇಟೆಯಾಡುವ ಅಲೆಮಾರಿಗಳಂತಲ್ಲ. ಆದರೆ ಅವಕಾಶ ಕಳೆದುಕೊಂಡ ಮತ್ತು ಪುನಃ ಅವಕಾಶ ದೊರೆಯದ ಸೈನಿಕರಂತಿದ್ದಾರೆ. ಆದ್ದರಿಂದ ಅಪರಾಧವನ್ನೆಸಗುವಾಗಲೂ ಸಹಿತ ಉತ್ತಮ ದರ್ಜೆಯ ಕೌಶಲ್ಯ, ಮನೋಧೈರ್ಯ, ಸಾಹಸ ಪ್ರವೃತ್ತಿಗಳನ್ನು ಪ್ರದರ್ಶಿಸಿ ಅಪರಾಧಗಳನ್ನು ಇವರು ಯಶಸ್ವಿಯಾಗಿ ಎಸಗಿದ್ದುಂಟು. ಆದ್ದರಿಂದ ಇವರ ಧೈರ್ಯ, ಸಾಹಸ ಪ್ರವೃತ್ತಿ ಮತ್ತು ಚಾಣಾಕ್ಷತನ, ಗಡ್ಡೆ, ಬೇರುಗಳನ್ನವಲಂಬಿಸಿ ತಿರುಗಾಡುವ ಅಲೆಮಾರಿಗಳಿಗಿಂತ ಉನ್ನತ ದರ್ಜೆಯದಾಗಿದೆ.

ಮೇಲೆ ಕಾಣಿಸಿದ ಪ್ರತಿಯೊಂದು ವಿಭಾಗದಲ್ಲಿ ಬರುವ ಅಲೆಮಾರಿ ಸಮೂಹದವರು ತಮ್ಮದೇ ಆದ ರೂಢಿ, ಸಂಪ್ರದಾಯಗಳ ಮತ್ತು ಧಾರ್ಮಿಕ ಕಾರಣಗಳ ಮೂಲಕ ತಮ್ಮ ಅಲೆಮಾರಿ ಜೀವನವನ್ನು ಸಮರ್ಥಿಸಿಕೊಳ್ಳುತ್ತಾರೆ. ಅವರ ಪೂರ್ವೇತಿಹಾಸ ಏನೇ ಇದ್ದರೂ ಸಹ ಮತ್ತು ಯಾವುದೇ ಕಾರಣಗಳಿಂದ ತಾವಂಟಿಕೊಂಡ ತಮ್ಮ ಸಂಚಾರಿ ಜೀವನವನ್ನು ಸಮರ್ಥಿಸಿಕೊಂಡರೂ ಸಹಿತ ಅವರಲ್ಲಿ ಸಹನ ಶಕ್ತಿ, ಹೆಚ್ಚು ಸ್ವಚ್ಛಂದ ಮತ್ತು ಸ್ವತಂತ್ರ ಜೀವನಕ್ಕಿರುವ ಅವರ ಪ್ರೀತಿ, ಜೀವನದ ಮೇಲೆ ಹೇರಲ್ಪಡುವ ಕಟ್ಟುಪಾಡುಗಳ ಬಗ್ಗೆ ಅವರಲ್ಲಿರುವ ಅನಾಸ್ಥೆ ಮತ್ತು ಜಿಗುಪ್ಸೆ, ಕ್ಲಿಷ್ಟ ಪದ್ಧತಿಯ ಚೌಕಟ್ಟಿನಲ್ಲಿ ಅಡಕವಾಗಿರುವ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿಯ ಅಪನಂಬಿಕೆ ಮುಂತಾದ ಗುಣಗಳನ್ನು ಗುರುತಿಸಬಹುದು. ತಿರುಗಾಡುವ ಜೀವನದಿಂದಲೇ ತೃಪ್ತಿ ಹೊಂದಿದಂತೆ ಕಾಣುವ ಈ ಜನರು ಕೆಲವೊಮ್ಮೆ ವೈವಿಕ್ತತೆಯಿಂದ ಆವೇಶಹೊಂದಿದವರಂತೆ. ಕೆಲವೊಮ್ಮೆ ತಲೆತಲಾಂತರಗಳಿಂದ ನಡೆದು ಬಂದ ರೂಢಿ ಸಂಪ್ರದಾಯಗಳ ಪ್ರಭಾವಕ್ಕೆ ಸಿಲುಕಿ ಬಿದ್ದವರಂತೆ ಕೇವಲ ಅಲೆಮಾರಿ ಜೀವನಕ್ಕೇ

ಅಂಟಿಕೊಂಡು ತಮ್ಮ ಜೀವನ ನಿರ್ವಹಣೆ ಮಾಡುತ್ತಾರೆ. ಸಂಚಾರೀ ಜೀವನದಲ್ಲಿ ತಾವು ಬೆಳಸಿ ಮುಂದುವರಿಸಿಕೊಂಡು ಬಂದ ತಮ್ಮದೇ ಆದ ಪರಂಪರಾಗತ ಜೀವನ ದರ್ಶನ, ನೀತಿ ಮೌಲ್ಯಗಳು ನಿತ್ಯ ಜೀವನದಲ್ಲಿ ಬರಬಹುದಾದಂತಹ ಕಷ್ಟ-ಕಾರ್ಪಣ್ಯಗಳಿಗೆ, ಅಡ್ಡಿ ಆತಂಕಗಳಿಗೆ ಮಾರ್ಗದರ್ಶನ ಮಾಡುತ್ತವಲ್ಲದೇ ಜೀವನಕ್ಕೊಂದು ಸ್ಥೈರ್ಯವನ್ನು ಕೊಡುತ್ತವೆ. ಸ್ವತಂತ್ರ ಪ್ರವೃತ್ತಿಯ ಉಲ್ಲಾಸಕರವಾದ ಈ ಜೀವನ ಅವರಿಗೆ ಧೈರ್ಯ ಅಲ್ಲದೇ ತಾವು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದವರು ಎಂಬ ಭಾವನೆಯೂ ಸಹ ಬಾರದ ಹಾಗೆ ಜೀವನಕ್ಕೆ ಸಾಂತ್ವನತೆ ಮತ್ತು ಅವರ್ಣನೀಯವಾದ ಮತ್ತು ಅಗೋಚರವಾದ ಮನಸ್ಸಂತೋಷವನ್ನು ಕೊಡುತ್ತದೆ. ತಿರುಗಾಟದ ಜೀವನದಿಂದ ದೊರೆಯುವ ಸಂಪೂರ್ಣ ಸ್ವಾತಂತ್ರ್ಯವು, ಸ್ವಚ್ಛಂದ ಜೀವನವು ಕಾಯಂ ನೆಲೆಗೊಳ್ಳುವಿಕೆಯಲ್ಲಿ ಸಿಗಲಾರದೆಂಬುದು ಅವರ ಭಾವನೆ. ಆದ್ದರಿಂದ ನಿರಪೇಕ್ಷಿತವಾದ, ನಿಸ್ಸತ್ವವಾದ ಕಾಯಂ ನೆಲೆಗೊಳ್ಳುವಿಕೆಗಿಂತ ಸ್ವಚ್ಛಂದ ಸಂಚಾರಿ ಜೀವನವನ್ನೇ ಅವರು ಮೆಚ್ಚುತ್ತಾರೆ.

ಮೂಲತಃ ಸ್ವಚ್ಛಂದ ತಿರುಗಾಟದ ಪ್ರವೃತ್ತಿಯವರಾದಾಗ್ಯೂ ಸಹ ಇತ್ತಿತ್ತಲಾಗಿ ಸಾವಕಾಶವಾಗಿ ಸ್ಥಿರ ಜೀವನಕ್ಕಂಟಿಕೊಂಡ ಕೆಲ ನಿದರ್ಶನಗಳು ಗೋಚರಿಸತೊಡಗಿವೆ. ಆಧುನಿಕ ಸಮಾಜದ ಕ್ಲಿಷ್ಟವಾದ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸರದ ಒತ್ತಡದಿಂದಾಗಿ ಕೆಲವೊಂದು ಸಮೂಹಗಳಲ್ಲಿ ಕಾಣಬರುತ್ತಿದ್ದ ಅಲೆಮಾರಿತನ ಸಾವಕಾಶವಾಗಿ ಅಗೋಚರವಾಗತೊಡಗಿದೆ. ಕೆಲ ಸಮೂಹಗಳು ಅಲೆಮಾರಿ ಜೀವನವನ್ನು ಬಿಟ್ಟುಕೊಡುತ್ತಿದ್ದಾರೆ. ಅನ್ನುವದಷ್ಟೇ ಸಮಾಧಾನಕರ ವಿಷಯವಲ್ಲ. ಇನ್ನಿತರ ಜನರಂತೆ ವಿಶಿಷ್ಟ ಸಮಸ್ಯೆಗಳನ್ನೆದುರಿಸುತ್ತಿರುವ ಈ ಜನರೂ ಸಹ ತಮ್ಮ ಜೀವನವನ್ನು ತಾವೇ ರೂಪಿಸಿಕೊಳ್ಳುತ್ತಿದ್ದಾರೆ. ಇವರು ಜೀವನದ ಹಲವಾರು ಸಮಸ್ಯೆಗಳಿಂದ ಮುತ್ತಲ್ಪಟ್ಟು ಕಷ್ಟಕರವಾದ ಜೀವನ ನಿರ್ವಹಿಸುತ್ತಿದ್ದಾರೆ. ಈಗಿನ ಕ್ಲಿಷ್ಟ ಪರಿಸ್ಥಿತಿಯಲ್ಲಿ ತಮ್ಮ ಸಮಸ್ಯೆಗಳನ್ನು ತಾವೇ ನಿವಾರಿಸಿಕೊಳ್ಳಲಸಮರ್ಥರಾದ ಈ ಜನರು ಉಳಿದವರ, ಮುಖ್ಯವಾಗಿ ಸರಕಾರದ, ಸಹಾಯ ಯಾಚನೆಯಲ್ಲಿದ್ದಾರೆ.

ಭಾರತದ ಅಲೆಮಾರಿ ಸಮೂಹಗಳಿಗೆ ಸೀಮಿತವಾದ ಗಮನಾರ್ಹ ವಿಷಯವೆಂದರೆ ಇವರು ಉಳಿದ ಜನರ ಅವಕೃಪೆಗಾಗಲೀ ಮತ್ತು ಅವರ ದ್ವೇಷಕ್ಕೆ ಗುರಿಯಾದವರಾಗಲೀ ಆಗಿ ಉಳಿದಿಲ್ಲ. ಯಾಕೆಂದರೆ ಇವರು ಸಮಾಜಕ್ಕೆ ವಿವಿಧ ರೀತಿಯಲ್ಲಿ ಸಹಾಯ ಸಲ್ಲಿಸುತ್ತ ಬಂದಿದ್ದಾರೆ. ಇವರು ದೇಶಾಭಿವೃದ್ಧಿಯ ಕಾರ್ಯದಲ್ಲಿ ಸಕ್ರಿಯ ಭಾಗವಹಿಸದಿದ್ದರೂ ಸಹ ಕೆಲವೊಂದು ಅಪರಾಧಿ ಸಮೂಹಗಳನ್ನು ಹೊರತುಪಡಿಸಿ ಇತರರು ರಾಷ್ಟ್ರಾಭಿವೃದ್ಧಿಯ ಮಾರ್ಗದಲ್ಲಿ ಯಾವುದೇ ರೀತಿಯ ಅಡ್ಡಿ ಆತಂಕಗಳನ್ನೊಡ್ಡಿಲ್ಲ. ಹೀಗಾಗಿ ಅವರನ್ನು ಸಮಾಜಘಾತಕ ಜನರೆಂದು ಪರಿಗಣಿಸಲು ಬರುವದಿಲ್ಲ. ಆದರೆ ಬೃಹತ್ ರಾಷ್ಟ್ರದ ಪ್ರಜೆಗಳಾದ ಇವರು ತಮಗೆ ಸ್ವಾಭಾವಿಕವಾಗಿ ಲಭಿಸಬೇಕಾದ ಸವಲತ್ತುಗಳನ್ನು ಕಳೆದುಕೊಂಡದ್ದು ಗಮನೀಯ. ಇವರಲ್ಲಿ ಬಹು

ಪಾಲು ಜನರು ಮತದಾರರೇ ಅಲ್ಲ. ಮತದಾನದ ಸೌಲಭ್ಯ ಸಿಕ್ಕವರೂ ಸಹ ತಮ್ಮ ಸಂಚಾರಿ ಜೀವನದಿಂದಾಗಿ ಮತ ಚಲಾಯಿಸುವುದೂ ವಿರಳ. ಎಲ್ಲಾ ಭಾರತೀಯರಿಗೆ ಕೊಡಮಾಡಿದ ಸಮತೆ ಮತ್ತು ನ್ಯಾಯ ಈ ಮೌಲ್ಯಗಳ ವಿಷಯಕ್ಕೆ ಅಜ್ಞಾನಹೊಂದಿದ ಈ ಜನ ದುರ್ಬಲ ವರ್ಗಗಳ ಜನರ ಏಳಿಗೆಗಾಗಿ ಸಂವಿಧಾನವು ಕೊಡಮಾಡಿದ ಸವಲತ್ತುಗಳಿಂದಲೂ ವಂಚಿತರಾಗಿದ್ದಾರೆ.

ಇವಲ್ಲದೇ. ಬೇರೆ ಸಮಸ್ಯೆಗಳಿಂದಲೂ ಅವರು ಸುತ್ತುವರಿಯಲ್ಪಟ್ಟಿದ್ದಾರೆ. ಇವರಲ್ಲಿ ಶಿಶುಗಳ ಮರಣಸಂಖ್ಯೆಯೂ ಹೆಚ್ಚು. ಕಾಯಂ ಗಳಿಕೆಯ ಅನಿಶ್ಚಿತತೆಯಿಂದಾಗಿ ಅವರ ಅಸ್ತಿತ್ವವೇ ಶಿಥಿಲಗೊಳ್ಳುವ ಅಂಜಿಕೆ ಇದೆ. ಮೇಲಿಂದಮೇಲೆ ಬಡತನ ಮತ್ತು ಹಸಿವೆಯ ಬೇಗೆಯಿಂದ ಬಳಲುವ ಇವರು ಅಪರಾಧಿ ಮನೋಭಾವನೆಯನ್ನು ಬೆಳಸಿಕೊಳ್ಳುವದುಂಟು. ಇವರ ಪೂರ್ವಜರ ದುರಾಚಾರಗಳಿಂದಾಗಿ ಕೆಲವು ಸಮೂಹಗಳು ಇತರೇ ಜನರ ಸಹಾನುಭೂತಿಯನ್ನು ಕಳೆದುಕೊಂಡಿದ್ದಾವಲ್ಲದೇ ಅವರ ಅವಕೃಪೆಗೂ ಮತ್ತು ದಬ್ಬಾಳಿಕೆಗೂ ಒಳಗಾಗಿದ್ದಾರೆ. ಹೀಗಾಗಿ ಅವರಲ್ಲಿ ಅಜ್ಞಾನ, ಅನಕ್ಷರತೆ ಇದ್ದಾಗ್ಯೂ ಮತ್ತು ಅವರ ಆರ್ಥಿಕ ಸ್ಥಿತಿ ಕುಸಿದಾಗ್ಯೂ ಇತರೇ ಜನರ ಸಹಾನುಭೂತಿಯನ್ನು ಗಳಿಸಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಹೆಚ್ಚು ಅನುಕೂಲವುಳ್ಳ ಸುದ್ಯೆವಿಗಳು ಈ ಜನರನ್ನು ತಮ್ಮ ಸಮಾಜದೊಡನೆ ವಿಲೀನಗೊಳಿಸುವದಕ್ಕೆ ಹಿಂದ ಮುಂದೆ ನೋಡುತ್ತಾರೆ. ಅವರ ಆಚಾರ–ವಿಚಾರಗಳು, ಜಾದೂ ಮತ್ತು ಇಂದ್ರಜಾಲ, ಭೂತ–ಪ್ರೇತಗಳನ್ನು ಒಲಿಸಿಕೊಳ್ಳುವ ಅವರ ಪ್ರವೃತ್ತಿ ಆಗಾಗ್ಗೆ ಅವರೆಸಗುವ ತುಡುಗು ಮತ್ತು ಪುಂಡಾಟಿಕೆಗಳು ಮುಂತಾದವುಗಳನ್ನು ಮುಂದುಮಾಡಿ ಅವರನ್ನು ಉಳಿದ ಸಮಾಜಗಳು ದೂರದಲ್ಲಿಯೇ ಇಟ್ಟಿವೆ. ಈ ಎಲ್ಲ ಕಾರಣಗಳು ಅವರ ಮೇಲೆ ಪ್ರತಿಕೂಲ ಪರಿಣಾಮ ಬೀರಿವೆಯಲ್ಲದೇ ಅವರ ಸಮಸ್ಯೆಗಳನ್ನು ಬಿಡಿಸುವಲ್ಲಿ ಅಡ್ಡಿ–ಆತಂಕಗಳನ್ನೊಡ್ಡಿವೆ.

ದೇಶದ ತುಂಬೆಲ್ಲಾ ಪಸರಿಸಿದ ಈ ಸಮೂಹಗಳನ್ನು ಸ್ವತಂತ್ರ ಭಾರತವು ಇನ್ನು ಮುಂದೆ ಅಲಕ್ಷಿಸಬಾರದು. ಈ ಸಮೂಹಗಳು ಶಾಂತಿಯುತ. ಸಮಾಧಾನಕರವಾದ ಜೀವನವನ್ನು ಸಾಗಿಸುವಂತೆ, ತಮ್ಮ ಅಭಿವೃದ್ಧಿಯೊಡನೆ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸುವಂತೆ ಮಾಡಲು ಈ ಸಮೂಹಗಳ ಸಮಸ್ಯೆಗಳನ್ನು ಯಾವ ವಿಧಾನದಿಂದ ಬಿಡಿಸಬೇಕು ?

ಇತ್ತೀಚಿಗಲಾಗಿ ಕೇಂದ್ರ, ರಾಜ್ಯ ಸರಕಾರಗಳು ಮತ್ತು ಸಮಾಜ ಕಲ್ಯಾಣ ಸಂಸ್ಥೆಗಳು ಅವರ ಸಮಸ್ಯೆಗಳತ್ತ ಮತ್ತು ಅವರ ಕಲ್ಯಾಣ ಸಾಧಿಸುವ ಅವಶ್ಯಕತೆಗಳತ್ತ ಗಮನ ಹರಿಸಿವೆ. ದೇಶದ ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ಲಭಿಸಿದ ನಂತರವೂ ಈ ಸಮೂಹಗಳನ್ನು ನಿರ್ಲಕ್ಷಿಸಲಾಗಿದೆ ಎಂಬ ಕಾರಣಕ್ಕಾಗಿ ಅವರ ಅಭ್ಯುದಯದತ್ತ ಹೆಚ್ಚಿನ ಗಮನ ಕೊಡಬೇಕಾಗಿದೆ. ಕೆಲವು ರಾಜ್ಯಗಳು ಮತ್ತು ಖಾಸಗಿ ಸಂಘಸಂಸ್ಥೆ

ಗಳು ಅವರ ಕಲ್ಯಾಣ ಸಾಧಿಸುವ ದಿಸೆಯಲ್ಲಿ ಕಾರ್ಯ ತತ್ಪರವಾಗಿವೆ. ಆದರೆ ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಅವರನ್ನು ಒಕ್ಕಲುತನ ನಿವೇಶನಗಳಲ್ಲಿ ನೆಲೆಗೊಳಿಸಲು ಪ್ರಯತ್ನಿಸಲಾಗುತ್ತಿದೆ. ಒಂದೆಡೆ ನೆಲೆ ನಿಲ್ಲಲು ಕೇವಲ ಮನೆಗಳನ್ನು ಕಟ್ಟಿಸಿಕೊಡುವುದರಿಂದ ಮತ್ತು ಸಾಗುವಳಿಗೆ ಕೆಲವೊಂದು ಭೂಮಿಯನ್ನು ಕೊಡುವುದರಿಂದ ಅವರ ಸಮಸ್ಯೆಗಳು ಪರಿಹಾರವಾಗಲಾರವು. ಜೀವನೋಪಾಯಕ್ಕಾಗಿ ಅವರು ನಡೆಸಿದ ಹೋರಾಟ ಅವರ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆ, ಸಂಸ್ಕೃತಿ ಮತ್ತು ಅಭಿರುಚಿಗಳು. ಮಾನಸಿಕ ಸ್ಥಿತಿ. ಐತಿಹಾಸಿಕ ಹಿನ್ನೆಲೆ ಮುಂತಾದವುಗಳ ಶಾಸ್ತ್ರೀಯ ಅಧ್ಯಯನ ಅವಶ್ಯ. ಇವೆಲ್ಲ ಅಂಶಗಳ ಆಧಾರದ ಮೇಲೆ ಈ ಸಮೂಹಗಳನ್ನು ವಿಂಗಡಿಸಿ ಇವರ ಕಲ್ಯಾಣ ಕಾರ್ಯಗಳ ದಿಶೆಯಲ್ಲಿ ಯೋಜನೆಗಳನ್ನು ಮತ್ತು ಧೋರಣೆಗಳನ್ನು ರೂಪಿಸುವುದು ಅವಶ್ಯ.

ಆಧಾರ ಗ್ರಂಥಗಳು

1. Wadia, A. R. (Ed.) : **History and Philosophy of Social Work in India**, Allied Publishers. Private Limited, Bombay, 1961.
2. Fuchs, Stephen : **The Aboriginal Tribes of India**, Macmillian, 1973.
3. Majumdar, D. N. : **Races and Cultures of India**, Asia Publishing House. Bombay, 1961.

ಕುಟುಂಬ ಕಲ್ಯಾಣ ಕಾರ್ಯಕ್ರಮದಲ್ಲಿ ಗ್ರಾಮೀಣ ಯುವಜನರ ಪಾತ್ರನಿರ್ವಹಣೆ

● ಎಸ್. ಆರ್. ಶಾಸ್ತ್ರಿ

ಕುಟುಂಬಕಲ್ಯಾಣ ಕಾರ್ಯಕ್ರಮ ಒಂದು ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮ. ಈ ಕಾರ್ಯಕ್ರಮದ ಮೂಲ ಉದ್ದೇಶ ಪ್ರತಿ ಕುಟುಂಬದಲ್ಲಿ ಪ್ರಗತಿಪರ ವಾತಾವರಣ ಉಂಟುಮಾಡಿ ಸುಖೀರಾಜ್ಯವನ್ನು ಕಟ್ಟುವಲ್ಲಿ ಅವಿರತವಾಗಿ ಶ್ರಮಿಸುವುದು. ಬೆಳೆಯುತ್ತಿರುವ ಜನಸಂಖ್ಯೆಯನ್ನು ನಿರ್ಬಂಧಗೊಳಿಸಿ ನೈಸರ್ಗಿಕ ಸಂಪನ್ಮೂಲಗಳನ್ನು ಉತ್ತಮವಾಗಿ ಬೆಳೆಸಿದರೆ ಸುಖೀರಾಜ್ಯ ಸಾಧ್ಯವಾಗಿ, ಕುಟುಂಬಗಳು ಸುಖದ ನೆಲೆಗಳಾಗುತ್ತವೆ. ಈ ಬೃಹದುದ್ದೇಶ, ಸನಾತನೀಯ ಸಂಸ್ಕೃತಿಯ ಮೇಲೆ ನಿಂತಿರುವ ಗ್ರಾಮಪ್ರಧಾನವಾದ ಭಾರತದಂಥ ರಾಷ್ಟ್ರದಲ್ಲಿ ಕೇವಲ ಆಚರಣೆಗೆ ದೂರವಾದ ತತ್ವದಂತಾಗಿದೆ. ಕೃತ್ರಿಮ ರೀತಿಯಿಂದ ಜನಸಂಖ್ಯೆಯನ್ನು ನಿಯಂತ್ರಿಸುವುದು, ವೈದ್ಯಕೀಯವಾಗಿ ಶಿಶುವಿನ ಪಿಂಡವನ್ನು ತೆಗೆಸಿ, ಈಗ ಈ ಮಗು ಬೇಡ ಎನ್ನುವ ನಿರ್ಧಾರ ಕೈಕೊಳ್ಳುವುದು, ಮಕ್ಕಳನ್ನು ದೇವರು ಕೊಡುತ್ತಾನೆ. ಅಂತಹ ಮಕ್ಕಳ ಜನನವನ್ನು ಛಿದ್ರಗೊಳಿಸುವುದು, ದೇವರ ಕೋಪ, ತಾಪ, ಶಾಪಗಳಿಗೆ ಪಾತ್ರರಾಗುವ ಕ್ರಮ. ಇದು ಪಾಪ ಎನ್ನುವ ಸಾಂಸ್ಕೃತಿಕ ಮೌಢ್ಯ ಪರಂಪರೆಗೆ ಅಂಟಿಕೊಂಡಿರುವ, ಅವಿದ್ಯಾವಂತರು, ಸನಾತನಿಗಳು, ಪ್ರಗತಿಪರ ಬದಲಾವಣೆಯ ಪ್ರಭಾವಕ್ಕೆ ಒಳಗಾಗದೆ ಅಸಂಖ್ಯಾತ ಹಳ್ಳಿಗರು, ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ನಿಷ್ಫಲಗೊಳಿಸುತ್ತಿದ್ದಾರೆ. ಇದರಿಂದಾಗಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಯೋಜಿತ ಯಶಸ್ಸನ್ನು ಕಾಣುವಲ್ಲಿ ಸಫಲವಾಗುತ್ತಿಲ್ಲ. ಈ ಸಮಸ್ಯೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ವಿಶ್ಲೇಷಿಸಿದಾಗ ಈ ಕೆಳಗಿನ ಕೆಲವು ಗಮನಾರ್ಹ ಅಂಶಗಳು ಕಂಡುಬರುತ್ತವೆ.

ವಿದ್ಯಾವಂತರು, ಉದ್ಯೋಗಸ್ಥರು, ನಗರವಾಸಿಗಳು, ಶ್ರೀಮಂತರು ಕುಟುಂಬ ಕಲ್ಯಾಣವನ್ನು ತತ್ವತಃ ಒಪ್ಪಿ ಅದನ್ನು ಪಾಲಿಸುವಲ್ಲಿ ಸಹಕಾರಿಗಳಾಗುತ್ತಲಿದ್ದಾರೆ.

ಇದಕ್ಕೆ ಕಾರಣವೇಂದರೆ ಯಾವುದೇ ಸಾಮಾಜಿಕ ಬದಲಾವಣೆಯನ್ನು ಗುಂಪಿನ ಜನ ಸ್ವಾಗತಿಸುತ್ತಾರೆ, ಅದಕ್ಕೆ ಸಹಾಯಕರಾಗುತ್ತಾರೆ.

ಕುಟುಂಬಕಲ್ಯಾಣ, ಸಣ್ಣಕುಟುಂಬದ ಆದರ್ಶ ಇವು ಸಾಮಾಜಿಕ ಬದಲಾವಣೆಗಳಾಗಿ ಭಾರತದಲ್ಲಿ ಕಾರ್ಯಮಾಡುತ್ತಿವೆ. **ಅವಿಭಕ್ತ ಕುಟುಂಬ** ಆರ್ಥಿಕ ಪ್ರಗತಿಗೆ ಅನುಕೂಲ, ಗ್ರಾಮಾಂತರ ಪ್ರದೇಶಗಳಲ್ಲಿ **ದೊಡ್ಡ ಕುಟುಂಬ** ಆರ್ಥಿಕವಾಗಿ, ಸಾಮಾಜಿಕವಾಗಿ ಭದ್ರತೆಯನ್ನು ಒದಗಿಸುತ್ತದೆ, ಎನ್ನುವ ಸಾಮಾಜಿಕ ಪರಂಪರೆಯಲ್ಲಿ ಹಳ್ಳಿಗರು ಬದುಕಿ ಉಳಿದಿದ್ದಾರೆ, ಬದುಕುತ್ತಿದ್ದಾರೆ. ಇದಲ್ಲದೇ ಹಳೆಯ ಸಂಪ್ರದಾಯದಲ್ಲಿಯೇ ಅವರ ಜೀವನ ದಿನನಿತ್ಯವೂ ನಡೆಯುತ್ತಿದೆ. ಇದಕ್ಕೆ ಕಾರಣ ವಿದ್ಯಾವಂತರು, ಶ್ರೀಮಂತರು, ಉದ್ಯೋಗಸ್ಥರು ಇವರೆಲ್ಲ ಹಳ್ಳಿಗಳು ಮತ್ತು ನಗರಗಳಲ್ಲಿಯ ಭೌಗೋಲಿಕ ಅಂತರದ ಜೊತೆಗೆ ಸಾಮಾಜಿಕ ಅಂತರವನ್ನು ದ್ವಿಗುಣವಾಗಿ ಹೆಚ್ಚಿಸುತ್ತಿದ್ದಾರೆ. ತತ್ಪರಿಣಾಮವಾಗಿ ಹಳ್ಳಿಗಳನ್ನು ಪ್ರತ್ಯೇಕವಾದ ಹಾಗೂ ಪ್ರಗತಿ ಮತ್ತು ಬದಲಾವಣೆಗೆ ನಿಲುಕದ ಸಮುದಾಯಗಳನ್ನಾಗಿ ಮಾಡುತ್ತಿದ್ದಾರೆ. ಹಳ್ಳಿಗಳಿಗೆ ಹೋಗುವುದಾಗಲಿ, ಅಲ್ಲಿ ಕೆಲಸಮಾಡುವುದಾಗಲಿ, ಕೈಗಾರಿಕೆಗಳನ್ನು ನಡೆಸುವುದಾಗಲಿ, ಆಸ್ಪತ್ರೆ ತೆಗೆಯುವುದಾಗಲಿ, ಕೇವಲ ಪ್ರಚಾರದ ವೈಖರಿಯ ರೀತಿಯಾಗಿ ಮಾತ್ರ ಉಳಿದು, ಕಾರ್ಯಗತಮಾಡುವಲ್ಲಿ ವಿಫಲರಾಗುತ್ತಿದ್ದಾರೆ. ವಿದ್ಯಾವಂತರು ಅವರೊಡನೆ ಜೋಗುಳ ಹೇಳುತ್ತಿದ್ದಾರೆ. ಹಳ್ಳಿಗಳಲ್ಲಿ ಹುಟ್ಟಿ ಬೆಳೆದು ಇಂದು ನಗರಗಳಲ್ಲಿ ನೆಲೆಸಿದಂತಹ ವಿದ್ಯಾವಂತರ ತತ್ವ ಪುಸ್ತಕದ ಬದನೆಕಾಯಿ ಆಗುತ್ತಿದೆ. (ಹಳ್ಳಿಗೆ ತಿರುಗಿರಿ) 'Back to Villages' ಎಂದು ಹೇಳಿದ ಗಾಂಧೀವಾದ ಕೇವಲ ಘೋಷಣೆಗೆ ಉಪಯೋಗವಾಗುತ್ತಿದೆ. ಗ್ರಾಮೀಣ ಕೈಗಾರಿಕೆಗಳಿಗೆ ನೆಲೆ ಸಿಗುತ್ತಿಲ್ಲ. ಹೀಗಾಗಿ ಗ್ರಾಮಸಮುದಾಯದ ಪ್ರಗತಿಪರ ಕಾರ್ಯಗಳಿಗೆ ನಿಜವಾದ ವ್ಯಾವಹಾರಿಕ ಚಾಲನೆ ಸಿಗುತ್ತಿಲ್ಲ. ಬಹುಸಂಖ್ಯೆಯಲ್ಲಿ ಇರುವ ಗ್ರಾಮಸ್ಥರೇ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುವ ಆಧಾರ. ಆ ಬಹುಸಂಖ್ಯಾಕರ ಪಾಲುಗಾರಿಕೆಯೇ ಯಶಸ್ಸಿಗೆ ಮೂಲ ಎನ್ನುವ ಮಾತನ್ನು ದೃಢೀಕರಿಸಿ ಕಾರ್ಯಗತಗೊಳಿಸಬೇಕಾಗಿದೆ.

ರಾಷ್ಟ್ರೀಯ ಕಲ್ಯಾಣ ಕಾರ್ಯಕ್ರಮಗಳೆಲ್ಲ. ಉದಾಹರಣೆಗೆ ಕುಟುಂಬ ಕಲ್ಯಾಣ ಕಾರ್ಯಕ್ರಮದ ನಿರ್ವಹಣೆಯು ಹೊಣೆ ಮೂರು ಹಂತದಲ್ಲಿ ನೆಲೆ ನಿಂತಿದೆ. **ಸರಕಾರದ ಮೇಲೆ, ಸ್ವಯಂ ಸೇವಾಸಂಸ್ಥೆಗಳ ಮೇಲೆ ಮತ್ತು ಸಮಾಜ, ವಿಶೇಷವಾಗಿ ಗ್ರಾಮೀಣ ಸಮಾಜದ ಮೇಲೆ.**

ವಸ್ತುನಿಷ್ಟ ದೃಷ್ಟಿಯಿಂದ ಅವಲೋಕಿಸಿದಾಗ ಈ ಯಾವ ಕಾರ್ಯಕ್ರಮಗಳು ಜನರ ಪಾಲುಗಾರಿಕೆ ಇಲ್ಲದೆ ಯಶಸ್ವಿಯಾಗಲು ಸಾಧ್ಯವೇ ಇಲ್ಲ. ಕಾರ್ಯಕ್ರಮದ ಅವಶ್ಯಕತೆಯನ್ನು ಜನರು ಅರಿಯಬೇಕು, ಮುಗಿಲಾಗಿ, ಒಪ್ಪಬೇಕು. ಅವರ ಪಾತ್ರದ ಹೊಣೆ ತಿಳಿದುಕೊಳ್ಳಬೇಕು. ಉದ್ದೇಶ ಒಂದುಗೂಡಬೇಕು. ಇವಾಗಬೇಕಾದರೆ ಕಾರ್ಯ

ವಿಧಾನ ಸಾಂಸ್ಕೃತಿಕ ಪರಂಪರೆಯಮೇಲೆ ಆಧಾರಿತವಾಗಿದ್ದು ಸುಧಾರಿತ ಪದ್ಧತಿಯ ಸಹಾಯದಿಂದ ಬದಲಾವಣೆಯ ಪ್ರಭಾವ ಮೂಡಿಸಬೇಕು. ಎಲ್ಲಿಯವರೆಗೆ ಬದಲಾವಣೆ ಪ್ರಗತಿಯನ್ನು ತರುತ್ತದೆ ಎನ್ನುವ ಭಾವನೆಗೆ ಮತ್ತು ಅನುಭವ ಜನರಲ್ಲಿ ಬರುವದಿಲ್ಲವೋ ಅಲ್ಲಿಯವರೆಗೆ ಆ ಬದಲಾವಣೆ ಅಸ್ವೀಕೃತವಾಗಿ ಉಳಿಯುತ್ತದೆ. ಕಾರ್ಯವಿಧಾನ ಸರಿಯಾಗಿಲ್ಲದಿದ್ದರೆ ಹೊಣೆಗೇಡಿತನ ಬೆಳೆದು, ಹೊಣೆ ಹೊರಿಸುವ ಸ್ವಭಾವ ಬೆಳೆಯುತ್ತದೆ. ಜನರು ಸರಕಾರದಮೇಲೆ, ಸರಕಾರ ಜನರಮೇಲೆ ಹಾಕುವ ಪರಿಸ್ಥಿತಿ ಉಂಟಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮ ಇಂದು ತೊಳಲಾಡುತ್ತಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ **ಸ್ವಯಂ ಸೇವಾ ಸಂಸ್ಥೆಗಳಿಗೆ** ವಿಶೇಷವಾದ ಕಾರ್ಯಕ್ಷೇತ್ರವಿದೆ. ಸ್ವಯಂಸೇವಾ ಸಂಸ್ಥೆಗಳು ಜನರನ್ನೂ, ಸರಕಾರವನ್ನೂ, ರಾಷ್ಟ್ರೀಯ ಕಾರ್ಯಕ್ರಮಗಳನ್ನೂ ಪೂರಕ ದೃಷ್ಟಿಯಿಂದ ತಿಳಿಸಿ ಕೊಡುವ ಸಹಾಯಮಾಡಬೇಕು. ಸರಕಾರ ಕ್ಷೇತ್ರದಲ್ಲಿರುವ (Target) **ಗುರಿಯ ಒತ್ತಡ**, ಎಲ್ಲಾ ಕೆಲಸಗಳನ್ನು ಸರಕಾರದವರೇ ಮಾಡಬೇಕು, ಇದರಲ್ಲಿ ನಮ್ಮದೇನು ಜವಾಬ್ದಾರಿಯಿಲ್ಲ ಎನ್ನುವ ಸರಿಯಲ್ಲದ ತಿಳುವಳಿಕೆಯ ಅಸಂಖ್ಯಾತ ಜನಸಮುದಾಯ, ಕೇವಲ ರಾಜಕೀಯ ಮುಖಂಡತ್ವವೇ ಉದ್ದೇಶವಾಗಿ ಚುನಾವಣೆಗಳಲ್ಲಿ ಆರಿಸಿಬರಬೇಕೆಂಬುದೇ ಆದ್ಯ ಉದ್ದೇಶವಾಗಿರುವ ನಾಯಕರುಗಳೇ ಹೆಚ್ಚಾಗಿರುವ ಸಮಾಜ, ಸೇವಾ ಪ್ರಧಾನವಾಗಿರದ, ಸಮಾಜಸೇವಕರಿರುವ ವಾತಾವರಣದಲ್ಲಿ ಸ್ವಯಂಸೇವಾಸಂಸ್ಥೆಗಳು ಕ್ರಿಯಾತ್ಮಕವಾಗಿ ಮಾಡಬೇಕಾದ ಕೆಲಸ ಬಹಳವಿದೆ.

ಯುವಜನ ಮತ್ತು ಯುವಜನ ಸಂಸ್ಥೆಗಳಿಗಾಗಿ ಒಂದು ಕಾರ್ಯವಿಧಾನವನ್ನು ನೀಡಬಹುದು. ಇದನ್ನು **ಹಂತಹಂತವಾಗಿ ಕಾರ್ಯಗತ ಮಾಡಬೇಕು.**

ಮೊದಲನೆಯ ಹಂತದಲ್ಲಿ ಈ ಕಾರ್ಯಕ್ರಮದ ಬಗೆಗೆ **ತಿಳಿದುಕೊಳ್ಳಬೇಕಾದ ವಿಷಯಗಳು ಹೀಗಿವೆ :**

ಭಾರತೀಯ ಗ್ರಾಮೀಣ ಸಮಾಜವು ಸನಾತನ ಸಂಸ್ಕೃತಿಯ ಮೇಲೆ ನಿಂತಿದೆ. ಗ್ರಾಮದ ಹಿರಿಯರೇ ಸಮುದಾಯದ ನಾಯಕರು. ಇದು ಅವರ ಸ್ವತ್ತು ಎನ್ನುವ ಹಿರಿಯರ ಭಾವನೆ. ಯುವಕರು ಮುಂದಾಳುಗಳಾಗಬೇಕಾದಲ್ಲಿ ಹಿರಿಯರು ಅಸಂತುಷ್ಟ ಭಾವನೆ ತೋರಿಸುವ ಪರಿಸರವಿರುತ್ತದೆ. ಗ್ರಾಮಗಳಲ್ಲಿ ಧರ್ಮದ ಹೆಸರಿನಲ್ಲಿ ಜನರು ಯಾವುದನ್ನೂ ಒಪ್ಪುವ ವಾತಾವರಣವಿರುತ್ತದೆ. ಹಳೆಯ ತಲೆಮಾರುಗಳಲ್ಲಿ ಹೊಸತನ್ನು ವಿರೋಧಿಸುವ ಪ್ರವೃತ್ತಿ ಇರುತ್ತದೆ. ಗ್ರಾಮೀಣ ಸಮಾಜದಲ್ಲಿ ಅವಿಭಕ್ತ ಕುಟುಂಬವೇ ಶಕ್ತಿಗೆ ಮೂಲ ಎನ್ನುವ ಅಚಲ ವಿಶ್ವಾಸವನ್ನು ಉಳಿಸಿಕೊಂಡಿರುವ ಅಸಂಖ್ಯಾತ ಕುಟುಂಬಗಳಿರುತ್ತವೆ. ಮನವೊಲಿಸಿದರೆ ಯಾವುದನ್ನೂ ಮಾಡುವಂತಹ ಸರಳ ಗುಣ ಗ್ರಾಮಸ್ಥರಲ್ಲಿರುತ್ತದೆ. ಹೆದರಿಸಿದರೆ, ಎದುರಿಗೆ ಹೆದರಿದಂತೆ ಮಾಡಿ,

ವಿರೋಧಭಾವನೆ, ಅಸಹಕಾರ ಭಾವನೆ ಬೆಳೆಸಿಕೊಳ್ಳುವ ಜಿಗುಟು ಸ್ವಭಾವ ಅವರದು. ಅವರಲ್ಲಿ ಮೂಢನಂಬಿಕೆಗಳು ಪ್ರಭಾವಿತ ಸ್ಥಿತಿಯಲ್ಲಿದ್ದು, ಪ್ರಗತಿಪರ ವಿಚಾರಗಳಾಗಲಿ, ಕಾರ್ಯಗಳಾಗಲಿ ಅವರ ಮನ ಒಲಿಸಿಕೊಳ್ಳುವಲ್ಲಿ ವಿಫಲವಾಗಿರುವ ಸ್ಥಿತಿ ಇರುತ್ತದೆ.

ಇನ್ನೊಂದು ಕಡೆ ಬದಲಾವಣೆಯನ್ನು ತರಲು ನಿಯೋಜಿತವಾಗಿರುವ ಸಂಸ್ಥೆಗಳು ಸದಾ ಕಾರ್ಯನಿರತವಾಗಿ ಕಾರ್ಯಕ್ರಮದಲ್ಲಿ ಭಾಗವಹಿಸುವಲ್ಲಿ ಅನಾಸಕ್ತಿ ತೋರಿಸುತ್ತಿರುವಪ್ರಸಂಗಗಳು ಮೇಲಾಗಿ ಸಮಸ್ಯೆ ಬಗ್ಗೆ ಅರಿವಾಗಲೀ, ಅವಶ್ಯಕತೆ ಅನಿಸುವಂಥ ಜಾಗ್ರತಾವಸ್ಥೆ ಆಗಲೀ ಇಲ್ಲದಿರುವುದು ಕಂಡುಬರುತ್ತದೆ.

ಎರಡನೆಯ ಹಂತದಲ್ಲಿ ಕೈಗೊಳ್ಳಬೇಕಾದ ನೈವಿಧ್ಯಮಯ ಕಾರ್ಯಕ್ರಮಗಳು :

ಗ್ರಾಮಸ್ಥರನ್ನು ತಮ್ಮ ವಿವಿಧ ಸಮಸ್ಯೆಗಳ ಬಗ್ಗೆ ಅವಲೋಕನಮಾಡುವಂತೆ ಮಾಡಿ ಇದಕ್ಕಾಗಿ ಯುವಕ ಸಂಘಗಳು ಸಾಮಾಜಿಕ ಸರ್ವೇಕ್ಷಣೆ ಮಾಡಬೇಕು. ನಂತರ ಗ್ರಾಮದ ಸಮಸ್ಯೆಗಳ ಪರಿಹಾರಕಾರ್ಯದಲ್ಲಿ ಅವರನ್ನು ಭಾಗವಹಿಸುವಂತೆ ಮಾಡಬೇಕು. ಇದಕ್ಕಾಗಿ ಗ್ರಾಮಸ್ಥರ ಶಿಬಿರಗಳನ್ನು ಏರ್ಪಡಿಸಿ, ಶ್ರಮದಾನದಿಂದ ರಸ್ತೆ ಸುಧಾರಣೆ ಕಾರ್ಯ, ಕುಡಿಯುವ ನೀರಿನ ತೊಂದರೆ ನೀಗಿಸುವ ಕಾರ್ಯ ಈ ರೀತಿಯ ಸಾಮುದಾಯಿಕ ಅವಶ್ಯಕತೆಗಳನ್ನು ಪೂರೈಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಪೂರ್ಣಮಾಡುವುದು. ಈ ಕಾರ್ಯಕ್ರಮಗಳಲ್ಲಿ ಸಹಾಯಮಾಡುವಂತಹ ಸರಕಾರದ ಸಂಸ್ಥೆಗಳೊಂದಿಗೆ ಮತ್ತು ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಸಹಕಾರ ನೀಡಿ ಪಾಲುಗೊಳ್ಳಬೇಕು.

ಗ್ರಾಮಗಳ ಸಾಂಸ್ಕೃತಿಕ, ಸಾಮಾಜಿಕ, ಧಾರ್ಮಿಕ ಉತ್ಸವಗಳಲ್ಲಿಯೂ ಕ್ರಿಯಾತ್ಮಕವಾಗಿ ಭಾಗವಹಿಸಿ ಗ್ರಾಮದ ಹಿರಿಯರ ವಿಶ್ವಾಸ ಮತ್ತು ಜನರ ಪ್ರೀತಿ ಗಳಿಸಿಕೊಳ್ಳುವದು.

ಯುವಕ ಸಂಘಗಳ ಕಾರ್ಯಕಲಾಪಗಳಲ್ಲಿ ಎಲ್ಲಾ ಸದಸ್ಯರೂ ಸೂಕ್ತ ರೀತಿಯಲ್ಲಿ ಭಾಗವಹಿಸಿ ಅವನ್ನು ಬೆಳೆಸಿ, ಉಳಿಸಿಕೊಳ್ಳಬೇಕು. ಯುವಕ ಸಂಘಗಳು ತಮ್ಮ ಕಾರ್ಯಕಲಾಪಗಳ ಉದ್ದೇಶಗಳನ್ನು ಕೇವಲ ರಾಜಕೀಯ ಮುಖಂಡತ್ವವನ್ನು ಸಾಧಿಸುವುದಕ್ಕಾಗಿ ಇಟ್ಟುಕೊಳ್ಳಬಾರದು. ಹಾಗೆ ಇಟ್ಟುಕೊಂಡಲ್ಲಿ ತಮ್ಮ ಐಕ್ಯತೆಯಲ್ಲಿ ತಪ್ಪಿದರೆ ಸೇವಾಕಾರ್ಯಕ್ಕೆ ವಿರೋಧವಾಗುವಂಥ ವಾತಾವರಣ ಕಲ್ಪಿತವಾಗಬಾರದು.

ಯುವಕಸಂಘಗಳು, ಸರಕಾರದ ಸಂಸ್ಥೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ರಾಷ್ಟ್ರೀಯ ಕಾರ್ಯಕ್ರಮಗಳನ್ನು ಜನರಿಗೆ ಸಫಲವಾಗಿ ಮುಟ್ಟುವಂತೆ ಮಾಡಿ ಯಶಸ್ವಿಯಾಗಿ ಪಾಲುಗೊಳ್ಳುವಂತೆ ಮಾಡಲು ಮಧ್ಯಸ್ಥಿಕೆ ಕಾರ್ಯವಹಿಸಬೇಕು.

ಗ್ರಾಮದ ಸಮಸ್ಯೆಗಳನ್ನು ಬೇರೆಯವರು ಬಂದು ನೀಗಿಸಲಿ ಇಲ್ಲವೇ ಆ ಸಮಸ್ಯೆಗಳಲ್ಲಿಯೇ ತೊಳಲಾಡುತ್ತೇವೆ ಎನ್ನುವ ನಿರ್ವೀರ್ಯ ಭಾವನೆಯನ್ನು ಗ್ರಾಮಸ್ಥರಿಂದ

ತೊಲಗಿಸಿ ನಮ್ಮ ಕೆಲಸ ನಾವು ಮಾಡಬಲ್ಲೆವು. ಮಾಡಬೇಕು ಎನ್ನುವ ಸಾಮಾಜಿಕ ಕ್ರಿಯಾಶೀಲತೆಯ (social action) ಅರಿವನ್ನು ಜನರಲ್ಲಿ ಮೂಡಿಸಬೇಕು.

ಕೊನೆಯದಾಗಿ, ಗ್ರಾಮಸ್ಥರನ್ನು ಪದೇ ಪದೇ ಕಂಡು ಅವರ ಸಮಸ್ಯೆಗಳ ಬಗ್ಗೆ ಸೂಕ್ತ ತಿಳುವಳಿಕೆ ನೀಡಿ, ಇದರಲ್ಲಿ ಗ್ರಾಮಸ್ಥರ ಪಾತ್ರ ತಿಳಿಸಿ ಇದು ಗ್ರಾಮದವನ ಶಕ್ತಿಗೆ ಆಹ್ವಾನ, ಇದನ್ನು ನಿವಾರಿಸುವ ಶಕ್ತಿ ಅವರಲ್ಲಿದೆ ಎನ್ನುವ ಧೈರ್ಯ ಬೆಳಸಿ ಅವರನ್ನು ಕಾರ್ಯಕ್ಕೆ ಹಚ್ಚಬೇಕು. ಸ್ವಯಂ ಶಕ್ತಿ ಬೆಳೆಸುವ ಕಾರ್ಯ ನಡೆಯಬೇಕು.

ಮೂರನೇಯ ಹಂತದಲ್ಲಿ

ಮೇಲಿನ ಒಂದು ಹಿನ್ನೆಲೆಯಲ್ಲಿ ಯುವಕ ಸಂಘಗಳು ಕುಟುಂಬ ಕಲ್ಯಾಣ ಕಾರ್ಯಕ್ರಮವನ್ನು ಗ್ರಾಮಸ್ಥರಲ್ಲಿ ಯಶಸ್ವಿಗೊಳಿಸುವಲ್ಲಿ ವಹಿಸಬೇಕಾದ ಪಾತ್ರ ವಿಚಾರ ಮಾಡಬೇಕು.

ಮೊದಲನೆಯದಾಗಿ ಕುಟುಂಬ ಕಲ್ಯಾಣ ಮತ್ತು ಇದರ ಅರ್ಥವನ್ನು ಗ್ರಾಮಸ್ಥರಿಗೆ ವಿವರಿಸಬೇಕು. ಇದು ಕೇವಲ ಆಪರೇಷನ್ ಮಾಡಿಸಿಕೊಳ್ಳುವುದಲ್ಲ. ಇದರ ಕ್ಷೇತ್ರ ದೊಡ್ಡದಿದೆ. ತಾಯಿ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಲಕ್ಷ್ಯ ವಹಿಸುವುದೇ ಇದರ ಆಧಾರವಾಗಿದೆ ಮುಂತಾದ ಮಹೋದ್ದೇಶಗಳನ್ನು ವಿವರಿಸಬೇಕು.

ಕುಟುಂಬದ ಸರ್ವತೋಮುಖ ಕಲ್ಯಾಣವಾಗಬೇಕಾದರೆ ತಾಯಿಯ ಆರೋಗ್ಯ ಸರಿ ಇರಬೇಕು. ಮನೆಯ ಶಾಂತಿಗೆ ತಾಯಿ ಕಾರಣವೆಂಬ ಸಂಗತಿಯನ್ನು ವಿವರಿಸಬೇಕು.

ಮಗು ಆರೋಗ್ಯವಾಗಿ ಬೆಳೆಯಬೇಕು. ಮಕ್ಕಳು ನಗುತ್ತಿರಬೇಕು. ಇದು ಸಾಧ್ಯವಾಗಬೇಕಾದರೆ ತಂದೆ ತರುವ ಆದಾಯ ಎಲ್ಲರಿಗೂ ಸಾಕಾಗಬೇಕು. ಸಣ್ಣ ಕುಟುಂಬವಿದ್ದರೆ ಇದು ಸಾಧ್ಯವಾಗುತ್ತದೆ ಎನ್ನುವುದನ್ನು ತಿಳಿಸಬೇಕು. ಮಕ್ಕಳು. ಮನೆಯವರು ಕೇವಲ ಕೂಳಿಗಾಗಿ ಬದುಕಿದ್ದರೆ ಅದು ಬದುಕು ಅಲ್ಲ. ಮಕ್ಕಳ ಆರೋಗ್ಯ ಅಭ್ಯಾಸ ಸರಿಯಾಗಿರಬೇಕು. ಆ ಮಕ್ಕಳು ಆ ಮನೆಯ ಹೆಸರನ್ನು ಉಳಿಸಬಲ್ಲರು ಅಂಥಾ ಮಕ್ಕಳನ್ನು ಬೆಳೆಸಬೇಕು. ಇದು ಕಡಿಮೆ ಮಕ್ಕಳು ಇದ್ದರೆ ಸಾಧ್ಯ ಎಂದು ತಿಳಿಸಬೇಕು.

ಮಕ್ಕಳನ್ನು ದೇವರು ಕೊಡುವನೆಂಬ ಮಾತು ಸರಿಯಾಗಿದೆ. ಬುದ್ಧಿಯನ್ನು ಕೂಡ ದೇವರೇ ಕೊಡುತ್ತಾನೆ. ಬುದ್ಧಿವಂತರಾದವರನ್ನು ದೇವರೇ ಹುಟ್ಟಿಸುತ್ತಾನೆ. ಅಂಥಾ ಬುದ್ಧಿವಂತರು ಮಾನವನ ಸುಖಕ್ಕೆ ಯಾವುದು ಒಳ್ಳೆಯದು ಎಂದು ಹೇಳುತ್ತಾರೋ ಅದು ದೇವರು ಹೇಳಿದಂತೆಯೇ. ಬುದ್ಧಿವಂತರು ಇದನ್ನು ಒಪ್ಪುತ್ತಾರೆ, ಎಂದು ತಿಳುವಳಿಕೆ ನೀಡಬೇಕು.

ಕುಟುಂಬ ಕಲ್ಯಾಣ ಕಾರ್ಯದ ವಿವಿಧ ವಿಧಾನಗಳನ್ನು ವಿವರಿಸಬೇಕು. ಅನೇಕ ಬಗೆಯ ತಪ್ಪು ತಿಳುವಳಿಕೆಗೆ ಗುರಿಯಾಗುವ ವೈದ್ಯಕೀಯ ಗರ್ಭನಿವಾರಣೆಯ ಬಗ್ಗೆ ಸರಿಯಾದ ತಿಳುವಳಿಕೆ ಕೊಡಬೇಕು.

ತಡವಾಗಿ ಬುದ್ಧಿ ಬೆಳೆದು. ಲೋಕದ ಅನುಭವ ಬಂದ ನಂತರ ಮದುವೆಯಾದಲ್ಲಿ ದಂಪತಿಗಳಲ್ಲಿ ಕುಟುಂಬದ ಜವಾಬ್ದಾರಿಯನ್ನು ನಿರ್ವಹಿಸುವ ಶಕ್ತಿ ಬರುತ್ತದೆ ಎನ್ನುವ ಬಗೆಗೆ ತಿಳಿಸಬೇಕು.

ತಾಯಿ ಮತ್ತು ಮಕ್ಕಳ ಆರೋಗ್ಯದ ಸೇವೆ ದೊರೆಯುವ ಕುಟುಂಬ ಕಲ್ಯಾಣ ಸಂಸ್ಥೆಗಳು ಎಲ್ಲೆಲ್ಲಿವೆ. ಯಾವ ತರಹದ ಸೇವೆ ಒದಗಿಸುತ್ತವೆ ಎನ್ನುವುದನ್ನು ತಿಳಿಸಿ ಹೇಳಬೇಕು.

ಮಕ್ಕಳ ಆರೋಗ್ಯ. ಶಿಕ್ಷಣ. ಶಿಶು ಪ್ರದರ್ಶನ. ಪೌಷ್ಟಿಕ ಆಹಾರ. ವಯಸ್ಕರಿಗಾಗಿ ಶಿಕ್ಷಣ, ಕುಟುಂಬ ಆದಾಯವನ್ನು ಹೆಚ್ಚಿಸುವಂಥ ಕೋಳಿ ಸಾಕಾಣಿಕೆ, ತೋಟಗಾರಿಕೆ, ಹೈನಗಾರಿಕೆ. ಮಹಿಳೆಯರ ಕುಶಲ ಕೈಗಾರಿಕೆಗಳು. ಹೊಲಿಗೆ ತರಬೇತಿ ಮತ್ತು ಶ್ರಮದಾನ ಮುಂತಾದ ಕಾರ್ಯಕ್ರಮಗಳನ್ನು ನಡೆಸಬೇಕು.

ರಾಷ್ಟ್ರದ ಕಾನೂನುಗಳ. ಸಮಸ್ಯೆಗಳ ಮತ್ತು ವಿವಿಧ ಪ್ರಗತಿಯ ಕಾರ್ಯಕ್ರಮಗಳ ಬಗೆಗೆ ಸಾಹಿತ್ಯ ಒದಗಿಸಬೇಕು ಮತ್ತು ಜನರಿಗೆ ತಿಳಿಸಿ ಹೇಳಬೇಕು.

ಯುವಕ ಮಂಡಳಗಳನ್ನು ಪರ ಊರುಗಳಲ್ಲಿಯೂ ರಚಿಸಲು ಸಹಕರಿಸಬೇಕು. ಈ ಗ್ರಾಮಗಳಲ್ಲಿ ನಾಯಕರುಗಳನ್ನು ಆರಿಸಿ ಅವರಿಗೆ ಸೂಕ್ತ ತರಬೇತಿ ಕೊಡಬೇಕು.

ಕೊನೆಯದಾಗಿ ಹೇಳಬೇಕಾದರೆ. ಬದಲಾವಣೆಯನ್ನು ವಿರೋಧಿಸಬಾರದು. ಅದು ಪ್ರಗತಿಗೆ ಕಾರಣವಾಗಿದ್ದರೆ ಸ್ವೀಕರಿಸಬೇಕು. ನೂರಾರು ವರ್ಷಗಳಿಂದ ಬಳಸಿಕೊಂಡು ಬಂದಂಥ ಪದ್ಧತಿಗಳಿಗೆ. ವಿಚಾರಗಳಿಗೆ ಜಾಡ್ಯದಿಂದ ಅಂಟಿಕೊಳ್ಳಬಾರದು. ಅಂದು ಒಳ್ಳೆಯದು ಇದ್ದುದನ್ನು ಅಂದು ನಡೆಸಿದರು. ಇಂದು ಒಳ್ಳೆಯದು ಇದ್ದುದನ್ನು ಇಂದು ನಡೆಸಬೇಕು. ಕಾಲ ಬದಲಾವಣೆ ಕಾಲ ಧರ್ಮ. ಕೇವಲ ಹೊಸದು ಎನ್ನುವ ವಿಚಾರದಿಂದ ಬದಲಾವಣೆ ಬೇಡ ಎಂದರೆ ತಪ್ಪಾಗುವುದು. ಹೊಸ ಮಗುವನ್ನು ಸಂತೋಷದಿಂದ ಸ್ವೀಕರಿಸುವುದಿಲ್ಲವೇ ? ಹೊಸತನ್ನು. ಒಳ್ಳೆಯದನ್ನು ಅಳವಡಿಸಿಕೊಂಡು ಕಾಲದೊಂದಿಗೆ ಹೊಂದುವಂತೆ ಬಾಳಬೇಕು.

ಈ ರೀತಿಯ ಬದಲಾವಣೆ ತರುವಲ್ಲಿ ಯುವಕ ಸಂಘಗಳ ಪಾತ್ರ ಹಿರಿದು. ಗ್ರಾಮದ ಸಮಸ್ಯೆಗಳನ್ನು ನಿವಾರಿಸುವ ಹೊಣೆ ಗ್ರಾಮಸ್ಥರ ಸಮುದಾಯದ ಹೊಣೆ. "ಹೊಟ್ಟೆ ನೋವಿದ್ದವ ಅಜಿವಾನ ತಿನ್ನಬೇಕು." ಸ್ವಶಕ್ತಿಯನ್ನು ಕಾರ್ಯಗತಗೊಳಿಸಲು ಯುವಕ ಸಂಘಗಳು ಚಾಲಕ ಶಕ್ತಿಗಳಾಗಬೇಕು.

ಮೈಲಾರಲಿಂಗನ ಭಕ್ತರಾದ ಗೊಗ್ಗಯ್ಯಗಳು

(ಒಂದು ಸಾಮಾಜಿಕ ವಿಶ್ಲೇಷಣೆ)

● ಶೇಖರ ಪೂಜಾರ

"ಇಂದುss ನಿಮ್ಮನೀಗೆ ಸ್ವಾಮಿ ಬಂದ । ಮೈಲಾರಲಿಂಗ ।
ಇಂದುss ನಿಮ್ಮನೀಗೆ ಗುಡುದಯ್ಯ ಬಂದ ॥"

ಎಂದು ಹಾಡುತ್ತ ವಿಚಿತ್ರವಾದ ವೇಷ ಧರಿಸಿ ಮನೆಮನೆಗೆ ಭಿಕ್ಷೆಗೆ ಬರುವವರನ್ನು ನೀವು ನೋಡಿರಬಹುದು. ಮತ್ತು ಹಾಡಿನ ಗತ್ತಿಗೆ ಸರಿಯಾಗಿ ತಾಳದೋಪಾದಿಯಲ್ಲಿ, ಗಂಟೆಯ ನಾಲಗೆ ಹಿಡಿದು ಗಂಟೆಯ ಅಂಚು ಬಾರಿಸಿ, ಹಾಡಿನ ಸೊಗಸು ಹೆಚ್ಚಿಸುವದನ್ನೂ ಕೇಳಿರಬಹುದು. ಇವರು "ಏಳುಕೋಟೇಳುಕೋಟೇಳು ಕೋಟಿಗೊ ಚಾಂಗಮಲೊ !" ಎಂದು ಡಮರು ಬಾರಿಸಿ ಭಿಕ್ಷೆ ನೀಡಿಸಿಕೊಂಡು ಭಕ್ತರ ಹಣೆತುಂಬ ಭಂಡಾರವನ್ನು ಹಚ್ಚುವರು. ಹೀಗೆ ಬೀದಿ ಬೀದಿ, ಹಳ್ಳಿ, ನಗರಗಳಲ್ಲಿ ಭಿಕ್ಷೆಬೇಡುತ್ತ ಮೈಲಾರಲಿಂಗನ ಧಾರ್ಮಿಕ ಸಂಪ್ರದಾಯಕ್ಕೆ ಸೇರಿದ ಇವರು ಗೊಗ್ಗಯ್ಯಗಳು. ಈ ಗೊಗ್ಗಯ್ಯಗಳ ಬಗೆಗೆ ೧೯೦೪ ರ ಬಿಜಾಪುರಿಯ ಗೆಜೆಟಿಯರ್‌ನಲ್ಲಿ ಹೀಗೆ ಉಲ್ಲೇಖವಿದೆ : "Goggayyas are considerd to be the dogs of Mailara and have on occasions when festival in honour of this deity is celebrated to drink milk from the bowl with the dogs making all sorts of noise and barking like them". ಅಂದರೆ ಗೊಗ್ಗಯ್ಯಗಳು ಮೈಲಾರಲಿಂಗನ ನಾಯಿಗಳಂತೆ. ಇವರು ಮೈಲಾರಲಿಂಗನ ಗೌರವಾರ್ಥವಾಗಿ ಜರುಗುವ ಹಬ್ಬ ಹರಿದಿನಗಳಲ್ಲಿ, ದೋಣಿಯಲ್ಲಿ ಹಾಕಿದ ಹಾಲನ್ನು ಕುಡಿಯಲಿಕ್ಕೆ ನಾಯಿಗಳ ಕೂಡ ಎಲ್ಲ ಬಗೆಯ ಶಬ್ದಮಾಡುತ್ತ ನಾಯಿಗಳಂತೆ ಬೊಗಳಬೇಕಾಗುವದು.

ಈ ಗೊಗ್ಗಯ್ಯಗಳಿಗೆ ಗೊರವರೆಂತಲೂ ಕರೆಯುವದುಂಟು. "ಗೊರವ" ಎಂದರೆ ಶೈವಭಿಕ್ಷು ಎಂದರ್ಥ. ಅಕ್ಕಮಹಾದೇವಿಯು ಒಂದು ವಚನದಲ್ಲಿ, "ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು ಭಿಕ್ಷಕ್ಕೆ ಬಂದುದ ಕಂಡೆನವ್ವ ಕಂಡೆನವ್ವ" ಎಂದು ಗೊರವನ

ವರ್ಣನೆ ಬರುತ್ತದೆ. ಮಲ್ಲಿಕಾರ್ಜುನನೇ ಗೊರವನ ವೇಷದಲ್ಲಿ ಭಿಕ್ಷೆಬೇಡಲು ಬಂದ ಎಂದು ಅರ್ಥವಾಗುತ್ತದೆ. ಅದರಂತೆ ಶಿವನೇ ಮೈಲಾರನಾಗಿ, ಗೊರವನ ವೇಷದಲ್ಲಿ ಬಂದ ಎಂದು ನಂಬುತ್ತಾರೆ. ಈ ಕಾರಣದಿಂದಾಗಿ ಗೊರವರ ಕೈಯಲ್ಲಿ ತ್ರಿಶೂಲ, ಡಮರು ಇರುತ್ತವೆ. ಅಕ್ಕಮಹಾದೇವಿಯ ಗೊರವನ ವೇಷಕ್ಕೂ ಈ ಗೊರವನ ವೇಷಕ್ಕೂ ವ್ಯತ್ಯಾಸವಿದೆ.

ಮೈಲಾರಲಿಂಗನ ಭಕ್ತರಾದ ಈ ಗೊರವರನ್ನು ಕುರಿತು ಅನೇಕ ಕಥೆ, ಕಾವ್ಯ ಗಳುಂಟು.

ಗೊಗ್ಗಯ್ಯಗಳನ್ನು ಕುರಿತು ಜಾನಪದ ಕಥೆಗಳು :

ಮಣಿಕಾಸುರ ಹಾಗೂ ಮಲ್ಲಾಸುರರೆಂಬ ರಾಕ್ಷಸರು ಘೋರ ತಪಸ್ಸು ಮಾಡಿ ತಮಗೆ ಯಾರಿಂದಲೂ ಮರಣವಾಗಲಿ, ಯಾವ ತೊಂದರೆಯಾಗಲಿ ಆಗಬಾರದೆಂದು ಬ್ರಹ್ಮನಿಂದ ವರವನ್ನು ಪಡೆಯುತ್ತಾರೆ. ಮುಂದೆ ಇವರೇ ಭೂಲೋಕದಲ್ಲಿ ಮಾನವರನ್ನು, ಋಷಿಮುನಿಗಳನ್ನು ಪೀಡಿಸುತ್ತಾರೆ. ಇವರ ಉಪಟಳವನ್ನು ತಡೆಯುವುದಾಗಲಿ ಇವರನ್ನು ಸಂಹಾರಮಾಡುವುದಾಗಲಿ ಯಾವ ಹಿರಿಯ ದೇವಾನುದೇವತೆಗಳಿಗೂ ಆಗುವದಿಲ್ಲ. ಆಗ ಇವರು ಶಿವನಲ್ಲಿ ಮನವಿಮಾಡಿಕೊಳ್ಳುತ್ತಾರೆ. ಮುಂದೆ ಶಿವನೇ ಭೈರವನ ವೇಷ ಧರಿಸಿ, ಭೂಲೋಕಕ್ಕೆ ಬರುತ್ತಾನೆ. ಆಗ ಭೂಲೋಕದಲ್ಲಿ ನಾಯಿಗಳು ಏಳುಕೋಟಿ ಗೊಗ್ಗಯ್ಯ ಗೊರವರಾಗಿ (ಮಾನವರಾಗಿ), ಶಿವನಸೇನೆಯಾಗಿ ಈ ರಾಕ್ಷಸರೊಡನೆ ಹೋರಾಡಿದರೆಂದೂ ಆಗ ಶಿವನು ಹದಿನೈದು ಘೂಟು ಉದ್ದದ ಭಯಂಕರ ಬಿಲ್ಲಿನಿಂದ ರಾಕ್ಷಸರನ್ನು ಕೊಂದನೆಂದೂ ಪ್ರತೀತಿ. ಕಾರಣ ಶಿವನಿಗೆ "ಮಲ್ಹಾರಿ" ಅಂದರೆ ಮಲ್ಲಾಸುರನನ್ನು ಕೊಂದನೆಂದೂ "ಮಲ್ಹಾರಿ" "ಮೈಲಾರ" ಎಂದು ಹೆಸರು. ಮೈಲಾರನ ಭಕ್ತರು "ಏಳುಕೋಟಿ, ಏಳುಕೋಟಿ, ಏಳುಕೋಟಿಗೊ, ಚಾಂಗಮಲೊ" ಎನ್ನುವುದು ವಾಡಿಕೆ. ಅಂದರೆ ಏಳುಕೋಟಿ ಗೊರವರು ಶಿವನ ಸೇನೆಯಾಗಿದ್ದರೆಂದು. ಎರಡನೆಯ ಕಥೆ ಹೀಗಿದೆ. ಮಣಿಮಲ್ಲಾಸುರ ಒಬ್ಬ ರಾಕ್ಷಸ; ಯಾರಿಂದಲೂ ತನಗೆ ಸಾವು ಬರದಂತೆ ಶಿವ ನಲ್ಲಿ ವರವನ್ನು ಕೇಳಲು ಹೋದಾಗ ಶಿವನು ಕೋಪದಿಂದ ತನ್ನ ತಲೆಯನ್ನು ಕೊಡವು ತ್ತಾನೆ. ಆಗ ಹೊರಬಂದ ತುಪ್ಪದ ಮಾಳವ್ವ ರಾಕ್ಷಸನನ್ನು ಕೊಲ್ಲಲಾರದೆ ಹೋದಾಗ ಶಿವನು ಗೊರವನ ವೇಷದಲ್ಲಿ ಬಂದು ರಾಕ್ಷಸನನ್ನು ಸಂಹಾರಮಾಡಿ ಮಾಳವ್ವನನ್ನು ಮದುವೆಯಾದ ಎಂದು. ಈ ಕಥೆಯ ಜೊತೆಗೇ ಇನ್ನೊಂದು ಕಥೆ ಇದೆ. ಸಿರಿವಂತರ ಮಗಳಾದ ಮಾಳವ್ವ ತನ್ನ ಅಣ್ಣಂದಿರಿಗೆ ಬುತ್ತಿಯನ್ನು ಒಯ್ಯುತ್ತಿರುವಾಗ ಮೈಲಾರ ಲಿಂಗ ದಾರಿಯಲ್ಲಿ ಗೊರವನ ವೇಷದಲ್ಲಿ ಬಂದು ತಡೆಯುತ್ತಾನೆ. ರಾಕ್ಷಸನೆಂದು ಹೆದರಿ ಮಾಳವ್ವ ಕೂಗುತ್ತಾಳೆ. ಆಗ ಆಕೆಯ ಅಣ್ಣಂದಿರು ಬಂದು ನಾಯಿಗಳನ್ನು "ಛೂ" ಬಿಡುತ್ತಾರೆ. ಆ ನಾಯಿಗಳು ಗೊರವನನ್ನು ಕಚ್ಚದೆ ಮುದ್ದಾಡುತ್ತವೆ. ಡೊಣ್ಣೆ ಯಿಂದ ಗೊರವನಿಗೆ ಹೊಡೆದರೆ ಅವರಿಗೇ ಬಾಸುಂಡೆ ಕಾಣಿಸಿಕೊಳ್ಳುತ್ತವೆ. ಮುಂದೆ

ಈ ಗೊರವ ಮಾಳವ್ವನನ್ನು ಮದುವೆಯಾಗಲು ಪ್ರಯತ್ನಿಸುತ್ತಾನೆ. ಆದಕ್ಕೆ ಅವಳ ಅಣ್ಣಂದಿರು ಒಪ್ಪದಿದ್ದಾಗ ಆಕೆಯನ್ನು ಕರಿನಾಯಿಯನ್ನಾಗಿ ಮಾಡಿ ಕರೆದುಕೊಂಡು ಹೋಗುತ್ತಾನೆ. ಈ ಸಂದರ್ಭದಲ್ಲಿ ಗೊರವನ ವೇಷವನ್ನು ಮಾಳವ್ವನ ಅಣ್ಣಂದಿರಗೆ ಮೈಲಾರಲಿಂಗ ಕೊಟ್ಟನೆಂದು ಹೇಳುತ್ತಾರೆ. ಮತ್ತೊಂದು ಕಥೆಯಂತೆ ಮೈಲಾರನು ಕೃಷ್ಣನ ಮಡದಿಯರಾದ ಗೋಪಿಕಾಸ್ತ್ರೀಯರ ಮೈಲಿಗೆ ವಸ್ತ್ರದಲ್ಲಿ ಹುಟ್ಟಿದ: ಬಲಿಷ್ಟನಾಗಿ ಬೆಳೆದ; ಶಿವನಿಗೆ ಕೊಡೆ ಹಿಡಿಯುವ ಕಾಯಕ ವಹಿಸಿಕೊಂಡ. ಮುಂದೆ ಮರ್ತ್ಯಲೋಕದಲ್ಲಿ ಮಣಿಮಲ್ಲಾಸುರನ ಹಾವಳಿ ಹೆಚ್ಚಾಯಿತು. ರಾಕ್ಷಸನನ್ನು ಕೊಲ್ಲುವದು ವಿಷ್ಣು ಮುಂತಾದ ದೇವತೆಗಳಿಗೂ ಆಗಲಿಲ್ಲ. ಆಗ ಈ ಮೈಲಾರನೇ ನಾಯಿ ರೂಪಧರಿಸಿ, ರಾಕ್ಷಸನ ಮರಣರಹಸ್ಯವನ್ನರಿತು ಮಣಿಮಲ್ಲಾಸುರನನ್ನು ಕೊಲ್ಲುತ್ತಾನೆ. ಮುಂದೆ ಅಲ್ಲಿಯೇ ಕುರುಬರ ಮಾಳವ್ವನನ್ನು ಮದುವೆಯಾಗಿ ಸುಖದಿಂದ ರಾಜ್ಯವಾಳುತ್ತಾನೆ.

ಈ ಕಥೆಗಳು ಬಳ್ಳಾರಿ, ಧಾರವಾಡ ಜಿಲ್ಲೆಗಳ ಗೆಜೆಟಿಯರ್. ಡಾ. ಚಿದಾನಂದ ಮೂರ್ತಿಯವರ ಬಸವಣ್ಣನವರು, Thurston ರ Caste & Tribes of Southern Iadia ಮುಂತಾದೆಡೆಗಳಲ್ಲಿ ಪ್ರಕಟವಾಗಿವೆ.

ಧಾರವಾಡದಲ್ಲಿ ಕಾರಣಿಕ ಗೊರವನೊಬ್ಬ ಹೇಳಿದ ಕಥೆ ಹೀಗಿದೆ. ಭೂಲೋಕ ದಲ್ಲಿ ಹಾವಳಿ ನಡೆಸಿದ ಮಣಿಕಾಸುರ, ಮಲ್ಲಾಸುರರನ್ನು ಕೊಲೆ ಮಾಡಲು, ಶಿವನು ಮೈಲಾರಲಿಂಗನಾಗಿ. ಪಾರ್ವತಿಯು ಗಂಗಿಮಾಳವ್ವನಾಗಿ. ನಂದಿಯನ್ನು ಕುದುರೆಮಾಡಿ, ವೀರಭದ್ರನನ್ನು ನಾಯಿಯನ್ನಾಗಿ ಮಾಡಿಕೊಂಡು ಭೂಲೋಕಕ್ಕೆ ಬರುತ್ತಾನೆ. ಅಂದರೆ ರಾಕ್ಷಸರಿಗೆ ಮರಣ ಬಾರದಂತೆ ವರ ಕೊಟ್ಟ ತಪ್ಪಿಗೆ ಶಿವನು ಇಷ್ಟೆಲ್ಲ ವೇಷ ಬದಲಿಸಿ ಕೊಂಡು ಬರಬೇಕಾಗುತ್ತದೆ. ಇಲ್ಲಿ ಶಿವ. ಪಾರ್ವತಿಯರಿಗೆ ರಾಕ್ಷಸನ ಮರಣ ರಹಸ್ಯ ಗೊತ್ತಿರುತ್ತದೆ. ಇದನ್ನು ವೀರಭದ್ರನಿಗೆ ತಿಳಿಸಿರುತ್ತಾರೆ. ರಾಕ್ಷಸರ ಮರಣ ತೊಡಿಯಲ್ಲಿದ್ದುದನ್ನರಿತ ನಾಯಿಯು (ವೀರಭದ್ರ) ರಾಕ್ಷಸರ ತೊಡೆ ಹಿಡಿದು ಕಚ್ಚುತ್ತದೆ. ಗಂಗಿಮಾಳವ್ವ ತ್ರಿಶೂಲವನ್ನು ಯಾಸಿಯಾಗಿ (angle) ಮಾಡಿ, ಹಿಂದಿ ನಿಂದ ಇರಿಯುತ್ತಾಳೆ. ಏಕೆಂದರೆ ತ್ರಿಶೂಲವನ್ನು ಸೀದಾ ಮಾಡಿದ್ದರೆ ಭೂಲೋಕವೇ ಬುಡಮೇಲಾಗಬಹುದಿತ್ತೆಂದು ನಂಬಿಕೆ. ಮುಂದೆ ಮೈಲಾರನು ಖಡ್ಗದಿಂದ ಈಪಾಡಿ ರಾಕ್ಷಸರನ್ನು ಕೊಲ್ಲುತ್ತಾನೆ. ಈ ಕಥೆಯನ್ನೇ ಆಧಾರವಾಗಿಟ್ಟುಕೊಂಡು ಚಿತ್ರಿಸಿದ ಫೋಟೋಗಳು ಈಗ ಮೈಲಾರಲಿಂಗನ ಗುಡಿಗಳಲ್ಲಿ ನೋಡಲು ಸಿಗುತ್ತವೆ. ಧಾರ ವಾಡದ ಜೆ. ಎಸ್. ಎಸ್. ಕಾಲೇಜಿನ ಗುಡ್ಡದ ಮೇಲಿರುವ ಮೈಲಾರಲಿಂಗನ ಗುಡಿ ಯಲ್ಲಿ ಇಂತಹ ಫೋಟೊ ಮತ್ತು ಗುಲಗಂಜಿಕೊಪ್ಪದ ಗುಡಿಯಲ್ಲಿ ಈ ಚಿತ್ರವನ್ನು ಕಲ್ಲು. ಕಟ್ಟಿಗೆಯಲ್ಲಿ ಮಾಡಲಾಗಿದೆ. ಧಾರವಾಡ ಜಿಲ್ಲೆಯ ದೇವರಗುಡ್ಡ, ಬಳ್ಳಾರಿ ಜಿಲ್ಲೆಯ

ಮೈಲಾರದಲ್ಲಿಯೂ ಇಂತಹ ಮೂರ್ತಿ ಹಾಗೂ ಫೋಟೋಗಳಿವೆ. ಅಂದರೆ ಕಟ್ಟಿಗೆಯಲ್ಲಿ ಕುದುರೆ ಮೂರ್ತಿ, ಕಲ್ಲಿನಲ್ಲಿ ಮೈಲಾರಲಿಂಗ ಮತ್ತು ಮಾಳವ್ವನ ಮೂರ್ತಿಗಳು, ಅದೇ ಕಲ್ಲಿನಲ್ಲಿ ಮೈಲಾರಲಿಂಗನ ಕಾಲ ಬಳಿ ನಾಯಿ ಮತ್ತು ಹತನಾದ ರಾಕ್ಷಸ ಇವು ಕೆತ್ತನೆಯಲ್ಲಿ ಕಾಣಸಿಗುತ್ತವೆ.

ಕೇಳಿದ ಮತ್ತೊಂದು ಕಥೆ ಹೀಗಿದೆ. ಮೈಲಾರಲಿಂಗನು ಏಳು ಕೋಟಿ ರಾಕ್ಷಸರನ್ನು ಕೊಂದಿದ್ದನೆಂದೂ, ಹೀಗೆ ದುಷ್ಟರ ಮರ್ದನ, ಶಿಷ್ಟರ ರಕ್ಷಣೆ ನಡೆಯಲೆಂದೂ "ಏಳುಕೋಟಿ. ಏಳುಕೋಟಿ, ಏಳುಕೋಟಿಗೋ ಚಾಂಗಮಲೋ !" ಎಂದು ಮಂತ್ರ ರೂಪವಾಗಿ ಹೇಳುತ್ತಾರೆ ಎಂದು. "ಚಾಂಗಮಲೋ" ಎಂದರೆ ಸಾಗಲಿ. ನಡೆಯಲಿ ಎಂದರ್ಥವಾದಂತಾಯಿತು.

ಏಳು ಕೋಟಿ ಕೂಡಲಿಲ್ಲ; ಮೈಲಾರಲಿಂಗನ ಸಾಲ ಹರಿಯಲಿಲ್ಲ :

ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ಕಥೆಯೂ ಇದೆ. ತಿರುಪತಿ ವೆಂಕಟರಮಣ ಮತ್ತು ಮೈಲಾರಲಿಂಗ ಅಣ್ಣ ತಮ್ಮಂದಿರು. ಎಲ್ಲಮ್ಮ ಇವರ ತಂಗಿ. ಹೀಗಿರುವಾಗ ಮೈಲಾರ ಭೂಲೋಕಕ್ಕೆ ಬಂದಂತೆ ವೆಂಕಟರಮಣನೂ ಬಂದ. ವೆಂಕಟರಮಣನಿಗೆ ಇಲ್ಲಿ ಒಬ್ಬ ರಾಜನ ಅಪ್ರತಿಮ ಸುಂದರಿಯಾದ ಮಗಳ ಮೇಲೆ ಮನಸ್ಸಾಗುತ್ತದೆ. ಇವಳನ್ನು ಮದುವೆಯಾಗಬೇಕೆಂದು ಇಚ್ಛಿಸುತ್ತಾನೆ. ಮುಂದೆ ರಾಜನಲ್ಲಿಗೆ ಹೋಗಿ ಮದುವೆ ವಿಷಯ ಪ್ರಸ್ತಾಪ ಮಾಡಲಾಗಿ ರಾಜನು "ಏಳು ಕೋಟಿ ಬಂಗಾರ ನಾಣ್ಯಗಳನ್ನು ಕೊಟ್ಟು ನನ್ನ ಮಗಳನ್ನು ಮದುವೆಯಾಗಬಹುದು" ಎನ್ನುತ್ತಾನೆ. ವೆಂಕಟರಮಣನು ಶಿವನ ಅಂದರೆ ಇಲ್ಲಿ ಮೈಲಾರಲಿಂಗನ ಖಜಾಂಚಿಯಾದ ಕುಬೇರನನ್ನು ಕೇಳುತ್ತಾನೆ. ಕುಬೇರನು "ಇಲ್ಲ ಇದು ಸಾರ್ವಜನಿಕ ಹಣ. ಶಿವನ ಒಪ್ಪಿಗೆ ಇಲ್ಲದೆ ಕೊಡಲಿಕ್ಕಾಗದು" ಎನ್ನುತ್ತಾನೆ. ಆಗ ವೆಂಕಟರಮಣನು ಮೈಲಾರನಲ್ಲಿಗೆ ಬಂದು ಕೇಳಲು, ಮೈಲಾರನು "ಇದು ಸಾರ್ವಜನಿಕ ಹಣ ಇದನ್ನು ಒಂದು ಕರಾರಿನ ಮೇಲೆ ಒಯ್ದು ತಿರುಗಿ ಕೊಡಬೇಕು" ಎನ್ನುತ್ತಾನೆ. ವೆಂಕಟರಮಣನು "ಆಗಲಿ" ಎಂದು ಕೊಂಡೊಯ್ಯುತ್ತಾನೆ. ಮದುವೆ ವಿಜೃಂಭಣೆಯಿಂದ ನಡೆಯುತ್ತದೆ. ಮುಂದೆ ಇವರ ತಂಗಿ ಎಲ್ಲಮ್ಮನು ಬಂದು ನನಗೂ ಅಷ್ಟು ಹಣಬೇಕೆಂದು ಮೈಲಾರನನ್ನು ಕೇಳುತ್ತಾಳೆ. ಮೈಲಾರನು "ಇದ್ದ ಹಣವನ್ನು ಸಹೋದರನ ಮದುವೆಗೆ ಕೊಟ್ಟೆ: ಬೊಕ್ಕಸದಲ್ಲಿ ಹಣವಿಲ್ಲ" ಎನ್ನಲು, ಎಲ್ಲಮ್ಮ ತಡೆದು ಮೈಲಾರ ಒಳಗೆ ಹೋದಾಗ ಹುಡುಕುತ್ತಾಳೆ. ಅಲ್ಲದೆ ತೆಗದುಕೊಳ್ಳಲು ಯತ್ನಿಸುತ್ತಾಳೆ. ಇದನ್ನು ಮಾಳವ್ವ (ಪಾರ್ವತಿ) ನೋಡುತ್ತಾಳೆಂದು ಅವಸರವಸರವಾಗಿ ಕೈಗೆ ಬಂದಷ್ಟು ಬಳಿದುಕೊಂಡು ಹೋಗುತ್ತಾಳೆ. ಹೋಗುವಾಗ ದಾರಿಯುದ್ದಕ್ಕೂ ಭಂಡಾರ (ಹಣ) ಬೀಳುತ್ತದೆ. ಕಾರಣ ಹೊನ್ನಾರಿ ಗಿಡಗಳು ಅಲ್ಲಿ ಹುಟ್ಟಿವೆ ಎಂದು ಹೇಳಲಾಗುತ್ತದೆ. ಅಲ್ಲದೆ ಎಲ್ಲಮ್ಮನ ಕೈಯಲ್ಲಿ ಹೆಬ್ಬೆಟ್ಟಿಗೆ ಅಂಟಿಕೊಂಡದ್ದಷ್ಟೇ ಉಳಿಯುತ್ತದೆ. ಕಾರಣ ಎಲ್ಲಮ್ಮನ ಭಕ್ತರಿಗೆ

ಭಂಡಾರವನ್ನು ಹೆಬ್ಬಟ್ಟಿನಿಂದ ಹಚ್ಚಲಾಗುತ್ತದೆ. ಆದರೆ ಮೈಲಾರನಲ್ಲಿ ಭಂಡಾರ ಹೇರಳ. ಕಾರಣ ಹಣೆ ತುಂಬ ಹಚ್ಚಲಾಗುತ್ತದೆ. ವೆಂಕಟರಮಣನ ಭಕ್ತರು ಮೂರು ನಾಮ ಹಾಕಿಕೊಳ್ಳುತ್ತಾರೆ. ಇವರಲ್ಲಿ ವೆಂಕಟರಮಣನ ಭಕ್ತರಾರು, ಎಲ್ಲಮ್ಮನ ಭಕ್ತರಾರು ಮತ್ತು ಮೈಲಾರನ ಭಕ್ತರಾರು ಎಂಬುದನ್ನು ಗುರುತಿಸಲೂ ಇರಬಹುದು ಈ ವಿಧಾನ.

ಅದು ಏನೇ ಇರಲಿ. ಕೆಲ ಕಾಲಾನಂತರ ಮೈಲಾರಲಿಂಗನು ವೆಂಕಟರಮಣನಿಂದ ಕೊಟ್ಟ ಹಣ ಕೇಳುತ್ತಾನೆ. ಆಗ ವೆಂಕಟರಮಣನು "ಗೋವಿಂದಾ ಗೋऽऽವಿಂದ" ಅನ್ನುತ್ತಾನೆ. ಇದರಲ್ಲಿ ಶ್ಲೇಷಾರ್ಥವನ್ನು ಕಾಣುತ್ತೇವೆ. ಒಂದು ರೀತಿಯಲ್ಲಿ ದೇವ ಸ್ಮರಣೆ; ಇನ್ನೊಂದು ಅರ್ಥದಲ್ಲಿ ಹಣ ಇಲ್ಲ ಗೋವಿಂದಾ ಎಂದರ್ಥ. ಅಂದರೆ ವೆಂಕಟರಮಣನಿಗೆ ಹಣ ತಿರುಗಿ ಕೊಡಲಿಕ್ಕಾಗುವುದಿಲ್ಲ. ಆಗ ವೆಂಕಟರಮಣ ಪ್ರಜಾಕೋಟಿ ಒಬ್ಬೊಬ್ಬರೂ ಒಂದೊಂದು ನಾಣ್ಯವನ್ನು ಕೊಡಲಿ ಎನ್ನುತ್ತಾನೆ. ಆದರೂ ಅಷ್ಟು ಹಣ ಕೂಡುವುದೇ ಇಲ್ಲ. ಇದನ್ನು ಕೇಳಿದ ಮೈಲಾರನಿಗೆ ಹುಚ್ಚು ಹಿಡಿಯುತ್ತಿದೆ. ಅವನು ಏಳುಕೋಟಿ ಏಳುಕೋಟಿಗೊ, ಎಂದು ಬಡಬಡಿಸುತ್ತಾನೆ. ಆದರೆ ಮೈಲಾರನು ತನ್ನ ಭಕ್ತರನ್ನು ಹಣದ ವಸೂಲಿಗೆ ಬೆನ್ನುಹತ್ತಿಸಿದ್ದಾನೆ. ಅದರಂತೆ ವೆಂಕಟರಮಣನ ಭಕ್ತರೂ ಜನರಿಂದ ಹಣ ಕೂಡಿಸಲು ತೊಡಗಿದ್ದಾರೆ; ಅಂದರೆ ಭಿಕ್ಷೆ ಕೇಳುತ್ತಾ ನಡೆದಿದ್ದಾರೆ. ತಿರುಪತಿ ವೆಂಕಟರಮಣನ ಗುಡಿಯಲ್ಲೂ ಹಣ ಬಂದೇ ಬರುತ್ತದೆ. ಆದರೂ ಏಳುಕೋಟಿ ಕೂಡುವದೇ ಇಲ್ಲ. ಅಂದರೆ ಮೈಲಾರಲಿಂಗನ ಸಾಲ ಹರಿಯುವದೇ ಇಲ್ಲ. ಇದರಿಂದ ಮೈಲಾರ ಬಡಬಡಿಸುತ್ತಾನೆ. ಇದನ್ನು ಕೇಳಿಯೇ ಇರಬೇಕು. ಸರ್ವಜ್ಞ ತನ್ನ ವಚನದಲ್ಲಿ ಹೀಗೆ ನುಡಿದಿದ್ದಾನೆ.

ಉದ್ಧರಿಯ ಕೊಟ್ಟಣ್ಣ ಹದ್ದಾದ ಕಾಗ್ಯಾದ
ಎದ್ದೆದ್ದು ಬೊಗಳೊ ನಾಯ್ಯಾದ–ಮೈಲಾರ
ಗೊಗ್ಗಯ್ಯನಾದ ಸರ್ವಜ್ಞ ॥ ಎಂದು

ಉದ್ಧರಿ ಮರಳಿ ಬಾರದ್ದಕ್ಕೆ ಮೈಲಾರಲಿಂಗ ಬಡಬಡಿಸಿ ಹುಚ್ಚು ಹಿಡಿದು ಕಾಗಿ. ನಾಯಿಯಂತೆ ಬೊಗಳಿದ್ದಕ್ಕೆ ಧ್ವನಿ ಗೊಗ್ಗರವಾಗಿರಬಹುದು. ಅದಕ್ಕಾಗಿಯೂ ಗೊಗ್ಗಯ್ಯನೆಂಬ ಹೆಸರು ಬಂದಿರಬಹುದೇನೋ? ಆದರೂ ಸಾಲ ತೀರಲಿಲ್ಲದ್ದಕ್ಕೆ ಬಡಬಡಿಸುವದೂ, ಹುಚ್ಚು ಬಿಡಲಿಲ್ಲವೆಂದೂ ಹೇಳುತ್ತಾರೆ. ಈ ಕಾರಣಕ್ಕಾಗಿ. ಮೈಲಾರನ ಭಕ್ತರು. "ಏಳುಕೋಟಿ, ಏಳುಕೋಟಿ ಏಳುಕೋಟಿಗೋ" ಎನ್ನುತ್ತಾ ಭಿಕ್ಷೆ ಕೇಳಿದರೆ ತಿರುಪತಿ ವೆಂಕಟರಮಣನ ಭಕ್ತರು (ದಾಸರು) "ಗೋವಿಂದಾ, ಗೋವಿಂದಾ" ಎನ್ನುತ್ತಾ ಭಿಕ್ಷೆ ಕೇಳುತ್ತಾರೆ. ಆದರೂ ಸಾಲ ತೀರಲಿಲ್ಲ; ಸನಿ ಬಿಡಲಿಲ್ಲ. ಈ ಕಾರಣಕ್ಕಾಗಿ ಈಗಲೂ ಆಡು ಮಾತಿನಲ್ಲಿ, "ಏಳು ಕೋಟಿ ಕೂಡ್ಲಿಲ್ಲ; ಮೈಲಾರಲಿಂಗನ ಸಾಲ ಅಥವಾ ಸನಿ (ಹುಚ್ಚು) ಹರೀಲಿಲ್ಲ" ಎನ್ನುತ್ತಾರೆ. ಇದಲ್ಲದೆ ವೆಂಕಟರಮಣನ ಭಕ್ತರು ಮೂರು ನಾಮ ಹಚ್ಚಿಕೊಂಡರೆ, ಮೈಲಾರಲಿಂಗನ ಭಕ್ತರು ಭಂಡಾರ ಹಚ್ಚಿಕೊಳ್ಳುತ್ತಾರೆ. ಏಕೆಂದರೆ ಸಾಲ ಕೊಡಲಾರದ ವೆಂಕಟರಮಣ ತನ್ನ ಭಕ್ತರಲ್ಲಿ ಅರ್ಧ ಜನರನ್ನು ಕೊಟ್ಟು ಬಿಟ್ಟ ಎಂದು ಹೇಳಲಾಗುತ್ತದೆ. ಈ ಜನರನ್ನು

ಉಳಿದವರಿಂದ ಬೇರೆ ಮಾಡಲು ಅವರಿಗೆ ಭಂಡಾರ ಹಚ್ಚಲಾಯಿತು. ಇದರಿಂದಾಗಿ ಅವರು ಇಂದಿನವರೆಗೂ ಭಂಡಾರ ಹಚ್ಚಿಕೊಳ್ಳುತ್ತಾರೆ. "ಕೊಡೊ ರೊಕ್ಕ ಕೇಳಿದ್ರ ಮೂರ್ ನಾಮಾ ಹಚ್ಚಿ ಕಳಿಸ್ದ" ಅನ್ನುವ ಮಾತೂ ರೂಢಿಯಲ್ಲಿದೆ. ಇದು "ಇಲ್ಲ" ಎನ್ನುವ ಸಂಕೇತ.

ಗುಡ್ಡರನ್ನಾಗಿ ಬಿಡುವ ಸಂಪ್ರದಾಯ

ಗೊರವರ ಮನೆತನದಲ್ಲಿ ಮಕ್ಕಳಿರಲಿಲ್ಲವಂತೆ. ಮಕ್ಕಳಾದರೆ ತಮ್ಮ ಹಿರಿಯ ಮಗನನ್ನು ಶಿವನ ಹೆಸರು ಹೇಳಿ "ಗುಡ್ಡ"ನನ್ನಾಗಿ ಬಿಡುತ್ತೇವೆಂದು ಶಿವನಲ್ಲಿ ಇವರು ಮೊರೆ ಹೊಕ್ಕದ್ದರಿಂದ ಮಕ್ಕಳಾದವು ಎಂದು ನಂಬಿಕೆ. ಹೀಗೆ ಇವರು ಮನೆತನದಲ್ಲಿ ವಂಶೋದ್ಧಾರ ಮಾಡಿದ ದೇವನ ಹೆಸರಿನಲ್ಲಿ ಹಿರಿಯ ಮಗನನ್ನು "ಗುಡ್ಡ"ನನ್ನಾಗಿ ಬಿಡುವ ಸಂಪ್ರದಾಯ ಈಗಲೂ ಪ್ರಚಲಿತ. ಇವರೆಲ್ಲ ಮೈಲಾರಲಿಂಗನ ಭಕ್ತರು. ಈ ಹೆಸರಿನಲ್ಲಿ ದೀಕ್ಷೆ ಪಡೆದವರೇ ಈ ಗುಡ್ಡರು (ಭಕ್ತರು). ಯಾವ ಜಾತಿಯವರಾದರೂ ಮೈಲಾರಲಿಂಗನ ಭಕ್ತರಾಗಬಹುದು. ಈ ಕಾರಣದಿಂದ ಇಂದು ಬ್ರಾಹ್ಮಣರು, ಲಿಂಗಾಯತರು, ಕುರುಬರು, ಉಪ್ಪಾರರು, ಹರಿಜನರು ಇನ್ನಿತರರೂ ಭಕ್ತರಿದ್ದಾರೆ. ಆದರೆ ಕುರುಬರಲ್ಲಿ ಹೆಚ್ಚು. ಅಲ್ಲದೇ ಹೀಗೆ ಹರಕೆ ಹೊತ್ತು ಹುಟ್ಟಿದವರು ಇಂದು ದೊಡ್ಡ ಅಧಿಕಾರಿಯಾಗಿದ್ದರೂ ಗೊರವ ದೀಕ್ಷೆ ಪಡೆದವರಿದ್ದಾರೆ. ಮತ್ತು ತಪ್ಪದೇ ಮೈಲಾರ ಲಿಂಗನಿಗೆ ನಡಕೊಳ್ಳುತ್ತಿದ್ದಾರೆ.

ಗೊರವ ದೀಕ್ಷೆ

ಗೊರವರಾಗುವವರು ಸಂಪ್ರದಾಯದಂತೆ ದೀಕ್ಷೆ ಹೊಂದಬೇಕು. ಕುಲಸ್ಥರ ಹಾಗೂ ತಂದೆ ತಾಯಿಗಳ ಸಮ್ಮುಖದಲ್ಲಿ ಈ ಧಾರ್ಮಿಕ ವಿಧಿ ಜರುಗುವದು. ಮನೆಯಲ್ಲಿ ಹಿರಿಯ ಮಗನು ೧೨ ವರ್ಷದವನಾದ ಮೇಲೆ ೨೦ ವರ್ಷಗಳೊಳಗೆ ಮತ್ತು ಅವನ ಮದುವೆಗೆ ಮುಂಚೆ ಅವನಿಗೆ ಗೊರವ ದೀಕ್ಷೆ ಕೊಡಲಾಗುವದು. ದೀಕ್ಷೆಗೆ ಹಣ್ಣು, ಕಾಯಿ, ಎಲೆ ಅಡಿಕೆ, ಹೂವು, ಗಂಧ ಮುಂತಾದ ಮಂಗಲ ಸಾಮಗ್ರಿಗಳನ್ನು ಅಣಿ ಮಾಡುತ್ತಾರೆ. ದೀಕ್ಷೆ ಪಡೆಯುವ ವ್ಯಕ್ತಿಗೆ ವಪನ ಕ್ರಿಯೆ ಮಾಡಿ, ಮೈ ತೊಳೆದು, ವಿಭೂತಿ ಭಂಡಾರ ಹಚ್ಚುತ್ತಾರೆ. ನಾಲ್ಕು ಕಳಸಗಳನ್ನು ಹೂಡಿ ಅವನನ್ನು ಮಧ್ಯದಲ್ಲಿ ಕೂಡಿಸುತ್ತಾರೆ. ಕಳಸಕ್ಕೂ ವ್ಯಕ್ತಿಯ ಕೊರಳಿಗೂ ಸೂತ್ರ ಹಿಡಿದು ಒಂದು ಪದ್ಧತಿಯಂತೆ ಶಾಸ್ತ್ರ ಮಾಡಬೇಕಾಗುವದು.

ಮುಂದೆ ಶುದ್ಧ ಜೀವನ ನಡೆಸುವ ಬಗೆಗೆ ಆ ವ್ಯಕ್ತಿಗೆ ತಿಳುವಳಿಕೆ ಹೇಳುತ್ತಾರೆ. ಈ ಬಗೆಗೆ ಅವನಿಂದ ವಚನವನ್ನು ತೆಗೆದುಕೊಳ್ಳುತ್ತಾರೆ. ಅಲ್ಲದೆ ಕೊರಳಿಗೆ ಕವಡೆ ಸರ ಹಾಕಿ "ಗುಡ್ಡ"ನೆಂದು ಘೋಷಿಸುತ್ತಾರೆ. ಅವನ ತಂದೆ ತಾಯಿಗಳೂ ಅವನನ್ನು ದೇವರ ಮಗನೆಂದು ಪರಿಗಣಿಸಬೇಕು. ಈ ಕಾರಣಕ್ಕೆ ಅವರನ್ನು ಪದ್ಧತಿಯಂತೆ "ಇವನು ಯಾರ ಮಗ"ನೆಂದು ಕೇಳುತ್ತಾರೆ. ಅವರು "ಇದುವರೆಗೆ

ನಮ್ಮ ಮಗನಾಗಿದ್ದ; ಈಗ ಶಿವನ ಮಗ, ಸ್ವಾಮಿಯ ಮಗ" ಎಂದು ಹೇಳುತ್ತಾರೆ. ದೀಕ್ಷೆ ಹೊಂದಿದ ಗುಡ್ಡನು ಕೆಲವು ಕಟ್ಟಾಚರಣೆಗಳನ್ನು ಪಾಲಿಸಬೇಕಾಗುವದು. ಹೊಲದಲ್ಲಿ ಹಸು ಮೇಯುತ್ತಿದ್ದರೆ, ಅದು ಮೇಯುತ್ತಿದೆ ಎಂದೂ, ಕರು ಹಾಲು ಕುಡಿಯುತ್ತಿದ್ದರೆ ಅದು ಕುಡಿಯುತ್ತಿದೆ ಎಂದೂ ಹೇಳುವಂತಿಲ್ಲ. ಕಾಲಿಗೆ ಮೆಟ್ಟು ಹಾಕುವ ಹಾಗಿಲ್ಲ. ಹಾವನ್ನು ಕೊಲ್ಲುವಹಾಗಿಲ್ಲ. ಹೀಗೆ ಪ್ರಾಣಿ ದಯೆ, ಅಹಿಂಸೆಗಳ ನಿಯಮ ಪಾಲಿಸಲು ಪ್ರತಿಜ್ಞೆ ಮಾಡಿ ಅದರಂತೆ ನಡೆದುಕೊಳ್ಳಬೇಕು. ನಂತರ ಒಬ್ಬ ಹಿರಿಯ ಗೊರವನು ದೀಪ-ಧೂಪ ಹಾಕಿ ಕೊರಳಿಗೆ ಕವಡೆ ಸರಕಟ್ಟಿ ಹಣೆಗೆ ವಿಭೂತಿ ಭಂಡಾರ ಹಚ್ಚುತ್ತಾನೆ. ಇವೆಲ್ಲವೂ ಗೊರವನಾದುವರ ಸಂಕೇತ. ಇದಾದ ನಂತರ ಗೊರವರೆಲ್ಲ ಸೇರಿ ಹಿತ್ತಾಳಿ ಡೋಣಿ ಮತ್ತು ಜೋಳಿಗೆ ಕೊಟ್ಟು "ಮರಿಪೂಜೆ" ಮಾಡುತ್ತಾರೆ. ಆಗ ದೀಕ್ಷೆ ಪಡೆದ ಗುಡ್ಡ ನಾಲ್ಕು ಮನೆಗಳಲ್ಲಿ ಭಿಕ್ಷೆ ಮಾಡಬೇಕಾಗುವದು. ಹೀಗೆ ಒಮ್ಮೆ ಗೊರವರಾದವರು ಇದನ್ನೇ ಮುಂದುವರಿಸಿಕೊಂಡು ಹೋಗುತ್ತಾರೆ. ಹಿರಿಯ ಮಗನೇ ಆಗಲಿ, ಕಿರಿಯ ಮಗನೇ ಆಗಲಿ ಮನೆಯಲ್ಲಿ ಯಾರಾದರೊಬ್ಬರು ಈ ಪಟ್ಟ ವಹಿಸಿಕೊಳ್ಳಬಹುದು. ಹರಕೆ ಹೊತ್ತ ಹೆಣ್ಣು ಮಕ್ಕಳೂ ದೀಕ್ಷೆ ಪಡೆದು ಗೊರಮ್ಮಗಳಾಗಬಹುದು. ಇವರು ಮೈಲಾರಲಿಂಗನಿಗೆ ಚೌರಿ ಸೇವೆ, ಚಂಚಿ ಸೇವೆ (ತಾಂಬೂಲ ಸೇವೆ) ಮುಂತಾದವನ್ನು ಮಾಡುತ್ತಾರೆ.

ಗೊರವರಲ್ಲಿ ಬಗೆಗಳು

ಗೊರವರಲ್ಲಿ ಹಲವಾರು ಬಗೆಗಳಿವೆ. ಮಂಟೇಸ್ವಾಮಿ ಒಕ್ಕಲು, ಮಾಲೂರಯ್ಯನ ಒಕ್ಕಲು, ಬೀರೇಶ್ವರನ ಒಕ್ಕಲು. ಪಾರ್ವತಿಯ ಒಕ್ಕಲು ಹೀಗೆ ಅನೇಕ ಬಗೆಗಳಿವೆ. ದಕ್ಷಿಣ ಕರ್ನಾಟಕದಲ್ಲಿ ಇವರಿಗೆ ಗೊರವ, ಗೊಗ್ಗಯ್ಯ, ಗಗ್ಗಯ್ಯ. ಗಡಬದ್ದಯ್ಯ, ಕಡಬಡ್ಡ ಎನ್ನುತ್ತಾರೆ. ಉತ್ತರ ಕರ್ನಾಟಕದಲ್ಲಿ ಗ್ವಾರಪ್ಪ. ವ್ಯಾಘ ಎಂದು ಕರೆಯುತ್ತಾರೆ. ಪುಣೆಯ ಹತ್ತಿರವಿರುವ ಜುಜೂರಿಯ ಖಂಡೋಬಾ, ಕೊಲ್ಲಾಪುರದ ಜ್ಯೋತಿಬಾ. ಮದ್ರಾಸದ ಮಾಲ್ಲೋಶ ಮುಂತಾದವರಿಗೂ ಈ ಗೊರವರಿಗೂ ಸಾಮ್ಯವಿದೆ ಎಂದು ಹೇಳಲಾಗುತ್ತಿದೆ. ಅಲ್ಲದೆ ಮದ್ರಾಸ. ಹೈದ್ರಾಬಾದಿನಿಂದಲೂ ಮೈಲಾರಲಿಂಗನಿಗೆ ಜನ ನಡಕೊಳ್ಳುತ್ತಿದ್ದಾರೆ. ಇನ್ನು ಗೊರವರು ಸಲ್ಲಿಸುವ ಸೇವೆಯನ್ನಾದರಿಸಿಯೂ ಅವರನ್ನು ವಿಂಗಡಿಸಲಾಗಿದೆ. ಕಾರಣಿಕ ಗೊರವ, ಕರಡಿ ಗೊರವ, ನಾಯಿಗೊರವ, ಚಂಚಿಗೊರಮ್ಮ. ಚೌರಿಗೊರಮ್ಮ ಮುಂತಾಗಿ. ಅಲ್ಲದೆ, ಕುದರೆಕಾರರೆಂದೂ, ದೀವಟಿಗೆಗಾರರೆಂದೂ ಸೇವಕರಿದ್ದಾರೆ. ಇವರು ಮಾಡುವ ಸೇವೆಯ ಮೇಲೆ ಸ್ಥಾನಮಾನಗಳಿವೆ. ಉದಾ-ಕಾರಣಿಕ ಗೊರವ ಎಲ್ಲ ಗೊರವರ ಮೇಲ್ವಿಚಾರಣಾಧಿಕಾರಿ (Supervisor) ಇದ್ದಂತೆ.

ಗೊರವರ ವೇಷ ಭೂಷಣ

ಗೊರವರ ವೇಷ ಭೂಷಣಗಳು ವಿಚಿತ್ರ ಅಲ್ಲದೇ ಭಯಾನಕವೆಂದೂ ಕಾಣುತ್ತವೆ. ಅಂದರೆ ರಾಕ್ಷಸರನ್ನು ಕೊಲ್ಲಲಿಕ್ಕೆ ಭೈರವನ ಅವತಾರ ಹೊಂದಿದ ಶಿವನಿಗೆ ಸರಿಯಾಗಿ

ಅವನ ಸೈನಿಕರಿರಬೇಡವೇ ? ಇವರ ವೇಷಭೂಷಣಗಳೂ ಭಯಾನಕವಿದ್ದರೂ, ಕಲಾತ್ಮಕವೆನಿಸಿವೆ ಎನ್ನಬಹುದು.

ಸಾಮಾನ್ಯವಾಗಿ ಗೊರವರ ವೇಷಭೂಷಣಗಳೆಂದರೆ ಕಂಬಳಿಯ ನಿಲುವಂಗಿ, ಮೇಲೆ ರುಮಾಲು, ಕರಡಿ ಕುಲಾವಿ ಇಲ್ಲವೇ ನಾಯಿ ಕುಲಾವಿ. ಕೊರಳಲ್ಲಿ ಭಂಡಾರ ಇಡುವ ಚಿಗುರೆ ಚರ್ಮದ ಚೀಲ, ಕವಡೆಸರ. ಹೆಗಲಲ್ಲಿ ಭಿಕ್ಷಾಪಾತ್ರೆ ಡೋಣಿ. ಕೈಯಲ್ಲಿ ಡಮರುಗ, ತ್ರಿಶೂಲ. ಒಕ್ಕಳಗಂಟೆ, ನಾಗಬೆತ್ತ, ರಟ್ಟೆಬಳೆ, ಕಾಲಿಗೆ ಗೆಜ್ಜೆ, ಹುಲಿಚರ್ಮ, ಕವಡೆ ನಡುಪಟ್ಟಿ ಇತ್ಯಾದಿ ಎನ್ನಬಹುದು.

ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕದ ಗೊರವರ ವೇಷ-ಭೂಷಣಗಳಲ್ಲಿ ಸ್ವಲ್ಪ ವ್ಯತ್ಯಾಸವನ್ನು ಕಾಣುತ್ತೇವೆ. ದಕ್ಷಿಣದವರಿಗೆ. ಕಂಬಳಿಯ ಕೋರೆ ನಿಲುವಂಗಿ, ಕೊರಳಲ್ಲಿ ಭಂಡಾರ ಇರುವ ಚಿಗುರೆ ಚರ್ಮದ ಚೀಲ, ಕವಡೆಯ ಸರ, ಹೆಗಲಲ್ಲಿ ಭಿಕ್ಷಾ ಪಾತ್ರೆ-ದೋಣಿ, ಕೈಯಲ್ಲಿ ಡಮರು, ತ್ರಿಶೂಲ ಇವುಗಳು ಮುಖ್ಯ. ಇವಲ್ಲದೆ ತಲೆಗೆ ರುಮಾಲು, ಕೆಲವೊಮ್ಮೆ ಕರಡಿ ಕೂದಲಿನ ಕುಲಾವಿಯನ್ನು ಧರಿಸುತ್ತಾರೆ. ಉತ್ತರದವರು ಮೇಲೆ ಹೇಳಿದ ವೇಷಭೂಷಣಗಳ ಜೊತೆಗೆ ಒಕ್ಕಳ ಗಂಟೆ, ಡಮರುಗದೊಂದಿಗೆ ನಾಗಬೆತ್ತ, ರಟ್ಟೆ ಬಳೆ. ಕಾಲಿಗೆ ಗೆಜ್ಜೆ, ಹುಲಿ ಚರ್ಮ, ಕೊರಳಿಗೆ ಕವಡೆ ನಡುಪಟ್ಟಿ ಇತ್ಯಾದಿಗಳನ್ನು ಧರಿಸುತ್ತಾರೆ. ಅಲ್ಲದೆ ಹಣೆಗೆ ಭಂಡಾರ ಇಲ್ಲವೇ ವಿಭೂತಿಯನ್ನು ಧರಿಸುತ್ತಾರೆ.

ಗೊರವರು ಕಂಬಳಿಯ ನಿಲುವಂಗಿಯನ್ನು ಸಾಮಾನ್ಯವಾಗಿ ಧರಿಸುತ್ತಾರೆ. ಅಂದರೆ ಕಂಬಳಿಯ ನಿಲುವಂಗಿ ಆನೆಯ ಸಂಕೇತವಂತೆ. ರಾಕ್ಷಸರನ್ನು ಕೊಲ್ಲಲಿಕ್ಕೆ ಆನೆ ಬಲ ಬರುವಂತೆ ಶಿವನು ಮಾಡಿದನೆಂದು. ನಿಜವಾಗಿ ನೋಡಿದರೆ ಗೊರವರು ಆನೆ ಚರ್ಮದ ಅಂಗಿ ತೊಡಬೇಕಂತೆ. ಅದು ಸಾಧ್ಯವಾಗದಿದ್ದುದಕ್ಕೆ ಕರಿಯಕಂಬಳಿಯ ನಿಲುವಂಗಿ ತೊಡುತ್ತಾರೆ.

ಮೈಲಾರಲಿಂಗನಿಗೆ ಸಲ್ಲಿಸುವ ಸೇವೆಯ ಆಧಾರದ ಮೇಲೂ ಈ ವೇಷಭೂಷಣಗಳಲ್ಲಿ ವ್ಯತ್ಯಾಸವನ್ನು ಕಾಣುತ್ತೇವೆ. ಕರಡಿಗೊರವರು ಉಳಿದೆಲ್ಲ ವೇಷಭೂಷಣಗಳೊಂದಿಗೆ ಕರಡಿ ಕುಲಾವಿ ಹಾಕಿಕೊಂಡು ಕರಡಿಯಂತೆ ಕುಣಿಯುತ್ತಾರೆ. ನಾಯಿ ಗೊರವರು ನಾಯಿ ಕಿವಿಯಂತೆ ಹೋಲಿದ ಕಂಬಳಿಯ ಕುಲಾವಿ ಹಾಕಿಕೊಳ್ಳುತ್ತಾರೆ; ನಾಯಿಯಂತೆ ಬೊಗಳುತ್ತಾರೆ. ಆದರೆ ಕಾರಣಿಕ ಗೊರವ ತಲೆಗೆ ಬಣ್ಣದ ರುಮಾಲು, ವೀರಭದ್ರನ ಭಕ್ತರಾದ ಪುರವಂತರಂತೆ ಉದ್ದನೆಯ ಚೊಣ್ಣ ಹಾಕಿ ನಿಲುವಂಗಿ ತ್ರಿಶೂಲ ಇತ್ಯಾದಿಗಳನ್ನು ಧರಿಸುತ್ತಾರೆ. ಚಂಚಿಗೊರಮ್ಮಗಳು ಕಂಬಳಿಯ ನಿಲುವಂಗಿ ಹಾಕಬಹುದು. ಹಾಕದಿರಲೂಬಹುದು. ಇವರು ಮೈಲಾರಲಿಂಗನಿಗೆ ತಾಂಬೂಲ ಕೊಡುವ ಸೇವೆ ಮಾಡುತ್ತಾರೆ. ಅಂದರೆ ಇವರಿಗೆ ಮಕ್ಕಳಿಲ್ಲದೆ ಹೋದಾಗ,

ಮೈಲಾರಲಿಂಗನಿಗೆ ಹರಕೆ ಹೊತ್ತು ಮಕ್ಕಳನ್ನು ಪಡೆಯುತ್ತಾರೆ. ಕಾರಣ ಮಕ್ಕಳನ್ನು ಕೊಟ್ಟ ಮೈಲಾರಲಿಂಗನೇ ತಮ್ಮ ಗಂಡನೆಂದು ಗಂಡನಿಗೆ ತಾಂಬೂಲ ಕೊಡುವಂತೆ ಮೈಲಾರನಿಗೆ ಕೊಡುತ್ತಾರೆ. ಚೌರಿ ಗೊರವಮ್ಮಗಳು, ಚೌರೀ ಬೀಸುವ ಸೇವೆ ಮಾಡುತ್ತಾರೆ. ಕುದುರೇಕಾರರು ಕದುರೆಯು ಹಾಗೆ ಕುಣಿಯುತ್ತ, ಕಾಯ್‌ಕೋಲಿನಿಂದ ಕಾಲಿಗೆ ಹೊಡೆದುಕೊಳ್ಳುತ್ತಾರೆ. ದೀವಟಿಗೆಗಾರರು ದೀವಟಿಗೆಗೆ ಅರಿವೆಸುತ್ತಿ ಎಣ್ಣೆ ಹಾಕಿ ದೀವಟಿಗೆಯನ್ನು ಮೈಲಾರಲಿಂಗನ ಪಾಲಕಿಯ ಮುಂದೆ ಹಿಡಿದು ಮೆರವಣಿಗೆ ಗಳಲ್ಲಿ ಸೇವೆ ಸಲ್ಲಿಸುತ್ತಾರೆ.

ದಕ್ಷಿಣ ಭಾರತದಲ್ಲಿ ಮೈಲಾರಲಿಂಗನ ಕ್ಷೇತ್ರಗಳು ಅನೇಕ ಕಡೆಗಳಲ್ಲಿವೆ. ಆದರೆ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿವೆ. ಬಳ್ಳಾರಿ ಜಿಲ್ಲೆಯ ಮೈಲಾರವು ಮೈಲಾರ ಲಿಂಗನ ಮೂಲ ಕ್ಷೇತ್ರ. ಮುಂದೆ ಮೈಲಾರಲಿಂಗನಿಗೆ ನಡಕೊಳ್ಳಲು, ಹರಕೆ ನೀಡಲು ಎಲ್ಲರಿಗೂ ಮೈಲಾರಕ್ಕೆ ಬರುವದು ದೂರವೆಂದಾಗ ಅಲ್ಲಲ್ಲಿ ಮೈಲಾರಲಿಂಗನ ಕ್ಷೇತ್ರ ಗಳನ್ನು ನಿರ್ಮಿಸಿಕೊಂಡಿದ್ದಾರೆ. ಇಲ್ಲಿ ದೇವರಗುಡ್ಡದ ಉದಾಹರಣೆ ಕೊಡಬಹುದು. ದೇವರಗುಡ್ಡವು ಧಾರವಾಡ ಜಿಲ್ಲೆ ರಾಣೆಬೆನ್ನೂರ ತಾಲೂಕಿನಲ್ಲಿ ಬರುತ್ತದೆ. ಮೊದಲು ಈ ಊರಿಗೆ ಗುಡ್ಡಗುಡ್ಡಾಪುರ ಎನ್ನುತ್ತಿದ್ದರು. ರಾಣೆಬೆನ್ನೂರಿನಲ್ಲಿ ಮೈಲಾರಲಿಂಗನ ಭಕ್ತನೊಬ್ಬನಿಗೆ ಮೈಲಾರಕ್ಕೆ ಹೋಗುವದಾಗುವದೇ ಇಲ್ಲ. ಅದು ಹೇಗೆಂದರೆ ಮೈಲಾರಕ್ಕೆ ಹೊರಟಾಗ, ಭಾರೀ ಮಳೆ ಸುರಿದು ಗುಡ್ಡಗುಡ್ಡಾಪುರದವರೆಗೂ ನೀರಾ ಗುತ್ತದೆ. ಆಗ ಭಕ್ತನು ಈ ಗುಡ್ಡಕ್ಕೇ ಬಂದು ಅಲ್ಲೇ ಮೈಲಾರಲಿಂಗನನ್ನು ಸ್ಥಾಪಿಸಿದನೆಂದೂ, ಮುಂದೆ ಉಳಿದ ಭಕ್ತರಿಗೂ ಅನುಕೂಲವಾಯಿತೆಂದೂ ಹೇಳು ತ್ತಾರೆ. ಆ ಮುಂದೆ ಇದಕ್ಕೆ ದೇವರಗುಡ್ಡ ಎಂದು ಹೆಸರು ಬಂದಿದೆ. ಈಗ ಈ ಊರಿನ ಹೆಸರೂ ದೇವರಗುಡ್ಡವೆಂದಾಗಿದೆ. ಈ ದೇವರಗುಡ್ಡವು ದೇವರಗುಡ್ಡದ ರೇಲ್ವೆ ನಿಲ್ದಾಣದಿಂದ ಸ್ವಲ್ಪ ದೂರದಲ್ಲಿದೆ. ಭಕ್ತರು ಆಯಾ ಉಪಕ್ಷೇತ್ರಗಳಿಗೆ ಹೋಗಿ ನಡಕೊಳ್ಳಲು ಸುಲಭವಾಗಿದೆ. ಆದರೂ ಮೂಲ ಕ್ಷೇತ್ರಕ್ಕೆ ವರ್ಷಕ್ಕೊಮ್ಮೆಯಾದರೂ ಭಕ್ತರು ಹೋಗಬಹುದು. ಇದರಂತೆ ಕರ್ನಾಟಕದಲ್ಲಿ ಹಲವಾರು ಕಡೆಗೆ ಮೈಲಾರ ಲಿಂಗನ ಕ್ಷೇತ್ರಗಳು ಇವೆ. ಬಳ್ಳಾರಿ ಜಿಲ್ಲೆಯ ಮೈಲಾರ, (ಮೂಲ) ಧಾರವಾಡ ಜಿಲ್ಲೆಯ ದೇವರಗುಡ್ಡ, ದೇವಿಹೊಸೂರು. ಬೀದರ ಜಿಲ್ಲೆಯ ಮೈಲಾರಪುರ. ಬೆಳಗಾವಿ ಜಿಲ್ಲೆಯ ಕಾರಿಮನಿ, ಮಂಗಸೂಳಿ. ಶಿವಮೊಗ್ಗಾ ಜಿಲ್ಲೆಯ ಕುಬಟೂರು. ಮೈಸೂರು ಜಿಲ್ಲೆಯ ಮುಡುಕುತೊರೆ, ಬೆಂಗಳೂರು ಜಿಲ್ಲೆಯ ಮೈಲಾರ ಪಟ್ಟಣ ಮುಂತಾದೆಡೆ ಗಳಲ್ಲಿ ಈ ಕ್ಷೇತ್ರಗಳಿವೆ. ಇವುಗಳಲ್ಲಿ ಬಳ್ಳಾರಿ ಜಿಲ್ಲೆಯ ಮೈಲಾರ, ಧಾರವಾಡ ಜಿಲ್ಲೆಯ ದೇವರಗುಡ್ಡ ಪ್ರಖ್ಯಾತವಾದ ಕ್ಷೇತ್ರಗಳು.

ಧಾರವಾಡದ ವಿದ್ಯಾಗಿರಿಯ ಮೈಲಾರಲಿಂಗನ ಗುಡಿಯಲ್ಲಿ ರವಿವಾರಕ್ಕೊಮ್ಮೆ ಪೂಜೆ ನಡೆಯುತ್ತದೆ. ಮೈಲಾರಲಿಂಗನ ಪಾಲಕಿ ಹೊತ್ತು ಗುಡಿಯ ಸುತ್ತು ಐದು

ಸಾರಿ ಪ್ರದಕ್ಷಣೆ ಹಾಕುತ್ತಾರೆ. ಆಗ ಎಲ್ಲ ಗೊರವರು ತಮ್ಮ ಪಾಲಿನ ಸೇವೆ ಮಾಡು ತ್ತಾರೆ. ಇದಾದ ನಂತರ ಗೊರವರು ಮೈಲಾರಲಿಂಗನ ಹಾಡು ಹಾಡುತ್ತಾರೆ. ಮುಂದೆ ಗೊರವರು ಗರ್ಭಗುಡಿಯೊಳಗೆ ಹೋಗುವ ದಾರಿಯ ಆಚೆ ಈಚೆ ಎರಡು ಸಾಲು ಮಾಡಿ ಕಂಬಳಿ ಹಾಸಿಕೊಂಡು ಡೋಣಿ ಎದುರಿಟ್ಟುಕೊಂಡು ಕೂಡುತ್ತಾರೆ. ಆಗ ಭಕ್ತರು ಡೋಣಿಯಲ್ಲಿ ಬುತ್ತಿ, ಅಂಬಲಿ, ಹಣ್ಣು ಹಾಕುತ್ತಾರೆ. ಮತ್ತು ಮೂರು ಪೈಸೆ, ಇಲ್ಲವೆ ಐದು, ಹತ್ತು ಪೈಸೆ ನಾಣ್ಯಗಳನ್ನು ಕಂಬಳಿಯ ಮೇಲೆ ಹಾಕುತ್ತಾರೆ. ಆಗ ಗೊರವರು ಭಕ್ತರಿಗೆ ಹಣೆ ತುಂಬ ಭಂಡಾರ ಹಚ್ಚುತ್ತಾರೆ.

ಡೋಣಿ ತುಂಬಿಸುವ ಕಾರ್ಯ

ಮೈಲಾರಲಿಂಗನ ಕೆಲವು ಭಕ್ತರು ಹಬ್ಬ, ಮದುವೆ, ಗೃಹಪ್ರವೇಶ ಮುಂತಾದ ಸಂದರ್ಭಗಳಲ್ಲಿ ಗೊರವರನ್ನು ಕರೆಸುತ್ತಾರೆ. ಆಗ ಡೋಣಿ ತುಂಬಿಸುವ ಕಾರ್ಯ ಮಾಡುತ್ತಾರೆ. ಇದಕ್ಕೆ ಒಗ್ಗಸೇವೆ, ಮಣಿಸೇವೆ ಎಂತಲೂ ಕರೆಯುತ್ತಾರೆ. ಇದು ಒಂದು ಕುಣಿತದ ಸನ್ನಿವೇಶವಿದ್ದು ಒಂದು ಧಾರ್ಮಿಕ ಜಾನಪದ ಕಲೆಯೂ ಆಗಿದೆ. ಗೊಗ್ಗಯ್ಯಗಳು ಭಕ್ತರ ಮನೆಯ ನಡುವಂಕಣದಲ್ಲಿ ಕರಿಯ ಕಂಬಳಿಯನ್ನು ಹಾಸಿ ಮಧ್ಯೆ ಡೋಣಿಗಳನ್ನು ಇಟ್ಟು. ಅವುಗಳಲ್ಲಿ ಭಕ್ತರು ಹಾಲು, ಹಣ್ಣು. ಹೂವು. ಕೆಲವರು ಹೋಳಿಗೆ. ಬುತ್ತಿಯನ್ನು ತುಂಬಿ ಪೂಜಿಸುತ್ತಾರೆ. ನಂತರ ಐದಾರು ಜನ ಗೊರವರು ಡಮರುಗ, ಶಿವನ ಖಡ್ಗ ಹಿಡಿದು ಸ್ತೋತ್ರ ಮಹಿಮೆಗಳನ್ನು ಹೇಳುತ್ತಾ, ಕಂಬಳಿಯ ಸುತ್ತ ಲಯಬದ್ಧವಾಗಿ ಕುಣಿಯುತ್ತಾರೆ. ಇದು ಮುಗಿದ ನಂತರ ಗೊರವರು ಡೋಣಿಯಲ್ಲಿದ್ದುದನ್ನು ತಿನ್ನುತ್ತಾರೆ. ಆದರೆ ತಿನ್ನುವಾಗ ಕೈಯಿಂದ ತೆಗೆದುಕೊಳ್ಳುವ ಹಾಗಿಲ್ಲ. ಮಂಡಿ ಊರಿ ಕುಳಿತು. ನಾಯಿಯಂತೆ ಬೊಗಳುತ್ತ ತಿನ್ನುತ್ತಾರೆ. ನಂತರ ಭಕ್ತರು ನೀಡಿದ ಕಾಣಿಕೆಯನ್ನು ಸ್ವೀಕರಿಸುತ್ತಾರೆ. ಅಲ್ಲದೆ ಮೈಲಾರಲಿಂಗನಿಗೆ ಹೊತ್ತ ಹರಕೆಯನ್ನು ಮುಟ್ಟಿಸಲು ಗೊರವರಿಗೆ ಒಪ್ಪಿಸುತ್ತಾರೆ. ಅದರಂತೆ ಗೊರವರು ಮುಟ್ಟಿಸುತ್ತಾರೆ. ಧಾರ್ಮಿಕ ಹಿನ್ನಲೆಯಿಂದ ಬೆಳೆದು ಬಂದ ಜಾನಪದ ಕಲೆ ಕುರುಬ ರಲ್ಲಿ ಹೆಚ್ಚು ಪ್ರಚಲಿತವಿದೆ. ಈ ರೀತಿಯ ಕುಣಿತ ಗಂಟೆಗಟ್ಟಲೇ ಕೆಲವೊಮ್ಮೆ ಇಡೀ ರಾತ್ರಿ ನಡೆಯಬಹುದು. ತಾಳ. ಲಯ, ವೇಷಭೂಷಣಗಳೊಂದಿಗೆ ಆಕರ್ಷಣೀಯ ರುದ್ರಸ್ವರೂಪ ತಾಳುತ್ತದೆ. ಈ ಕಲೆಗೆ ಸಂಪ್ರದಾಯಕ ನಿಯಮ. ನಿಷ್ಠೆಗಳು ಅತ್ಯಂತ ಮುಖ್ಯವಾದುವೆಂದು ಗೊರವರ ನಂಬಿಕೆ.

ಮೈಲಾರಲಿಂಗನ ಜಾತ್ರೆಯಲ್ಲಿ ಗೊರವರು

ದೇವರಗುಡ್ಡದಲ್ಲಿ ದಸರೆಗೆ. ಮೈಲಾರದಲ್ಲಿ ಭಾರತ ಹುಣ್ಣಿವೆಗೆ ಜಾತ್ರೆಗಳಾಗು ತ್ತವೆ. ಹಲವಾರು ಕಡೆಯಿಂದ ಗೊರವರು. ಯಾತ್ರಿಕರು ಸೇರುತ್ತಾರೆ. ಮೂವತ್ತು

ಸಾವಿರಕ್ಕೂ ಮಿಕ್ಕಿ ಜನ ಸೇರಬಹುದೆಂದು ಅಂದಾಜು ಮಾಡಲಾಗಿದೆ. ಧಾರವಾಡ ಜಿಲ್ಲೆಯ ಎಲ್ಲ ಕಡೆಗಳಿಂದ, ಬೆಳಗಾವ, ಬಿಜಾಪುರ, ಮೈಸೂರ, ಹೈದರಾಬಾದ, ಮದ್ರಾಸ, ಮುಂತಾದೆಡೆಗಳಿಂದ ಯಾತ್ರಿಕರು ಬಂದು ದೇವರಿಗೆ ತಮ್ಮ ಭಕ್ತಿಯನ್ನು ಅರ್ಪಿಸುತ್ತಾರೆ. ಮತ್ತು ಬಡಜನರಿಗೆ ಪ್ರಸ್ತ ಹಾಕಿಸುತ್ತಾರೆ. ನರ್ತಕಿಯರೂ ಕೂಡ ದೇವರೆದರು ನೃತ್ಯ ಮಾಡುತ್ತಾರೆ. ಈ ಜಾತ್ರೆಯಲ್ಲಿ ಗೊರವರದು ಹೆಚ್ಚಿನ ಆಕರ್ಷಣೆ. ಮಹತ್ವದ ಪಾತ್ರ. ಗೊರವರು ಜನರಿಗೆ ಸಂತೋಷ, ಮನರಂಜನೆ ನೀಡಲು ಈ ವೇಷ ಹಾಕುತ್ತಾರೆ ಎಂದು ಹೇಳಲಾಗುತ್ತದೆ. ಸಾಧ್ಯವಾದಷ್ಟು ಅಸಹ್ಯ ಮತ್ತು ಕ್ರೂರರಾಗಿ ಕಾಣುವಂತೆ ವೇಷ ಹಾಕಿ ನಾಯಿಗಳಂತೆ ಬೊಗಳಿ ಮೈಲಾರನ ಹಿಂದಿನ ಕಥೆಯನ್ನು ನೆನಪಿಗೆ ತಂದುಕೊಡುತ್ತಾರೆ. ಯಾತ್ರಿಕರು ಗುಡಿಗೆ ಬಂದಾಗ ಗೊರವರು ಅವರೆಡೆಗೆ ನಾಯಿಗಳಂತೆ ಉಗ್ರವಾಗಿ ಬೊಗಳುತ್ತ ಡೋಣಿಯನ್ನು ಮುಂದೆ ಚಾಚುತ್ತಾರೆ. ಪ್ರತಿಯೊಬ್ಬ ಯಾತ್ರಿಕನು ಡೋಣಿಯಲ್ಲಿ ಸ್ವಲ್ಪ ಹಾಲು, ಶುದ್ಧವಾದ ಬೆಣ್ಣೆಯನ್ನು ಸುರಿಯುತ್ತಾನೆ. ಮತ್ತು ಬಾಳೆಹಣ್ಣು, ಸಕ್ಕರಿ ಹಾಗೂ ಉಳಿದ ತಿನಿಸುಗಳನ್ನು ಅದರಲ್ಲಿ ಒಗೆದು ಪ್ರತಿಯೊಬ್ಬ ಗೊರವನಿಗೂ ಒಂದೊಂದು ಪೈಸೆ ಕೊಡುತ್ತಾ ಹೋಗುತ್ತಾರೆ. ಕೆಲವೊಮ್ಮೆ ಅತಿ ಹಣ್ಣಾದ ಬಾಳೆಹಣ್ಣು, ಹಾಲು, ಮೊಸರು, ಬೆಣ್ಣೆ ಸಕ್ಕರಿಯನ್ನು ಕೂಡಿಸಿ ಕಲಸಿ ಡೋಣಿಯಲ್ಲಿ ಸುರಿಯುತ್ತಾರೆ. ಆಗ ಗೊರವರು ಡೋಣಿಯನ್ನು ನೆಲದ ಮೇಲಿಟ್ಟು ತಮ್ಮ ಡೋಣಿಗೆ ಹೋಗಿ ನಾಯಿಯಂತೆ ಬೊಗಳುತ್ತಾ ಜಗಳಾಡುತ್ತಾ ನೆಲದ ಮೇಲೆ ಸಪಾಟಾಗಿ ಬಿದ್ದು ಡೋಣಿಯಲ್ಲಿ ಬಾಯಿ ಹಾಕಿ ನಾಯಿಯಂತೆ ತಿನ್ನುತ್ತಾರೆ. ತಿಂದಾದ ನಂತರ ಮೈಲಾರನ ಭಕ್ತಿಗೀತೆಗಳನ್ನು ಹಾಡುತ್ತಾರೆ. "ಏಳುಕೋಟಿ ಮೈಲಾರ, ಮಾರ್ತಂಡ" ಎಂದು ಜೋರಾಗಿ ಕೂಗುತ್ತಾರೆ. ಆ ಮೇಲೆ ಇವರಿಗೆ ಹಣ್ಣು ಹಾಲು ನೀಡಿದ್ದಕ್ಕಾಗಿ ಯಾತ್ರಿಕರಿಗೆ ಹರಸುತ್ತಾರೆ. ಯಾತ್ರಿಕರು ಮೈಲಾರ ದೇವರಿಗೆ ಸಂತೋಷವಾಗಿ ತನ್ನ ಸೇವಕರಾದ ನಾಯಿ ಸೇನೆಯಿಂದ ಆಶೀರ್ವದಿಸಿದ ಎಂದು ತೃಪ್ತರಾಗುತ್ತಾರೆ.

ಇಲ್ಲಿ ಜಾತ್ರೆ ಎಂದರೆ ಮಣಿಕಾಸುರ, ಮಲ್ಲಾಸುರರನ್ನು ಕೊಂದ ವಿಜಯೋತ್ಸವದ ದಿನ. ಈ ದಿನದ ಸಿರ್ಧಿಷ್ಟ ಪಡಿಸಿದ ವೇಳೆಗೆ ಸುಮಾರು ೧೫–೨೦ ಫೂಟು ಉದ್ದದ ಒಂದು ಕಂಭಕ್ಕೆ ಅಷ್ಟೇ ಉದ್ದದ ಕಬ್ಬಿಣದ ಸರಪಳಿಯನ್ನು ತೊಡಕಿಸಿ ನೇರವಾಗಿ ನಿಲ್ಲಿಸುತ್ತಾರೆ. ಅಂದರೆ ಶಿವನು ಇಷ್ಟು ದೊಡ್ಡದಾದ ಬಿಲ್ಲನ್ನು ಅಸುರರನ್ನು ಕೊಲ್ಲಲು ಉಪಯೋಗಿಸಿರುತ್ತಾನಂತೆ. ಆ ಕಾರಣದಿಂದ ಅದನ್ನು ನಿಲ್ಲಿಸಿರುತ್ತಾರೆ. ಕಾರಣಿಕ ಗೊರವ ಈ ಕಂಬವನ್ನು ಏರುತ್ತಾನೆ. ಇವನು ಏಳು ದಿನ ಉಪವಾಸವಿರಬೇಕಾತ್ತದೆ. ಕಂಬವನ್ನು ಏರುವದಕ್ಕೆ "ಉಟ್ಲು" ಎನ್ನುತ್ತಾರೆ. ಏರುವಾಗ ನಾಲ್ಕಾರು ಜನ ಗೊರವರೂ ಉಳಿದ ಜನರೂ ಕಂಬವನ್ನು ಗಟ್ಟಿಯಾಗಿ ಹಿಡಿದಿರುತ್ತಾರೆ. ಕಾರಣಿಕ ಗೊರವನು ಮೇಲೆ ಏರಿ ಕಾಲಿನಿಂದ ಕಂಬವನ್ನು ಗಟ್ಟಿಯಾಗಿ ಹಿಡಿದು ಕೈಗಳನ್ನು

ಬಿಟ್ಟು ಮೇಲೆ ನೋಡುತ್ತ ತಲೆ ಅಲ್ಲಾಡಿಸುತ್ತಾನೆ. ಆಗ ಆಕಾಶದಲ್ಲಿ ಬೆಳಕು ಮಿಂಚಿದ ರೂಪದಲ್ಲಿ ಶಿವನು ಕಾಣಿಸಿಕೊಳ್ಳುತ್ತಾನಂತೆ. ಇದಕ್ಕೆ ಜ್ಯೋತಿ–ರೂಪಧಾರಣ ಶಿವ ಕಂಡ ಎನ್ನುತ್ತಾರೆ. ಆಗ ಶಿವನು ನುಡಿಯುತ್ತಾನೆಂದೂ ಅದು ಕಾರಣಿಕ ಗೊರವನಿಗೆ ಕೇಳಿಸಿಕೊಳ್ಳುತ್ತದೆಂದೂ ಅದನ್ನೇ ಜನರಿಗೆ ತಿಳಿಸುತ್ತಾನೆ ಕಾರಣಿಕ ಗೊರವ. ಇದನ್ನು 'ಕಾರಣಿಕ' ಎಂದು ಕರೆಯುತ್ತಾರೆ. ಈಗಲೂ ಈ ಕಾರಣಿಕದ ಬಗೆಗೆ ಜನರಲ್ಲಿ ನಂಬಿಕೆ ಇದೆ. ಎಲ್ಲರೂ ಇದನ್ನು ಕೇಳಲು ಆ ವೇಳೆಗೆ ನಿರ್ದಿಷ್ಟಪಡಿಸಿದ ಸ್ಥಳಕ್ಕೆ ಬರುತ್ತಾರೆ.

ಕಾರಣಿಕ ಹೇಳುವಾಗ ಕಾರಣಿಕ ಗೊರವನು ತಲೆ ಅಲ್ಲಾಡಿಸಿ, ಸ್ವಲ್ಪ ತಡೆದು "ಸಬ್ಬಲಿ" "ಸಿದ್ದಲಿ" ಅಥವಾ "ಸಪ್ಪಲೆ" ಎಂದು ಜನರಿಗೆ ನಿಃಶಬ್ದವಾಗಿರಲು, ಸಿದ್ಧವಾಗಿರಲು ಕೇಳಿಕೊಳ್ಳುತ್ತಾನೆ. ನೆರೆದ ಸಾವಿರಾರು ಜನರೂ ಸದ್ದು ಮಾಡದೇ ಕೇಳಲು, ಬರೆದುಕೊಳ್ಳಲು ಸಿದ್ಧರಾಗುತ್ತಾರೆ. ಕಾರಣಿಕ ಗೊರವನು ನಾಲ್ಕಾರು ನುಡಿಗಳನ್ನು ನುಡಿಯುತ್ತಾನೆ. ಇವು ಶಿವನ ವಾಣಿಗಳು. ಮಳೆ, ಬೆಳೆ, ಜನ, ಜಗದ ಬಗೆಗೆ ಇರುತ್ತವೆ. ಉದಾ: ಕಲಕು ಮಲಕು, ಆಕಾಶಕ್ಕೆ ಸಿಡ್ಲು ಹೊಡೀತು ಇತ್ಯಾದಿ. ಅಷ್ಟು ಹೇಳಿ ಕಂಬದ ಮೇಲಿಂದ ಕೈಬಿಡುತ್ತಾನೆ. ಕೆಳಗಿರುವ ಗೊರವರೂ, ಉಳಿದವರೂ ಅವನನ್ನು ನೆಲಕ್ಕೆ ಬೀಳದಂತೆ ಹಿಡಿಯುತ್ತಾರೆ. ಕಾರಣಿಕ ಹೇಳಿದ ನುಡಿಗಳನ್ನು ಗುಡಿಯಲ್ಲಿ ಫಲಕದ ಮೇಲೆ ಬರೆದು ಹಚ್ಚುತ್ತಾರೆ. ಅದನ್ನು ಮುಂದೆ ಗೊರವರು ಊರೂರಿಗೆ ಸಾರುತ್ತಾ ಹೋಗುತ್ತಾರೆ.

ಹಿಂದೆ ಸಾಧಕರು ತಯಾರು ಮಾಡಿಟ್ಟ ಕಾರಣಿಕದ ಒಂದು ಪಟ್ಟಿಯೇ ಮೈಲಾರದಲ್ಲಿದೆ. ಅದನ್ನು ಒಂದೊಂದಾಗಿ ಪ್ರತಿವರ್ಷವೂ ಹೇಳುತ್ತಾ ಹೋಗುತ್ತಾರೆ. ಆಯಾ ವರ್ಷಕ್ಕೆ ಅನ್ವಯಿಸುವಂತೆ ಪಟ್ಟಿ ಸಿದ್ಧವಾಗಿದೆ ಎಂದು ಹೇಳುತ್ತಾರೆ. ನುಡಿಯ ತುದಿಗೆ "ಪರಾಕ್" ಎಂದು ಹೇಳಿದರೆ ಒಳ್ಳೆಯದೆಂದೂ ಇಲ್ಲದಿದ್ದರೆ ಅಶುಭವೆಂದೂ ಹೇಳಲಾಗುತ್ತದೆ. ಜನರು ಈ ನುಡಿಗಳನ್ನು ಕೇಳಿ ಒಂದೊಂದು ರೀತಿಯಲ್ಲೂ ಅರ್ಥೈಸಿಕೊಳ್ಳುತ್ತಾರೆ.

ಧಾರವಾಡದಲ್ಲೂ ಮೈಲಾರಲಿಂಗನ ಜಾತ್ರೆಯಾಗುತ್ತದೆ. ಆದರೆ ಭಾರತ ಹುಣ್ಣಿಮೆಗೆ ಮುಂಚಿತವಾಗಿ ಆಗುತ್ತದೆ. ಏಕೆಂದರೆ ಭಾರತ ಹುಣ್ಣಿಮೆಗೆ ಮೂಲ ಕ್ಷೇತ್ರವಾದ ಮೈಲಾರಕ್ಕೆ ಹೋಗುತ್ತಾರೆ. ಧಾರವಾಡದಲ್ಲಿ ೧೯೭೭ ಮತ್ತು ೧೯೭೮ ರಲ್ಲಿ ಆದ "ಕಾರಣಿಕ"ದ ನುಡಿಗಳು ಇಂತಿವೆ. "ಮುತ್ತಿನ ರಾಶಿ ಮಂದ, ಹೊನ್ನಿನ ರಾಶಿ ಚಂದಲೆ ಪರಾಕ್". ಅಂದರೆ ಪೀಕು (ಬೆಳೆ) ಕಡಿಮೆ; ರೊಕ್ಕ ಹೆಚ್ಚು ಎಂದರ್ಥ. ಮುಂದೆ ೧೯೭೮ ರಿಂದ ೧೯೭೯ ರ ವರೆಗೆ "ಹವಳ ಹರೀತಲೇ; ಮುತ್ತು ಉಳಿತಲೇ; ಅತ್ತೀ ಮರಾ ಅಮೃತ ಆತಲೇ ಪರಿಪರಾ" ಅಂದರೆ ಜೊಳ್ಳು ಹಾರಿ ಹೋಯಿತು; ಗಟ್ಟಿ ಉಳಿಯಿತು; ಹಾಕಿದ ಪೀಕಿಗೆ ರೋಗವಿಲ್ಲ; ದೇವರ ಸ್ಮರಣೆ ಇರಲಿ ಎಂದರ್ಥ. ಹೀಗೆ "ಆಕಾಶಕ್ಕೆ

ಗುಂಡು ಹೊಡಿತಲೇ ಪರಾಕ್" ಅಂದರೆ ಮಳೆ ಹೆಚ್ಚು : ಬೇರೆಲ್ಲಾ ಕಾಳಲೇ ಪರಾಕ್" ಅಂದರೂ ಬೆಳೆ ಹೆಚ್ಚು. "ಅಂಬ್ಲಿ ಹಳಸ್ತು; ಪತ್ರ ಪರೀತಲೇ ಪರಾಕ್" ಅಂದರೆ ಮಳೆ ಹೆಚ್ಚಾಗಿ, ಹಗೆಯಲ್ಲಿ ನೀರಾಗಿ ಕಾಳು ಕೆಡುತ್ತವೆ. "ಕಲಕು ಮಲಕು" ಕಲಬೆರಕಿ ಕೆಟ್ಟ. (ಯಾಕೆಂದರೆ "ಪರಾಕ್" ಹೇಳಿಲ್ಲ) ಇತ್ಯಾದಿ ನುಡಿಗಳು ಬರುತ್ತವೆ.

ಗೊರವರು ಈ ಸಂದೇಶವನ್ನು ಹೊತ್ತು ಊರೂರಿಗೆ ಹೋಗಿ ಸಾರುತ್ತಾರೆ: ಭಿಕ್ಷೆ ಬೇಡುತ್ತಾರೆ. ಭಕ್ತರು ಭಿಕ್ಷೆ ನೀಡಿ, "ಈ ವರ್ಷದ ಕಾರ್ಣಿಕ ಏನಾತ್ ಗೊರಪ್ಪ" ಎಂದು ಕೇಳುವದೂ ಉಂಟು.

ಇನ್ನು ಮಾರ್ಗಶಿರ ಮಾಸದ ಸಸ್ಥಿಯಲ್ಲಿ (ಕಂಪಾಸಸ್ಥಿಯಲ್ಲಿ) ಭಂಡಾರವನ್ನು ತಯಾರುಮಾಡುತ್ತಾರೆ. ಇದನ್ನು ಮಾಡುವಾಗ ಸಾವಿರಬಾರಿ ಮೈಲಾರದೇವರ ಹೆಸರನ್ನು ತೆಗೆದುಕೊಂಡು ತಯಾರು ಮಾಡುತ್ತಾರೆ. ಇದು ದೇವರ ಪ್ರಸಾದವೆಂದು ಇದನ್ನು ಯಾತ್ರಿಕರು ಉಪಯೋಗಿಸುತ್ತಾರೆ.

ಜಾತ್ರೆಗೆ ಬಂದವರು ಹರಕೆಯನ್ನು ಉದಾ : ಜಿನಗೆ ಎಮ್ಮಿ. ಆಕಳ ಕರು ಇತ್ಯಾದಿ ಗಳನ್ನು ಮುಟ್ಟಿಸುತ್ತಾರೆ.

ಮೈಲಾರ, ದೇವರ ಗುಡ್ಡಗಳು ದನಗಳ ಜಾತ್ರೆಗಾಗಿಯೂ ಪ್ರಸಿದ್ಧವಾಗಿವೆ.

ಶಸ್ತ್ರ ಹಾಕಿಕೊಳ್ಳುವದು :

ಗೊಗ್ಗಯ್ಯಗಳಲ್ಲಿ ಶಸ್ತ್ರ ಹಾಕಿಕೊಳ್ಳುವ ಸಂಪ್ರದಾಯವೂ ಇದೆ. ಜಾತ್ರೆ ಕಾಲದಲ್ಲಿ ಗೊಗ್ಗಯ್ಯಗಳು ಪವಾಡಗಳನ್ನು ಮಾಡುತ್ತಾರೆ. ಅಂದರೆ ಶಸ್ತ್ರಗಳನ್ನು ಹಾಕಿಕೊಳ್ಳು ತ್ತಾರೆ. ಹೆಚ್ಚಾಗಿ ಕಂಚಿವೀರ ಗೊರವರು ಇದನ್ನು ನಡೆಸುತ್ತಾರೆ. ಇದರಲ್ಲಿ ಕಾಲ್ ಪವಾಡ, ಕೈ ಪವಾಡ ಎಂದು ಎರಡು ಬಗೆ. ಕುತ್ತಿಗೆಯಿಂದ ಮೇಲೆ ಇವರು ಪವಾಡ ಮಾಡುವುದಿಲ್ಲ. ಅಂದರೆ ಶಸ್ತ್ರ ಹಾಕಿಕೊಳ್ಳುವದಿಲ್ಲ. ಕಪೋಲ ಮತ್ತು ನಾಲಗೆಯಲ್ಲಿ ಶಸ್ತ್ರ ಹಾಕಿಕೊಳ್ಳುವದನ್ನು ವೀರಭದ್ರನ ಭಕ್ತರು ಮಾಡುತ್ತಾರೆ. ವೀರಭದ್ರನ ಭಕ್ತರು ಪವಾಡ ಮಾಡುವಾಗ ವಿಭೂತಿ ಉಪಯೋಗಿಸಿದರೆ ಗೊರವರು ಭಂಡಾರ ತುಂಬುತ್ತಾರೆ.

ಕೈ ಪವಾಡದಲ್ಲಿ ದೀಪಕ್ಕೆ ಜೋಡಿಸಿದ ದಬ್ಬಣಾಕಾರದ ಕಬ್ಬಿಣದ ಕಡ್ಡಿಯನ್ನು ಸೇರಿಸಿಕೊಂಡು ದೇವರಿಗೆ ಆ ದೀಪವನ್ನು ಬೆಳಗುತ್ತಾರೆ. ಈ ಪವಾಡಕ್ಕೆ ಕೈ ಪವಾಡ, ಆರತೀ ಪವಾಡ ಎಂತಲೂ ಕರೆಯುತ್ತಾರೆ. ಕಬ್ಬಿಣದ ದೊಡ್ಡ ಸರಪಳಿಯನ್ನು ಕೈಯಿಂದ ಹರಿದು ಜಗ್ಗುವದೂ ಕೈ ಪವಾಡ.

ಕಾಲಿಗೆ ಸರಪಳಿ ಕಟ್ಟಿ ಹರಿಯುವದು, ಮೀನು ಕಂಡದಲ್ಲಿ ಕಬ್ಬಿಣದ ಹಾರೆ, ಬಗಣೆ ಗೂಟ, ಹಗ್ಗ, ಮಿಣಿ, ಕಾರೀ ಮುಳ್ಳು ಕಂಟೆಗಳನ್ನೂ ಸೇರಿಸಿಕೊಳ್ಳುವದು; ಹಾಕಿ

ಜಗ್ಗುವದು ಕಾಲ್ ಪವಾಡಗಳು. ಹೀಗೆ ಶಸ್ತ್ರ ಹಾಕಿಕೊಳ್ಳುವಾಗ ಭಂಡಾರವನ್ನು ತುಂಬಿದರೆ ನಂಜಾಗುವದಿಲ್ಲ. ಅದರಂತೆ ಇದು ತ್ವಚರೋಗವನ್ನು ಹಿಮ್ಮೆಟ್ಟಿಸುವದು. ಕುಷ್ಟರೋಗವೂ ನಿವಾರಣೆಯಾಗುವದು. ಎಂದು ಹೇಳಲಾಗುತ್ತದೆ.

ಸಮಾರೋಪ

ಇವೆಲ್ಲ ಸಂಪ್ರದಾಯದಲ್ಲಿ ಅಪ್ರಭುದ್ಧ ಅನಾಗರಿಕ ಮೂಢ ನಂಬಿಕೆಗಳೆಂದು ನಂತರ ಶರಣರು ಹಳಿದಿದ್ದಾರೆ. ಉದಾಹರಣೆಗೆ ಬಸವಣ್ಣನವರು, ಗ್ಗೊರುಯ್ಯಗಳು ನಾಯಿಯಂತೆ ಬೊಗಳುವದನ್ನು ಕಂಡು ತಮ್ಮ ವಚನದಲ್ಲಿ, "ಮೈಲಾರಲಿಂಗನ ಪೂಜಿಸಿ ನಾಯಿಯಂತೆ ಬೊಗಳುವದ ಕಂಡೆ" ಎಂದಿದ್ದಾರೆ. ಇತ್ತಿತ್ತಲಾಗಿ ಗೊಗ್ಗಯ್ಯ ಅಥವಾ ಒಗ್ಗಯ್ಯಗಳು ತಮ್ಮ ನಿಯಮನಿಷ್ಠೆಗಳನ್ನು ಕಳೆದುಕೊಳ್ಳುತ್ತಿದ್ದಾರೆ ಎಂದು ಹೇಳಲಾಗುತ್ತಿದೆ, ಏಳು ಮಂದಿ ಗೊರವರು ಭಿಕ್ಷೆಬೇಡುತ್ತ ಭಕ್ತರ ಮನೆಗೆ ಹೋಗಿ ಒಬ್ಬನನ್ನು ಕಾರಣಿಕ ಸ್ವಾಮಿಯನ್ನಾಗಿ ಮಾಡಿ ಕಂಬಳಿ ಹಾಸಿ ಮೈನಡುಗಿಸುತ್ತ "ದೇವರು ಮೈಯ್ಯಲ್ಲಿ ಬಂದಿದ್ದಾನೆಂದೂ, ನೀವು ಹೋದವರ್ಷ ದೇವರಿಗೆ ಬೇಡಿಕೊಂಡ ಕಾಣಿಕೆ ಮುಟ್ಟಿಸಿಲ್ಲ, ಅಷ್ಟು ಕೊಡಿ, ಇಷ್ಟು ಕೊಡಿ ಎಂದು ಪೀಡಿಸುತ್ತಾರೆ, ಮೈನಡುಗಿಸುತ್ತ ಹೆದರುವಂತೆ ಮಾಡುತ್ತಾರೆ. ತ್ರಿಶೂಲವನ್ನು ನೆಲಕ್ಕೆ ಸಿಕ್ಕಿಸಿ ಈಗ ಕೀಳಲಿಕ್ಕಾಗುವದಿಲ್ಲ, ಹಣಕೊಡಿರಿ" ಎಂದು ಕುಳಿತೇ ಬಿಡುತ್ತಾರೆ. ಹೀಗೆ ಹೆದರಿಸಿ ೨೫ ರೂ. ಗಳಿಂದ ೧೦೦–೨೦೦ ರೂ. ಗಳವರೆಗೂ ಹಣ ಕಿತ್ತುಕೊಂಡೇ ಹೋಗುತ್ತಾರೆ. ಒಮ್ಮೊಮ್ಮೆ ಕೆಲ ಭಕ್ತರು ಈ ಭಂಡಾಟಕ್ಕೆ ತಾಳಲಾರದೆ ಇನ್ನುಳಿದ ಒಳ್ಳೆಯ ಗೊರವರ ನೆರವು ಪಡೆದು ಹೊರಗೆ ಹಾಕುತ್ತಾರೆ. ಮೈಲಾರ ಲಿಂಗನ ಭಕ್ತರು ಜಿನಗೆ, ಎಮ್ಮೆ, ಆಕಳು. ಇಲ್ಲ ಇನ್ನಾವದೆ ಹರಕೆಗಳನ್ನು ತಾವೇ ಸ್ವತಃ ಒಯ್ದು ಮುಟ್ಟಿಸಲಾಗದಿದ್ದಾಗ ಗೊರವರ ಕಡೆಗೆ ಕೊಡುತ್ತಾರೆ. ಆಗ ಇವರು ಅವುಗಳನ್ನು ಮುಟ್ಟಿಸದೇ ತಾವೇ ಬಳಸುತ್ತಾರೆ. ಇಂತಹ ಗೊರವರನ್ನು ನೋಡೇ ಇರಬೇಕು ಬಸವಣ್ಣನವರು ಹೀಗೆ ನುಡಿದಿದ್ದಾರೆ. "ಗಾಡಿಗ (ಕಾರಣಿಕ ಗೊರವ) ಡಿಂಬುಗಂಗೆ (ಕಂಚಿವೀರ) ಚಿಕ್ಕ ಮುಟ್ಟಿಗೆ ಹಸರಂಬಲಿ ಮುಟ್ಟಿಗೆ ಹುಳಿ ಮುಟ್ಟಿಗೆ ಹುಳಿ ಬುತ್ತಿಯ ಬೇಡಿ ಮನುಷ್ಯರ ಪಿಡಿದು ಪೀಡಿಸಿ, ಕುರುಕುವ ಹೇಸಿ ದೈವಂಗಳ ಬೇಡಿ ಬೇಡಿ ನಿರರ್ಥ ಕೆಡಬೇಡ ಎಲವೋ ಕೂಡಲ ಸಂಗನ ನೆರೆನಂಬು" ಎಂದು.

ಬಸವಣ್ಣನವರು ಮುಂದುವರಿದು ಮೈಲಾರನ ಭಕ್ತರ ಡಾಂಭಿಕತೆ, ಹೊರಗಣ ವೇಷಭೂಷಣ, ಒಳಗಣ ಅಂಧಕಾರ, ಮೌಢ್ಯತೆಗಳನ್ನು ತಮ್ಮ ವಚನಗಳಲ್ಲಿ ಎತ್ತಿ ತೋರಿದ್ದಾರೆ. ಅವುಗಳನ್ನು ಇಲ್ಲಿ ಕಾಣಬಹುದು.

ಒಳ್ಳಿಹ ಮೈಲಾರನ ಒಳಗೆಲ್ಲ ಸಣಬು
ಹೊರಗಣ ಬಣ್ಣ ಕರಲೇಸಾಯಿತ್ತಯ್ಯ
ಶ್ವಾನನ ನಿದ್ರೆ ಅಜ್ಞಾನಿಯ ತಪದಂತೆ
ಆಯಿತ್ತಯ್ಯ ಎನ್ನ ಮತಿ ಕೂಡಲಸಂಗಮದೇವ ॥

ಮತ್ತು

ಒಳ್ಳಿಹ ಮೈಲಾರನ ಸಿಂಗಾರದಂತೆ
... ...
.. ..
ಕೂಡಲ ಸಂಗನ ಶರಣರನರಿಯದ ಉಳಿದ ಭಂಗಿತರ ಎಂದು.

ಜಾತ್ರೆ ಮತ್ತು ಕಾರಣಿಕಗಳ ಕುರಿತು ಬಸವಲಿಂಗ ಶರಣರು

ಶರಣರು ಹೊಗಳಿಕೆಯ ರೂಪದಲ್ಲಿ ಇವುಗಳನ್ನು ತೆಗಳಿದ್ದಾರೆ. ಅಂದರೆ ಬಸವಲಿಂಗ ಶರಣರಿಗೆ ಮೈಲಾರಲಿಂಗನ ಬಗ್ಗೆ ಹೊಗಳಿ ಬರೆಯಿರೆಂದು ಪೀಡಿಸಿದ್ದಕ್ಕೆ ಅವರು ಭಕ್ತರಿಗೆ ತಿಳಿಯದ ಹಾಗೆ ತೆಗಳಿದ್ದಾರೆ. ಅವುಗಳನ್ನು ಇಲ್ಲಿ ಕಾಣಬಹುದು. ಅವರು ಜಾತ್ರೆಯ ಬಗೆಗೆ ಹೀಗೆ ಹೇಳುತ್ತಾರೆ ನೋಡಬಹುದು.

ನೋಡಿರಮ್ಮ ಮೈಲಾರಲಿಂಗನ ಜಾತ್ರೆಯಾಗುತಿದೆ
ನಾಡಜನರಿಗೆ ತಿಳಿಯದು ಇದರ ಗೋಪ್ಯ ಬೇರಿದೆ
ಗೊರವ ಮಂಡಲದತ್ತ ನೋಡಲುರೆ ಕಳಸವೆಸಗುತಿದೆ
ಇಂದು ಮಲಾಸುರ ದೈತ್ಯನ ಕೊಂದಾನಂದ ತೋರುತಿದೆ
ಭವಗರ್ಪುರದನುಕೂಲಕೆ ವಗ್ಗರನೇಕರಲ್ಲಿರೆ
ತವೆ ಏಳ್ ಕೋಟಿಗೆ ಮಿಗೆ ಮಂತ್ರವ
ನನ ಗೊರವರೊಪ್ಪುತಾರೆ.

ಇಲ್ಲಿ ನಾಡಜನರಿಗೆ ತಿಳಿಯದು ಇದರ ಗೋಪ್ಯಬೇರಿದೆ ಎಂದು ಅದರಲ್ಲಿ ಬರುವ ಅನಾಗರಿಕ ಸಂಪ್ರದಾಯದ ಬಗೆಗೆ ಸೂಚ್ಯವಾಗಿ ಬರೆದಿದ್ದಾರೆ.

ಮುಂದೆ ಕಾರಣಿಕದ ಬಗೆಗೆ ಹೇಳುತ್ತಾ ಹೀಗೆ ಬರೆದಿದ್ದಾರೆ :

ನಂಬುವದೆಮ್ಮ ಮೈಲಾರಲಿಂಗನ ಸೊಲ್ಲ ಕೇಳಿ ಕೇಳಿ
ಡಂಭಕದ ಮಾತಲ್ಲ ಕಾರಣಿಕನೇ ಬಲ್ಲ ಕೇಳಿ ಕೇಳಿ
ಕಾರಣಿಕವ ನಮ್ಮ ಗೊರವಯ್ಯ ದಯವಿಟ್ಟು ಕೇಳಿ ಕೇಳಿ
ಸಾರುತ ಬರುವ ನೋಡಿತರ ಮಾರ್ಗವ ಬಿಟ್ಟು ಕೇಳಿ ಕೇಳಿ
ನೀರ ಮಧ್ಯದಿ ಕಿಚ್ಚು ಸುಡುತಿದೆ ಕೇಳಿ ಕೇಳಿ
... ... ಇತ್ಯಾದಿ

ಇಲ್ಲಿ ಡಂಭಕದ ಮಾತಲ್ಲ ಎಂದಿದ್ದರೂ ಅದು ಸತ್ಯವೋ ಅಸತ್ಯವೋ? ಕಾರಣಿಕನಿಗೇ ಗೊತ್ತೆಂದು ಉಳಿದವರಿಗೆ ತಿಳಿದುಕೊಳ್ಳಲು ಬಿಟ್ಟುಬಿಡುತ್ತಾರೆ.

ಆದರೂ ಅನಕ್ಷರಸ್ಥ ಸಮಾಜದಲ್ಲಿ ಅದು ಅವಶ್ಯವೆನಿಸಿತ್ತು. ಅಂದರೆ ಅಪ್ರತ್ಯಕ್ಷ ವಾಗಿ ಈ ಕಾರಣಿಕ ನುಡಿಗಳು ಜನರ ನಡೆ–ನುಡಿ, ದೇವರ ಮೇಲೆ ಭಕ್ತಿಯ ಬಗೆಗೂ ಸಾರಿವೆ. ಬಸವಣ್ಣನವರು ಎಲ್ಲದರಲ್ಲೂ ಅನೈತಿಕ, ಡಾಂಭಿಕ, ಅಪ್ರಬುದ್ಧ ನಡೆಗಳನ್ನು ಹಳಿದಿದ್ದಾರೆ. ಇದರಂತೆ ಎಲ್ಲ ಧಾರ್ಮಿಕ ಸಂಪ್ರದಾಯದಲ್ಲೂ ಬರುವ ಮೂಢನಂಬಿಕೆ, ಡಾಂಭಿಕತೆ ಇತ್ಯಾದಿಗಳನ್ನು ಶರಣರು, ದಾಸರು, ಸಂತರು, ತೀರ್ಥಂಕರರು ಎಲ್ಲ ಧಾರ್ಮಿಕ ಸನ್ಯಾಸಿಗಳೂ ಹಳಿದಿದ್ದಾರೆ.

ಅಲ್ಲದೆ ಎಲ್ಲ ಧರ್ಮಗಳಲ್ಲೂ ಒಳಿತು ಕೆಡುಕು ಇರುವವಲ್ಲದೆ. ಭಕ್ತರೂ ಕೂಡ ಅವುಗಳಲ್ಲಿಯ ಒಳಿತನ್ನು ಪಾಲಿಸದೆ ದುರಪಯೋಗಕ್ಕೀಡು ಮಾಡಿದ್ದಾರೆ. ಶಿಶುನಾಳ ಶರೀಫ ಸಾಹೇಬರು ಮೈಲಾರಲಿಂಗನಿಗೆ ಭಕ್ತಿಯಿಂದ ಬಾಗಿ ಹೀಗೆ ಹಾಡಿದ್ದಾರೆ:

"ಮೈಲಾರ ಮಹದೇವ ಕೈಲಾಸ ಪತಿಯೆ
ನಯ–ಭಯದಲಿ ಮೈಯಿಕ್ಕುವ ಚರಣಕೆ
ಕೈಮುಗಿದಿರುವೆ ಸೈ ಸೈ ಸದ್ಗುರುವೆ"—ಎಂದು

ಗೊರವರ ಪ್ರಮುಖವೃತ್ತಿ ಭಿಕ್ಷೆ ಬೇಡುವದು. ಸಂದೇಶ ಪ್ರಚಾರ ಮಾಡುವದು. ಕಟ್ಟುನಿಟ್ಟಾದ ನಿಯಮಗಳನ್ವಯ ನಿರ್ದಿಷ್ಟವಾದ ಕಾಲದಲ್ಲಿ ಭಿಕ್ಷೆ ಬೇಡುವದು. ಇವರ ಜೊತೆಗೆ ವೃತ್ತಿ ಗೊರವರೂ ಇದ್ದಾರೆ. ಗೊರವರು ಹಗಲಲ್ಲಿ ಮಾತ್ರ ಭಿಕ್ಷೆಗೆ ಹೋಗುತ್ತಾರೆ. ಬಹು ಜನರು ಕಲೆಯ ಬಗೆಗೂ ಆಸಕ್ತಿ, ಅಭಿರುಚಿ ಉಳ್ಳವರಾಗಿದ್ದಾರೆ. ಸಂಪ್ರದಾಯ ಉಳಿಸಿಕೊಂಡು ಹೋಗುವ ನಿಷ್ಠೆಯೂ ಇದೆ. ಬಹುಪಾಲು ಗೊರವರು ಕಟ್ಟುನಿಟ್ಟಾಗಿ ನಡೆದುಕೊಳ್ಳುವದಿಲ್ಲವೆಂದು ಪ್ರತೀತಿಯೂ ಇದೆ.

ಧಾರವಾಡದಲ್ಲಿ ಕಾರಣಿಕ ಗೊರವ ಹಾಗೂ ಅವರ ಸಂಬಂಧಿಕರು ಹೇಳುತ್ತಾರೆ: "ಈಗ ಗೊರವರು ನೀತಿ ಮಾರ್ಗ ಬಿಡುತ್ತಿದ್ದಾರೆ. ನಾವು ಕರಿ ಅಂಗಿ ಹಾಕಿದ ಮೇಲೆ ಅದನ್ನು ತೆಗೆಯುವವರೆಗೂ ಮೂತ್ರವಿಸರ್ಜನೆ ಮಾಡುವ ಹಾಗಿಲ್ಲ. ಮೆಟ್ಟು ಹಾಕುವ ಹಾಗಿಲ್ಲ ಮತ್ತು ಹೋಟಲಿಗೆ ಹೋಗುವಹಾಗಿಲ್ಲ" ಎಂದು ಹೇಳುತ್ತಾರೆ. ಈ ಕಾರಣಿಕ ಗೊರವ ಕರಿ ಅಂಗಿ ಹಾಕದಿದ್ದಾಗ್ಯೂ ಮೆಟ್ಟು ಹಾಕುವದಿಲ್ಲ, ಹೋಟಲಿಗೆ ಹೋದರೂ ಚಹ ಕುಡಿವಾಗ ಚೀನಿ ಮಣ್ಣಿನ ಪಾತ್ರೆಗೆ ಬದಲು ಸ್ಟೀಲ್, ಇಲ್ಲವೇ ಹಿಂಡಾಲಿಯಮ್ ಬಟ್ಟಲುಗಳನ್ನು ಉಪಯೋಗಿಸುತ್ತಾನೆ.

ಅವನು ಹೇಳುತ್ತಾನೆ: "ಧರ್ಮದಿಂದ ಸಮಾಜಕ್ಕೆ ಒಳ್ಳೆಯದಾಗಿದೆ. ನಮ್ಮ ತಂದೆ ಯವರು ಗೊರವರಿದ್ದರು. ಅವರು ಕಟ್ಟುನಿಟ್ಟಾಗಿ ನಡೆದರು. ಅವರು ಹೇಳಿದಂತೆ ನಾನು ದೇಶಸೇವೆ, ಜನಸೇವೆ, ದೇವಸೇವೆ. ಮಾಡುತ್ತಾ ಸುಖವಾಗಿದ್ದೇನೆ" ಎಂದು. ದೇಶಸೇವೆ ಎಂದರೆ ಅವನು (ಹೋಮ್ ಗಾರ್ಡ್)ನಲ್ಲಿ ಸೇವೆಮಾಡುತ್ತಿದ್ದಾನೆ. ಜನಸೇವೆ ಎಂದರೆ

ಮನೋವಿಕಲರ ಆಸ್ಪತ್ರೆಯಲ್ಲಿ ಸಿಪಾಯಿಯಾಗಿದ್ದಾನೆ. ದೇವರಸೇವೆ ಅಂದರೆ ಮೈಲಾರನ ಸೇವೆಮಾಡುತ್ತಿದ್ದಾನೆ. ಇದರಿಂದ ಅವನು ಸುಖವಾಗಿದ್ದೇನೆ ಎನ್ನುವದಲ್ಲದೆ, ಧಾರ್ಮಿಕ ಶುದ್ಧಾಚರಣೆಯಿಂದ ನೆಮ್ಮದಿ ಇದೆ ಎನ್ನುತ್ತಾನೆ.

ಹೀಗೆ ಸಂಪ್ರದಾಯದಲ್ಲಿರುವ ಎಲ್ಲವೂ ಕೆಡಕಲ್ಲ; ನಿರುಪಯುಕ್ತವಲ್ಲ. ಮೂಢ ನಂಬಿಕೆ ಬಿಟ್ಟು ನಡೆದರೆ ಸಮಾಜದಲ್ಲಿ ಉದ್ಭವಿಸುವ ಕೆಲವು ಸಾಮಾಜಿಕ ಸಮಸ್ಯೆಗಳಾದ ಅಪರಾಧ, ಹಿಂಸೆ, ಕೊಲೆ, ಸುಲಿಗೆ ಹಿಮ್ಮೆಟ್ಟುವವು. ಒಳ್ಳೆಯದನ್ನು ಉಳಿಸಿಕೊಂಡು ನಡೆದರೆ ಸಮಾಜದಲ್ಲಿ ಸುಖ ಶಾಂತಿ ಲಭಿಸೀತು.

ಆಧಾರ ಗ್ರಂಥಗಳು

1 E. Thurston : Caste & Tribes of Southern India, Vol. IV

2 H. V. Nanjundayya & L. K. Krishna Iyer : The Mysore Tribes & Castes 1931 Vol. IV

3 ಗೊ. ರು. ಚೆನ್ನಬಸಪ್ಪ : ಕರ್ನಾಟಕ ಜನಪದ ಕಲೆಗಳು ಸಾಹಿತ್ಯಪರಿಷತ್ತು, ಬೆಂಗಳೂರು ೧೯೭೭

4 ಡಾ. ಎಂ. ಚಿದಾನಂದಮೂರ್ತಿ : ಬಸವಣ್ಣನವರು

5 ಡಾ. ಎಸ್. ಆರ್. ಗುಂಜಾಳ : ಬಸವಣ್ಣನವರ ಪದ ಪ್ರಯೋಗಕೋಶ ೧೯೭೮

6 ಕೆಲವು ಗೊರವರೊಂದಿಗೆ ನಡೆಸಿದ ಸಂದರ್ಶನದ ಮೇಲೆಯೂ ಈ ಲೇಖನ ಆಧಾರಿತ.

ಪುಸ್ತಕ ವಿಮರ್ಶೆ :

ದಕ್ಷಿಣ ಭಾರತದಲ್ಲಿ ಆರ್ಥಿಕ ಅಭಿವೃದ್ಧಿ ಹಾಗೂ ಸಾಮಾಜಿಕ ಪರಿವರ್ತನೆ

● ಮಹೇಶ ತಿಪ್ಪಶೆಟ್ಟಿ

ಮೂಲ : Economic Development and
Social Change in South India
by
Dr. T. S. Epstein
Manchester University Press, 1962
ದಕ್ಷಿಣ ಭಾರತದಲ್ಲಿ ಆರ್ಥಿಕ ಅಭಿವೃದ್ಧಿ ಹಾಗೂ ಸಾಮಾಜಿಕ ಪರಿವರ್ತನೆ
ಅನು : ವೆಂಕಟರಾವ್ ಹಾಗೂ ಇತರರು
ಕೃಷಿ ವಿಶ್ವವಿದ್ಯಾಲಯ, ೧೯೭೭
ಬೆಂಗಳೂರು

ಸಮಾಜಶಾಸ್ತ್ರ ಹಾಗೂ ಅರ್ಥಶಾಸ್ತ್ರಗಳ ಸಂಗಮ ಕ್ಷೇತ್ರವಾದ ಆರ್ಥಿಕಸಮಾಜ ಶಾಸ್ತ್ರದಲ್ಲಿ ಡಾ। (ಶ್ರೀಮತಿ) ಎಪ್‌ಸ್ಟೀನರ Economic Development and Social Change in South India ಎಂಬ ಕೃತಿ ಒಂದು ಮೈಲಿಗಲ್ಲು. ಈ ಕ್ಷೇತ್ರದ ಅಭ್ಯಾಸಿಗಳಿಗೆ ಈಗಾಗಲೇ ಚಿರಪರಿಚಿತವಾಗಿರುವ ಈ ಗ್ರಂಥವನ್ನು "ವಕ್ಷಿಣ ಭಾರತದಲ್ಲಿ ಆರ್ಥಿಕ ಅಭಿವೃದ್ಧಿ ಹಾಗೂ ಸಾಮಾಜಿಕ ಪರಿವರ್ತನೆ" ಎಂಬ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿ ಜನಸಾಮಾನ್ಯರೂ ಓದುವ ಅವಕಾಶ ಕಲ್ಪಿಸಿದ ಕೃಷಿ ವಿಶ್ವವಿದ್ಯಾನಿಲಯದ ಪ್ರಯತ್ನ ಸ್ವಾಗತಾರ್ಹವಾದದ್ದು.

ಒಂದೇ ತೆರನಾದ ಸಾಂಸ್ಕೃತಿಕ ಹಿನ್ನೆಲೆ ಹೊಂದಿದ ಎರಡು ಗ್ರಾಮಗಳು ನೀರಾವರಿ ಬಂದಮೇಲೆ ಯಾವ ರೀತಿಯ ಬದಲಾವಣೆ ಹೊಂದಿದವು ಎನ್ನುವದೇ ಈ ಗ್ರಂಥದ

ವಸ್ತುವಿಷಯ. ತಗ್ಗು ಪ್ರದೇಶದಲ್ಲಿದ್ದ ವಂಗಲಾ ಗ್ರಾಮವು ನೀರಾವರಿ ಕಾಲುವೆಗಳ ಸೌಲಭ್ಯ ಪಡೆಯಿತು. ಸ್ವಲ್ಪ ಎತ್ತರ ಪ್ರದೇಶದಲ್ಲಿದ್ದ ದಲೀನಾ ಗ್ರಾಮವು ಈ ಸೌಲಭ್ಯಕ್ಕೆ ವಂಚಿತವಾಯ್ತು. ಈ ವಿಭಿನ್ನ ಆರ್ಥಿಕ ಹಿನ್ನೆಲೆ ಹೊಂದಿದ ಎರಡೂ ಗ್ರಾಮಗಳು ಯಾವ ರೀತಿಯ ಬದಲಾವಣೆಗೆ ಒಳಪಟ್ಟವು ಎನ್ನುವುದನ್ನು ಲೇಖಕರು ಸಮಗ್ರವಾಗಿ ಚಿತ್ರಿಸಿದ್ದಾರೆ.

ಎಪ್‌ಸ್ಟೀನರ ಸಿದ್ಧಾಂತದ ಪ್ರಕಾರ ನೀರಾವರಿ ಸೌಲಭ್ಯ ಪಡೆದ ವಂಗಲಾ ಗ್ರಾಮವು 'ಏಕಮುಖಿ'ವಾದ ಬದಲಾವಣೆ ಹೊಂದಿದರೆ, ಒಣ ಬೇಸಾಯ ಅವಲಂಬಿಸಿದ ದಲೀನಾ ಗ್ರಾಮವು ಆ ಪ್ರವೇಶಕ್ಕೆ ದೊರೆತ ಸೌಲಭ್ಯಗಳ ಲಾಭ ಪಡೆದುಕೊಂಡು "ವೈವಿಧ್ಯಮಯ"ವಾದ ಬದಲಾವಣೆ ಹೊಂದಿತು. ಎಪ್‌ಸ್ಟೀನರ ಇದೇ ತತ್ವವನ್ನು ಇಡೀ ರಾಜ್ಯ ಅಥವಾ ರಾಷ್ಟ್ರಕ್ಕೆ ಅನ್ವಯಿಸುವುದು ಸಾಧ್ಯವೇ ಎಂದು ವಿಚಾರಿಸಿದಾಗ ಬಹುಶಃ ಉತ್ತರ ನಕಾರಾತ್ಮಕವಾಗಿರುತ್ತದೆ, ಏಕೆಂದರೆ ಭಾರತದ ಗ್ರಾಮಜೀವನವು ಹಲವು ವೈವಿಧ್ಯತೆಗಳಿಂದ ಕೂಡಿದೆ.

ನೀರಾವರಿ ಪಡೆದ ವಂಗಲಾ ಗ್ರಾಮದಲ್ಲಿ ರೈತರು ತಮ್ಮ ವ್ಯವಸಾಯ ಪದ್ಧತಿಯನ್ನು ಬದಲಾಯಿಸಿಕೊಂಡು ಹೆಚ್ಚು ಹೆಚ್ಚು ಶ್ರೀಮಂತರಾದರು. ಆದರೆ ಅವರ ಸಾಂಪ್ರದಾಯಕ ರಾಜಕೀಯ ಹಾಗೂ ಸಾಮಾಜಿಕ ಜೀವನವು ಯಾವುದೇ ಕ್ರಾಂತಿಕಾರಕ ಬದಲಾವಣೆ ಹೊಂದಲಿಲ್ಲ. ಪ್ರಜಾಸತ್ತಾತ್ಮಕವಾದ ಪಂಚಾಯತ ಹಾಗೂ ಹೊಸ ಕಾನೂನುಗಳು ಅಸ್ತಿತ್ವದಲ್ಲಿ ಬಂದರೂ ಸ್ಥಾನಿಕ, ಸಾಂಪ್ರದಾಯಕ ಪಂಚಾಯತಿಯೇ ಹೆಚ್ಚು ಪ್ರಬಲವಾಗಿತ್ತು. ಉದಾ : ಚೌಡಮ್ಮ–ಚೌಡೇಗೌಡನ ಅಕ್ರಮ ಸಂಬಂಧ (ಪುಟ : ೧೨೯), ಸೀರಿಗಾಗಿ ಕಿವಿ ಹರಿದ ವ್ಯಾಜ್ಯ (ಪುಟ : ೧೩೩–೩೪), ಭೂ ವಿವಾದದಲ್ಲಿ ತಮ್ಮ ಕೋರ್ಟಿನಲ್ಲಿ ಜಯಗಳಿಸಿದ್ದರೂ ಕೊನೆಗೆ ಸಂಪ್ರದಾಯಕ ಪಂಚಾಯತಿಯ ಸಹಾಯ ಪಡೆಯಬೇಕಾಯಿತು (ಪುಟ : ೧೩೭–೩೮), ಬೇಪಾನ ಜಮೀನನ್ನು ಹರಾಜಿಗೆ ಹಾಕಿದಾಗ ವಂಗಲಾದ ಜನರು ಸರಕಾರದ ಈ ಯತ್ನವನ್ನು ವೈಫಲ್ಯಗೊಳಿಸಿದರು (ಪುಟ : ೧೬೨). ಹೀಗೆ ಹೊರಗಿನ ಶಕ್ತಿಗಳು ಗ್ರಾಮಜೀವನದಲ್ಲಿ ತಲೆ ಹಾಕದಂತೆ ವಂಗಲಾದ ಸಾಮಾಜಿಕ ಸಂಘಟನೆಯು ತನ್ನದೇ ಆದ ಭದ್ರವಾದ ಕೋಟೆ ನಿರ್ಮಿಸಿಕೊಂಡಿತ್ತು.

ರೈತ ಕೂಲಿಕಾರರ ಸಂಬಂಧಗಳು ಎಂದಿನಂತೆ ಮುಂದುವರೆದವು. ಭೂರಹಿತ ಕಾರ್ಮಿಕರಿಗೆ ಅವರ ಯಜಮಾನರ ಹೊರತು ಬೇರೆ ಅವಲಂಬನೆಯ ಮಾರ್ಗವೇ ಉಳಿಯಲಿಲ್ಲ. ಏಕೆಂದರೆ ನೀರಾವರಿಯಿಂದ ಸೌಲಭ್ಯ ಪಡೆದವರು ಕೇವಲ ಒಂದು ಗುಂಪಿನ ಜನವಾಗಿತ್ತು. ರಾಜಕೀಯ ಬಲವು ಅವರಲ್ಲಿಯೇ ಕೇಂದ್ರೀಕೃತವಾಗಿತ್ತು. ಇದರಿಂದ ಆರ್ಥಿಕ ಅಸಮಾನತೆಗಳು ಹೆಚ್ಚಿದವು. ಭೂಹೀನರ ಮೇಲೆಯೇ ಇದರ

ದುಷ್ಪರಿಣಾಮ ಹೆಚ್ಚಾಯಿತು. ಪ್ರಸಕ್ತ ಕಾನೂನುಗಳು ಹರಿಜನರಿಗೆ ಹೆಚ್ಚು ಸೌಲಭ್ಯ ಒದಗಿಸಿದವು. ಅವುಗಳಿಗೆ ಯಾವದೇ ಅರ್ಥವಿಲ್ಲದಂತಾಗಿತ್ತು. ಉದಾ : ಹರಿಜನ ನಾಟಕಕ್ಕಾಗಿ ನಡೆದ ನಾಟಕ (ಪುಟ ೨೯–೧೩), ಹರಿಜನ ಸಿದ್ದಮ್ಮ ತರ್ತು ಸಾಲಕ್ಕೆ ಕಡಿಮೆ ಬೆಲೆಗೆ ಜಮೀನು ಅಡವು ಹಾಕುವುದು (ಪುಟ: ೧೦೦), ಚುನಾವಣೆ ನೋಟಿಸನ್ನು ಹರಿಜನರು ಪ್ರವೇಶಿಸಲಾರದ ದೇವಸ್ಥಾನದಲ್ಲಿ ಹಚ್ಚಿದ್ದು (ಪುಟ : ೧೬೮). ಜಾತ್ಯಾತೀತ ಸಮಾಜವನ್ನು ಕಟ್ಟುವ ನಮ್ಮ ಆದರ್ಶವಾದದ ದುರಂತವೆಂದರೆ ಕೆಳಗಿನ ಜಾತಿಯ ಹರಿಜನ ಮುಂತಾದವರು ಇಡೀ ಜಾತಿ ಪದ್ಧತಿಯನ್ನು ಪ್ರಶ್ನಿಸದೇ ಜಾತಿ ಪದ್ಧತಿಯಲ್ಲಿ ಕೇವಲ ತಮ್ಮ ಕೆಳಗಿನ ಸ್ಥಾನವನ್ನು ಮಾತ್ರ ಪ್ರಶ್ನಿಸುತ್ತಾರೆ (ಪುಟ : ೧೮೨).

ಹಣಾಧಾರಿತ ಆರ್ಥಿಕ ವ್ಯವಸ್ಥೆ ಬಂದ ಮೇಲೆ ಎಲ್ಲ ವಸ್ತುಗಳನ್ನು ಹಣದ ರೂಪದಲ್ಲಿಯೇ ಅಳೆಯುವುದು ವಾಡಿಕೆಯಾಯಿತು. ಇದರಿಂದ ಗ್ರಾಮೀಣ ಕುಲ ಕಸಬುಗಳು ಆರ್ಥಿಕವಾಗಿ ಇಳಿಮುಖವಾದವು (ಪುಟ ೯೦–೯೩). ಅವಶ್ಯಕತೆಗಿಂತ ಸಾಮಾಜಿಕ ಪ್ರತಿಷ್ಠೆಯೇ ಜೀವನ ಮಾರ್ಗವಾಯಿತು. ಉದಾ : ಪುಟ್ಟೇಗೌಡ ಕೇವಲ ಪ್ರತಿಷ್ಠೆಗಾಗಿ ಹೊಸ ಮನೆ ಕಟ್ಟಿಸಿದ. ಆದರೆ ಅವನ ಕುಟುಂಬ ವಾಸಿಸುವುದು ಹಳೆ ಮನೆಯಲ್ಲಿಯೇ (ಪುಟ : ೧೦೬). ರಾಗಿಗೆ ಬದಲಾಗಿ ಪ್ರತಿಷ್ಠೆಯ ಆಹಾರವಾದ ಅಕ್ಕಿಯನ್ನೇ ಉಪಯೋಗಿಸುತ್ತೇವೆ ಎಂದು ಮಂಗಲಾದವರು ವಾದಿಸತೊಡಗಿದರು (ಪುಟ ೪೪).

ದಲೀನಾ ಒಣ ಬೇಸಾಯವನ್ನು ಅವಲಂಬಿಸಬೇಕಾಯಿತಾದರೂ ಈ ಪ್ರದೇಶಕ್ಕೆ ದೊರತ ಆರ್ಥಿಕ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ತನ್ನ ಸಾಮಾಜಿಕ. ಆರ್ಥಿಕ ಹಾಗೂ ರಾಜಕೀಯ ಜೀವನದಲ್ಲಿ ಮಹತ್ವಪೂರ್ಣ ಬದಲಾವಣೆ ಹೊಂದಿತು ಲೋಕೋಪಯೋಗಿ ಇಲಾಖೆಯಲ್ಲಿ ಕೆಲವರು ನೌಕರಿ ಹುಡುಕಿಕೊಂಡರು. ಕಂಟ್ರಾಕ್ಟ್ ಮಾಡಲು ಪ್ರಾರಂಭಿಸಿದರು. (ಮಂಗಲಾದವರಂತೆ ನಂತರ ಕೈ ಬಿಡಲಿಲ್ಲ). ಒಬ್ಬನು ಹಿಟ್ಟಿನ ಗಿರಣಿಯನ್ನು ಸ್ಥಾಪಿಸಿದನು ಮತ್ತೊಬ್ಬ ಕಿರಾಣಿ ಅಂಗಡಿ ತೆರೆದ. [ಮಂಗಲಾದವರಿಗೆ ವ್ಯಾಪಾರ ಎಂದರೆ ಅಂತಸ್ತಿಗೆ ಕುಂದು] (ಪು ೩೪). ಸಮೀಪದ ಸಕ್ಕರೆ ಕಾರ್ಖಾನೆಯಲ್ಲಿ ನಿತ್ಯವೂ ಕೆಲಸಕ್ಕೆ ಹೋಗತೊಡಗಿದರು. ಈ ವೈವಿಧ್ಯಮಯ ಆರ್ಥಿಕ ಅಭಿರುಚಿಗಳು ದಲೀನಾದಲ್ಲಿ ಕ್ರಾಂತಿಕಾರಕ ಬದಲಾವಣೆ ತಂದವು.

ರಾಜಕೀಯವಾಗಿ ದಲೀನಾದವರು ಹೆಚ್ಚು ಪ್ರಜ್ಞಾವಂತರಾಗಿದ್ದರು. ಉದಾ : ಕರ್ನಾಟಕ ಏಕೀಕರಣ ವಿರೋಧಿಸಿ ನಡೆದ ಚಳುವಳಿಗಳಿಗೆ ಮಂಗಲಾದವರು ಅಷ್ಟು ಮಹತ್ವ ಕೊಡಲಿಲ್ಲ. ಆದರೆ ದಲೀನಾದವರು ಕಾತುರರಾಗಿ ವಿದ್ಯಮಾನಗಳನ್ನು ನೋಡುತ್ತಿದ್ದರು. ದಿನ ಪತ್ರಿಕೆಗಳನ್ನು ನಿತ್ಯವೂ ಓದುತ್ತಿದ್ದರು. ಕೆಲವರು ಕಾರ್ಮಿಕ ಸಂಘಗಳ ಸದಸ್ಯರಾಗಿದ್ದರು. ಆನುವಂಶಿಕ ಸಂಬಂಧಗಳು ಗ್ರಾಮದ ರಾಜಕೀಯದಲ್ಲಿ

ದ್ದವು. ಆರ್ಥಿಕವಾಗಿ ಪ್ರತಿಷ್ಠಿತರಾದವರು ಹಾಗೂ ಹೆಚ್ಚು ಧಾರಾಳಿಗಳು ರಾಜಕೀಯ ಸ್ಥಾನಮಾನಗಳಿಸಿದರು. [ಮಂಗಲಾದಲ್ಲಿ ಹೊಸದಾಗಿ ಶ್ರೀಮಂತನಾದ ತಮ್ಮನು ಎಷ್ಟು ತಿಣಕಾಡಿದರೂ ಜೀತದ ಕಲಂಕದಿಂದ ಮುಕ್ತಿ ಪಡೆಯುವುದಾಗಲಿಲ್ಲ. (ಪುಟ೮೩). ದಲೀನಾ ದಲ್ಲಿ ಸ್ತ್ರೀಯರು ತಮ್ಮ ಗಂಡಸರಿಗೆ ಸರಿಸಮಾನವಾಗಿಯೇ ದುಡಿಯುತ್ತಿದ್ದರು. ಆದರೆ ಮಂಗಲಾದಲ್ಲಿ ಹೆಣ್ಣು ಸಾಮಾಜಿಕ ಪ್ರತಿಷ್ಠೆಯ ವಸ್ತುವಾದಳು. ಮನೆಯ ಹೆಣ್ಣು ಮಕ್ಕಳು ಹೊಲದಲ್ಲಿ ದುಡಿಯುತ್ತಾರೆ ಎಂದರೆ ಅಪಮಾನಕರವೆಂದು ಮಂಗಲಾ ನಂಬಿತು. (ಪುಟ ೩೭,೭೯). ಒಡೆಯ ಕಾರ್ಮಿಕರ ಸಂಬಂಧಗಳು ದಲೀನಾದಲ್ಲಿ ಶಿಥಿಲಗೊಂಡವು. 'ಹಳೇ ಮಕ್ಕಳು' ಎಂದು ಹರಿಜನರ ಸುಖ-ದುಃಖ ನೋಡುವ ಜವಾಬ್ದಾರಿ ದಲೀನಾದ ರೈತನಿಗೆ ಬೇಕಿಲ್ಲಿಲ್ಲ. ಅಲ್ಲದೆ ಅಲ್ಲಿಯ ಹರಿಜನರಿಗೆ ಉಪಜೀವನಕ್ಕಾಗಿ ಕೇವಲ ತಮ್ಮ ಒಡೆಯನನ್ನೇ ಅವಲಂಬಿಸುವ ಪ್ರಮೇಯವೂ ಬರಲಿಲ್ಲ.

ಮಂಗಲಾ ಗ್ರಾಮವು ತನ್ನ ಸಂಪ್ರದಾಯಕ ವ್ಯವಸ್ಥೆಗೆ ಒತ್ತು ಕೊಟ್ಟು 'ಏಕರೂಪ' ಬದಲಾವಣೆ ಹೊಂದಿದರೆ, ದಲೀನಾ ಗ್ರಾಮವು ಕ್ರಾಂತಿಕಾರಕ ಹಾಗೂ 'ವೈವಿಧ್ಯಮಯ' ಬದಲಾವಣೆ ಕಂಡಿತು. ಮಂಗಲಾದ ಜೀವನ ಸಹಕಾರದಿಂದ ಕೂಡಿದರೆ ದಲೀನಾದ ಜೀವನ ಸ್ಪರ್ಧೆಯಿಂದ ಕೂಡಿತ್ತು [ಪುಟ ೧೩೩]. ದಲೀನಾದಲ್ಲಿ ಆರ್ಥಿಕ ಸ್ಪರ್ಧೆ ಎಷ್ಟು ಚುರುಕಾಗಿತ್ತೆಂದರೆ ಕೆಲವೊಮ್ಮೆ ಬಾಂಧವ್ಯಗಳು ಮುರಿದು ಬಿದ್ದವು. [ಪು.೭೯೦-೯೧]. ಮಂಗಲಾದ ಜನರ ಘನತೆಯು ಸಾಮಾಜಿಕ ಸಮಾರಂಭಗಳಲ್ಲಿ ಮಾತ್ರ ವ್ಯಕ್ತವಾದರೆ ದಲೀನಾದವರ ಘನತೆ ನಿತ್ಯ ಜೀವನದಲ್ಲಿಯೂ ಎದ್ದು ಕಾಣುತ್ತಿತ್ತು.

'ಬದಲಾಗಲಾರದ ಭಾರತ' ಎಂದು ಹಗುರಾಗಿ ಮಾತನಾಡುತ್ತಿದ್ದವರಿಗೆ ಈ ಗ್ರಂಥ ಸಮರ್ಪಕ ಉತ್ತರ ನೀಡುತ್ತದೆ. ಸಾಮಾನ್ಯವಾಗಿ ಕುಸುಮ್[1]ನಯ್ಯರ, ಗನ್ನರ್[2] ಮಿರ್ಡಾಲ್‌ರ ಕೃತಿಗಳನ್ನು ಓದಿದವರಿಗೆ ಭಾರತೀಯರು ಸೋಮಾರಿಗಳು. ಯಾವದೇ ಪ್ರಗತಿ ಅವರಿಂದ ಸಾಧ್ಯವಿಲ್ಲ ಎಂಬ ತಿಳುವಳಿಕೆ ಬರುತ್ತದೆ. ಆದರೆ ಮಂಗಲಾದ ಬೋರನು ರಾತ್ರಿ ಕಾರ್ಖಾನೆಯಲ್ಲಿ ದುಡಿದು ಹಗಲು ತನ್ನ ಗದ್ದೆಗಳ ಉಸ್ತುವಾರಿ ನೋಡಿಕೊಳ್ಳುವುದನ್ನು ನೆನೆದರೆ, [ಪು ೭೯] ದಲೀನಾದವ ಸಾಹಸ ಪ್ರವೃತ್ತಿ ನೋಡಿದರೆ, ಅವರು ದುಡಿಮೆಗೆ ಕೊಟ್ಟ ಮಹತ್ವ ತಿಳಿಯುತ್ತದೆ.

ಲೇಖಕರು 'ಅಸ್ಪೃಶ್ಯ ಕೂಲಿಯವರು ದಾಕ್ಷಿಣ್ಯಕ್ಕಾಗಿ ತಮ್ಮ ಧಣಿಗಳ ಕೆಲಸ ಮಾಡಬೇಕಾಗುತ್ತದೆ.' ಇದಕ್ಕಾಗಿ ಹೆಚ್ಚಿನ ಸೌಲಭ್ಯಗಳು ಅವರಿಗೆ ಇರುತ್ತವೆ [ಪು.೮೪].

---

1 Kusum Nair—Blossoms in the Dust: Allied Publishers 1961.

2 Gunner Myrdal—Asian Drama : An Inquiry into the Poverty of the Nations (3 vol) Newyork, Pantheon 1968.

ಎಂದು ಅಭಿಪ್ರಾಯ ಪಟ್ಟಿದ್ದಾರೆ. ನಿಸ್ಸಂಶಯವಾಗಿ ಅಸ್ಪೃಶ್ಯ ಕೂಲಿಯವರ ಮೇಲೆ ಕೆಲಸದ ಭಾರ ಹೆಚ್ಚು ಇರುತ್ತದೆ. ಆದರೆ ದಾಕ್ಷಿಣ್ಯಕ್ಕಾಗಿ ಒಡೆಯನ ಕೆಲಸಮಾಡುವುದು ಸ್ಪೃಶ್ಯ ಕೂಲಿಯವರ ಮೇಲೆಯೇ ಹೆಚ್ಚು ಇರುತ್ತದೆ. "ಹೊಲೆಯನಿಗೆ ಒಂದು ಮನೆಯಾಳು ಬೇಕು" ಎಂದು ಅವರಿಗೆ ಹೆಚ್ಚು ಕೆಲಸ ಹೇಳುವುದಿಲ್ಲ. ನೀರಾವರಿ ಯಿಂದಲೇ ಈ ಎರಡು ಗ್ರಾಮದಲ್ಲಿ ಈ ರೀತಿಯ ಬದಲಾವಣೆ ಬಂದಿತೆಂದು ನಿಖರವಾಗಿ ಹೇಳುವುದು ಕಷ್ಟ. ಏಕೆಂದರೆ ವಂಗಲಾ ಒಳನಾಡಿನ ಗ್ರಾಮವಾದರೆ, ದಲೀನಾ ರಾಷ್ಟ್ರೀಯ ಹೆದ್ದಾರಿಗೆ ಸಮೀಪವಾಗಿದೆ.

ಒಟ್ಟಿಗೆ ನೀರಾವರಿ ಬಂದ ಮೇಲೆ ವ್ಯವಸಾಯದ ಆದಾಯ ಹೆಚ್ಚಿತು. ಆರ್ಥಿಕ ಅಭಿವೃದ್ಧಿ ಬಂದಿತು. ಸಾಮಾಜಿಕ ಬದಲಾವಣೆ ಆಯಿತು. ಆದರೆ ಕಲ್ಯಾಣ ರಾಷ್ಟ್ರದ ಕನಸು ನನಸಾಯಿತೇ ? ಜಾತ್ಯಾತೀತ ಸಮಾಜ ರಚನೆಯಾಯಿತೇ ? ಸಮಾಜವಾದಿ ಸಮಾಜ ಬಂದಿತೆ ? ಪರಿಸರದ ಪ್ರಜ್ಞೆ ಇದ್ದವರು ಉತ್ತರಗಳಿಗಾಗಿ ತಡಕಾಡಬೇಕಾ ಗುತ್ತದೆ. ಸಮಾಜವಿಜ್ಞಾನಿಗಳು, ರಾಜಕಾರಣಿಗಳು ಈ ನಿಟ್ಟಿನಲ್ಲಿ ವಿಚಾರಿಸಲಿ.

II

ಅನುವಾದಿತ ಗ್ರಂಥವೆಂದಮೇಲೆ ಅದರಲ್ಲಿ ದೋಷಗಳು ಸಾಮಾನ್ಯ. ಅನುವಾದಿತ ಕೃತಿಯಲ್ಲಿ ನಾಲ್ಕು ಬಗೆಯ ದೋಷಗಳನ್ನು ಗುರುತಿಸಬಹುದು.

೧) ತಪ್ಪು–ತಪ್ಪಾಗಿ ವಿಷಯದ ಗ್ರಹಿಕೆ
೨) ಪಾರಿಭಾಷಿಕ ಪದಗಳ ಕೊರತೆ
೩) ಸಮರ್ಪಕ ಶಬ್ದಗಳ ಕೊರತೆ
೪) ಮುದ್ರಾರಾಕ್ಷಸನ ಉಡಿಗೆ ಹಾಕಬಹುದಾದ ದೋಷಗಳು

೧) ಹಳ್ಳಿಯ ದಕ್ಷಿಣಕ್ಕೆ ಸುಮಾರು ೨೦೦ ಗಜ ದೂರವಿರುವ ಹಾಗೂ ಪೂರ್ವ ಭಾಗಕ್ಕೆ ೨೦೦ ಗಜ ದೂರವಿರುವ ಎರಡು ಭಾವಿಗಳಿಂದ ಅಸ್ಪೃಶ್ಯರು ನೀರು ತೆಗೆದು ಕೊಳ್ಳಬಹುದು. ಹೀಗಾಗಿ ಸ್ಪೃಶ್ಯರಿಗೆ ಆ ಊರಿನಲ್ಲಿ ನೀರಿನ ಬಾವಿಗಳೇ ಇಲ್ಲ. (ಪುಟ : ೨೬). ಮೂಲ ಕೃತಿಯಲ್ಲಿ ದಕ್ಷಿಣ ಬಾವಿ ಸ್ಪೃಶ್ಯರಿಗೆ ಹಾಗೂ ಪಶ್ಚಿಮದ ಬಾವಿ ಅಸ್ಪೃಶ್ಯರಿಗಾಗಿ ಇವೆ. ಇಲ್ಲಿ ಅನುವಾದಕರು ಪೂರ್ವ–ಪಶ್ಚಿಮದ, ಸ್ಪೃಶ್ಯ–ಅಸ್ಪೃಶ್ಯರ ಅಂತರ ಗಮನಿಸಿಲ್ಲ.

"ಸ್ಪೃಶ್ಯ ಹಾಗೂ ಅಸ್ಪೃಶ್ಯ ಜಾತಿಯ ಜನರು ಎಂದೂ ಒಟ್ಟಾಗಿ ಕೆಲಸ ಮಾಡು ವುದಿಲ್ಲ". (ಪು. ೮೪) ಒಟ್ಟಾಗಿಯೇ ಕೆಲಸ ಮಾಡುತ್ತಾರೆ. ಆದರೆ ಒಂದೇ ಗುಂಪಿನ ಸಂಘಟನೆಯಲ್ಲಿ ಇಬ್ಬರೂ ಒಂದಾಗಿ ಇರುವದಿಲ್ಲ. ಅಂದರೆ ಸ್ಪೃಶ್ಯ ಹಾಗೂ ಅಸ್ಪೃಶ್ಯರ

ಗುಂಪುಗಳು ಮಾತ್ರ ಬೇರೆ ಬೇರೆಯಾಗಿರುತ್ತವೆ. ಕೃಷಿ ಕಾರ್ಯಗಳಲ್ಲಿ ಸಾಮಾಜಿಕ ಹಾಗೂ ಭೌತಿಕ ಅಂತರ ಕಾಯ್ದುಕೊಳ್ಳಲು ಕಷ್ಟಸಾಧ್ಯ.

ಮೂಲ ಕೃತಿಯ ಪು. ೩೭ ರಲ್ಲಿ ಪ್ಯಾರಾ ಇರದಿದ್ದರೂ ಅನುವಾದಕರು ಪ್ಯಾರಾ ಸೃಷ್ಟಿಸಿದ್ದಾರೆ (ಪು. ೪೦).

"Sugarcane is a risky crop to grow" (ಮೂ. ಪು.೫೬) ಎಂಬ ವಾಕ್ಯವನ್ನು "ಕಬ್ಬಿನ ಬೆಳೆ ಬಹಳ ಕಷ್ಟವಾದರೆ ಕೆಲಸ" ಎಂದು ಅನುವಾದಿತವಾಗಿದೆ (ಪು. ೬೦).

೨) ಪ್ರತಿಯೊಂದು ಶಾಸ್ತ್ರಕ್ಕೂ ಆಯ್ದ ಪಾರಿಭಾಷಿಕ ಪದಗಳಿವೆ. ಈ ಪದಗಳ ಉಪಯೋಗವಾಗದಿದ್ದರೆ ಭಾಷೆಯು ಅತ್ಯಂತ ಸಡಿಲಾಗಿ ಕಾಣುತ್ತದೆ. ಈ ದಿಸೆಯಲ್ಲಿ ಮುದ್ದೇಬಿಹಾಳದ ಶ್ರೀ ಮುಳಗುಂದವರು, ಮೈಸೂರಿನ ನಂಜಮ್ಮಣ್ಣಿಯವರು ಹಾಗೂ ಬೆಂಗಳೂರಿನ ಮರುಳಸಿದ್ದಯ್ಯನವರು ಸಾಕಷ್ಟು ಕೆಲಸ ಮಾಡಿದ್ದಾರೆ. ಇಂತಹ ಕೃತಿಗಳಿಗೆ ಅವರ ಸಲಹೆ ಅಗತ್ಯವಿತ್ತು ಎನಿಸುತ್ತದೆ. ಉದಾ : Sanskritisation ಎಂಬ ಪದಕ್ಕೆ "ಸುಸಂಸ್ಕೃತರಾಗುವುದು" (ಪು. ೧೮೦) ಎಂದು ಹೇಳಿದ್ದಾರೆ. ಆದರೆ ಕನ್ನಡದಲ್ಲಿ ಇದಕ್ಕೆ "ಸಂಸ್ಕೃತಾನುಕರಣ" ಎಂಬ ಪದ ಈಗಾಗಲೇ ಪ್ರಚಲಿತವಾಗಿದೆ. "Improved Systems of Communications" (ಮೂ. ಪು. ೩೫) ಎನ್ನಲು "ಮುಂದುವರಿದ ಸುದ್ದಿ ಪ್ರಸಾರದ ವ್ಯವಸ್ಥೆ" ಎಂದು ಹೇಳಲಾಗಿದೆ. (ಪು. ೩೮). ಸುದ್ದಿಗೆ ಬದಲಾಗಿ "ಸಂಪರ್ಕ" ಎಂಬ ಪದ ಬಳಸಿದ್ದರೆ ಸೂಕ್ತವಾಗುತ್ತಿತ್ತು. "Politically" (ಮೂ. ಪು. ೧೪೧) ಎಂಬ ಶಬ್ದಕ್ಕೆ "ರಾಜ ನೈತಿಕ" (ಪು. ೧೫೯) ಎಂದು ಹೇಳುವ ಬದಲಾಗಿ "ರಾಜಕೀಯವಾಗಿ" ಎಂದು ಹೇಳಿದ್ದರೆ ಸರಿಹೋಗಬಹುದಿತ್ತು. ಎರಡನೆ ಅಧ್ಯಾಯದ ತಲೆ ಬರಹವು (ಪು. ೨೧) "ಆರ್ಥಿಕ ಆಡಳಿತ ಹಾಗೂ ಪರಿವರ್ತನೆ" ಎಂಬುದರ ಬದಲಾಗಿ "ಆರ್ಥಿಕ ವ್ಯವಸ್ಥೆ ಹಾಗೂ ಪರಿವರ್ತನೆ" ಎಂದಿದ್ದರೆ ಸೂಕ್ತವಾಗಿತ್ತು. ಇಂತಹ ನ್ಯೂನ್ಯತೆಗಳು ಗ್ರಂಥದುದ್ದಕ್ಕೂ ಇವೆ. ಇದಕ್ಕೆ ಒಂದೇ ಉಪಾಯವೆಂದರೆ ಪರಿಣಿತರ ಸಲಹೆ.

೩) ಸರಳ ಶಬ್ದಗಳನ್ನು ಅನುವಾದಿಸುವಾಗಲೂ, ಅನುವಾದಕರು ಬಹಳ ಶ್ರಮ ವಹಿಸಿದಂತೆ ಕಾಣುತ್ತದೆ. ಉದಾ : Brass Vessels ಎನ್ನಲು ಹಿತ್ತಾಳೆ ಆಭರಣಗಳು (ಪು ೨೬) ಎಂದು ಕರೆದಿದ್ದಾರೆ. "ಕಾರ್ಮಿಕ ಮಂತ್ರಾಲಯ" (ಪು ೪೬) ಎಂದು ಓದಿದಾಗ ಧರ್ಮಸ್ಥಳದ ನೆನಪು ಬರುತ್ತದೆ. ಮಂತ್ರಾಲಯಕ್ಕೆ ಸಚಿವಾಲಯ ಎಂಬ ಶಬ್ದ ಸೂಕ್ತವಾಗಬಹುದು. ಕಠಿಣ ಶಬ್ದಗಳನ್ನು ಆದಷ್ಟು ಬದಿಗಿರಿಸಿದ್ದರೆ ಒಳ್ಳೆಯದಾಗುತ್ತಿತ್ತು. ಉದಾ : ಪ್ರಾದುರ್ಭಾವ (ಪು. IX). ನಿರ್ದಿಷ್ಟ. ದ್ರುತಗತಿ. ಸಾಕೃತ (ಪು. VI) ಮುಂತಾದವುಗಳು.

೪) ಮುದ್ರಾರಾಕ್ಷಸನ ಉಡಿಗೆ ಹಾಕಬೇಕಾದ ತಪ್ಪುಗಳು ಇವೆ. ಸ್ಯಾಂಪಲ್ಲಿಗೆ ಮಾತ್ರ ಕೆಲವು ಹೇಳಬಹುದು. ಉದಾ ; ಶ್ರೀನಿವಾಸರು ಶ್ರೀನಿವಾಸನ್ ಆಗಿದ್ದಾರೆ. (ಪು. ೧೫೮–೧೬೦). "ರಾಮಪುರದಿಂದ ಶ್ರೀನಿವಾಸರು ನನಗೆ ಬರೆದಿದ್ದಾರೆ". ಮೂಲ (ಮೂ. ಪ್ರ. ೧೪೫) ಕೃತಿಯಲ್ಲಿ "ನನಗೆ" ಎಂಬ ಶಬ್ದ ಇಲ್ಲ (ಪು.೧೬೩). ಯೋಜಯನ್ಸ್ವಾಯು (ಪು. ೨೮೪) ಅಯ್ಯಾಯಾ (ಪು. ೨೮೪) ಗೌಡನಿ, ಗಿಚನ್ನು ಗೆಗೊತ್ತಿತ್ತು (ಪು. ೨೮೫) ಮುಂತಾದವುಗಳು.

ಅನುವಾದದ ಭಾಷೆ ಕ್ಲಿಷ್ಟವೆನಿಸದಿದ್ದರೂ ಓದಲು ಸಪ್ಪೆಯೆನಿಸುತ್ತದೆ. ಜಳ್ಳು ಜಳ್ಳಾಗಿದೆ. ಲೇಖಕರು ಉದ್ದೇಶಪೂರ್ವಕವಾಗಿ ತಾವು ಅಭ್ಯಸಿಸದ ಹಳ್ಳಿಗಳ ಹೆಸರುಗಳನ್ನು ಬದಲಾಯಿಸಿಕೊಂಡಿರುವಾಗ ಹಾರೈಕೆಯಲ್ಲಿ (ಪು. XI) ಗ್ರಾಮಗಳ ಮೂಲ ಹೆಸರುಗಳನ್ನು ಸೂಚಿಸಬಾರದಾಗಿತ್ತು. ಈ ಹಲವು ದೋಷಗಳನ್ನು ಬದಿಗಿರಿಸಿ, ಕರ್ನಾಟಕದ ಮಂಡ್ಯ ಜಿಲ್ಲೆಯ ಮಣ್ಣಿನ ಮಕ್ಕಳ ವೈಜ್ಞಾನಿಕ ಕತೆಯನ್ನು ಕನ್ನಡಿಗರಿಗೆ ಓದಲು ಅನುವು ಮಾಡಿಕೊಟ್ಟ ಕೃಷಿ ವಿಶ್ವವಿದ್ಯಾನಿಲಯದ ಕಾರ್ಯ ಸ್ತುತ್ಯವಾದದ್ದು. ಆದರೆ ಅವಸರದಲ್ಲಿ ಅನುವಾದ ಮಾಡಬಾರದು.

ಈ ಸಂಚಿಕೆಯ ಲೇಖಕರು

೧. ಮೀರಾ ಚಕ್ರವರ್ತಿ
ಅಧ್ಯಾಪಿಕೆ, ಸಂಸ್ಕೃತ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೨. ಶ್ರೀ ಎ. ಎಸ್. ಧರಣೇಂದ್ರಯ್ಯ
ಅಧ್ಯಾಪಕರು, ಮನೋವಿಜ್ಞಾನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩. ಆರ್. ಶ್ಯಾಮಲಾ
ಹಳೆಯ ವಿದ್ಯಾರ್ಥಿನಿ, ಮನೋವಿಜ್ಞಾನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಶ್ರೀ ವಸಂತ ಪಾಟೀಲ
ಅಧ್ಯಾಪಕರು, ರಾಜಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ|| ಎನ್. ರಾಜಗೋಪಾಲರಾವ್
ಪ್ರಿನ್ಸಿಪಾಲ, ಡಾ. ವಿ. ವಿ. ಬಾಳಿಗಾ ಕಾಮರ್ಸ ಕಾಲೇಜ,
ಕುಮಟಾ

೬. ಶ್ರೀ ಡಿ. ಕೆ. ಪೊದುವಾಳ್
ಅಧ್ಯಾಪಕರು, ವಾಣಿಜ್ಯ ವಿಭಾಗ, ಸ್ನಾತಕೋತ್ತರ ಕೇಂದ್ರ,
ಮಂಗಲ ಗಂಗೋತ್ರಿ, ಮಂಗಳೂರು

೭. ಶ್ರೀ ಎಮ್. ಸಿ. ಕೊಡ್ಲಿ
ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮. ಶ್ರೀ ಎಚ್. ವಿ. ನಾಗೇಶ
ರೀಡರ್ ಮತ್ತು ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ,
ಜೆ. ಎಸ್. ಎಸ್. ಬನಶಂಕರಿ ಆರ್ಟ್ಸ ಕಾಲೇಜ, ವಿದ್ಯಾಗಿರಿ ಧಾರವಾಡ

೯. ಡಾ ॥ ಕೆ. ಜಿ. ಗುರುಮೂರ್ತಿ
ರೀಡರ್, ಮಾನವಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೦. ಶ್ರೀ ಎ. ಕೆ. ಬರಡೋಲ
ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. ಶ್ರೀ ಬಿ. ಎಚ್ ಅಮಾತಿ
ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೨. ಶ್ರೀ ಎಸ್. ಆರ್ ಶಾಸ್ತ್ರಿ
ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,
ಸ್ನಾತಕೋತ್ತರ ಕೇಂದ್ರ, ಕಲ್ಬುರ್ಗಿ

೧೩. ಶ್ರೀ ಶೇಖರ ಪೂಜಾರ
ಅಧ್ಯಾಪಕರು, ಸಮಾಜಕಾರ್ಯ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೪. ಮಹೇಶ ತಿಪ್ಪಶೆಟ್ಟಿ
ಅಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,
ವ್ಹಿ. ಎಂ. ಎಸ್. ಆರ್. ವ್ಹಿ. ಕಾಲೇಜ,
ಹುನಗುಂದ, ಜಿಲ್ಲೆ : ವಿಜಾಪುರ

ಮಾನವಿಕ ಭಾರತಿ

ಪ್ರಥಮ ಸಂಚಿಕೆ : ಜನವರಿ

ದ್ವಿತೀಯ ಸಂಚಿಕೆ : ಜುಲೈ

ವಾರ್ಷಿಕ ಚಂದಾ : ರೂ. ೬-೦೦ (ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿಯ ಬೆಲೆ : ರೂ. ೩-೫೦ (,, ,, ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦

ಹಣವನ್ನು, ಡಿಮಾಂಡ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ ಮೂಲಕ

ಫಾಯನಾನ್ಸ್ ಆಫೀಸರ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೫೮೦೦೦೩

ಇವರಿಗೆ ಕಳುಹಿಸಬೇಕು.

ಈ ಕುರಿತು ಯಾವದೇ ಪತ್ರವ್ಯವಹಾರ ಕೆಳಗಿನ ವಿಳಾಸಕ್ಕೆ ಮಾಡಿರಿ :

ನಿರ್ದೇಶಕರು :

ವ್ಯಾಸಂಗ ವಿಸ್ತರಣ-ಪ್ರಕಟನ ವಿಭಾಗ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦೦೦೩